A DESCRIPTIVE CATALOGUE

OF THE

KANNADA MANUSCRIPTS

IN THE

GOVERNMENT ORIENTAL MANUSCRIPTS LIBRARY, MADRAS

BY

T. CHANDRASEKHARAN, M.A., L.T.

Curator, Government Oriental Manuscripts Library, Madras and the staff of the Library.

(*Prepared under the orders of the Government of Madras*)

VOLUME VII

D. Nos. 1262 to 1405

MUSIC, COOKERY AND MEDICINE

©

GOVERNMENT OF MADRAS
1958

PRINTED BY THE CONTROLLER OF STATIONERY AND PRINTING, MADRAS, ON BEHALF OF THE GOVERNMENT OF MADRAS
1958

PRICE, *Rs.* 26·35 *naye Paise.*

सत्यमेव जयते

A DESCRIPTIVE CATALOGUE

OF THE

KANNADA MANUSCRIPTS

IN THE

GOVERNMENT ORIENTAL MANUSCRIPTS LIBRARY, MADRAS

BY

T. CHANDRASEKHARAN, M.A., L.T.

Curator, Government Oriental Manuscripts Library, Madras and the staff of the Library.

(*Prepared under the orders of the Government of Madras*)

VOLUME VII

D. Nos. 1262 to 1405

MUSIC, COOKERY AND MEDICINE

PRINTED BY THE CONTROLLER OF STATIONERY AND PRINTING, MADRAS, ON BEHALF OF THE GOVERNMENT OF MADRAS

1958

INTRODUCTION.

The seventh volume of the Descriptive catalogue of the Kannada manuscripts is prepared on the same lines as those of the previous volumes of this series. This volume contains descriptive notices of 144 works. Both the numbering of the manuscripts and pagination of this Volume are in continuation of the sixth volume.

The manuscripts described in this volume deal about Music, Architecture, Cookery and Medicines. The manuscripts from Nos. 1262 to 1334 (both inclusive), 73 in number, belong to music. The MS. No. 1335 belongs to architecture. Works from Nos. 1336 to 1342 (both inclusive) describe the art of Cookery. All the works from Nos. 1343 to 1405 (both inclusive), i.e., 63 in number, pertain to medicine. Among these the following works deserve special mention.

D. No. 1269, KANAKADĀSARA KĪRTANEGAḶU.

This work contains 175 devotional songs composed by a great devotee of Vaiṣṇava cult, Kanakadāsa whose time is mentioned as 1550 A.D. by the author of "Karnāṭaka Kavicarite". All his songs are dedicated to "Ādi Kēśavasvāmi" of Kāginele, in the modern Dharwar district. He is a wellknown figure in the world of musicians of Karnāṭaka style.

D. No. 1276, GĪTAGŌPĀLA.

This work of Cikadāvarāja, who was a ruler of the Mysore State, is a work of devotional songs. The author lived towards in the end of the 17th Century A.D. He patronised many famous writers in Kannada. This work is written on the lines of the Sanskrit work, Gītagōvinda by Jayadēva. The songs in various rāgās serve as a feast to the world of musicians.

D. No. 1335, VĀSTU ŚILPA.

This work deserves mention here as a single work in architecture in Kannada in this library. It contains some useful hints regarding the construction of new houses from the astrological point of view.

D. No. 1336, SŪPAŚĀSTRA (Culinary).

This is a work on cookery, containing many kinds of preparations, both sweet and savory. This is a useful work written in "Nadugannaḍa".

D. No. 1401, VAIDYĀMṚTA by ŚRĪDHARADĒVA.

This treatise, containing 26 Prakaraṇās is a remarkable work on the treatment of various diseases. Names of previous authors on this subject, such as Bhēdacārya, Hariścandra, Bharata, Pūjyapāda, etc., are found referred to with great respect. This is a work useful for those who are interested in the research work of Ayurvedic system of medicine.

CONTENTS

Name of the work.	D. Numbers.	Name of the work.	D. Numbers.
Allamaprabhu Saṅgīta Pada ..	1262, 1263	Khagēndramaṇidarpaṇa ..	1377–1379
Anubhavavaidyacikitsa ..	1343, 1344	Kīrtanegalu	1271–1275
Aśvavaidya	1345–1348	Lakṣmīsvayamvara Śōbhāna ..	1290, 1291
Auṣadhagaḷu	1349–1368	Nāḍīśāstra	1380
Auṣadhagaḷu (skt) with Kannada		Pāṇḍava Caritre	1283
Meaning	1369, 1370	Prabhunaṭanatārāvali	1285, 1286
Auṣadhayōgavivaraṇa	1371–1374	Purandaradāsara Kīrtanegaḷu ..	1284
Auṣudhavidhāna	1375, 1376	Rasaratnasamuccaya	1384, 1385
Bālagraha Cikitse	1381	Ratnākaraṇṇigaḷa Padajāti ..	1289
Bhāgavantike Hāḍu	1288	Saṅgīta Padagaḷu	1295
Bharata Śāstra	1287	Saṅgītaratnākara	1296
Bhasmavidhāna	1382, 1383	Saptapadi	1297
Cikkadēvarāyapadagaḷu ..	1281	Śṛṅgārada Hāḍugaḷu	1293, 1294
Gītagōpāla	1276–1280	Strīvaidya	1405
Hāḍu	1300, 1302	Sūpaśāstra	1336–1342
Hāḍugaḷu	1303–1334	Vaidya	1386–1388
Hasege Kareva Hāḍu	1298, 1299	Vaidyakrama	1389, 1390
Immaḍi Timmarāya Kemperāyā		Vaidyaviṣaya	1393–1398
Padagaḷu	1264–1266	Vaidyaśāstra	1399, 1400
Jōguḷa Hāḍu	1282	Vāstuśilpa	1335
Kaṇṭhīravarāja Saṅgīta ..	1267	Vibhīṣaṇa Buddhi	1292
Kaviliṅgana Padagaḷu	1270	Vidyāmṛta	1401–1404
Kanakadāsara Kīrtanegaḷu ..	1268, 1269	Vidyayōga	1391, 1392

AUTHOR INDEX TO THE DESCRIPTIVE CATALOGUE OF KANNADA MANUSCRIPTS.

VOLUME VII.

Name of the author.	*Pages*
Abhinava Candra	176, 179
Cikadevarāja	29, 34, 35, 36, 37
Cikkupādhyāya	42, 64, 68, 75
Honna	86, 87, 88
Kanakadāsa	9, 12
Kavipavāḍa	105
Liṅga	13, 17
Maṅgarāja I	200, 203, 204
Marirācavaṭṭīśa	**49, 51**
Purandaradāsa	**46**
Rāmacandra	**85, 86**
Śāntārya	**144, 148**
Śrīdharadēva	**220, 222, 223**, 224, 225
Tirumalārya	59, 62, **63**
Veṅkaṭa Śarma	**155, 159**

GENERAL INDEX TO THE DESCRIPTIVE CATALOGUE OF KANNADA MANUSCRIPTS.

VOLUME VII.

Name of the author.	*Pages*
Abhinavacandra	176
Agastya	222
Ahamadnagara	25
Akṣarāṅkastuti	141
Allamaprabhu	110
Allamaprabhusaṅgīta	5
Allamaprabhusaṅgītapada	1, 2
Ālūru	167
Ammakanahaḷḷi	43
Anubhavavaidya Cikitse	173, 175
Antembaragaṇḍa	81
Aṇṇayyabhārati	129, 131
Arasikere	24
Arasugaḷavaṁśāvaḷi	43
Āryāṣṭōttaraśatanāmāvali	109
Aśvavaidya	176, 179, 180
Auṣadhagaḷu	181–192, 194
Auṣadhayōgavivaraṇa	195
Āyatanahaḷḷi	43
Ayiyyamagaṇḍa	2, 3
Basavaliṅgadēva	150
Bālacikitse	209
Bālagōpāla	19–22
Bālagrahacikitse	207
Ballāḷapura	24
Banavase	51
Baṅkāpura	25, 58
Baṇṇūrapura	20, 21
Bannimahāṅkāḷi	148
Bengalore	25
Bēvuhaḷḷi	32
Bēṇṭeyatimma	21
Bhadragiri	92
Bhasmavidhāna	207, 209
Bharata Śāstra	52
Bhāgavatarāmāyaṇasaṅgraha	109
Bhāgavantike Hāḍu	53
Bhīmasēna	170
Bidiri	53, 55
Cāmarājasamudra	43
Cāmmāmbika	108
Candayya	26
Caturbhadrikāviṣṇustuti	141
Celuvayya	160
Celuveyarāja	128
Cennamma	160
Cennayya	26
Cennoḍeya	151
Cidānandakavi	34
Cikkupādhyāya	34, 64, 68
Cikkamagalūr	82
Cikkadēvarāyapadagaḷu	37
Cikkdēvarāja	5, 29–33
Cikkayya	103
Cōlarājasāngatya	20
Dādaji	81
Devakadambasaṅkirtane	89
Dēvanṛpa	7
Dēvarājanṛpāla	32
Dharmāvara	24
Diḷḷi	25
Doḍḍadēvarāja	32
Doḍḍarāja Oḍeya	43
Dvādaśanāmastōtra	107
Ēdula Śāha	81
Ekkōji	82
Gaṇeśāṣṭōttaraśatanāmāvali	109
Gaye	61
Gārgyamuni	165
Gītagōpāla	29, 33, 35, 36, 37
Gītagōvinda	29
Gōpāladaṇḍaka	141
Granthalipi	124
Guṇḍabūvara	15
Guṇḍarāja	13
Guñjānarasimha	59, 167
Guruṇiyabasavēśa	50
Gururāmānuja	113
Guruśānta	107
Gūḷūru	24
Hāḍu	86
Hāḍugaḷu	91–163

AUTHOR INDEX TO THE DESCRIPTIVE CATALOGUE OF KANNADA MANUSCRIPTS.

VOLUME VII.

Name of the author.	*Pages*
Abhinava Candra	176, 179
Cikadevarāja	29, 34, 35, 36, 37
Cikkupādhyāya	42, 64, 68, 75
Honna	86, 87, 88
Kanakadāsa	9, 12
Kavipavāḍa	105
Liṅga	13, 17
Maṅgarāja I	200, 203, 204
Marirācavaṭṭiśa	49, 51
Purandaradāsa	46
Rāmacandra	85, 86
Śāntārya	144, 148
Śrīdharadēva	220, 222, 223, 224, 225
Tirumalārya	59, 62, 63
Veṅkaṭa Śarma	155, 159

GENERAL INDEX TO THE DESCRIPTIVE CATALOGUE OF KANNADA MANUSCRIPTS.

VOLUME VII.

Name of the author.	*Pages*
Abhinavacandra	176
Agastya	222
Ahamadnagara	25
Akṣarāṅkastuti	141
Allamaprabhu	110
Allamaprabhusaṅgīta	5
Allamaprabhusaṅgītapada	1, 2
Ālūru	167
Ammakanahaḷḷi	43
Anubhavavaidya Cikitse	173, 175
Antembaragaṇḍa	81
Aṇṇayyabhārati	129, 131
Arasikere	24
Arasugaḷavaṁśāvaḷi	43
Āryāṣṭōttaraśatanāmāvali	109
Aśvavaidya	176, 179 180
Auṣadhagaḷu	181–192 194
Auṣadhayōgavivaraṇa	195
Āyatanahaḷḷi	43
Ayiyyamagaṇḍa	2, 3
Basavaliṅgadēva	150
Bālacikitse	209
Bālagōpāla	19–22
Bālagrahacikitse	207
Ballāḷapura	24
Banavase	51
Baṅkāpura	25, 58
Baṇṇūrapura	20, 21
Bannimahāṅkāḷi	148
Bengalore	25
Bēvuhaḷḷi	32
Bēṇṭeyatimma	21
Bhadragiri	92
Bhasmavidhāna	207, 209
Bharata Śāstra	52
Bhāgavatarāmāyaṇasaṅgraha	109
Bhāgavantike Hāḍu	53
Bhīmasēna	170
Bidiri	53, 55
Cāmarājasamudra	43
Cāmmāmbika	108
Candayya	26
Caturbhadrikāviṣṇustuti	141
Celuvayya	160
Celuveyarāja	128
Cennamma	160
Cennayya	26
Cennoḍeya	151
Cidānandakavi	34
Cikkupādhyāya	34, 64, 68
Cikkamagalūr	82
Cikkadēvarāyapadagaḷu	37
Cikkdēvarāja	5, 29–33
Cikkayya	103
Cōlarājasāngatya	20
Dādaji	81
Devakadambasaṅkirtane	89
Dēvanṛpa	7
Dēvarājanṛpāla	32
Dharmāvara	24
Diḷḷi	25
Doḍḍadēvarāja	32
Doḍḍarāja Oḍeya	43
Dvādaśanāmastōtra	107
Ēdula Śāha	81
Ekkōji	82
Gaṇeśāṣṭōttaraśatanāmāvali	109
Gaye	61
Gārgyamuni	165
Gītagōpāla	29, 33, 35, 36, 37
Gītagōvinda	29
Gōpāladaṇḍaka	141
Granthalipi	124
Guṇḍabūvara	15
Guṇḍarāja	13
Guñjānarasimha	59, 167
Guruṇiyabasavēśa	50
Gururāmānuja	113
Guruśānta	107
Gūḷūru	24
Hāḍu	86
Hāḍugaḷu	91–163

Name of the author.	*Pages.*
Haidaranavāba	123
Halasūru	25
Harikathāmṛta	71
Hasegekarevahāḍu	85, 86
Honna	87
Hosakoṭe	24
Huligere Sōmēśa	28
Hūmuḍisuva Hāḍu	43
Immaḍikempa	2, 3
Immaḍitimma	2
Immaḍitimmarāya	1
Immaditimmarāya Kemparāya padagaḷu	4, 5
Jagadēvarāya	43
Jagannātharāya	124
Jaitaji	80
Jambukeśvara	106
Janavaśya	212
Javanayya	160
Jayadēva	29
Jinēndramata	202
Jōguḷa Hāḍu	43
Jyōtiṣaviṣaya	184
Kaḷale	128
Kalyānōtsava	59
Kambadūru	24
Kanakagiri	89
Kanakadāsa	9, 13
Kanakadāsarakīrtanegalu ..	9, 12
Kañci	25
Kannadajāṇa	106
Kaṇṇappa	26
Kanṭhīrava	102
Kanṭhīravasvāmi	8, 91
Kaṇṭhīravarāja	5, 6
Kaṇṭhīravarājasaṅgīta	5
Kaṇṭhīravēndra	6, 7
Kapilā	17
Kapinīpati	128
Kappiginanjedēva	151
Karnāṭakaṭike	194
Kāgineleya	117
Kāgineleyādikēśava	9, 11, 13
Kāḷahasti	25
Kālajñāna	209
Kāśi	25, 61
Kāśmīra	167
Karigiri	155
Kastūriraṅga	133
Kavēraje	61
Kāvēri	133
Kavilinganapadagaḷu	13
Kēdāra	25
Keladi	83
Kempa	25
Kempanañjēśa	148
Kempadorerāya	4
Kemprāya	25
Kemperāyapadagaḷu	1, 2
Kengēri	32
Khagēndramaṇiḍarpaṇa.. ..	200
Kīrtanegaḷu	17
Kodaga	81
Koṅgunāḍu	81
Kollāpura	109
Kotārōtsava	154
Kṛṣṇarāja Odeyaranirūpa ..	43
Kukkeyapura	88
Kuppakka	4
Kuraittūr..	32
Lakṣmīsvayamvaraśōbhāne ..	59, 63
Liṅgāṣṭaka	109
Liṅga	13
Liṅgēndra	150
Līlāvati	124
Maccapura	112
Maddūru	24
Madhure	81
Madhukēśvara	51
Mahāmantravādi..	223
Mahārāṣṭra	33
Mahimnah Stava..	118
Maiṣūru	5, 64
Mallarasa	34
Malavaḷḷi	24
Mallikārjuna	34
Mangarāja I	200
Maṅgavibhu	202
Marirācavaṭṭiśa	49, 51
Mēlugoṭe	43, 114
Mōkṣapura	149
Muddayya	144
Mudrike	52
Mummaditamma	3
Mūgūru	59
Nāccāramma	43
Nāḍīśāstra	205
Nakṣatracūdāmaṇi	195

Name of the author.	Pages.
Nandyāla	24
Nañjanagūḍu	13, 17
Nañjamma	152
Nañjuṇḍēśvara	13, 17
Narasarājēndra	121
Narasimhapura	24, 61
Narasiṇgarāja	13
Nirūpagaḷu	43
Nugge Haḷḷi	106
Pākaśāstra	165
Pāṇḍavacaritre	45
Pātulu	125
Pañcakalyāni	122
Pārvatiyamata	172
Parakālaguru	134
Paścimaraṇganātha	43, 68
Pavāda	104
Penugoṇḍe	24
Poramāvu	2
Posavūru	80
Prabhudēva	50
Prabhunaṭanatārāvaḷi	49, 51
Prasannadēśika	50
Prayāga	61
Puṇyāhavācanam	43
Purandaraviṭṭhala	20, 21
Purandaradāsara Kīrtanegaḷu	46
Pūjyapāda	183
Pūyapādasvāmi	221
Purandāradāsa	46, 111
Rajatapura	142
Rāmacandra	85, 86
Rāmacandrajoyisa	123
Rāmacaritre	138
Rāmāṣṭaka	109
Raṇadhanañjaya	25
Raṅgapura	6
Raṅgapurādhināyaka	6
Ratnākarannigalapadajāti	53, 56
Rasaratnasamuccaya	209
Ratnakaraṇḍaka	182
Rasāyanayōga	43
Ṣaḍakṣaraliṇga	110
Śālihōtra	177
Sālūru	13
Sālvakula	15
Śambhuliṅga	107
Samvatsaraphalam	195
Saṅgamaśeṭṭi	58
Śaṅkaraliṅga	107
Śāntārya	144, 151
Saṅgīta	1
Saṅgītapadagalu	68
Saṅgītaratnākara	76
Sañciya Honnama	34
Saptapadi	33, 79
Sāratavaḷḷi	33
Sātanūru	89
Siddhēdēva	152
Siddhanañjeśa	51
Siṅgarārya	34
Sōmaṇayya	176
Sōsale	145, 147
Śivagaṅge	24
Śivaliṅgādidēvatāstuti	109
Śivapūjāmantra	50
Śrāvaṇa	2
Śrīdharadēva	220, 223
Śrīraṅga	7
Śriraṅgapaṭṭaṇa	71
Śrīvageyadurga	112
Śṛṅgāradahādugaḷu	64, 68
Śṛṅgārasūtrōdāharaṇa	37, 42
Śṛṅgāramma	34
Strīvaidya	226
Strīvaśyamantra	214
Sujanamanōja	125
Suṅkacāvaḍi	116
Suśruta	222
Sūpa	1
Sūpaśāstra	165–172
Tanjāvūru	25, 82
Talakāḍunandi	24
Tibbādevi	148
Timmakavi	34
Timmappayya	2
Tirumalācārya	61
Tirumalārya	34, 59
Tirumalasāgara	43
Tirunārāyana	68
Tirupati	25, 70
Tiruvaṇṇāmale	25
Tiruvāymoḷi	9
Tirthaṅkara	53
Tumkūru	25
Tuṅgabhadra	112
Turugere	33
Ubbasadamaddu	44

Name of the author.	Pages.
Uḍipi	113
Vaidya	1, 173
Vaidyakrama	213, 214
Vaidyāmṛta	220, 223
Vaidyaśāstra	219
Vaidyaviṣaya	43, 209, 215–218
Vaidyayōga	209, 214, 215
Varaprasāda	34
Vāmalūru	32
Vāstuśilpa	164
Vēlūru	25
Veṅkappa	167
Veṅkaṭapatirāya II	2
Veṅkaṭa Śarma	155
Veṅkaṭayya	2
Veṅkaṭēndra	109
Vēṇugōpāla	34
Vibhiṣaṇabuddhi	63
Vijayanātha	149
Vijñānēśvarastuti	159
Vināyakāṣṭaka	109
Vijayanagara	2, 17
Viṭṭhalabāle Row	80
Vīrarājēndra	59
Yadugiri	68
Yadugirīśa	115
Yalahaṅkadurga	2
Yaśavanta Row	80
Yatiguruśāntēśvara	26
Yideyūru	105
Yuva	2

A DESCRIPTIVE CATALOGUE

OF THE

KANNADA MANUSCRIPTS

VOLUME—VII

(D. Nos. 1262 to 1405)

ಸಂಗೀತ, ಸೂಪ ಮತ್ತು ವೈದ್ಯ ಶಾಸ್ತ್ರಗಳು

MUSIC, COOKERY AND MEDICINE.

No. 1262. ಅಲ್ಲಮ ಪ್ರಭು ಸಂಗೀತ ಪದ.

ALLAMAPRABHU SANGĪTA PADA.

Substance, paper. Size, 10 3/8 × 9 3/8 inches. Pages 3. Lines, 20 on a page Extents, 36 granthas. Character, Kannada. Condition, good. Appearance new. Mode of writing, fair.

Restored in 1916-17 from the Ms. described under No. 437 *ante*.

Begins on page 1 of first part of the manuscript described under No. 1,160 ante.

Complete.

ವಿ.ವಿ.—

ಸಮಗ್ರ. ಇದು ಹಿಂದಣ ೪೩೭ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು ಸೇರಿವೆ. ಅವಾವುವೆಂಬುದನ್ನು ಹಿಂದಣ ೧೧೬೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 1263. ಅಲ್ಲಮಪ್ರಭು ಸಂಗೀತ ಪದ.

ALLAMAPRABHU SANGĪTA PADA.

Substance, paper. Size, 10 5/16 × 9 7/16 inches. Pages, 3. Lines, 20 on a page. Extents, 36 granthas. Character, Kannada. Condition, good. Appearance, new. Mode of writing, good.

Restored in 1933-34 from the Ms. described under No. 437 *ante*.

Begins on page 1. The other work herein is: (1) Immaḍitimmarāya Kemparāya padagalu, 3.

Complete.

ವಿ.ವಿ.—

ಸಮಗ್ರ. ಇದು ಹಿಂದಣ ೪೩೭ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪುತ್ರಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇಮ್ಮಡಿ ತಿಮ್ಮರಾಯ ಕೆಂಪರಾಯ ಪದವಿದೆ.

No. 1264. ಇಮ್ಮಡಿ ತಿಮ್ಮರಾಯ ಕೆಂಪರಾಯ ಪದಗಳು.

IMMADI TIMMARĀYA KEMPARĀYA PADAGAḶU.

Substance, palm-leaf. Size, 6 1/8×1 inches. Pages, 80. Lines, 5 on a page. Extents, 300 granthas. Character, Kannada. Condition, injured. Appearance, old. Mode of writing, good.

Begins on fol. 7 (a). The other work herein is: Allamaprabhu Sangīta 1 a.

Complete.

Describes the valour, etc., of Immaḍi Kempa, the Chief of Yalahanka during the reign of Venkaṭapaṭirāya II at Vijayanagar. It gives much information of historical value. The name of the author is not known.

Name of the scribe:—Venkaṭayya, son of Timmappayya of Poramāvu.

Date of transcription:—The 3rd day of the dark fortnight of the lunar month Śrāvaṇa in the year "Yuva".

Beginning:

॥ ರಾಗ ॥ [ಕನ್ನಡ] ಕಾಂಬೋಜ ॥

ಪಲ್ಲವಿ.—

ದಕ್ಕಿತೊ ನಿನಗೆ ಪಂಥ ದಕ್ಕಿತೊ ನಿನಗೆ ಪಂಥ ಧೀರುರೆ ರೂಪ ಜಯಂತ ।
ದಿಕ್ಕಂಟಿರಲಿ ಜಸಗಂಡ ಯಿಮ್ಮಡಿಕೆಂಪ ದಕ್ಕಿತೊ ನಿನಗೆ ಪಂಥ ॥

ಚರಣ :—

ಮಂಡಲಪತಿ ವೆಂಕಟರಾಯ ಭುಜ ।
ದಂಡ ಸ್ವಾಮಿ ದ್ರೋಹರ ಗಂಡನೆನಿಪ ಕಾ ।
ಲ್ಪೆಂಡೆಯವನಿಟ್ಟು ಚಿಕರಾಯನೆನಿಸಿಯೆ ।
ಕೊಂಡು ಯಿಮ್ಮಡಿ ತಮ್ಮ ಭೂಪ ಸುಖದೊಳರ್ದು ।
ಖಂಡೇಂದು ಧರಸೆಡೆಗೆಯ್ದಲಾತನ ರಾಜ್ಯ ।
ಭಂಡಾರ ಬೊಕ್ಕಸವಧಿಕಾನೆ ಕುದುರೆಯ ।
ಹಿಂಡ ಮುಂತಾಗಿ ಯಲ್ಲವನು ಅಯಿಯ್ಯಪ್ಪ ಗೌಡ ।
ಉಂಡತನದಿ ಗ್ರಹಿಸಿ ದುರ್ಗಗಳ ಪ್ರ ।

ಚಂಡತ್ರೆಯಿಂ ಬಲಿಸಿ ತಾನಲ್ಲದೆ ।
ಗಂಡು ಗಲಿಯಿಲ್ಲೆನಿಸಿ ಯಿರಲು ಅದ ।
ಕಂಡು ಕಡುಹು ವೆರಸಿಯಾಕ್ಷಣದಿ ಮುಂ ।
ಕೊಂಡೆ ನೀ ರಾಜಕಾರ್ಯಕೆ ಮನವೆಳಸಿ (೧)

ಆಳೋಚಿಸದೆ ಅಯಿಯ್ಯಮ ಗೌಡಗೆ ಬುದ್ಧಿ ।
ಹೇಳಿಕಳುಹಲು ಹಜಬರಿಂದ ಹಿತವಾಗಿ ।
ಕೇಳದಿರಲು ಒಳ್ಳೃತಾಯಿತ್ರೆನುತ ಖತ್ರಿ ।
ದಾಳಿ ಮನದಿ ಬಲುವಾಸಿ ಪಂಥದೊಡನೆ ।
ದಾಳವರಿದು ಮಿಗೆ ದಕ್ಕಡಿ ತನದಿಂದ ।
ಕೊಳ್ಳಾಲದ ಸುತ್ತ ಬಳತಿ ಸೀಮೆಯು ನೆಲ್ಲಿ ।
ಧೂಳಿ ಪಟವಮಾಡಿ ತುರು ಸೆರೆವಿಡಿದು ಹೇ ।
ರಾಳದ ಹಿತರನೆಲ್ಲಿ ಹೊಕ್ಕಿರಿದು ಕ ।
ಟ್ಟಾಳುಗಳೆದೆಗೆ ಝಲ್ಲು ಬಲಿದು ಘನ ।
ದೇಳಗೆಯೆನಿಸಿ ಗೆಲ್ಲವಾಂತು ನೃ ।
ಪಾಳ ಮೋಹರದೊಳೆಲ್ಲ ಚಲಪದಕೆ ।
ಮೂಳೋಕದೊಳು ನಿನಗಿನ್ನೆಣೆಯಿಲ್ಲ ॥

*   *   *

ಧುರದೊಳೀಪರಿ ಕಾರ್ಯದಿಂದ ಬಿಡದೆ ಕಾದಿ ।
ಯರಿ ನೃಪರನು ಗೆಲ್ದು ರಾಯರ ಮೆಚ್ಚಿಸಿ ।
ಹರುಷದಿ ಮುಮ್ಮಡಿ ತಮ್ಮ ಭೂಪಾಲನ ।
ನೆರೆ ಸಂಸ್ಥಾನವ ನುಂಟು ಮಾಡಲು [ಕಕೋ] (ಕಕು)
ದ್ಗಿರಿಯು ಗಂಗಾಧರೇಶನ ಕಂಡು ಬಲಗೊಂಡು ।
[ಹರುಷದಿ ಮುಮ್ಮಡಿ ತಮ್ಮ ಭೂಪಾಲನ ।
ನೆರೆ ಸಂಸ್ಥಾನವನುಂಟು ಮಾಡಲು ಕಕೋ ।
ದ್ಗಿರಿಯು ಗಂಗಾಧರೇಶನ ಕಂಡು ಬಲಗೊಂಡು ।]
ವರಮೂರ್ತಿ ಹಲಸೂರ ಸೋಮೇಶ್ವರನ ದಯ ।
ವೆರಸಿ ಶ್ರೀ ಗುಮ್ಮಳಾಪುರದ ಸದ್ಗುರು ನಂಜೇ ।
ಶ್ವರನ ಕೃಪೆಯನು ಮಾಪಾ (?) ಪಡೆದು ಸೌಖ್ಯ ।
ಕರವಿರಾಜಿಪ ಕಲಾಪ ಯೆಲಹಂಕನಾ ।
ಡೆರೆಯು ಮೋಹನ ರೂಪ ಸುಖದಿ ಸು ।
ಸ್ಥಿರಬಾಳು ಸುಪ್ರತಾಪ ನೌಚಯು ಕೆಂಪ ।
ಧರಣೀಶನಣುಗ ಯಿಮ್ಮಡಿ ಕೆಂಪಭೂಪ ॥

॥ ರಾಗ ॥ ॥ ಆಹರಿ ॥

ಪಲ್ಲವಿ :—

ಧಾರಿಣಿಯೊಳು ವೀರರಾರೊ ನಿನಗೆ ಭಳರೆ ।
ವೀರ ವಿಕ್ರಮ ! ಇಮ್ಮಡಿ ಕೆಂಪದೊರೆರಾಯ ॥

End :

ಧರಣಿ ತರಣಿಯು ತಾರಗೆಯು ಚಂದ್ರರುಳ್ಳನಕ ।
ವರಮೇರುಗಿರಿ ಸಪ್ತವಾರಿಧಿಗಳುಳ್ಳನಕ ।
ಮೆರೆವನವನಿಧಿ ಕನಕ ರಜತಾದ್ರಿಯುಳ್ಳನಕ ।
ಸುರರು ದಿಕ್ಪಾಲರುಳ್ಳನಕ ।
ಸ್ಥಿರದಿ ರಾಯರ ಸಿಂಹಾಸನವ ನಿಲಿಸಿದೆ ಕೆಂಪ ।
ದೊರೆರಾಯ ನಿಮ್ಮ ಚಾರಿತ್ರವನು ।
ಹರುಷದಲಿ ಬರೆದೋದಿ ಕೇಳ್ವಜಾ ।
ಱರಿಗೆ ಯಿಹಪರ ಸುಖವ ।
ಪರಮೇಶನೀವ ಕರುಣದಲಿ ಕೆಂಪ ।
ದೊರೆರಾಯ ಬಾಳು ಸಾಮ್ರಾಜ್ಯ ಪದವಿಯಲಿ ॥ (೩೯)

Colophon :

(ಸಂಪೂರ್ಣ) ಮಂಗಳ ಮಹಾಶ್ರೀ.—

ವಿ.ವಿ.—

ಸಮಗ್ರ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಕಡೆಯಲ್ಲಿ "ಯುವ ಸಂವತ್ಸರದ ಶ್ರಾ ಬ. ೩ ಲ್ಲೂ ಸೊರವೂವ ತಿಮ್ಮಪ್ಪಯ್ಯನ ಮಗ ವೆಂಕಟಯ್ಯನು ಚಿಕ್ಕ ಕುಪ್ಪಕ್ಕಗೆ ಆಯುರಾರೋಗ್ಯ ಐಶ್ವರ್ಯ ಧನಕನಕ ವಸ್ತುವಾಹನ ಪುತ್ರ ಪೌತ್ರಾಭಿ ವೃದ್ಧಿಯಾಗಿ ಶೀಘ್ರದಲಿ ಗಂಡು ಸಂತಾನವಾಗಲಿಯೆಂದು ತ್ರಿಸಂಧ್ಯಾಕಾಲದಲ್ಲೂ ಹರಸಿ ಬರೆದು ಕೊಟ್ಟ ಬಿಡುಪದದ ಪುಸ್ತಕ" ಎಂದಿದೆ. ಇದರೊಡನೆ ಅಲ್ಲಮ ಪ್ರಭು ಸಂಗೀತವಿದೆ. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪುಸ್ತಕವು ಇದರ ಪ್ರತಿಕೆಯಾಗಿದೆ.

ಇದು ಹಾಡಿನ ರೂಪದಲ್ಲಿದೆ. ೨ ಹಾಡುಗಳು ಮೊದಲನೆಯದರಲ್ಲಿ ಪಲ್ಲವಿ ಮತ್ತು ೧೯ ಚರಣಗಳೂ ಎರಡನೆಯದರಲ್ಲಿ ೩೯ ಚರಣಗಳೂ ಇವೆ. ವಿಜಯನಗರದ ದೊರೆ ಎರಡನೆಯ ವೆಂಕಟಪತಿರಾಯರ ಕಾಲದಲ್ಲಿದ್ದ, ಯಲಹಂಕನಾಡಿಗೌಡೆಯ ಇಮ್ಮಡಿ ಕೆಂಪಭೂಪನ ಶೌರ್ಯಮುಂತಾದ ವರ್ಣನೆಗಳು ಇದರಲ್ಲಿ ಉಕ್ತವಾಗಿವೆ. ಚಾರಿತ್ರಕ ಸಂಬಂಧವಾದ ಅನೇಕ ವಿಷಯಗಳು ಇದರಲ್ಲಿ ಗೊತ್ತಾಗುತ್ತವೆ. ಇದನ್ನು ಬರೆದವರಾರೆಂಬುದು ಗೊತ್ತಾಗುವುದಿಲ್ಲ.

No. 1265. ಇಮ್ಮಡಿ ತಿಮ್ಮರಾಯ ಕೆಂಪರಾಯ ಪದಗಳು.

IMMAḌI TIMMARĀYA KEMPARĀYA PADAGAḶU.

Substance, paper. Size, 10 3/8 × 9 3/8 inches. Pages, 20. Lines, 20 on a page. Extent, 300 granthas. Character, Kannada. Condition, good. Appearance, new. Mode of writing, fair.

Restored in 1916–17 from the Ms. described above.

Begins on page 4 of the I part of the Ms. described under **No. 1160** *ante*

Complete.

ವಿ.ವಿ.—

ಸಮಗ್ರ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಲಿಪಿ ಚೆನ್ನಾಗಿದೆ.

No. 1266. ಇಮ್ಮಡಿ ತಿಮ್ಮರಾಯ ಕೆಂಪರಾಯ ಪದಗಳು.

IMMAḌI TIMMARĀYA KEMPARĀYA PADAGAḶU.

Substance, paper. Size, 10 5/16×9 7/16 inches. Pages, 15. Lines, 20 on a page. Extent, 300 granthas. Character, Kannada. Condition, good. Appearance, new. Mode of writing, good.

Restored in 1933—34 from the Ms. described under No. 1264 *ante*.

Begins on page 3 of the Ms. described under No. 1263 *ante*.

Complete.

ವಿ.ವಿ.—

ಸಮಗ್ರ. ಇದು ಹಿಂದಣ ೧೨೬೪ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಇನ್ನೊಂದು ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಅಲ್ಲಮಪ್ರಭು ಸಂಗೀತವಿದೆ.

No. 1267. ಕಂಠೀರವ ರಾಜ ಸಂಗೀತ.

KANṬHĪRAVARĀJA SANGĪTĀ.

Substance, palm-leaf. Size, 13 7/16×1 5/16 inches. Pages, 52. Lines, 4, 5 on a page. Extent 380 granthas. Character, Kannada. Condition, slightly injured. Appearance, old. Mode of writing, good.

Complete.

Songs written in praise of Kanṭhīravarāja, the son of Cikkadēvarāja, king of Mysore from 1704 to 1713. The name of the author is not known.

Beginning :

॥ ರಾಗ—ರೇಗುಪ್ತಿ ॥

ಪಲ್ಲವಿ.—

ರಂಗ ಪಾಹಿ [ಕಾರುಣ್ಯ] (ಕರುಣಾ) । ಪಾಂಗ ಪಾಹಿ ಸನ್ನುನಿ ।
ಸಂಗ ಪಾಹಿ ಶ್ವೇತಾಹಿ । ತುಂಗಾಂಗತಲ್ಪ ಪಕ್ಷಿವಾ ॥

ಚರಣ.—

ಅಮರ ಕಾಮಿನೀ ತಾರಾ । ಕಮಲಾರಂಜಿತ ಹೇಮ ।
ಚಮರವಾಯು ಚಲಿತ । ವಿಮಲ ಮಾಣಿಕ್ಯ ಕುಂಡಲ ॥ (೧)

ಅರುಣ ತರಣಿ ಭಾಸ್ವ । ತ್ಕಿರಣ ತರಕೌಸ್ತುಭಾ ।
ಭರಣ ರತ್ನವಿನೂತ್ನ । ಕಿರಣ ರಂಜಿತ ನೀಲಾಂಗ ॥ (೨)

ರಾಜವಂಶ ಕೈರವ । ರಾಜ ಶ್ರೀ ಕಂಠೀರವ ।
ರಾಜೇಂದ್ರ ಸಂರಕ್ಷಕ । ರಂಗಪುರಾಧಿನಾಯಕ ॥ (೩)

ಪಲ್ಲವಿ.—

ಕೃಪಯಾ ನೀ ಸಂರಕ್ಷ ಮಾಂ ಪಂಕಜಾಕ್ಷ ।
ವಿಪುಳ ಕರುಣಾಪಾಂಗ ವಿಬುಧನುತರಂಗ ॥

ಚರಣಗಳು.—

ಕಮಲಾನನಾತಿಶಯ ಕಮಲ ದಿನಕರ ಸುಧಾ ।
ಕಮಧಿ ನಿವಾಸ ಕಮನೀಯಗುಣ ಭೂಷ ॥
ಕಮಲಧರ ಕರಕಾಂತ ಕೀರ್ತಿ ಲಕ್ಷ್ಮೀಕಾಂತ ।
ಕಮಲಭವ ಜನಕ ಖಗಕುಲಪತಿ ಪತಾಕ ॥ (೧)

ಹಂಸಕುಲ ಕಾಸಾರ ಹಂಸವಿನಮಿತ ರಾಜ ।
ಹಂಸಕಂಸಾದ್ಯಸುರ ವಂಶ ವಿಧ್ವಂಸ ॥
ಹಂಸ ವರ್ಧನ ವಿಮಳ ಹಂಸಜನ ಕರ್ಣಾವ ।
ಹಂಸ ಹಂಸ ಸುಮಿತ್ರ ಹಂಸಾಭಗಾತ್ರ ॥ (೨)

ಸುರನರೋರಗ ಮಕುಟ ಮುಕ್ತಾ ಫಲಪ್ರಭೆ ।
ಸುರುಚಿರ ಪಯೋ ಧೌತ ಪದಪಂಕಜಾತ ॥
ಸುರಪ ಸಮ ಕಂಠೀರವೇಂದ್ರ ಪರಿಪಾಲಭಾ ।
ಸುರ ಕಲಾರಂಗ ಭೂಸುರ ವಿನುತಾಪಾಂಗ ॥ (೩)

* * * * *

ಪಲ್ಲವಿ.—

ಅನಿಶ ಮಾಂ ಪಾಹಿ ಶ್ರೀರಂಗ । ಘನದಯಾಪಾಂಗ ।
ಅನಿಮಿಷ ಸತ್ಕೃತ ಸೇ[ವ] (ವಿತ) । ಜನನುತ ದೇವಾಧಿದೇವ ॥

ಚರಣಗಳು.—

ಶ್ರೀರಂಗ ಪುರವಾಸ ಸಾರಸದ್ಗುಣ ವಿಲಾಸ ।
ಚಾರುತರಾದಿತ್ಯ ಕೋಟಿ ಪಾರಿಜಾತ ಕರಹಂಸ ॥ (೧)

ಅಮೃತಾಬ್ಧಿ ಕನ್ಯಕಾನನಾ
ಕಮಲ ಸೌರಭ್ಯ ಸಂತಾನ ॥
ಪ್ರಮುದಿತ ಭೃಂಗಾಯ ಮಾನ ।
ಸುಮನೋಜಾಲ ಸಂಜೀವನ ॥ (೨)

ರಾಜಕಂಠೀರವ . . . ನ । ರಂಗ ತ್ರೈಲೋಕ್ಯಪಾವನ ।
ರಾಜೀವ ಪತ್ರಲೋಚನ । ರಾವಣಾಸುರ ಮರ್ದನ ॥ (೩)

ಪಲ್ಲವಿ.—

ನಿರುತ ಮಾಂ ಪಾಲಯ ಪರಮ ಪ್ರಾಲೇಯ ।
ಗಿರಿಜೇಶ ಕೃತಸಂಗ ಸರಸಿಜಾಕ್ಷ ಶ್ರೀರಂಗ ॥

ಚರಣಗಳು —

ಅಮೃತಾಬ್ಧಿವಾಸ ನಮಿತಾಮರೇಶ ।
ಅಮೃತ ಸದ್ಗುಣ ಕೋಶ ದ್ಯುಮಣಿ ಕೋಟಿಪ್ರಕಾಶ ॥ (೧)

. . . . ।
. . . . ॥ (೨)

ಕರುಣಾಬ್ಧಿ ಚಂದ್ರ ಕಂಠೀರವೇಂದ್ರ ।
ಪರಿಪಾಲಕ ಶ್ರೀರಂಗ ಸುರಪನೀಲ ಶೋಭಾಂಗ ॥ (೩)

ಪಲ್ಲವಿ.—

ಶಿವ ಸಮಾನ ನೃಪತಯೋ ನ ಕೌ ।
ಕವಿಕುಲೋತ್ಪಲೌಘ ಚಂದ್ರ । ಕರುಣಿ ಕಂಠೀರವೇಂದ್ರ ॥

ಚರಣಗಳು.—

ವಾರಿಜಾಕ್ಷ ಪದನಖೇಂದು ಚಾರು ಚಂದ್ರಿಕಾ ಚಕೋರ ।
ವಾರಿನಿಧಿಗಭೀರ ಸಮರಶೂರ ಸಕಲ ಸಜ್ಜನಾಧಾರ ಧೈರ್ಯ ॥
ಧಾರಿಣಿಧರ ಧರ್ಮಗುಣ ವಿಚಾರ ವಿವಿಧ ಸತ್ಕಲಾಧರ ।
ಪಿಲಿಸದಮರ ಭೂರುಹ ಪ್ರಧಾನ ಬಂಧುರ ಕಂಠೀರವೇಂದ್ರ । (೧)

ಚಂಡತರ ಸುದರ್ಶನ ಬಾಹುಮಂಡಿತ ಚಂದನಬೋದಪಾಶ್ರಿತ ।
ಕುಂಡಲೀಶಭಾವ ವಿಧೃತ ಮಂಡಲಾಗ್ರಜಿತ ವಿಪಕ್ಷ ॥
ಮಂಡಲೇಶ ವಿಬುಧ ಶೇಖರ ಸರಸಕಾವ್ಯ ।
ಪುಂಡರೀಕ ಮಾತ್ತ ಮಧುಕರ ರೂಪ ಪುಷ್ಪ ಖಂಡವಿನುತ ಸದ್ಗುಣಾಕರ
ಕಂಠೀರವೇಂದ್ರ ॥ (೨)

ಕ್ಷೀರ ಶರಧಿ ಕನ್ಯಾಕಾದಯಾಗಸಾಪಲೋಕನಾಂಶು ।
ಚಾರುಮಣಿ ವಿಭೂಷಿತಾಂಗ ಭೂರಿವಿಭವ ಸುರಪ ನಿಖಿಳ ॥
ವೈರಿಭೂಪ ಕಾಲಭೈರವ ದೇವನೃಪ ಕುಮಾರ ಮಧುರ ಮಂಜುಳಾರವ ।
ವಿಮಳ ತರಯಶೋರಮಾಧಿಪತಿ ಕಂಠೀರವ ಭೂಮಿಪಾಲ ॥ (೩)(?)

End :

ಪಲ್ಲವಿ.—

ಭಳರೆ ನಿನ್ನಿರವ ಬಣ್ಣಿಸಲಳವೆ ಧರಣೀಶ ।
ಕುಲರತ್ನ ಕಂಠೀರವೇಂದ್ರ ಗುಣಸಾಂದ್ರ ॥

ಚರಣಗಳು.—

ಅರಿನೃಪರ್ಗೆ ಭಯವ ನಬಲಾಜನಕೆ ಮನಸಿಜಾ ।
ಸುರವನತಿ ಸರಸ ಕವಿಜನದ ಸಾಲಗೆಗೆ ॥
ಪರವರ್ಣನಾಭಿಲಾಷೆಯನು ನಿನ್ನವೊಲಿತ್ತು ।
ದೊರೆಗಳಾರೆಲೆ ರಾಜ ಧರೆಯೊಳದು ಸೈಜ ॥ (೧)

ಭೂನುತವೆನಿಪ್ಪ ನಿನ್ನಧಿಕಾರ ಮಹಿಮೆಯನು ।
ನಾನು ಪೇಳಲರಿದವೆನೆ ।
ನೀನು ಕೋವಿದ ಕಾಮಧೇನು ರಿಪುಬಲ ತಿಮಿರ ।
ಭಾನುರಾಜಿತ ಧೈರ್ಯ ಜಿತರತ್ನ ಸಾನು ॥ (೭)

ದೊರೆರಾಯ ಭಾಸುರ ಧವಲತರ ಕೀರ್ತಿ ।
ಶರದಮೃತಕರ ಕಿರಣದಂತೆ ಕಣ್ಗಳಿಗೆ ॥
ಕರವೊಪ್ಪುತೀ ದೇವಧರಣೀಶ ಸುಕುಮಾರ ।
ಶರಧಿ ಸಮ ಗಂಭೀರ ಕಂಠೀರವೇಂದ್ರ ॥ (೩)

Colophon :

ಶ್ರೀ ಮನ್ಮಹಾರಾಜಾಧಿರಾಜ ಕಂಠೀರವೇಂದ್ರ ಸ್ವಾಮಿಯವರ ಸ್ತುತಿಪದಂಗಳಿಗೆ ಭದ್ರಂ ಭೂಯಾತ್.

ವಿ.ವಿ.—

ಸಮಗ್ರ. ಸ್ವಲ್ಪ ಮಟ್ಟಿಗೆ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಪುಸ್ತಕದ ಕಡೆಯಲ್ಲಿ,

"ಮ.ವಿ. ॥ ಪರಪೀಡಾಮುಖ ದುಷ್ಟ ದುರ್ಜನ ನಿಕಾಯಾತಂಕದಿಂ ಸದ್ಗುಣಾ ।
ಕರಮಂ ಸದ್ರಸಭಾವಮಂ ಸಹೊದಿದಂ ಮಾಣಿಕ್ಯದೇಕಾಯ್ತೊ ಬಂ ।
ಧುರಮಂ ಕಾವ್ಯ ನಿಬಂಧಮಂ ಬಗೆಯೆ ಯುಕ್ತಾಭೀತಿಯಿಂದಂಬರಂ ।
ಪರಿಹರ್ತವ್ಯಮೆ ಮೀಣಜೀರ್ಣ ಭಯದಿಂ ಪ್ರಾಜ್ಯಾಜ್ಯಮೇಂ ತ್ಯಾಜ್ಯಮೇಂ ॥ (೧)

ಸಮುದಂ ಸದ್ಗ್ರಹ ಷಡ್ಜ ಷಟ್ಚರಣ ಮಂದ್ರನ್ಯಾಸ ಮುತ್ಕೀರ ಮ ।
ಧ್ಯಮ ತಾರಂ ಮೃದುತಾಡಿ ತೌಡವ ನವ್ಪ್ರೋದ್ಭಿನ್ನ ಪ್ರಸೂನಂ ಸಪಂ ।
ಚಮ ಸಿಂಜತ್ಕಳಕಂಠ ಕಂಪಿತರುತಂ ತಾನೆಂಬ ಹಿಂದೋಳ ರಾ ।
ಗಮೆತಾನಾದ ವಸಂತಮೋ ನೆಸೆದು ದೋ . . . . ॥"

ಈ ಪದ್ಯಗಳಿವೆ.

ಇದು ಹಾಡಿನಲ್ಲಿ ಬರೆದಿದೆ. ಪ್ರತಿಯೊಂದು ಹಾಡೂ ಪಲ್ಲವಿ ಚರಣಗಳಿಂದ ಕೂಡಿದೆ. ಮೈಸೂರು ರಾಜ ಕಂಠೀರವ ರಾಜನ (ಚಿಕದೇವರಾಜನ ಮಗ) ಸ್ತುತಿ ವಿಷಯವು ಇದರಲ್ಲಿ ಉಕ್ತವಾಗಿರುವುದು. ಗ್ರಂಥದಾರಂಭದಲ್ಲಿ ಪಶ್ಚಿಮ ರಂಗೇಶನು ಕಂಠೀರವ ರಾಜನನ್ನು ಸಲಹಲಿ ಎಂಬರ್ಥದಲ್ಲಿ ಕೆಲವು ಹಾಡುಗಳಿವೆ ಬರೆದವನು ಯಾರೆಂಬುದು ಈ ಗ್ರಂಥದಿಂದ ಗೊತ್ತಾಗುವುದಿಲ್ಲ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದ ತಿಳಿಯುವುದು. ಕವಿಚರಿತ್ರೆ ೩ ನೆಯ ಸಂಪುಟದಲ್ಲಿ ಈ ಗ್ರಂಥವನ್ನು "ರಾಜಸಂಗೀತ ಎಂದು ಹೇಳಿ ಎರಡು ಹಾಡುಗಳನ್ನು ಉದ್ಧರಿಸಿ ಬರೆದಿದೆ. ಈ ಗ್ರಂಥಕ್ಕೆ ವಿಷಯನಾದ ಕಂಠೀರವ ರಾಜನ ಕಾಲವು ಕ್ರಿ. ಶ. ೧೭೦೪—೧೭೧೩ ಆದಕಾರಣ ಈ ಗ್ರಂಥವು ಅವನ ಕಾಲದಲ್ಲಿ ರಚಿವಾಗಿದೆಯೆಂದು ಸ್ಪಷ್ಟವಾಗುತ್ತದೆ."

No. 1268. ಕನಕದಾಸರ ಕೀರ್ತನೆಗಳು by ಕನಕದಾಸ.

KANAKADĀSARA KĪRTANEGAḶU BY KANAKADĀSA.

Substance, palm-leaf. Size, 13 15/16 × 1 inches. Pages, 61. Lines, 5 on a page. Extent, 445 granthas. Character, Kannada. Condition, very much injured. Appearance, old. Mode of writing, good.

Begins on fol. 1 (a) The other work herein is Tiruvāymoḷi (Tamil) 32 (a).

Incomeplete.

Contains the devotional and moral songs of Kanaka, a great devotee of Srī kṛṣṇa whose date is 1550 A.D.

Beginning :

॥ ಕನ್ನಡ ರಾಗ ॥

ಅಭ್ಯಾಸವಂ ಮಾಡಬೇಕು ಬಿಡದೆ . . . . ಗು ।
ರುಭ್ಯೋ ನಮಃ ಎಂಬ ದಿವ್ಯನಾಮಂಗಳಂ ॥ ಪಲ್ಲವಿ ॥

ಚರಣ.—

ಕೇಶವ ನಾರಾಯಣ ಮಾಧವ ಗೋವಿಂದ ।
. . . . ಯುಕಮ . . . ದ್ಯುಮಣಿ ।
ದೋಷರಹಿತ ವಿಷ್ಣು ಮಧುಸೂದನ ತ್ರಿವಿಕ್ರಮ ಸು ।
ರೇಶ ಸರ್ವೋತ್ತಮ ದಿವ್ಯನಾಮಂಗಳನು ॥ (೧)

ವಾಮನ ಶ್ರೀಧರ ಹೃಷೀಕೇಶ . . . . ।
. . . . ಪುಣ್ಯೋದರ ಹಿರಣ್ಯವಾಸ ।
ದಾಮೋದರಾಮಲ ಕೌಸ್ತುಭರತ್ನ ವನಮಾಲಿ ।
ರಾಮ ರಘುಪುಂಗವ ನಾಮಂಗಳಂ ॥ (೨)

ಸಂಕರ್ಷಣ . . . . ।
. . . . ನಿಖಿಳಾಂಕ ಪಂಕೇಜ ಪತ್ರಾಯತಾಕ್ಷ ।
ಕಿಂಕರಜನ (ರಕ್ಷ) ಕಾನಿರುದ್ಧ ಪುರುಷೋತ್ತಮ ।
ಶಂಕರಪ್ರಿಯ ಅಧೋಕ್ಷಜ ನಾಮಂಗಳಂ ॥ (೩)

. . . . . . ಜನಾರ್ದನ ಉಪೇಂದ್ರ ಸಂ ।
ಸೌರಭ[ಪ](ಯ) ಹರ ಕೃಷ್ಣ ವಿಶ್ವೋ ।
ದ್ಧರ . . . . ಕ್ತ ವನಮಾಲಿ ।
ನಾರದೀಯ ಮಾರುತಿಯ ನಾಮಂಗಳಂ ॥ (೪)

. . . . ಮಂ ನಿದಪಾದ ।
ರಸವಿರುದ್ಧ ಕಾವಿಗೊದಗುವ ತೆಱದೊಳು ।
ಬಿಸಜಾಕ್ಷ ಕಾಗಿನೆಲೆಯಾದಿ ಕೇಶವ ಎನ್ನ ।
ಅಸುವಳಿದು ಪೋಪಾಗ ಜಿಹ್ವೆ(ಂದ್ರಿ) ಗೊದಗುವಂತೆ ॥ (೫)

* * *

(೧೯-೨) ॥ ರಾಗ ॥ ಕಾಂಭೋಜ ॥

ಪಲ್ಲವಿ.—

ಎಷ್ಟು ಮರುಗಿದರೆ ನಿನ್ನ ಹಣೆಯು ಬರೆಹ ।
ಅಷ್ಟಲ್ಲದಿಲ್ಲ ಸ್ತುತಿವಚನದ ಫಲಕಂದ ॥

ಚರಣ.—

ಅಂಬರದೊಳಾಡುವ ಪಕ್ಷಿ ತನ್ನ ವಶವಹುದೇ ।
ಉಂಬುವರ ಕಟುಬಿದೊಡೆ ಉದರ ತುಂಬುವುದೇ ॥
ಕಂಬಳಯು ಕೊಡಲು ಕನಕಾಂಬರ ತನಗಹುದೆ ।
ಹಂಬಲಿಸಿ ಹಲವ ಹಲುಬಿದೊಡೆ ಸಿರಿಬಹುದೆ ॥ (೧)

ಇಲ್ಲದುದ ಬಯಸಿ ಬೇಡಿದೊಡೆ ಭಂಗ ಬಹುದೊ ।
ಬಲ್ಲೆನೆಂದೊಡ ಮಾಣಿಸದೆ ಬಿಡಳು ವಿಧಿಯು ।
ಬಲ್ಲಿದನು ಬಡವನಿವನೆಂದು ನೋಡರು ಸಿರಿ ।
ವಲ್ಲಭನ ಮಗಳ ಮೀರುವರಾರು ಕಡೆಗೆ ॥ (೨)

ಸಿರಿಗೆ ಹಿಗ್ಗದೆ ಬಡತನಕೆ ಬೆಂಡಾಗದಿರು ।
ಸೇರಿದ ನೆಲೆಯು ಲಾಸುಖ ಸಾವಕಾಲದಲಿ (?) ।
ಶರಣಜನಕಾ ಹೃದಯ ಆದಿಕೇಶವನ (?) ।
ಚರಣ ಕಮಲವ ಭಜಿಸಿ ಸುಖಿಯಾಗು ಮನವೇ ॥ (೩)

॥ ರಾಗ—ಕೇತಾರ ಗೌಳ ॥

ಪಲ್ಲವಿ.—

ವಾರಿಜಮುಖಿ ವಾರಿಜಾಕ್ಷಿ ವಾರಿಜಗಂಧಿ ವಾರಿಸನಳಯುನನು ?।
ವಾರಂತೆ ನೀ ಪೋಗಿ ಕರೆತಂದೆನ್ನಯ ಪ್ರಾಣಧಾರ ಕೇಶವಮೂರ್ತಿಯ ॥

ಚರಣಗಳು.—

ನಗವೈರಿಯುಣಗಣ್ಣನಯ್ಯನಾಪ್ತಗೆ ।
ಮಿಗೆ ಹುಟ್ಟಿದನ ತಮ್ಮನಾ ।
ಸೊಗಸು ವಸ್ತ್ರಕೆ ಸೋತನ ಸುಪುತ್ರನ (?) ।
ವಾಜಿಯುನಿವ ವೈರಿಯ ಪಗೆಯಾ ।
ಜಗದೊಳ್ ಹಾಟದೊಳೇರಾಟದ ವಸವ . . ನವನಿಂದೆ ।
ನಗೆತೋರಿ ನವು ನಿನಗೆ
ಅಗಣಿತಾಭರಣ ಮೀವೆನು ಅಂಗಜಾಗ್ನಿಯು ।
ತಗಹ ಬಿಡಿಸಿ ತರುಣಿ ॥

ಮಿಹಿರ ನಂದನನ ತಂದೆಯು ಪಗೆಯುವನ ಮಾವನ ಹಿತ್ರನ ಮನೆವೆಸರಾ।
ಮಹಿವನ ಕೃತಿಗೊಡೆಯನ ಬಂಟನನುಜನ ಸಹಿಸಿ ತಮ್ಮನ ಮಿತ್ರನ ॥
ಕುಹಕದಿ ಶಾಪವಡೆದಳು ಪ್ರಸ್ತರವಾಗಿ ಗಗನ ಮಧ್ಯದೊಳಿರಲು।
. . . ಸಿ ಶಾಪವ ದನುಜ . . . . ಕ್ಷಿತಿಯೊಳು ವಿವರಿಸುವವನ [ತಾರೆ ॥ (೧)

ಸುರಭೇದ ಪ್ರಥಮ ದಾಸಿಯು ಪೆಸರ ನವಾಜಿಯುರಸನ ನಖವೈರಿಯು।
ಮರೆಯು ಮಾರ್ಗದಿ ಗಮಿಸುವನನಾಪ್ತನ ತಾಯು ಧರಿಸಿದಾತನ ಮಿತ್ರನೆ॥
ಪೊರೆಯು ದೆಸೆಯು ದಿಕ್ಕರಿಯು ಕೋಪದಿ ಸೀಳ್ದ ನರಸಿಯಣ್ಣನೀಕ್ಷಣ।
ಕರೆತಂದೆನಗೆ ಕೊಡಿಸು ಕಾಗಿನೆಲೆಯಾದಿ ಕೇಶವನೆ ॥ (೨)

End.—

ರಾಗ—ಭೈರವಿ ॥

ಭೇರಿ ನಿಸ್ಸಾಳ ತಂಬಟೆ ಕಾಳೆ ಗಿಡಿ ಬಿಡಿಯು।
. . . . . ವಾದ್ಯರವದಿ ॥
. . . . . . । . . . ॥ ಪಲ್ಲ ॥
ಮುತ್ತು ಮಾಣಿಕ ನವರತ್ನ ಪಲ್ಲಣ ಬಿಗಿ।
ದಿತ್ತರದ ಸಮಕಟ್ಟನಾ . . . . ।
ಕತ್ತಿ . . . . ಕುಣಿದು ಬರುವಾ ತೇಜಿಯು।
ಸುತ್ತು ಮೊಗದೊಳು ಮಿನುಗು ಅರಳೆ . . ಳದಿಂ।
ಬೊತ್ತಿಸಿದ ಕಡಿವಾಣದಾ ಪೊಗ . . . ರಥವನೇರಿ ದೈತ್ಯರನು।
ಕತ್ತರಿ ದರಿವ ಗಾವ ॥ (೧)

ಸುರರು ಪೌಜಾಗಿ ತೋರಲು ಸೋಮ ಸೂರ್ಯರು।
. . . ವಾಗಿ ಕೂ . . . ತನ್ನ . . ರಾವುತವನೆ ॥

* * * * *

ಖರದೂಷಣ ತ್ರಿಶಿರ ಮಾರೀಚ ಮೃಗ ಕುಲವ।
ನರಿದು ದಾಳಿಯನಾಡುತಾ ಗಾಮನು। (೧)

ದುರುಳ ದಶಶಿರ ಕುಂಭಕರ್ಣ ಮೊದಲಾದ ನಿ।
ರ್ಜರರಿಪು ಕದನದಿ ಕಡೆಯುಲಿ ॥
ಮರೆಹೊಕ್ಕವೀರ ವೈಷ್ಣವ ವಿಭೀಷಣರೆಂಬ।
ಶರಣರನು ಪ್ರತಿಪಾಲಿಸಿ ಜಗದಲಿ।
ಪರಿವೃತಿಹರು ವೆ . . . ತ್ರ್ಯರ ಭಾಗದಲಿ।
ಮೆರೆದ . . . ಗೂರಿಲಿ . . ಸುಖದಲಿ।
ನರರೂಪ ವೈಕುಂಠ ಕಂಮ (ಬೇಂಟೆ) [ಬೇಟೆ] ನಾಡಿದರೆ।
ಹರುಷದಿಂ ಬಂದು . . . ಸಂಭ್ರಮವನು ॥ (೨)

ವಿ. ವಿ.—

ಅಸಮಗ್ರ. ತುಂಬಾ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಓಲೆಗಳು ಅನೇಕವಾಗಿ ಮುರಿದು ಹೋಗಿವೆ. ಇದರೊಡನೆ ತಿರುವಾಯ್ಮೊಳಿ (ತಮಿಳು ಭಾಷೆ—ಕರ್ಣಾಟಕ ಲಿಪಿ) ಇದೆ.

ಇದು ಹಾಡಿನ ರೂಪದಲ್ಲಿದೆ. ಈ ಹಾಡುಗಳು ಪಲ್ಲವಿ ಚರಣಗಳಿಂದ ಕೂಡಿವೆ. ಕೆಲವೆಡೆ ಅನುಪಲ್ಲವಿಯಿರುವುದೂ ಉಂಟು.

No. 1269. ಕನಕದಾಸರ ಕೀರ್ತನೆಗಳು by ಕನಕದಾಸ.

KANAKADĀSARA KĪRTANEGAḶU BY KANAKADĀSA.

Substance, palm-leaf. Size, 14 1/4 × 1 inches. Pages, 131. Lines, 6 on a page. Extent, 1230 granthas. Character, Grantha. Condition, good, Appearance old. Mode of writing, good.

Begins on the fol. 5 a. Fol. 1 a.—4 a. contains an index to the work. Fol. 4 b. is left blank.

Contains 1—175 songs complete.

Similar to the work described above.

Beginning :

ಪಂತುವರಾಳಿ ॥

ಯೆಂದಿಗೆ ಧನ್ಯನು ನಾನು । ಯೆಂದಿಗೆ ಪುಣ್ಯಾ ಜೀವಿ ।
ಯೆಂದಿಗೆ ನಿಮ್ಮ ಚಿತ್ತ ಕೆಂಬಹುದಚ್ಚು ತನೆಯೆ ॥
ಫಲಮರಗಿಡಬಳ್ಳಿ ಕುಲದಲ್ಲಿಪ್ಪತ್ತು ಲಕ್ಷ ।
ಜಲದೊಳಗೊಂಭತ್ತು ಲಕ್ಷ ಜೀವಿಸಿ ।
ಸುಳಿದೆ ಯೇಕಾದಶಲಕ್ಷ ಕ್ರಿಮಿಗಾಗಿ ।
ತೊಳಲಿದೆ ಅಂಡಜ ದಶ ಲಕ್ಷವು ।
ಚರಣನಾಲ್ಕರಲಿ ಮೂವತ್ತು ಲಕ್ಷ ।
ಚರಿಸಿದೆ ನರನಾಗಿ ನಾಲ್ಕು ಲಕ್ಷ ॥
ಪರಮ ವೇಗದಿ ಬಂದು ಹೊಂದಿದೆ ನಿಮ್ಮ ।
ಸರಸಿಜ ಸಂಭವ ಶತಕಲ್ಪವಾಗಿ ॥ (೧)

* * * * *

End :

ಬದುಕಿದೆನು ಬದುಕಿದೆನು । ಭವಯೆನಗೆ ಹಿಂಗಿತೋ ।
ಪದ್ಮನಾಭನ ಪಾದ ವಲವು ಯೆನಗಾಯಿತ್ತು ॥ ಧ್ರು ॥
ಹರಿತೀರ್ಥ ಪ್ರಸಾದ ಯೆನ್ನ ಜಿಹ್ವೆಗೊದಗಿತ್ತು ।
ಹರಿಯ ನಾಮಾಮೃತವೆನ್ನ ಕಿವಿಗೊದಗಿತ್ತು ।
ಹರಿದಾಸರು ಯೆನ್ನ ಬಂಧು ಬಳಗವಾದರು ।
ಹರಿಯ ಶ್ರೀ ಮುದ್ರೆಯೆನ ಆಭರಣವಾಯಿತ್ತು ॥

ಮುಕ್ತರಾದರು ಯೆನ್ನ ನೂರೊಂದು ಕುಲದವರು ।
ಮುಕ್ತಿ ಮಾರ್ಗಕೆ ಯೋಗಿ ನಾನಾದೆನೋ ॥
ಅಕಳಂಕ ಶ್ರೀ ಹರಿಯ ಭಕ್ತಿಗೆ ಮನಬೆಳದು ।
ರುಕುಮಿಣಿಯರಸನ ನಮ ಜಿಹ್ವೆಗೊದಗಿತೋ ॥
ಇಂದೆನ್ನ ಜೀವಕೆ ಸಕಲ ಸಂಪತ್ತಾಯಿತ್ತು ।
ಮುಂದೆನ್ನ ಜನ್ಮ ಸಾಫಲವಾಯಿತ್ತು ।
ತಂದೆ ಶ್ರೀ ಕಾಗಿನೆಲೆಯಾದಿ ಕೇಶವರಾಯ ।
ಬಂದೆನ್ನ ಹೃದಯದಲಿ ನೆಲೆಯಾಗಿ ನಿಂತಾನು ॥ (೩೪)

ವಿ. ವಿ.—

೧೩೪ ಕೀರ್ತನೆಗಳು ಸಮಗ್ರವಾಗಿವೆ. ಈ ಕೀರ್ತನೆಗಳನ್ನು ಸೂಚಿಸುವ ಪಟ್ಟಿಕೆಯೊಂದು ಗ್ರಂಥದಾದಿಯಲ್ಲಿದೆ.

ಕನಕದಾಸನೆಂಬ ಭಕ್ತನು "ಕಾಗಿನೆಲೆ"ಯ ಆದಿಕೇಶವನ ಅಥವಾ ರಂಗನ ಮೇಲೆ ಅನೇಕ ಕೀರ್ತನೆಗಳನ್ನು ಬರೆದಿರುವನು. ಈ ಕೀರ್ತನೆಗಳೆಲ್ಲಾ ಭಕ್ತಿಪರವಾಗಿಯಾಗಲಿ ಬೋಧಪ್ರದವಾಗಿಯಾಗಲಿ ಇವೆ.

No. 1270. ಕವಿಲಿಂಗನ ಪದಗಳು by ಲಿಂಗ.
KAVILIṄGANA PADAGAḶU BY LIṄGA.

Substance, palm-leaf, Size, 12 7/16×1 1/4 inches. Pages, 92. Lines, 5 on a page. Extent, 920 granthas. Character, Kannada. Condition, much injured Appearance, old. Mode of writing, fair.

Incomplete.

Songs mostly of erotic type, composed by Linga. From the eulogies addressed to God Nañjuṇdēsvara worshipped at Nanjanagōde on the banks of the river Kapila, it may be presumed that he was a devotee of that God and belonged to that part. He praises Sālūra Narasingarāja, son of Guṇḍarāja and if by this he is taken to be a contemporary of Sālūra Narasingarāja, the date of the author can be fixed to the last part of the 15th century.

Beginning :

ರಾಗ—ಮುಖಾರಿ ॥

ಪಲ್ಲವಿ.—

ಮನಮೋಹದವಳಾರು ಪೇಳೊಲಿದು ಅಂಬುಜಾ ।
ನನೆ ಮುಚ್ಚುಗಾತಿಯರ ಮೋಹರದೊಳಸಗೆ ॥

ಚರಣ.—

ರಂಗು ಮಾಣಿಕ ಧರೆಗೆ ರನ್ನದ ಕಂಕಣವಿತ್ತು ।
ಭೃಂಗ ಕುಂತಳೆಗೆ ಮುಡಿಪೂವನಿತ್ತು ॥
ಪೊಂಗಳಸ ಕುಚಗೆ ಪಚ್ಚೆಯ ಪದಕವನಿತ್ತು ।
ತಿಂಗಳ ಮೊಗದಳಗೆ ತಿಲಕವನಿತ್ತು ರಮಣಿ ॥ (೧)

ಕಳಹಂಸಗಮನೆ . . ದುಗೆಯ್ತು ಮನವೊಲಿದು ।
ಸೆಳೆನಡುವಿನಳಗೆ ಕಾಂಚೀದಾಮ ವಿತ್ತಾ ।
ಲಲಿತಾಂಗಿಗನುಲೇಪನವ ಕಂಜವದನೆಗೆ ।
ತೊಳಪ ಮುತ್ತಿನ ಕಂಠಮಾಲೆಯಿತ್ತ ರಮಣಿ ॥
ಇಂಗಿತವರಿಯಲೆಂದೀ ನಾರಿಯರಿಗಿತ್ತ ।
ಮಂಗಳಾಲಂಕಾರ ಸಮವಾಗಿರೆ ।
ಅಂಗದ ಕಲಾನಿಪುಣ ಗಂಡಭೇರುಂಡ ಕವಿ ।
ಲಿಂಗನದಿಹಾಣ ಕವಿಸಾಳ್ವಿಗೆ ॥

ಈ ಪದಕ್ಕೆ ಸೂತ್ರ.—ವೃತ್ತ.

ಚರಣ.—

ಅಳಗುರುಳ್ಗೆ ಪೊತಿಲಕಮಿಂದು ನಿಭಾನನೆಗಂ ಲತಾಂಗಿಗಂ ।
ಮಲಯಜ ನೂಪುರಂ ಕಲಮರಾಳ ಸುಯಾನೆಗೆ ಮುತ್ತಿನೊಚ್ಚರಂ ॥
ಸಳನನಿಭಾಸ್ಯೆಗಂ ಪದಕ ಮೋಹಘನಸ್ತನಿಗಂ ಸುರತ್ನಕಂ ।
ಗೊಳಸುವ ಕಂಕಣಂ ಪವಳವಾಯ್ದೆಱೆಯಳ್ಗೆ ನಿತಂಬಸೂತ್ರಮಂ ।
ಸೆಳೆನಡುವೊಪ್ಪುವಳ್ಗೊಲಿದು ನಾಯಕನಿತ್ತನದೇಂ ಮನಃಪ್ರಿಯಾ ॥ (೧)

ಉ.ಮಾ ॥

ಮುತ್ತಿನ ಹಾರಮಂ ಪದಕ ಕಂಕಣಮಂದುಗೆಯಾಂತು ರಾಣಿಸುರ್ ।
ಮತ್ತಿಹ ನಾಲ್ವರುಂ ತ್ರಿಳಯೆ ಭೋಗದ ನಾರಿಯರಿನ್ನು ಭಾವಿಸ— ।
ಲ್ಯುಕ್ತಮಗಂಧಮಂ ತಿಲಕವಂದುಗೆಯಿತ್ತುದು ಪೊತ್ತ ಸೂಚಿಪಂ ।
ದುತ್ತಮ ಗಾತಿಯಂದಿನ ದಿನಕ್ಕಪಯೋಗ್ಯಳ್ ನಾಡೆ ಸೌರಭಂ ।
ಬೆತ್ತಿಹ ಪುಷ್ಪವಾಂತಿಹಳ್ ಹೇ ಪ್ರಿಯೆ ಬಲ್ಲರಿಗಬ್ಜಲೋಚನೇ ॥ (೨)

ಕಂದ.—

ತಿಲಕದಸೆಳೆವೆಱೆಯಂ ಮೇ ।
ಣ್ಮಲಯಜದಿಂ ಸಂಜೆ ನೂಪುರದಿ ಪ್ರಾಭಾತಂ ॥
ಸಲೆ ಸನ್ನೆಗಿನಿಯ ನಿತ್ತಂ ।
ಲಲನೆಯರಿಗೆ ಕಂತು ಶಾಸ್ತ್ರದೊಳ್ ಕಮಲಮುಖಿ ॥ (?) (೩)

* * * * *

(fol. 4 a) ಶ್ರೀರಾಗ.

ಪಲ್ಲವಿ.—

ನಿಲ್ಲನಾವನೋ ನಿಲ್ಲನಾವನೋ ।
ನರಸಿಂಗನಿಗಿದಿರಾಂತು ನಿಲ್ಲನಾವನೋ ॥

ಚರಣಗಳು.—

ಗಿರಿವನ ಜಲದುರ್ಗಗಳ ಬಿಟ್ಟವನ ಧಾಳಿ ।
ನಿರದೋಡಿದಹಿತ ಭೂಮಿಪರೆಲ್ಲ ॥
ಗಿರಿವನ ಜಲದರ್ಗಗಳ ಪೊಕ್ಕರೆನೆಲಕೆ ।
ಱಿಕಿಸಿ ವಿಂಡೆಯ್ದಿ ತರಣ್ಣವ ॥ (೪)

ಅಗಲ್ದನಿಯರ ವಿರಹದಲಿ ಮೆಯ್ದೊ ।
ಡಿಗೆ ಕರಗಿ ಕಾಮಿನಿಯರವಯವದಿಂದ ॥
ಪೊಗುವ ಚಿನ್ನದ ನೀರಿನ ಬಟ್ಟ ಮಿಗೆ ಹೇಮ ।
ಮೃಗ ಹೋದ ಹೇರಡವಿಯೊಲಾಯ್ತು ॥ (೨)

ಸೊಡರಾಗುಳ್ವೆಣ್ಣೆಯಂತೆರಡು ಕಣ್ಗಳಲಿ ನೀ ।
ರೊಡನೊಸರಿ ತೊಟ್ಟಿಡಲಾಗ ॥
ಅಡವಿಗಿಚ್ಚಿನ ಬೀಜಗಳ ಬಿತ್ತುವವೊಲು ಹೆಣ್ಗ ।
ಳಡಿಯಿಟ್ಟರುಱಿ ಶಾಖಾಗ್ನಿಗಳಿಂದ ॥ (೩)

ಎದೆದಿಗಿರಿನ ಭರವೆಂತೊ * * ಲೆದುದಿ ।
ಬಿದಿರೆ ಸೂಸುವ ಮಾಣಿಕದ ಹಾರ ॥
ಹೃದಯವೊಡೆದು ವಿರಹಾಗ್ನಿ ಹೊರಗೆ ಕಿಡಿ ।
ಗೆದರ್ವವೆಂದೆನೆ ನಡೆದರು ಕೂಡೆ ॥ (೪)

ಮಲೆವರಿರಿಪುರಾಯ ಗಿರಿವಜ್ರ ವನದಾವಾ ।
ನಲವೈರಿವಾರ್ಧಿ ವಡಬ ಸಾಳ್ವ ॥
ಕುಲರತ್ನಗುಂಡಭೂವರ ನರಸಿಂಗಗೆ ।
ತಲೆಯೊಡ್ಡಿಬಾಳ್ವ ಭೂಭುಜರುಂಟೆ ॥ (೫)

ಈ ಪದಕ್ಕೆ ಸೂತ್ರ.

ವೃ ॥ ಒಡೆದುರವಂ ವಿಯೋಗಶಿಖಿಯುಪ್ಪರಿಸಲ್ ಕಿಡಿಸೂಸುವಂತೆ ಪೊಂ ।
ಗೊಡ ಕುಚ ಮಧ್ಯದೊಳ್ ಕೆದಱಿ ಮಾಣಿಕಹಾರಗಳಿಂದಲಾದ ಪೊಂ ।
ದೊಡವು ಕರಂಗಿಧಾರೆಯಿಡೆ ಹೊಂಮೃಗ ಹೋದ ವನಾಂತದಂತೆ ತೊ ।
ಟ್ಟಿಡೆ ನಯನಾಂಬು ಬಿಂದುಗಳು ದೀಪದೊಳಾಂತುಗುಳ್ವೆಣ್ಣೆಯಾಗೆ ಹೇ ।
ರಡವಿಯೊಳಂ ವಿರೋಧಿ ನೃಪರಂಗನೆಯರ್ ಧೃತಿಗುಂದಿ ಧಾಟಿಯೊಳ್ ॥ (೧)

ಮಡದಿಯರುಂ ನಿಜೇಶ್ವರರಗಲ್ದು ಮಹಾವಿಪಿನಾಂತರದಲ್ಲಿ ಪೋ ।
ಪೆಡೆಯೊಳು ಪಾದಮಂ ಪಳುಕಿನೊಳ್ಕೊಳೆಗಲ್ಗಳು ಕೊಡಿತಾಕೆ ಬೊ ।
ಟ್ಟೊಡೆದರುಣಾಂಬು ಸೂಸೆ ಪೊರದಂ ತರಿಗೆಂಡದೊಲಾಗಿ ಬೀಳ್ವ ಸೋ ।
ಮರ್ಡಿಯಲರ್ಗಂಪಿಗಂ ಮುಸುಱುವಾಱಡಿಗಳ್ ಪೊಗೆಯಂದವಾಗೆ ಕಾ ।
ರೊಡತಿಯ ನೋಂನಲೆಂದನುಲಕುಂಡಮನೆಯ್ದುವೊಲಾಯ್ತು ಧಾಟಿಯೊಳ್ ॥
[(೨)

End.—

ರಾಗ—ದೇಶಿ.

ಪಲ್ಲವಿ.—

ಸುರರೇಕ ಅಮೃತ ಮಥನವ ಮಾಡಿ ಬಳಲಿದಿರು ।
ತರುಣಿಯಾ ಅಧರದೊಳು . . . . ॥

ಚರಣಗಳು.—

ಚೆಂಬೊಗರಿ ಮೊಲೆಯಿಂದ ಪುರಕೊತ್ತಿಕಾತರಿಪ ।
ಬಿಂಬಾಧರದಿ . . ಯು ಕೆಂಬಲ್ಲಿಗೊತ್ತೆ ॥
ಚುಂಬಿಸಿ ತುದಿನಾಲಗೆಯಿಂದ ಚಪ್ಪರಿದು ತಾ ।
ಪುಂಬ ಸವಿಯ ತಾವು . . . . ॥ (೧)

. . ನೆನೋಟ ಝಂಪು ಝುಕ್ಕುಲಸನ್ನೆಯೊಳು ತ ।
ನ್ನಿನೆಯು ಹೊಹೊ ಸಾಕು ನಿಲ್ಲೆಂಬಳು ॥
ಸನುಮಾತದಿಂದ ಸೌಂದರರದ ಗುಟುಕನು ಯಿತ್ತು ।
ವನಿತೆ ಬಾರೆಂದಿರಿಸಿ ಪುಣ . . . ॥ (೨)

. . . . . ಗಲೆಯು ಲೀಲೆಯೊಳು ಮೈಮಱೆದು ।
ಜೇನಕೊಡದಂತೆ ತೊಟ್ಟಿಡುವ ಅಧರವನು ।
ತಾನುಂಡು ಸೂಸಿದರೆ ಘನನಿಧಿಯು ನಂಜುಂಡದೇವ ।
. . . . ॥ (೩)

ಪಲ್ಲವಿ.—

. . . . ಣಿಷೊ ।

ಚರಣಗಳು.—

ಅಱಿವು ಮೋಹಹಲ್ಲ ಮಱವೆ ಮೋಹವಲ್ಲ ।
ಅಱಿವು ಮಱವೆಯುಸುಳದು ನೆನೆಯೆ ॥
ನೆಱೆಮೋಹವ ಮೋಹನದೊಳು . . . ।
. . . . . ಕುಱುಹಬಲ್ಲದೆ ॥ (೧)

ಸಕಲವೆಂದೆಂಬ ತೋಱಿಕೆಗೆಟ್ಟು ।
ನಿಷ್ಕಲಾತ್ಮಕವೆಂಬ ಜ್ಞಾನವಾಚಕವಡಗಿ ।
ಅಕಳಂಕವಾಗಿ ಜ್ಞಾನ ಚಿತ್ಸುಖದಂತೆ ಮೋಹ ।
. . . . ॥ (೨)

ಆದಿ ಮಧ್ಯಾಂತವೆಂದೆಂಬ ಕಾಲವ ಮೀಱಿ ।
ನಾದ ಬಿಂದು ಕಳೆಯನೆಳದುಳಿದು ॥
ವೇದಾಂತ ಕವಿ . . ಲಿಂಗನೊಡೆಯ ನಂಜುಂಡನ ।
ಸಾಧಿಸಿಕಂಡ ಸಿದ್ಧರೊಳಲ್ಲದೆ ॥ (೩)

ಪಲ್ಲವಿ.—

. . . . ದಲ್ಲಿ ।
ಏಕಾಂತದಲಿ ಸಂಚರಿಸದಿರು ಕಂಡ ಮನವೆ ॥

ಚರಣಗಳು.—

ಹೇಳಲೇನವಗಡದ ಆ ಮಹಾರಣ್ಯದೊಳು ।
ನೀಲಕುಂತಳ ವಕ್ರ ತುಂಬಿಗಳುಂಟು ॥
ಭ್ರೂಲತೆಯು . . . . . ಬ ।
ಕೋಲೆಸುಗೆ ಕಂಡಕಡೆಯಲಿ ಕಡುಘನವು ॥ (೧)

ಸುಳಿಯಲಿರುಬಿನ ಕಳಶಕುಚ ಪರ್ವತಗಳೆಂಬ ।
ಸುಳಿನಾಭಿ ಗುಹೆ ತ್ರಿವಳಿ ಝರಿಗಳುಂಟು ॥

ವಿ.ವಿ.—

ಅಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ. ಇದರಲ್ಲಿ ಕೆಲವು ಓಲೆಗಳು ಮುರಿದುಹೋಗಿವೆ. ಇದು ಹಾಡುಗಳಿಂದ ಕೂಡಿದೆ. ಈ ಹಾಡುಗಳು ಅನೇಕ ರಾಗಗಳಿಂದ ಕೂಡಿವೆ. ಪ್ರತಿಯೊಂದು ಹಾಡಿಗೂ ಪಲ್ಲವಿ, ಚರಣಗಳಿವೆ. ಅಲ್ಲದೆ "ಈ ಪದಕ್ಕೆ (ಇಲ್ಲಿ ಪದವೆಂದರೆ ಹಾಡು ಎಂವರ್ಥ) ಸೂತ್ರ" ಎಂದು ಪದ್ಯಗಳು ಬರೆದಿವೆ. ಇದರಲ್ಲಿ ಪಂಚಪಾದ ವೃತ್ತಗಳಿವೆ. ಈ ಪದ ಅಥವಾ ಹಾಡುಗಳು ಪ್ರಾಯಿಕವಾಗಿ ಶೃಂಗಾರ ರಸದಿಂದ ಕೂಡಿರುವ್ರವುಗಳಾಗಿವೆ.

ಕವಿ ಲಿಂಗನೆಂಬವನು, ಕಪಿಲಾ ತೀರದಲ್ಲಿರುವ ನಂಜನಗೂಡಿನ ನಂಜುಂಡೇಶ್ವರನನ್ನು ಅಲ್ಲಲ್ಲಿ ಸ್ತುತಿಸಿರುವುದರಿಂದ ಕವಿ ನಂಜುಂಡೇಶ್ವರ ಭಕ್ತನೆಂದೂ ಆ ಪ್ರಾಂತಕ್ಕೆ ಸೇರಿದವನೆಂದೂ ಊಹಿಬಸಹುದಾಗಿದೆ. ಈತನು ಕಾಮ ಶಾಸ್ತ್ರಜ್ಞನಾಗಿದ್ದಂತೆ ಗೊತ್ತಾಗುತ್ತವೆ. ಗುಂಡರಾಜನ ಮಗ ಸಾಳುವ ನರಸಿಂಗ ರಾಜನನ್ನು ಅನೇಕ ಕಡೆ ಸ್ತುತಿಸಿರುವುದರಿಂದ ಆತನ ಆಶ್ರಯದಲ್ಲಿದ್ದಿರಬಹುದೆಂದು ಹೇಳಬೇಕಾಗುತ್ತದೆ. ಈ ಸಾಳುವ ನರಸಿಂಗರಾಯನು ವಿಜಯನಗರದ ಅರಸರಲ್ಲಿ ಮೂರನೆಯ ವಂಶಕ್ಕೆ ಸೇರಿದವನು. ಇದರಿಂದ ಕವಿಯ ಕಾಲವು ೧೫ ನೆಯ ಶತಮಾನದ ಅಂತ್ಯಭಾಗವೆಂದು ತಿಳಿಯುತ್ತದೆ.

No. 1271. ಕೀರ್ತನೆಗಳು.

KĪRTANEGAḶU.

Substance, Palm leaf. Size, $12\frac{5}{8} \times 1\frac{1}{4}$ inches. Pages. 6. Lines, 4 or 5 on a page. Extent, 32 granthas. Character, Kannada. Condition, very much injured. Appearance, old, Mode of writing fair.

Begins on fol. 23 a. of the Ms. described under No. 937 *ante*.

Incomplete.

Songs of philosophical nature teaching how one can reach God by a true knowledge of Him. The name of the author is not known.

Beginning and End :—

ರಾಗ —ಘಂಟಾರವ.

ಪಲ್ಲವಿ.—

ನಿಂಡಕವಿದಳನಿಕೆಆಕೆಳನ್ನ ತು ು ೯ ಗಕಟ ವೈರಾಗ್ಯ ಜನಿಸದ

ನಾಕು ನಾಲಿನ್ನದ . . . ಯು ಮೋಕ್ಷಸಾಧನವ ।
ಕೈಕೊಂಡು ನಿಲ್ಲಲಾಗದೆ ಆತ್ಮ ॥

ಚರಣಗಳು.—

ಸೋಲದೆ ಭೋಗಗಳ ನುಂಡುಂಡು ಸವಿಸವಿದು ।
ಮೇಲೆ ದಣಿಕಿಲ್ಲ ವೇಕೋ ಆತ್ಮ ।
ಕಾಲಿಲೊರದೆ ಮಾನವರು [ಕೊಂ] (ನೊಂ) ದು ಕೂಗುತಲಿಪ್ಪ ।
ಗೋಳಗೊಳಗಾದೆಯಲ್ಲ ಆತ್ಮ ॥
ಕೇಳ ನೀ ಪಶುಪಕ್ಷಿ ಜಾಲದೊಳು ಕೂಲೆಗೆ ನೀ ।
ಪಾಲಾಗಿ ನಿಂತೆಯಲೊ ಆತ್ಮ ॥
ಹೇಳಬಾರದ ಗರ್ಭವಾಸದೊಳಗಿಹ ನಿನ್ನ ।
ಬಾಳಕೆಯನೇವೇಳ್ವೆನೋ ಆತ್ಮ ॥ (೧)

ಮಾಸುಮುಸುಕಿದ ಮೆಯ್ಯಮದ ಮೊರದೊಳು ಮಲಗಿ ।
ಏಸೊಗವ ಪಡೆದೆ ಆತ್ಮ ॥
ಹೇಸಿಕೆ ಮುಸುಕಿ ರಕ್ತವ ಸುರಿವ . . . ನಿಂತು ।
ಗಾಸಿಗೊಳಗಾದೆಯಲ್ಲ ಆತ್ಮ ॥
ಆಸುರದ ಬಾಧೆಗಳಗೆ ದೇಹವ ನಿತ್ತು ।
ನೀಸದಾ ಬಾಳ್ವೆಯಲೆಲ್ಲ ಆತ್ಮ ॥
ಈಸು ಪರಿಯಲಿ ಪಟ್ಟ ಬವಣೆಯನು ನೀಮರೆದು ।
ಮೈಸಿರಿಯ ಮೋಹಿವೆಯಲ್ಲೊ ಆತ್ಮ ॥ (೨)

ಹೊಲೆ ನೆತ್ತರಿಂದಾದ ಹೊಲೆದೇಹಕಿದಕೊಂದು ।
ಕುಲಗೋತ್ರ ವೆಂತಾಯಿತೋ ಆತ್ಮ ॥
ಮಲಭಾಂಡವಿದಕೊಂದು ಪೆಸರಿಟ್ಟು ಕರೆಯುಲ ।
ಚ್ಚಳಿಯದೋ ಎಂಜೆಯಲ್ಲ ಆತ್ಮ ॥
ಎಲುಮಜ್ಜಮಾಂಸಗಳ ನಿಳಯವಿದತಿಶಯಕೆ ನೀ ।
ನಲಿನಲಿದು ಹಿಗ್ಗುವೆಯಲ್ಲೊ ಆತ್ಮ ॥
ಅಲಸದಿದರೊಳಗೊಂದು ಜಂತು ಭುಂಜಿಪುದೆಂತು ।
ಕಲುಹೃದಯ ನೀನೆ ಕಂಡೋ ಆತ್ಮ ॥ (೩)

ಮೂರು ದಿವಸದ ಬಾಳಗಾರು ಜೋಡಿಟ್ಟವಳ ।
ದೂರಿಗೊಳಗಾದೆಯಲ್ಲೊ ಆತ್ಮ ॥
ಊರಕಾಂತಿಗೆ ಕರ್ತೃವಾದವನ ತೆರದಿ ಶಾ ।
ರೀರ ಸುಖಕೆಳಸಿದೆಯಲ್ಲೊ ಆತ್ಮ ॥

ತೋರುವಾ ಶಾರೀರವೀಭೋಗ ನಿಕರಗಳೆಲ್ಲ ।
ಜಾರದೆಯೆ ನಿಲ್ವುವೇನೋ ಆತ್ಮ ॥
ಆರ್ಯೆಯ್ಯಲಿದರಲಭಿಮಾನಿಸಿದ ಫಲವ ಕೈ ।
ಯ್ಯಾರೆ ನೀನುಂಬೆಯಲ್ಲೋ ಆತ್ಮ । (೪)

ಉದಿಸಿದರೆ ಮರಳಿಯುದರಕೆ ಬಾರೆನೆಂಬ ಗ।
ರ್ಭದಲಿ ನೀ ನಿಂತೆಯಲ್ಲೊ ಆತ್ಮ॥
ಉದಿಸಿ ಕೆಡುತಿರ್ಪ ತನುಬೇರೆ ನೀ ಬೇರೆಂಬ।
ಹದನ ನೀನೋಡೆಯಲ್ಲೊ ಆತ್ಮ॥
ಇದು ನಾನು ಅನ್ಯತಾನೆಂದೆಂಬ ಸುವಿವೇಕ ನಿಜ।
ಗೊದವಿದೊಡೆ ಮುಕ್ತನಲ್ಲೋ ಆತ್ಮ॥
ಚದುರ ಶ್ರೀ ಬಾಲಗೋಪಾಲನಂಘ್ರಿಯು ಸೇರಿ।
ಸದುಗತಿಗೆ ನಿಲಲಾಗದೇ ಆತ್ಮ॥

ರಾಗ—ಘಂಟಾರಾಗ.

ಅಂದಿಗಲ್ಲದೆ ಮನದ ಪರಿತಾಪವಡಗದು ಮು।
ಕುಂದ ಕೇಶವ ಮುರಾರಿ ಶೌರಿ॥
ಎಂದೆನಗೆ ನಿನ್ನ ಭಕ್ತರ ಸಂಗ ಸೌಖ್ಯವಹು।
ದೆಂದಿಗಭಯುವ ಪಡೆವೆನೋ ಕೃಷ್ಣಾ।
ಎಂದಿಗೀ ಕರ್ಮಕಾನನವ ನುತ್ತರಿಪ್ಪುವಿ।
ನ್ನೆಂದಿಗಜ್ಞಾತೆ ಪೋಪುದೋ ಕೃಷ್ಣಾ॥
ಎಂದಿಗೀ ತಾಮಸ ಕಲ್ಪಾದಿ ದೋಷಗಳ।
ದಂದುಗವ ಕಡೆಗಣಿಪೆನೋ ಕೃಷ್ಣಾ॥
ಎಂದಿಗೀ ವಿಷಯ ವಾಸನೆ ದೋರದಿಹುದು ಮ।
ತ್ತೆಂದಿಗಾಶಾನಿರಾಶನಾ ಕೃಷ್ಣಾ॥
ಎಂದಿಗೆನ್ನದು ತನ್ನದೆಂದೆಂಬ ದುರ್ಮೋಹ।
ವೃಂದವನು ಕಳೆದು . . . . . . ॥

(ಸೂಚನೆ.—ಈ ಮುಂದೆ ೨೧ ಹಾಡುಗಳುಳ್ಳ ಭಾಗವು ಹೋಗಿದೆ.)

. . . . . ಕಟಾ ಜಲವಿ . . ರಣ॥ (೩-೨೩)

ರಾಗ—ಮಂಗಳಂ.

ಪಲ್ಲವಿ.—

ಜಯ ಮಂಗಳಂ ಸದಾ ಶುಭ ಮಂಗಳಂ॥

ಚರಣಗಳು.—

ಸುಗ್ರೀವ ಪವನಸುತ ಸುಜನ ಪರಿಪಾಲಕಗೆ।
ಸುಗ್ರೀವನಾದ ಶ್ರೀಕರ ಮೂರ್ತಿಗೆ॥
ನಿಗ್ರಹಿಸಿ ದಾನವರ ನಿರ್ಜರರ ಕಾಯ್ದವಗೆ।
ಉಗ್ರನುತ ಪೌತ್ರ (?) ಸೀತಾರಾಮನಿಗೆ॥ (೧)

ನೀಲಾದಿ ಹರಿ . . ಲರ ನಿಜಕೃಪೆಯೊಳಾಳದಗೆ।
ವಾಲಿಯನು ಭಂಜಿಸಿದ ಬಹುಮಹಿಮಗೆ॥
ಶೂಲಿಯಾ ಗಿರಿಯಲ್ಲಿ ಸಿಕ್ಕಿದನ ಸಿರವಿಳುಹಿದಗೆ।
ನೀಲ ಸಂಪನ್ನ ಸೀತಾರಾಮನಿಗೆ॥ (೨)

ಸುರಸಾಗರದಿ ನೆಲಸಿ ಶುಭವೀವ ದೇವಂಗೆ ।
ಸರಸಿರುಹ ಸಖ ಕೋಟಿ ಸಂಕಾಶಗೆ ॥
ಪರಮ ಮುನಿಜನ ವಂದ್ಯನಾದ ಪಂಕಜಂಗೆ ॥
ಮೆರೆವ ಶ್ರೀ ಪಟ್ಟಾಭಿರಾಮ ರಘುಪತಿಗೆ ॥ (೨-೨೪)

ವಿ.ವಿ.—

ಅಸಮಗ್ರ. ಕೀರ್ತನೆಗಳು ೨-೨೩ ಇಲ್ಲ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ವೈದ್ಯ ವಿಷಯ (ಗದ್ಯ), ಶಿವಸ್ತುತಿ (ಷಟ್ಪದಿ—ಅಸಮಗ್ರ), ಚೋಳರಾಜ ಸಾಂಗತ್ಯ ಇವೂ ಇವೆ.

ಇದು ಹಾಡಿನ ರೂಪದಲ್ಲಿದೆ. ಇದರಲ್ಲಿ ೨೪ ಕೀರ್ತನೆಗಳಿವೆ. ಪ್ರತಿಯೊಂದು ಕೀರ್ತನೆಯೂ ಪಲ್ಲವಿ ಮತ್ತು ಚರಣಗಳಿಂದ ಕೂಡಿದೆ. ದೇಹಾಭಿಮಾನವನ್ನು ಬಿಟ್ಟು ಆತ್ಮ ಪರಮಾತ್ಮ ತತ್ವವನ್ನರಿತು ಸಂಸಾರದಿಂದ ಮುಕ್ತನಾಗಿ ಭಗವಂತನ ಪದವನ್ನು ಸೇರಬೇಕೆಂಬುದು ಈ ಹಾಡುಗಳಲ್ಲಿ ಉಕ್ತವಾಗಿರುವ ವಿಷಯವು. ಇದನ್ನು ಬರೆದವ (ರಚಿಸಿದವ) ರಾರೆಂಬುದು ಗೊತ್ತಾಗುವುದಿಲ್ಲ.

No. 1272 ಕೀರ್ತನೆಗಳು.

KĪRTANEGAḶU.

Substance, palm leaf. Size, $12\frac{5}{8} \times 1$ inches. Pages. 98. Lines, 5 on a page. Extent, 750 granthas. Character, Kannada. Condition, extremely injured. Apaearance, old. Mode of writing, good.

Incomplete.

This is a collection of devotional songs written by different writers.

Beginning :

ಬನ್ನೂರಪುರವಾಸ ಸಕಲ ದೇವರದೇವ ಪುರಂದರ ವಿಠಲ ॥ (5)

ಮು.—

॥ ರಾಗ—ಕೇದಾರಗೌಳ ॥

ಪಲ್ಲವಿ.—

ರಂಗ ಮನೆಗೆ ಬಂದರೆ - ಎನ್ನತಾ - ರಂಗಗುಡಿಯು ಕಟ್ಟಿಕುಣಿದೆನಾ ॥

* * * * *

ಚರಣ.—

ನಾ . . . . . ನಿಮ್ಮ ಬಿಡುವವನಲ್ಲ ।
ಆವಾಗಲು ನಮ್ಮ ಅಗಲದ ನಮ್ಮ ಪ್ರಾಣ - ಮಾನದೊಡೆಯ ವಿಟ್ಠಲ ॥ (5)

End :

॥ ರಾಗ ॥

ಪಲ್ಲವಿ.—

ಸಂಧ್ಯಾವಂದನೆಯ ಮಾಡು ಸಂದೇಹ ಬೇಡ ।
ದ್ವಂದ್ವಗೂಡಿ ಅಷ್ಟಾಕ್ಷರಿ ಕು . . . . ॥

ಚರಣ.—

ವಾರಿಧಿ ಶಯನ ಬೇಂಟೆಯ ತಿಮ್ಮನ

ನೂರೆಂಟುದಳದ ಕಮಲದೊಳು ಪೂಜೆಯ .

ವಿ.ವಿ.—

ಇದರಲ್ಲಿ ಅನೇಕ ಹಾಡುಗಳಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಪ್ರಾಯಿಕವಾಗಿ ಓಲೆಗಳು ಮುರಿದಿವೆಯೆನ್ನಬಹುದು.

ಇದನ್ನು ಕೀರ್ತನೆಗಳ ಸಂಗ್ರಹ ಎಂದು ಕರೆಯಬಹುದು. ಇದರಲ್ಲಿ "ಪುರಂದರ ವಿಠಲ, ವಿಟ್ಠಲ, ಬೇಟೆಯ ತಿಮ್ಮ" ಮುಂತಾದ ಅಂಕಿತಗಳುಳ್ಳ ಅನೇಕ ಹಾಡುಗಳಿವೆ. ಮೊತ್ತ ಮೊದಲಿನ ಹಾಡಿನಲ್ಲಿ 'ಬನ್ನೂರ ಪುರವಾಸ (×) ಪುರಂದರ ವಿಠಲ' ಎಂದಿದೆ. ಅಂಕಿತವು ಇದರಲ್ಲಿ 'ಪುರಂದರ ವಿಠಲ' ಎಂದಿದ್ದರೂ ಪುರಂದರ ದಾಸರು ಬರೆದುದೆಂದಿದನ್ನು ಹೇಳಲಾಗುವುದಿಲ್ಲ. ಮುಂದೆ ಪುರಂದರ ದಾಸ ಕೀರ್ತನೆಗಳು ಇದರಲ್ಲಿ ಕೆಲವಿವೆ. ಹಾಗೆಯೇ ಇನ್ನೂ ಅನೇಕರು ಬರೆದಿರುವ ಕೀರ್ತನೆಗಳೂ ಇವೆ.

No. 1273 ಕೀರ್ತನೆಗಳು.

KĪRTANEGAḶU.

Substance, paper. Size, $10\frac{3}{8} \times 9\frac{7}{16}$ inches. Pages, 36. Lines, 20 on a page. Extent, 500 granthas. Character, Kannada. Condition, good. Appearance new. Mode of writing, good.

Restored in 1926—27 from the Ms. described under the next No. 1275.

Incomplete.

ವಿ.ವಿ.—

ಅಸಮಗ್ರ ಕಾಗದದ ಪ್ರತಿ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯಾಗಿದೆ.

No. 1274 ಕೀರ್ತನೆಗಳು.

KĪRTANEGAḶU.

Substance, palm leaf. Size, $7\frac{9}{16} \times 1\frac{6}{16}$ inches. Pages, 47. Lines, 5—6 on a page Extent, 315 granthas. Character, Nandināgari, Condition, very much injured Appearance, old.

Incomplete.

Contains devotional songs of an unknown author.

Foll. 9 (b), 11 (b) and 22 (b) are left blank.

Beginning :

॥ ರಾಗ ॥

ಪಲ್ಲವಿ.—

ಎನ್ನ ಸಲಹು ಮೋಹನ ವಿಜಯ ಪ್ರಸನ್ನ ।

ಶ್ರೀ ಹಯವದನ ॥

ಚರಣ.—

ಅನವರತವು ನಿನ್ನ ಧ್ಯಾನಿಪ । ಜನರನು ಗುಣರನ್ನ ಧನ್ಯ ।
ರನು ಮಾಡಿ ಚೆನ್ನಾಗಿ ಪೊರೆವ ರಾ । ಕುನ (?)
ಕಾಂತಿಮದನ ॥ (1)

ನಂದಾನಂದ ಗೋವಿಂದ ಭವ ಭಯದಿ । ನೊಂದ ಭಕ್ತರನು
ಚಂದದಿಂದ ಕಾಯುತಿಹ ಮಂದರಾದ್ರಿ ಧರ ।
ವೃಂದಾರಕೇಂದ್ರ ಮುನೀಂದ್ರ ॥ (2)

ಅಂಗಜನ ತಂದೆ ತುಂಗವಿಕ್ರಮ ಶು ।
ಭಾಂಗ ಮಂಗಳಾಪಾಂಗ ॥
ರಂಗ ನಿನ್ನವರ ಸಂಗವಿತ್ತೆನಗೆ ।
ಗಂಗಾಜನಕ ಪಾಂಡುರಂಗ ॥ (3)

End :

ಪಲ್ಲವದರುಣ ಕಿರಣಾಮಲ ಪಾವಕ ನಿಜ ।
ಕಂಠ ಯೋಗ್ಯ . . . ವ ಜಾತಿ ಶೇ . . . . ಮಾಡರು ।
ಮಸುಧಿಪ . . . ಪರಧಾಮಮಾಂತ ಶ್ರೀ ವೈಕುಂಠೇಶ
ತಿರುವೆಂಕಟಾಧೀಶ ಎನ್ನ ॥

ವಿ.ವಿ.—

ಅಸಮಗ್ರ. ಅತ್ಯಂತ ಜೀರ್ಣವಾದ ಪ್ರತಿ. ನಂದಿನಾಗರಿ ಲಿಪಿಯಲ್ಲಿ ಬರೆದಿದೆ. ನಡುವೆ ಅನೇಕ ಓಲೆಗಳು ಹೋಗಿವೆ.

ಇದು ಹಾಡಿನ ರೂಪವಾಗಿದೆ. ಪ್ರತಿಯೊಂದು ಹಾಡೂ ಪಲ್ಲವಿ, ಚರಣ, ಈ ವಿಭಾಗ ಗಳಿಂದ ಕೂಡಿವೆ. ಬರೆದವರಾರೋ ಗೊತ್ತಿಲ್ಲ.

No. 1275 ಕೀರ್ತನೆಗಳು.

KĪRTANEGAḶU.

Substance, palm leaf. Size, $7\frac{13}{16} \times 1\frac{1}{2}$ inches. Pages, 62. Lines, 68 on a page Extent, 500 granthas. Character, Kannada. Condition very much injured. Appearance, old. Mode of writing, good.

Incomplete.

This is a collection of songs of different kinds. The name of the author is not known.

Beginning :

ಪಲ್ಲವಿ.—

ಪೊಳೆವ ಮಿಂಗಣ್ಣಿನ ಹೊಂತಕಾರಿ ನಾರಿ ।
ತಳರು ದಾಟಿಯು ವೈಯ್ಯಾರಿ ॥
ಕಳಿತುಂಬಿ [ತು] ತುಳುಕುವ ಚೆಲುವ ಮೋಹನ ಕಾಂತೆ ।
ಎಳೆವೆಣ್ಣು ಸತ್ಕುಲವಂತೆ ॥

ಚರಣಗಳು.—

ಒಲವ ಸೂಸುತಲೊಮ್ಮೆ ನೋಡೆ ಕೆಂದುಟಿ ಮಾಡೆ ।
ನಲಿದು ಮುದ್ದಿಸಿ ಮುಂಡಾಡೆ ॥
ಎಲನೆ ಚಿನ್ನದ ಬೊಂಬೆ ನವಿಗಾತಿ ಯೆಂದೆಂಬೆ ।
ಕೈಮುಗಿದು ನಾಬೇಡಿ ಕೊಂಬೆ ॥ (1)

ಏನೆ ಪಲ್ಲವ ಪಾಣಿ ಏನೆ ಪನ್ನಗ ವೇಣಿ ।
ಏನೆನ್ನ ಮೋಹದ ರಾಣಿ ॥
ನಾನು ನಿನ್ನವನಲ್ತೆ ಅರಿಬಿರುದಿನ ಚೆಲ್ವೆ ।
ಅಂಗನೆ ನಾ ನಿನಗೆ ಸೋಲ್ವೆ ॥ 2)

* * * * *

ಚರಣ.—

ಚಿಕ್ಕಪ್ರಾಯದ ಚನ್ನೆ ಚೆಲುವುಳ್ಳ ರನ್ನೆ ।
ಕರ್ಕಸ ಕುಚಗಳಿಂದಿರಿಯೆ ಗುಣವ ಮೆಱೆಯೆ ॥
ಮೆಚ್ಚಿದೆ ಸೊಗಸಿಗೆ ಜಾಣೆ ನಿನಗೆ ನಾ ।
ಮೆಚ್ಚಿದೆ ಸೊಗಸು ಜಾಣೆ ॥ (1)

ಪಲ್ಲವಿ.—

ಚೆಲ್ವೆ ನೀರೆ ಬೇಗ ಬಾರೆ । ಹತ್ತುಸೆರೆ ಮುತ್ತುತಾರೆ ।
ತಾಳಲಾರೆ ಸವಿಯದೋರೆ । ಮೆಚ್ಚಿದೆ ಸೊಗಸು ಜಾಣೆ ॥

ಚೊಕ್ಕಟ ಕೀರ್ತಿವಿಶಾಲೆ । ಚೌಷಷ್ಟಿ ವಿದ್ಯಾದಿ ಲೋಲೆ ।
ಅಕ್ಕರಿಂದಲಿ ನೋಡೆ । ಅಧರ ಸುಧೆಯ ನೀಡೆ ॥
ದಕ್ಕಿದೆ ಹೆಂಗಸು ಜಾಣೆ ನಿನಗೆ ನಾನು ।
ದಕ್ಕಿದೆ ಸೊಗಸು ಜಾಣೆ ॥ (2)

ಚೆಲ್ವೆ ನೀರೆ ಬೇಗ ಬಾರೆ । ಹತ್ತು ಸೆರೆ ಮುತ್ತ ತಾರೆ ।
ತಾಳಲಾರೆ ಸವಿಯದೋರೆ । ಮೆಚ್ಚಿದೆ ಸೊಗಸು ಜಾಣೆ ॥

ಇಚ್ಛೆಯರಿತು ಇಂದು ಇನಿಯ ಗಂಗೇಶ ಬಾರೆಂದು ।
ಹೆಚ್ಚಿದ * * * * ॥
ಸಸಿಯ ಬಲೆಗೆ ಸಿಕ್ಕಿದೆ ಸೊಗಸು ಜಾಣೆ ।
ಮೋಹದ ರನ್ನೆ ಸಿಕ್ಕಿದೆ ಸೊಗಸು ಜಾಣೆ ॥ (3)

ಚೆಲ್ವೆನೀರೆ ಬೇಗಬಾರೆ । ಹತ್ತು ಸೆರೆ ಮುತ್ತ ತಾರೆ
ತಾಳಲಾರೆ ಸವಿಯದೋರೆ । ಸಿಕ್ಕಿದೆ ಸೊಗಸು ಜಾಣೆ ॥

* * * * *

ಚರಣ.—

ಲೋಲಾಕ್ಷಿಯರ ಕಾಲಿಗೆರಗದವನ ತಲೆ ಬೀಳ್ದಲೆಯು ।
ಬಾಲೆಯರ ನೋಡದ ಕಣ್ಣು ಬಲೆಯ ಕಣ್ಣು ॥
ಸೋಲವರಿತೊ . . . . ಸೊಕ್ಕಡಗಿ ಮುನಿಪಂಗೆ ।
ಮೇಲೆನಿಪ ಕವಿಲಿಂಗನನುಮತದೊಳಯ್ಯ ॥ (3)

ಪಲ್ಲವಿ.—

ಸಾಕು ಬಿಡು ಬಿಡೋ ಕಯ್ಯ . . . ಮುಟ್ಟದಿರು ಮೆಯ್ಯ ।
ಕಾಕೋ (ಕಕು) ದ್ಗಿರಿಯ ಗಂಗೇಶ ಕಂಡೆ ಕಂಡೆ ನಿನ್ನ ಲೇಸೆನಿಸಿ ।
ಸಾಕು ಬಿಡು ಬಿಡೋ ಕಯ್ಯ ॥

ಚರಣಗಳು.—

ರನ್ನದ ಬಾಗಿಲ ಮುಂದೆ ರಮಣಿಯೊರ್ವಳು ನಿಂದು ।
ಪನ್ನೀರ ಮಂಡೆಯುಲಿಡೆ ಪರಿದು ಬೇಗ ಬೆಂಬತ್ತಿ ।
ನಿನ್ನಮೇಲೆ ತುಳುಕುವನೆ ಮೇಲಿಂದ ಚುಂಬಿಸುವ ।
ಬನ್ನಣವ ಕಂಡೆ ಬೆಡಗು ಸಾಕದೆ ಸನ್ನೆ ॥ (1)

ಹೊತ್ತು ತಿರುಗಿದ ಹಿಂದೆ ಹೂವಿನಂಗಡಿ ಮುಂದೆ ।
ಮತ್ತೆ ಬಾ . . . ಯಾಸಾಡೆ ಮಲ್ಲಿಗೆ ಚಂಡಿನೊಳದೆ ।
ಎತ್ತಿದ ತೋಳನಿಂದಪ್ಪಿ ಎಷ್ಟ ಮೋಹದೊಳೊಪ್ಪಿ ।
ಅತ್ತಣವನ್ನೈಸೆ ನೀನು . . . . . ಲಾಗಲಿದಕೆ ॥ (2)

* * * * *

॥ ರಾಗ—ನಾಟಿ ॥

ಪಲ್ಲವಿ.—

ಪೊಗಳುತಿದೆ ಜಗವೆಲ್ಲ ಸುಗುಣ ಇಮ್ಮಡಿ ಕೆಂಪ ।
ನಗಣಿತ ಗುಣಾಶ್ರಯನ ಬಗೆ ಬಗೆಯೊಳೆಣಿಸಿ । ಪೊಗಳುತಿದೆ ॥ (1)

ಚರಣಗಳು.—

ತಲಕಾಡು ನಂದಿ ಶ್ರೀರಂಗ ಮೈಸೂರು
ಹೊಳೆವ ನರಸಿಂಹಪುರ ಹೊಸಹೊಳಲು ಪಾಳ್ಯ ॥
ಮಳವಳ್ಳಿ ಮದ್ದೂರು ಚೆನ್ನಪಟ್ಟಣದಿ
. . . . ಚಂದ್ರನೊಲು ಶಾಂತಿಕರನೆಂದು ॥
ಕುಂದು . . . ದೊಡ್ಡರಸಿಕೆರೆ ಬೇರೂರು ।
ನಂದ್ಯಾಲ ಧರ್ಮವರ ತಾ . . . ತೆಯೊಳು ॥
ಕಂದನ ಹೊಳಲು ಕಂಬದೂರು ಬೂದು . . . ಪಂಚ
ನಂದಿಯೊಳು ಸತತ ಗುಣಸಿಂಧು ಮೆಂದೆಂದು ॥
ಪೊಗಳುತಿದೆಕೊ ॥ (2)

ಕೋಳಾಲ ಹೊಸಕೋಟೆ ಗಜ ಶಿಲಾಪುರ . . .
. . . ಮ್ಮಳೆ ಶಿವಗಂಗೆ ಕುಣಿಗಲು . . . ಮಲೆಯು ।
ಗೂಳೂರು ಬೆನುಗೊಂಡೆ ಬಲ್ಲಾಳಪುರದಲ್ಲಿ ।
ಬೇಳಾ . , , ನಾಶ್ರಿತ ಪ ಸಾಧಾರಣೆ (3)

ಕಾಶಿ ಕೇದಾರ ದಿಳ್ಳಿಯುಹಮದನಗರ ।
ಲೇಸೆನಿಪ ಆಗರ ಪುರಾನುಪುರ . . . . . ॥
. . . . ಬಂಕಾಪುರವು ಕಲ್ಯಾಣ ।
ದೇಶದೊಳಗೆಲ್ಲ ಬಸವೇಶನಿವನೆಂದು ॥ (4)

ಜಂಜಿ ತಂಜಾವೂರು ತಿರುವಣ್ಣಾಮಲೆಯು ಪುರಿ ।
ಕಂಜಸಖನನುಜ ಗಿರಿ ಕಾಳಹಸ್ತಿಯೊಳು ॥
ರಂಜಿಸುವ ವೇಲೂರು ಕಂಚಿ ತಿರುಪತಿಯೊಳು ಇರಿ ।
ವಂಜಿ ವರದೊಳು ರಣ ಧನಂಜಯನೆಂದು ॥ (5)

ಗುರುಹಿರಿಯರುಗಳು ಬಲ್ಲವರು ಬುಧಜನರು ।
ಅರಿನೃಪರು ಮಿತ್ರ ಬಾಂಧವರು ಕೋವಿದರು ॥
ಧುರಧೀರನೆಂದು ಕಾರಣ ಜನ್ಮಕೆ ಪ್ರಭು ।
ವರಗಂಗೇಶನೊಳೆ ಕಾಯ್ದು ಸತ್ಯವೆಂದು ॥ (6)

* * * * *

ಪಲ್ಲವಿ.—

ಇಳೆಗೆ ನೀನೆ ಮಹಾಪರಾಕ್ರಮಿ ।
ಎಲಹಂಕನಾಡ ಪ್ರಭುವಲಾ ।
ಇಮ್ಮಡಿಕೆಂಪ ಸಾರ್ವಭೌಮ ।
ಈಗೆ ನೀನೆ ಮಹಾಪರಾಕ್ರಮಿ ॥

ಚರಣಗಳು.—

ನಿನ್ನ ಕೊಡೆ ಮಚ್ಚರಿಸಿದ ಹೊಸ್ಕೊರೆಯೆಲ್ಲನ ಸಕಲ ರಾಜ್ಯ ।
ವನ್ನು ದಾಳವರಿದಾಕ್ಷಿಣದಿ ಸನ್ನಾಹದ ಕೋಟೆಗಳ ಸಾಧಿಸಿ ।
ಮುನ್ನ ತುಮುಕೂರ ಪೇಟೆಯ ತಾಳಸಿದೆ ಪ್ರಜೆ ಕಂಗೆಡಲು ।
ಮನ್ನಿಸಿ ಪಟ್ಟಣವನುಳುಹಿದೆ ಕೆಂಪರಾಯ ॥ (1)

ಮೂರು ಸಿಂಹಾಸನಕೆ ವಾರ್ತೆ ಮೀರಿ ಬಾಳ್ವ ಬಲುವ ।
ಜಜ್ಜೀರ ಜಗದೇಕರಾಯನ ಭಾರಿಯ ಮುರಿಯಲಿರಿದು ಗಂಧ ।
ವಾರಣಗಳನು ಗ್ರಹಿಸದೆ ಸಕಲ ಸಭಾಸ್ಕರಗಳನು । (?)
ಸೂರೆಗೊಳಸಿದೆ ನಾಲ್ಕುದಿಕ್ಕಿನ ಧಾರಿಣಿಯೊಳು ಜಯವ ನೋಹಿಸಿದೆ
ಕೆಂಪರಾಯ ॥ (2)

ಧರಣಿ ತರಣಿ ಚಂದ್ರ ತಾರೆ . . . ಗಿರಿಗಳುಳ್ಳನಕ ।
ನಿರತ ಬೆಂಗಳೂರು ಪಟ್ಟಣವ ಸ್ಥಿರದಿ ಹಲಸೂರ ಸೋಮೇ।
ಶ್ವರನ . . . ಂದಲಾಳು ಪ್ರತಿಭಟಿಸುವ ನರಪತಿಗಳ ಪಿಡಿದು
ಸೀಳುವೆ ಕೆಂಪೇಂದ್ರ ಕೆಂಪ ।
ಸ್ಫುರಧರ ವೈಭವದಿಂದ ಬಾಳುವೆ ಕೆಂಪರಾಯ ॥ (3)

॥ ರಾಗ ॥ ಭೈರವಿ ॥

ಪಲ್ಲವಿ.—

ನೋಡುವ ಬನ್ನಿರೊ ಶೋಟಿಪುರುಷನ ।
ರೂಢಿಗಧಿಕ ಯತಿಗುರು ಶಾಂತೇಶನ ॥

ಚರಣಗಳು.—

ಕನ್ನಪ್ಪಗೊಲಿದು ಕಂಗಳ ನಿತ್ತವನ ।
ಬಣ್ಣದೊವಲನುಟ್ಟ ಭಸಿತಾಕಾರನ ॥
ಚೆನ್ನಯ್ಯನಲ್ಲಿ ಉಂಡ ಚೆಲುವ ಜಂಗಮನ ।
ಪನ್ನಗಧರ ಯತಿಗುರು ಶಾಂತೇಶ್ವರನ ॥ (1)

ಚಂದಯ್ಯಗೊಲಿದು ನೂಲಿಯ ಮಾರಿದವನ ।
ಕಂದನ ಕೊಲಿಸಿ ಕಾಮಿನಿಗೊಲಿದವನ ॥
ಹಿಂದೆ ತಾಳದ ಗತಿಗೆ ಕುಣಿದವನ ।
ಕಂದರ್ಪ ಮರ್ದನನ ಯತಿ ಶಾಂತೇಶ್ವರನ ॥ (2)

ಮೂಜಗವ ನಾಳ್ದನು ಮುಕ್ಕಣ್ಣ ಶಿವನು ।
ತೋಟದ ಸಿದ್ಧಲಿಂಗ ಕರಜಾತ ನಿವರ ॥
ಬೇಡಿದ ವರಗಳನೀವ ಮಹಾತ್ಮನ ।
ಕಾಡಿನೊಳಿರುವಂಥ ಕರುಣಿ ಶಾಂತೇಶನ ॥ (3)

*   *   *   *   *

॥ ರಾಗ—ಕನ್ನಡ ಕಾಂಭೋಜಿ ॥

ಪಲ್ಲವಿ.—

ಹೊಯ್ಯಲೋ ಡಂಗುರವ । ಲೋಕದೊಳು ।
ಹೊಯ್ಯಲೋ ಡಂಗುರವ ॥

ಚರಣ.—

ಹಬ್ಬದ ಬೆಟ್ಟಕ್ಕೆ ತೊಟ್ಟಿಲ ಕಟ್ಟೀರು ॥
ಹೊಯ್ಯಲೋ ಡಂಗುರವ ಮುಂದೆ ॥
ಹುಟ್ಟಿದ ಮಕ್ಕಳ ಬಿಟ್ಟೋಡುವ ದಿನ ಬಂತು ।
ಹೊಯ್ಯಲೋ ಡಂಗುರವ ॥

End:

॥ ರಾಗ—ವರಾಳಿ।

ಪಲ್ಲವಿ.—

ಸುವ್ವಿಬಿ ಯೆಂದೆನ್ನಿಸೋ ಬನ್ನಿರೆಲ್ಲರು ।
ಸುವ್ವಿಬಿ ಯೆಂದೆನಿಸೋ ಲಿಂಗ ॥

ಚರಣಗಳು.—

ನಿರ್ಮಲದೊರಳೊಳು ನಿಜಮುತ್ತಿನೊನಕೆಯಿಂ ।
ದೊಮ್ಮನದಕ್ಕಿಯ ಮರ್ದಿಸುತ . . . .
ಧರ್ಮ ಸ್ವರೂಪ . . . . ಯ್ಯನ ಪಾಡುತ ।
ಪೆರ್ಮೆಯಿಂ ಮುಕ್ತಿ ಕಾಂತೆಯರೆಲ್ಲ (1) ॥ ಸುವ್ವಿಬಿ ॥

ಮುಡಿ (*) (*) ತಾಂಬರ ಭಾರಕೆ ಜೆಲ್ವ ।
ಬಡನಡು ಕೊರಳು ಕೊಂಕುತಲಿರೆ ॥ ಸುವ್ವಿಬಿ ॥
ಪಿಡಿದು ಸಂಪಗೆಯೊನಕೆಯನೆತ್ತಿ ಪಾಡಿಯೆ ।
ನೊಡೆಯ ಸಪ್ಪೆಯ ದೇವ ನಂಘ್ರಿಯ (2) ॥ ಸುವ್ವಿಬಿ ॥

ನುಡಿಯಿಂದ ಕೋಗಿಲೆಯ ನಡೆಯಿಂದ ಹಂಸೆಯ
ಬಡನಡುವಿಂದ ಮೃಗೇಂದ್ರನ ॥ ಸುವ್ವಿಬಿ ॥
ತೊಡೆಯಿಂದ ಕದಳಿಯ ಮುಡಿಯಿಂದ ನವಿಲ್ಗಳ ।
ಬಿಡದೆ ಬಯುಸಿಯ . . . . (3) ॥ ಸುವ್ವಿಬಿ ॥

ಬಡನಡುವಿಂದ ಮೃಗೇಂದ್ರನ ಸೋಲಿಪ ।
ಕಡು ಜಾಣೆಯರಲ್ಲಿಹರು (4) ॥ ಸುವ್ವಿಬಿ ॥

. . . . ವಸಂತ ಭೈರವಿ ಪೆಸರ್ವೆತ್ತ ಗು ।
. . . . ನಾಟಿ ಮೇಘರಂಜಿ . . . ॥ ಸುವ್ವಿಬಿ ॥
ಕಾಳಲ ಕೋವಿದೆ ಕೋಮಲಾಂಗಿ ಪಾಡುತ ಜೆಲ್ವ ।
ಸಸಿಯ ಸೂಡಿದ ಸ್ವಪ್ಪೆಯಾರ್ಯನಾ (5) ॥ ಸುವ್ವಿಬಿ ॥

. . . ಳವ ಶ್ರೀಶುದ್ಧ ಸಾಳಗದೇಶಿ ಭೂ ।
ಪಾಳ ರಾಮಕ್ರಿಲಲಿತೆಯಿಂದ ॥ ಸುವ್ವಿಬಿ ॥
ಲೋಲ ಲೋಚನೆ ಸಪ್ಪೆಯಾರ್ಯನ ಪದಂಕ ।
ಮಾಲೆಗಳನು ಪಾಡುತೊಲವಿಂದ (6) ॥ ಸುವ್ವಿಬಿ ॥

ಹಾಡಲು ಹರಿಣಾಕ್ಷಿಯರು ಇಂಚರದಿ ಮೆ ।
ಯ್ಯಾಡದ ಕೇಳ್ವ ಜನಗಳಗೆ ॥ ಸುವ್ವಿಬಿ ॥
ಗಾಡಿ ಕಾತಿಯರು ಬಣ್ಣಿಸಿದರು ನೆರೆ ಚಂದ್ರ ।
ಚೂಡ ಸಪ್ಪೆಯದೇವನಂಘ್ರಿಯ (7) ॥ ಸುವ್ವಿಬಿ ॥

ಕಂಕಣ ಕಣಿ ಕಣಿ ಕಣಿರೆನಲುರಲಿಗಿರ್ದ ।
ಕಿಂಕಿಣಿ ಕಿಣಿ ಕಿಣಿರೆನಲು ॥ ಸುವ್ವಿಬಿ ॥
ಬಿಂಕಗೂಟದ ಹರ ಉರಿವ . . . ।
. . . ಪಂಚಾಕ್ಷರಿಯರ್ತಿಯಿಂದಲಿ ಪಾಡಿ (8) ॥ ಸುವ್ವಿಬಿ ॥

ಸ್ವಾಮಿ ಸುವ್ವಿ ನಿಷ್ಕಾಮಿ ಸುವ್ವಿ ಭಕ್ತ ।
. . . ಸುವ್ವಿ ಹರಸುವ್ವಿ ಸುವ್ವಿಬಿ ॥
ಜಾಣೆಮಲ್ಲಾ ಜೆಯು ಸಲಹುವ ಭಕ್ತ ।
ಸರ್ವೇಶ ಸುವ್ವಿಯೆಂದು ಪಾಡುತಾ (೮) ॥ ಸುವ್ವಿಬಿ ॥

॥ ರಾಗ ॥ ನಾದನಾಮಕ್ರಿಯ ॥

ಪಲ್ಲವಿ.—

ಬಲ್ಲರಾರೀ ಸಮಯ ಮಸ್ತಕ ಶೂಲ ವೈರಿ ।
ಕುಲಗಿರಿ ಕುಲಿಶ ಓ ! ನಿನ್ನಂತೆ. ಜೀ ।
ವುಲಿವನೆ . . . ಗಮಗಳೀಕೆ ನಿಲುಕದ ದೇವ ।
ಹುಲಿಗೆರೆಯ ಸೋಮೇಶ ನಿನ್ನ ತೇಜಿ ॥

ಚರಣಗಳು.—

ಧರೆಯಾಕಾಶವನೊಂದೆನಿಸುವ ವಾರಿಧಿಯ ತನ್ನ ।
ಕೊರಳೆಡೆಯಲ್ಲೊ ನಿನ್ನ ತೇಜಿ ॥
ಉರುರೇಚಕ ಕರ್ಪೂರ ಕ ಸ್ವರಧಿದೇವರುಳ ।
ನೊರಜೆವುಡಿಸಿತಲ್ಲೊ ನಿನ್ನ ತೇಜಿ ॥
ಸರಿತನಗಿಲ್ಲೆಂಬ ಸನತ್ಕುಮಾರನನೆಂದು ।
ಕರೆಯಿಸಿಯಾಗಿ . . . ತು ನಿನ್ನ ತೇಜಿ ॥
ಶರಣಾಗತ (ರ) ಕ್ಷ ದಕ್ಷ ಶಿಕ್ಷ ಕಾಲಸಂಹರ ।
ಹರ ಸೋಮೇಶ ನಿನ್ನ ತೇಜಿ ॥ (೧)

ಹಕ್ಕಿ ಹಂಸ ಗಜ ಸಿಂಹ ಮೊದಲಾದ ವಾಹನವೆ ।
ಲೆಕ್ಕಿಸದು ತೃಣವೆಂದು ನಿನ್ನ ತೇಜಿ॥
ಹೊಕ್ಕು ಕೈದಡಕೆ ತ್ರಿಪುರಾದಿ . . . ಕ್ಷುಪರಾರೆಂಬ ।
ರಕ್ಕಸನ ಸೀಳ್ದುದಲ್ಲೊ ನಿನ್ನ ತೇಜಿ ॥
ಮಿಕ್ಕ ಕಿರಣದಿ ಶಿವಭಕ್ತನ ಮೇಲಿಡೆ ರವಿಯ ।
ತಿಕ್ಕಿ ನೆಲಕಿಕ್ಕಿತಲ್ಲೊ ನಿನ್ನ ತೇಜಿ ॥
ಸೊಕ್ಕಿನುಡಿದ ಬ್ರಹ್ಮನ ಶಿರವ ಚಿವುಟಿದ ವಿ ।
ಶ್ವಕ್ಕಧಿಕ ಸೋಮೇಶ ನಿನ್ನ ತೇಜಿ ॥ (೨)

ವಿ.ವಿ.—

ಅಸಮಗ್ರ. ಶ್ರೀತಾಳಪತ್ರಿ. ಅತ್ಯಂತ ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ. ಹಿಂದಣ 1273 ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯು ಇದರ ಪ್ರತಿಕೆಯಾಗಿದೆ.

ಇದು ಹಾಡಿನ ರೂಪದಲ್ಲಿದೆ. ಇದರಲ್ಲಿ ಶೃಂಗಾರ ಪದಗಳು, ಕೆಂಪೇಗೌಡನ ಯಶಃಪ್ರತಾಪ ಕೀರ್ತನೆಗಳು, ಡೆಂಗುರದ ಹಾಡು, ಸುವ್ವಿ ಹಾಡು ಮುಂತಾಗಿ ಅನೇಕ ರೀತಿಯ ಪದಗಳಿವೆ. ಇವುಗಳಲ್ಲಿ ಒಂದೊಂದೂ ಪಲ್ಲವಿ, ಚರಣಗಳಿಂದ ಕೂಡಿವೆ. ಬಹು ಬಗೆಯ ಹಾಡುಗಳು ಇದರಲ್ಲಿರುವುದರಿಂದ ಇವು ಸಂಗ್ರಹಿಸಿ ಬರೆದುವುಗಳಾಗಿರಬಹುದೋ ಏನೋ, ಬರೆದವನಾರೆಂಬುದು ಇದರಿಂದ ಗೊತ್ತಾಗುವುದಿಲ್ಲ.

No. 1276 ಗೀತಗೋಪಾಲ by ಚಿಕದೇವರಾಜ.

GĪTAGŌPĀLA BY CIKADĒVARĪJA.

Substance, palm leaf. Size, $10\frac{9}{10} \times 1\frac{1}{2}$ inches. Pages, 220. Lines, 5 on a page Extent, 1,260 granthas. Character, Kannada. Condition, very much injured Appearance, old. Mode of writing, good.

Complete.

It describes the deeds of Śrīkṛisna in his early days and is similar to Gītagōvinda of Jayadēva in Sanskrit. It has two parts each containing seven Khanḍas (divisions). Each of these Khanḍas (excepting the last three of the second part) contain seven padas (songs) sung in different rāgams. The author is Cikadēvarāja. **For details** see extracts below·

Beginning :

॥ ರಾಗ ॥ ಭೈರವಿ ॥

ಕಂ॥ ಶ್ರೀಯಂ ತನ್ನೆರ್ದೆವನೆಯೊಳ್ ।
ಭೂಯುವತಿಯುನಡಿಯೊಳಂಬುಗೊಳಿಸಿದ ಸರಸೋ ॥
ಪ್ರಾಯಂ ಮಂಗಳ ಕಾಯಂ ।
ಶ್ರೀಯಂ ಮಿಗೆ ನೆಗಳ್ಗೆ ಚದುರ ಗೋವಳರಾಯಂ ॥
ಆಯುಮನಭಿಮತ ಸಕಲ ।
ಶ್ರೀಯುಮನೊಡಸಖಿಳಧರಣಿಮಂಡಲ ವಿಜಯು ॥
ಶ್ರೀಯಂ ಚಿಕದೇವ ಮಹಾ ।
ರಾಯಂ ಗೊಲ್ದೀಗೆ ಚೆಲ್ವಗೋವಳರಾಯಂ ॥

॥ ರಾಗ ॥ ಕಾಂಭೋಧಿ ॥

ತು.ವಿ.—

ಚದುರಂ ಚಾಗಿಯುಲಂಪುಗಾರನೆಚೆಯಂ ಸಂಗೀತ ಸಾಹಿತ್ಯ ಕೋ ।
ವಿದನುತ್ಸಾಹಿ ವಿವೇಕಶಾಲಿ ನಯಶೀಲಂ ನೇಮಗಾಱಂ ಕಲಾ ।
ವಿದನೊಳ್ಪಾತುಗನೋಜೆಗಾಱನುಚಿತಜ್ಞಂ ಭಾವುಕಂ ಭಾಮಿನೀ ।
ಹೃದಯಗ್ರಾಹಿ ದಯಾಪಯೋಧಿ ಚಿಕದೇವೇಂದ್ರಂ ಮಹೀಚಂದ್ರಮಂ ॥

*　　*　　*　　*　　*

(Fol. 2 b)

॥ ರಾಗ ॥ ಮುಖಾರಿ ॥ ರೂಪಕ ।

ಕಂ ॥ ಪರಿಕಿಸೆ ಪರಿಕಿಸೆ ಕಲೆಯೊಳ್ ।

॥ ರಾಗ ॥ ಶಂಕರಾಭರಣ ॥ ರೂಪಕ ತಾಳ ॥

ಕಾಲಂ ಬಯಸಿದ ರೋಗಿಗೆ ।
ಕಾಲಿಂದೌಷಧಮನೀವ ವೈದ್ಯನ ತೆಱದಿಂ ॥
ದೀಲೋಗರೊಲ್ವ ಗೀತದ ।
ಮೂಲದೊಳೇ ಮುಕ್ತಿಗತಿಯು ಮೊಗದೋಱಿಸಿದಂ ॥
ತೊಡರ್ದಿರೆ ನುಡಿ ನುಣ್ಚ ರಗಳ ।
ಬೆಡಂಗು ಮನವೊಲ್ದು ಗೀತಗೋಪಾಲವೆಸ ।
ರ್ವಡೆದೊಳ್ಗನ್ನಡ ಗಬ್ಬವು ।
ನೊಡರಿಸಿ ಚಿಕದೇವರಾಯ ನುನ್ನತಿವೆತ್ತಂ ॥

॥ ರಾಗ ॥ ನಾಟಿ ॥ ಝುಂಪೆ ॥

ಪಲ್ಲವಿ.—

ಗೆಲವು ಗೆಲವು ಗೆಲವು ಗೆಲವಾನತರಿಗೆಲ್ಲ ಗೆಲ್ಲವನೀವ ।
ಬಲವದಪ್ರತಿಮ ಗೋಪಾಲರಾಯನಿಗೆ ॥

ಚರಣ.—

ಮನವೊಲಿದು ಸಜ್ಜನರ ಮನ್ನಣೆಯೊಳೋವಿ ದು ।
ರ್ಜನರ ತೊತ್ತುಟಿದುಟಿದು ಜಾತಿ ಧರ್ಮವನು ॥
ಅನುಗೊಳಿಸಲವತರಿಸಿ ಯದುಕುಲದಿ ನಂದಗೋ ।
ಪನಭಾಗ್ಯ ಫಲವೆನಿಸಿ ಬಳೆವಗೋವಳಗೆ ॥ (೧)

ಬಳಕ ಪೂತನಿಯುಸುವ ಪಾಲ್ವೆರಸು ಸವಿದೀಂಟಿ ।
ಸುಳಿಗಾಳಿ ರಕ್ಕಸನ ಸೊಕ್ಕುಮುರಿದಿಕ್ಕಿ ॥
ಕಳೆದು ಶಕಟನ ಜೀವ ಕಳೆಯನೆಣಿ ಪರವ ನುಡಿ ।
ದಿಳೆಯೊಳಡಗೆಡಹಿ ನಗುವೆಳೆಯ ಗೋವಳಗೆ ॥ (೨)

ಪುಸಿಗರುವ ಮಡುಪಿ ಪೊಸಬಸವನನು ಬಸವಳಿಸಿ ।
ಮಸಗಿ ಖರತುರಗ [ರೆ] (ವೆ) ನಿಪಸುರರನು ಗೆಡಿಸಿ ॥
ಬಿಸದ ಮಡುವನು ಕಲಕಿ ಬೆಡಿಮೆಟ್ಟಿಕಾಳಿಯನ ।
ಪಸರಿಸಿದ ಕಾಟಿಗ್ಗಿಚ್ಚ ಪರಿದ ಗೋವಳಗೆ ॥ (೩)

ತನಗೊಡರಿಸುವ ಪೂಜೆ ತಪ್ಪಿದಟಿಲಿಂದೆ ಕಡು ।
ಗನಲಿ ಯೆಡೆವಿಡದೆ ಮಟಿತೆಗಱೆವ ವಾಸವನ ॥
ತನಿಗೊಬ್ಬ ತಳಕೆಳೆಯ ತಳೆದು ಗೋವರ್ಧನವ ।
ನನುಗೊಳಿಸಿ ಕಱು ತುಱು [ಗ] (ವ) ನಾಳ್ದ ಗೋವಳಗೆ ॥ (೪)

ಕೊಳಲ ದನಿಯಿಂದ ಗೋವಳ ಗುವರಿಯರ ಬಗೆಯ ।
ಪೊಳಗುಗೆಯ್ದೊಡನಾಟಕಳಸಿಯೊಡವೆರಸಿ ॥
ಕೆಳೆಯೊಡಂಬಡೆ ರಾಸಕೇಳಿಯೊಳು ಸೊಗವಡಿಸಿ ।
ಸುಟಿಸುಟಿದು ನಲಿನಲಿವ ಸೊಬಗು ಗೋವಳಗೆ ॥ (೫)

* * * *

(Fol. 5-b)

ಶ್ರೀ ಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ ಪ್ರೌಢ ಪ್ರತಾಪ ನಪ್ರತಿಮವೀರನರಪತಿ ಶ್ರೀ ಚಿಕ್ಕದೇವ ಮಹಾರಾಯರೀ ಗೀತಗೋಪಾಲದೆಡಮಂ ಭಾಗದೊಳ್ ಶ್ರೀಮನ್ನಾರಾಯಣನ ಗುಣಾನುಭವರೂಪವಾದ ನಿತ್ಯಫಲವಮಂ ಅವನಡಿದಾವರೆಯೊಳ್ ನಂಬು (ಗೆ) ಯೆಂಬ ತದುಪಾಯಮುಮಂ ನಿರೂಪಿಸುವರ್. ಅದಱೊಳ್ ಪ್ರಥಮ (ಭಾಗ) ದೇಳುಂ ಸಪ್ತ ಪದಿಗಳೊಳಂ ಪಲವುಂ ತೆಱದ ಕಲ್ಯಾಣಗುಣಂಗಳನನುಭವಿಸುವರ್. ಇದಱೊಳೊರ್ಮೊದಲ ಸಪ್ತ ಪದಿಯೊಳ್ ಯಶೋದಾ ವೃತ್ತಾಂತ ವ್ಯಾಜದಿಂ ಶ್ರೀ ಕೃಷ್ಣನ ಬಾಲ್ಯ ಕೌಮಾರ ಲೀಲೆಗಳಂ ನಿರೂಪಿಸುವರ್.

ಉದಯರಾಗದ ಪ್ರಾಬೋಧಿಕ ಸಪ್ತಪದಿ.—

* * * *

॥ ರಾಗ ॥ ದೇವಗಾಂಧಾರಿ ॥

(Fol. 12-b)

ಕಂ ॥ ಪರಮ ಪ್ರಾಪ್ಯ ಪ್ರಾಪಕ ।
ವೆರಡುಂ ಸಿರಿಯರಸನಡಿಗಳಂದಿರ್ಪ ಮಹಾ ॥
ಪುರುಷರ್ ಪೊಟ್ಟಱೆಯಿರವಂ ।
ದೊರೆಗೊಳಿಸಿದರಾ [ಜಿ] (ದಿ) ಪುರುಷನೆಱಕದ ತೆಱದೊಳ್ ॥

॥ ಆಟತಾಳ ॥

ಪಲ್ಲವಿ.—

ನಲ್ವೆಳಗಾದುದು ನವನೀತ ಚೋರ ನಿನ್ನ ।
ಚೆಲ್ವನೋಟದ ಕಡೆಸೆಱಗುದೋಱಿಸು ಕೃಷ್ಣಾ ॥

ಚರಣ.—

ಮುಸುಕಿದ ಸಂಸಾರ ಮೋಹವಡಿಯೆ ನೀ ।
ನೆಸಗುವ ನುಸುನೋಟದೆಟ್ಟರದಂತೆ ॥
ಮುಸುಳಸುವಿರುಳಿನ ಮದದು [ಪ] (ರ್ಬ) ಮುಗ್ಗಿಸಿ ।
ಮಿಸುಗಿತು ಮೂಡಣ ದೆಶೆ ಮೋಹನ ಕೃಷ್ಣಾ ॥ (೧)

ಓಜೆವಡೆಯೆ ಸತ್ವದೊಡನಿರ್ದ ತಾಮಸ ।
ರಾಜಸಗ [ಳು] (ಳ) ತನಿರಸ [ವ] (ವಾ) ಱುವಂತೆ ॥
ತೇಜದುನ್ನತಿಯೊಳು ತೆಱಳತು ಕತ್ತಲೆ ।
ರಾಜಿಪ ಸಂಧ್ಯಾರಾಗದೊಡನೆ ಕೃಷ್ಣಾ ॥ (೨)

ಬಿಡದೆ ಪಸರಿಸುವ ಬಿನ್ನಣದಿಂದೊಡ ।
ಲೆಡೆಯೊಳೊಪ್ಪುವ ಜೀ [ಯರೇ] (ವದೇ) ಱಿಗೆಯಂತೆ ॥
ತೊಡೆರಿದ ಬಿಸಿಲಿಂದ ತೊ [ಡ] (ಳ) ಗಿತು ನೇಸಱಿ ।
ಕ್ಷ್ಲೆಡೆಯೊಳು ಚಿಕದೇವೇಂದ್ರವಲ್ಲಭ ಕೃಷ್ಣಾ ॥ (೩)

Colophon :

ಉದಯ ರಾಗದ ಪ್ರಾಬೋಧಿಕ ಸಪ್ತಪದಿ ಸಂಪೂರ್ಣಂ.

* * * *

(Fol, 53-b)

॥ ಲಯಗ್ರಾಹಿ ವೃತ್ತ ॥

ಅಂದಿವನಿನಳ್ಕಿ ಭಯದಿಂದೆ ಮಣಿದಿರ್ದ ನೃಪ ।
ಬೃಂದಮನಿತುಂ ಭರದೊಳೊಂದುವರೆದೊಳ್ಪಿಂ ।
ಸಂದಿಸಿ ಶಿವಾಜಿಗನುವಿಂದೊರೆಯೆ ಮರ್ಮಮನ ।
ವಂದಿರೊಡಗೊಡಿಯುವನೆಂದು ಕ [ದ] (ವ) ಡಿಂದಂ ॥
ಸಂದಣಿಯ ಕಾಳ್ಗೆಗದೊಳೊಂದಿನಿಸು ಮುಂಬರಿಯೆ ।
ಬಂದೆಱಗಿ ಗೋವ್ರಗಳ ಗೊಂದಣದೆ ಪಿಷ್ಣ ॥
ಸ್ಯಂದನದ ಮಾಟಿಕ್ಕೆಯೊಳ್ ಕೊಂದು ಕೊಲೆಯಾಡಿದಳ ।
ವಿಂದೆ ಚಿಕದೇವನೃಪ [ರಿಂ] (ನಿಂ) ದು ಸೊಗವಾಳ್ಗಂ ॥

Colophon :

ಗದ್ಯ.—

ಇದು ಸಕಲ ಜಗದುದಯ ವಿಭವಾದಿಲೀಲನುಂ ಲಕ್ಷ್ಮೀಲೋಲನುಂ, ಅಖಿಲಯ ಹೇಯ ಪ್ರತ್ಯನೀಕನುಮಪ್ರಾಕೃತ ಪ್ರತೀಕನುಂ, ಅವಾಪ್ತ ಸಮಸ್ತ ಕಾಮನುಮಖಿಳ ಕಲ್ಯಾಣ ಗುಣಾರಾಮನುಂ, ಸಾರಸಭವ ಪೂಜಿತನುಂ ಸನಕಮುನಿ ಸಭಾಜಿತನುಂ, ಯದುಗಿರಿ ಶಿಖರಾಲಂಕಾರನುಂ, ಯತಿರಾಜ ಸಂಪತ್ಕುಮಾರನುಂ, ಆಶ್ರಿತ ರಕ್ಷಾ ಪರಾಯಣನುಮಪ್ಪ ಶ್ರೀಮನ್ನಾರಾಯಣನಡಿದಾವರೆಯೊಳಗದೊಳ್ಬಳಿದೇಳ್ಗದಳ್ದ ಯಾದವ ಕುಲೋದ್ಧಾರಕನುಂ ಶುಭಗುಣಾಧಾರಕನುಮಾದ ದೇವರಾಜನೃಪಾಲ ಪೌತ್ರನುಮತ್ರಿಗೋತ್ರ ಪವಿತ್ರನುಂ ದೊಡ್ಡದೇವರಾಜ ಗರ್ಭಾಂಬುಧಿ ಕಲಾಧರನುಂ ಸಕಲ ಕಲಾಧರನುಂ ಅಶ್ವಾರೋಹಣ ಕಲಾರೇವಂತನುಂ ಗಜಾರೋಹಣ ಮ [ಖ] (ಘ) ವಂತನುಂ [ವ] (ಅ) ಸ್ತ್ರ ವಿದ್ಯಾ ಭೃಗುರಾಮನುಮಪ್ರತಿಮಧಾಮನುಂ ಕರ್ಣಾಟಕ ಭೂಮಂಡಲಾಧೀಶನುಂ ದೇವ ಸಂಕಾಶನುಂ ಪಶ್ಚಿಮ ರಂಗಪುರ ಸಿಂಹಾಸನಾಧಿಷ್ಠಿತನುಂ ಸುಪ್ರತಿಷ್ಠಿತನುಂ ದೇವಬ್ರಾಹ್ಮಣ ಪರಿಪಾಲನೈಕಾನ್ತನುಂ ಸಕಲ ಪ್ರಜಾಕಾಂತನುಂ ಅಸಕೃದಾವರ್ತಿತ ಷೋಡಶ ಮಹಾದಾನನು ಮಾಶ್ರಿತ ಸರ್ವ ಶ್ರೇಯೋನಿದಾನನುಂ ರಸಿಕ ಜನ ಕರ್ಣರಸಾಯನೀಕೃತ ಸಂಗೀತ ವಿಸ್ತಾರನುಂ ಸಾಹಿತ್ಯ ವಿದ್ಯಾ ನಿಕಷಪ್ರಸ್ತಾರನುಂ ಪೂರ್ವ ದಿಗ್ವಿಜಯ ಯಾತ್ರಾ ವಿತ್ರಾಸಿತ [ಶೇದ] (ಚೇದಿ) ಮಂಗ (ಲ) ಕೊಂಗುಧಾರಾಪುರಾದಿ ಪಾಂಡ್ಯ ನೃಪದುರ್ಗಮ ದುರ್ಗಸ್ತೋಮನುಂ ಸಂಗರ ಭೀಮನುಂ ಉದ್ವೃತ್ತ ಸುರತ್ರಾಣ ಚಮೂ ವಿಕ್ಷೋಭಣ ವಿಚಕ್ಷಣ ವಿಕಟಮರಾಟ ಶಿವಾಜಿ ಸೇನಾಧಿಪ ಜೈತಜಿ ಕಾಟಕರ ದಾದಜಿ ಕಾಕಟ ಪ್ರಮುಖ ಕಂಠನಾಳೋಚ್ಛಲದ್ರಕ್ತ ಧಾರಾಸಿಕ್ತ ಕೃಪಾಣ ಸಂದರ್ಶನವಿಲೀನ ಹರಜಿ ಸಂತಜಿ ಮುಖ್ಯ ಮಹಾರಾಷ್ಟ್ರ ನೃಪ ಪ್ರವೇಕನುಮತ್ಯನೀಕನುಂ ಗಂಭೀರೋನ್ನತ ಪರಿಘಾವರಣ ಭೀಷಣ ಶತಘ್ನೀಶತ ಸಂಕುಲ ಮತ್ತಮಾವಳಿ ಸೇನಾವಳೀ ಪರ್ವಿತ ಧರ್ಮಪುರೀ ಪ್ರಸಭಾಕ್ರಾಂತಮಶ್ರವಣ ನಿರ್ಜನೀಕೃತ ಕೆಂಗೇರಿ ವಾಮಲೂರು ಬೇವ್ರಹಳ್ಳಿ ಬೈರನೆತ್ತ ಕುಡಿತ್ತೈತ್ತೂರ್ ಮುಖ್ಯ ದುರ್ಗವರ್ಗ ನಿರಾಯಾಸಾಕ್ರಮಣ ನಿರ್ವರ್ತ ನಿಜಸೈನಿಕ ಸಮೂಹನುಮಾಹವ ಕಲಾಶ್ವೇತವಾಹನುಂ ದಕ್ಷಿಣದಿಗ್ವಿಜ (ಯ) ಯಾತ್ರಾ ವಿತ್ರಾಸಿತ ಪಲಾಯಿತ ಪಾಂಡ್ಯ ಬಲಾನುಧಾವನ ಶ್ರಾಂತ ನಿಜ ಬಲ ವಿಶ್ರಾಂತಿ ಸ್ಥಾನೀಕೃತ ಜಲಧಿ ವೇಲಾ ತಮಾಲಾರಣ್ಯಾನ

ಮಾಶರಣ ಶರಣ್ಯನುಂ ಪಶ್ಚಿಮ ದಿಗ್ವಿಜಯ ಪ್ರಸ್ಥಾನ ಭೇರೀರವಾಕರ್ಣನ ಸಂಭ್ರಾಂತ ದುರ್ದಾಂತ ಹುಶಾನ ಖಾನ ಸನಾಥ ಕೆಳದಿ ನೃಪ ಸಮರ್ಪಿತ ಸರ್ವಸ್ವ ನಿರ್ವಾಪಿತ ಕೋಪನು ಮಮಿತ ಪ್ರತಾಪನುಂ ಉತ್ತರ ದಿಗ್ವಿಜಯ ಸಮಯಾಭಿಯಾತ ಕುತುಪಶಾಹವಾಹಿನೀ ವಿಮರ್ದನ ಕ್ಷಣಾಕ್ರಾಂತ ಕಂದಿಕೆಱೆ ಚಿಕ್ಕನಾಯಕನ ಹಳ್ಳಿ, ಹೊನ್ನವಳ್ಳಿ, ನಾರತವಳ್ಳಿ, ತುಱುಗೆಱೆ ಪ್ರಮುಖ ದುರ್ಗ್ರಹ ಪ್ರಾಕಾರವಾರನುಂ ಅಸಹಾಯ ಶೂರನುಂ ಜಡಕ (ನ) ದುರ್ಗ ಹಠಾ ದ್ಗ್ರಹಣ ವೇಳಾನಿಖಾತ ಸುರಂಗ ಮುಖಾವಲೋಕ್ಷಿಪ್ತ ಗಂಡೋಪಲ ಪಾತ ನಿರ್ಧೂತ ಬಿಜ್ಜವರ ಮದ್ದಗಿರಿ ಚೆನ್ನರಾಯದುರ್ಗ ವೀರಣದುರ್ಗಾದ್ಯಸಂಖ್ಯ ದುರ್ಗವರ್ಗಾಕ್ರಮಣಾ ವಸರಾವನನ ಸಾಮಂತ ನೃಪಾಲ ಮೌಳಿಮಣಿ ಘೃಣೀ ನೀರಾಜಿತ ಪದರಾಜೀವನುಂ ಮಹಾನುಭಾವನುಂ ಸಾಹಜಿ ಮುಖಮರಾಟ ನೃಪರಾಜಧಾನೀ ಕೃ [ತ] (ತಾ) ಭಂಗುರ ಬೆಂಗಳೂರ್ ಹರಣ ನಿಷ್ಪ್ರಾಣಿತ ಶಂಭುಜಿ ಸಾಹಜಿ ಸಂತಜಿ ಹರಜಿ ಪ್ರಮುಖ ಮಹಾರಾಷ್ಟ್ರ ನೃಪಾಲ ಜಾಲನುಂ ರಿಪುಕುಲಕಾಲನುಂ ಸಂಗ್ರಾಮರಾಮನುಂ ಸಾಹಸೋದ್ದಾವನುಂ ಪ್ರೌಢಪ್ರತಾಪನುಂ ಪ್ರಕಟಿತಾಟೋಪನುಂ ಅಮಿತ ಪರಾಕ್ರಮನುಂ ಅಭೇದ್ಯ ವಿಕ್ರಮನುಂ ಕರ್ಣಾಟ ಚಕ್ರವರ್ತಿಯುಂ ಕಲ್ಯಾಣ ಕೀರ್ತಿಯುಂ ಲೋಕೈಕವೀರನುಂ ವೀರರೊಳ್ಗಂಡನುಂ ಗಂಡರೊಳ್ಗಂಡನುಂ ಅಂತೆಂಬರೊಳ್ಗಂಡನುಂ ಎನಿಸಿ ನೆಗಟ್ದ ಶ್ರೀಮದಪ್ರತಿಮವೀರ ನರಪತಿ ಶ್ರೀ ಚಿಕದೇವ ಮಹಾರಾಜ ವಿರಚಿತ ಮಪ್ಪ ದಿವ್ಯ ಪ್ರಬಂಧಂಗಳೊಳ್ ಶ್ರೀ ಗೀತ ಗೋಪಾಲ ಮಹಾ ಪ್ರಬಂಧದೊಳ್ ಪೂರ್ವಭಾಗಂ ಸಂಪೂರ್ಣಂ.

*   *   *   *

ಇಂತು ಶ್ರೀ ಗೀತಗೋಪಾಲ ಮಹಾಪ್ರಬಂಧದೊಳ್ ಪೂರ್ವಭಾಗದೇೞಿಂ ಸಪ್ತ ಪದಿಗಳೊಳ್ ಗೋಪಿಕಾವೃತ್ತಾಂತ ನಿರೂಪಣ ವ್ಯಾಜದಿಂ ಭಗವದ್ಗುಣಂಗಳನನುಭವಿಸಿ ಈ ಯುತ್ತರ ಭಾಗದೇೞಿಂ ಸಪ್ತಪದಿಗಳೊಳ್ಗುಣಾನುಭವಂ ಎಡೆವಿಡದೆ ದೊರೆ ಕೊಂಬ ಮೋಕ್ಷಮಂ ಸಾಧಿಪುದರ್ಕೆ ಉಪಾಯಮಾದ ಪ್ರಪತ್ತಿ ಸ್ವರೂಪಮಂ ನಿರೂಪಿಸುವರ್. ಇದಱೊಳ್ ಮೊದಲ ಸಪ್ತಪದಿಯೊಳ್ ತಾಂ ಪ್ರಪತ್ತಿ ಗೈವ ದೇವತೆಯುಂ ಗುರುಪರಂಪರೆ ಯೊಡನೆ ನುತಿಗೆಯ್ವರ್. ಇದಱೊಳ್ ಮೊದಲ ಪಂಚಪದಿಯೊಳ್ ತಮ್ಮ ಯದುಕುಲದೇವತೆ ಯಪ್ಪ ಯಾದವಗಿರಿ ನಾರಾಯಣನ ಕಲ್ಯಾಣ ಗುಣಂಗಳನನುಭವಿಸಿಯುದರ್ಕೆ ಮಂಗಳಾ ಶಾಸನಂ ಗೆಯ್ವರ್. ಗುರುಪರಂಪರಾ ಸಪ್ತಪದಿ.

End :

॥ ಲಯಗ್ರಾಹಿ ॥

ಒಂದು ಕಡೆಯೊಳ್ ತುರುಕರೊಂದು ಕಡೆಯೊಳ್ ಮೊರಸ
ರೊಂದೆಡೆಯೊಳಾರೆಯರ ಬೃಂದಮುಳವಿಂ ಬೇ ।
ರೊಂದು ಬೞಿಯೊಳ್ ತಿಗುಳರೊಂದಿರವಿನೊಳ್ ಕೊಡಗ
ರೊಂದು ಕೆಲದೊಳ್ ಮಲೆಪರೊಂದುಮೆರೆದೆಲ್ಲರ್ ॥
ಸಂದಣಿಸಿ ಕಾಳಗಕೆ ಮುಂದುವರಿವನ್ನ ಮದ
ಸಿಂದವರ ಘಟ್ಟಗಳ ಪಂದಲೆಗಳಂ ದಿ ।
ಗ್ಬಲಂದ ಬಲಿಯಿತ್ತು ಗೆಲವಿಂದೆ ಚಿಕದೇವ ನೃಪ
ನಂದವಿಗೆ ವಿಜಯಸಮನೊಂದಿ ಸೊಗವಾೞ್ಗಂ ॥

Colophon :

ಇದು ಸಕಲ ಜಗದುದಯ * * * ಶ್ರೀ ಚಿಕದೇವ ಮಹಾರಾಜ ವಿರಚಿತಮಪ್ಪ ದಿವ್ಯ ಪ್ರಬಂಧಂಗಳೊಳ್ ಶ್ರೀ ಗೀತಗೋಪಾಲ ಮಹಾ ಪ್ರಬಂಧದೊಳ್ ಉತ್ತರಭಾಗಂ ಸಂಪೂರ್ಣಂ.

ವಿ.ವಿ.—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿ ಇದರ ಪುತ್ರಿಕೆಯು.

ಇದು ಒಂದು ಚಿಕ್ಕ ಸಂಗೀತ ಪ್ರಬಂಧವು. ಇದರಲ್ಲಿ ಪೂರ್ವೋತ್ತರಗಳೆಂಬ ಎರಡು ಭಾಗಗಳಿವೆ. ಪ್ರತಿ ಭಾಗದಲ್ಲಿಯೂ ಏಳು ಖಂಡಗಳಿವೆ. ಉತ್ತರ ಭಾಗದ ಕಡೆಯ ಮೂರು ಖಂಡಗಳನ್ನುಳಿದು ಉಳಿದುವುಗಳಲ್ಲಿ ಒಂದೊಂದರಲ್ಲಿಯೂ ಏಳೇಳು ಪದಗಳಿವೆ. ಇವು ಅನೇಕ ವಿಧವಾದ ರಾಗ ತಾಳಗಳಲ್ಲಿ ಬರೆದಿವೆ. ಈ ಹಾಡುಗಳ ಪ್ರತಿಯೊಂದು ಖಂಡಕ್ಕೂ ಸಪ್ತಪದಿ ಯೆಂದು ಹೆಸರಿದೆ. ಈ ಸಪ್ತಪದಿಗಳಿಗೆ ಪೂರ್ವಭಾಗದಲ್ಲಿ ಕ್ರಮವಾಗಿ ಪ್ರಾಬೋಧಿಕ ಪ್ರಥಮಾನುರಾಗ, ವಿರಹ, ವಿರಹೋದ್ರೇಕ, ಪ್ರಣಯ ಕಲಹ, ರೂಪಕ ತಾಳ, ಮಂಗಳ ಸಪ್ತಪದಿಗಳೆಂದೂ ಉತ್ತರ ಭಾಗದಲ್ಲಿ ಗುರು ಪರಂಪರೆ, ನೆಂಬುಗೆ, ಅನ್ಯಾಪದೇಶ, ಮಹಿಮೆ ಉಪಾಯ, ಫಲ, ಮೂರ್ತಿಧ್ಯಾನ ಸಪ್ತ ಪದಿಗಳೆಂದೂ ಹೆಸರು. ಈ ಒಂದೊಂದು ಸಪ್ತಪದಿಗ ಳಲ್ಲಿಯೂ ಹೇಳಿರುವ ವಿಷಯ ಸಾರವು ಆ ಆ ಸಪ್ತಪದಿಯಲ್ಲಿ ಮೊದಲಲ್ಲಿ ವಚನ ರೂಪದಿಂದ ಬರೆದಿದೆ. ಈ ಎರಡು ಭಾಗಗಳಲ್ಲಿ ಹೇಳಿರುವ ವಿಷಯಗಳನ್ನೂ ಉತ್ತರ ಭಾಗದ ಆದಿಯಲ್ಲಿರುವ "ಇಂತು ಶ್ರೀ ಗೀತಗೋಪಾಲ ಮಹಾ ಪ್ರಬಂಧದೊಳ್ * * ನಿರೂಪಿಸುವರ್" ಎಂಬ ವಚನದಲ್ಲಿ ಸಂಗ್ರಹವಾಗಿ ಹೇಳಿದೆ. ಹಾಡುಗಳೆಲ್ಲವೂ ಭಗವತ್ಕೀರ್ತನರೂಪವಾಗಿವೆ.

ಈ ಗ್ರಂಥವು ಜಯದೇವನ ಗೀತ ಗೋವಿಂದವನ್ನು ಸ್ವಲ್ಪಮಟ್ಟಿಗೆ ಹೋಲುತ್ತದೆ. ಇದರಲ್ಲಿ ಮೈಸೂರು ದೊರೆಗಳಲ್ಲಿ ಪ್ರಸಿದ್ಧನಾದ ಚಿಕ್ಕದೇವರಾಜನ (೧೬೭೨-೧೭೦೪) ಪರಾಕ್ರಮ ಮುಂತಾದ ವರ್ಣನೆಗಳುಳ್ಳ ಪದ್ಯಗಳೂ ಇವೆ. ಈ ಪದ್ಯಗಳು ಬಹಳ ಮಟ್ಟಿಗೆ ತಿರುಮ ಲಾರ್ಯನ ಅಪ್ರತಿಮ ವೀರ ಚರಿತ್ರೆ ಮತ್ತು ಚಿಕದೇವರಾಜ ವಿಜಯಗಳಲ್ಲಿರುವುವುಗಳಾಗಿವೆ. ಪ್ರಕೃತ ಗ್ರಂಥದಿಂದ ಕವಿ ಚಿಕ್ಕದೇವರಾಜನೆಂದು ಗೊತ್ತಾಗುತ್ತದೆ. ಈತನು ಸ್ವತಃ ಕವಿ ಯಾಗಿಯೂ ಕವಿಗಳಿಗೆ ಪೋಷಕನಾಗಿಯೂ ಇದ್ದನು. ಇವನು ಈ ಗ್ರಂಥವನ್ನಲ್ಲದೆ ಚಿಕ್ಕದೇವರಾಜ ಬಿನ್ನಪ, ಭಾರತ ಮುಂತಾದ ಗ್ರಂಥಗಳನ್ನೂ ಬರೆದಿದ್ದಾನೆ ಇವನ ಆಶ್ರಯದಲ್ಲಿ ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಸಿಂಗರಾರ್ಯ, ವೇಣುಗೋಪಾಲ ವರಪ್ರಸಾದ, ತಿಮ್ಮಕವಿ' ಮಲ್ಲಿಕಾರ್ಜುನ, ಚಿದಾನಂದ ಕವಿ, ಮಲ್ಲರಸ, ಶೃಂಗಾರಮ್ಮ, ಸಂಚಿಯ ಹೊನ್ನಮ್ಮ ಮುಂತಾದ ಕಬ್ಬಿಗರಿದ್ದುದಾಗಿ ತಿಳಿಯ ಬರುತ್ತದೆ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದಲೂ ಹಿಂದಣ ೧೦೪ ನೆಯ ನಂಬರಿನಿಂದಲೂ ಕವಿಚರಿತ್ರೆಯಿಂದಲೂ (೨ ನೆಯ ಸಂಪುಟ) ತಿಳಿಯಬಹುದು. ಈ ಗ್ರಂಥದ ಕೊನೆಯಲ್ಲಿ ಉಯ್ಯಾಲೆಯ ಸಪ್ತಪದಿಯೆಂಬ ಒಂದು

ಸಪ್ತಪದಿಯಿದೆ. ಅದಕ್ಕೂ ಈ ಗ್ರಂಥಕ್ಕೂ ಸಂಬಂಧವಿರುವ ಹಾಗೆ ತೋರುವುದಿಲ್ಲ. ಅದರ ಆದ್ಯಂತ ಭಾಗಗಳನ್ನು ಮಾದರಿಗಾಗಿ ಈ ಕೆಳಗೆ ಸ್ವಲ್ಪ ಮಟ್ಟಿಗೆ ಉದ್ಧರಿಸಿ ಬರೆಯುತ್ತೇವೆ :—

(ಸೂಚನೆ.—ಈ ಉಯ್ಯಾಲೆಯ ಸಪ್ತಪದಿಯು ಆದಿಭಾಗದಲ್ಲಿ ಒಂದೋಲೆಯಿಲ್ಲ.)

Beginning :

ವಾ॥ ಷ॥.—

ಅತ್ತೆ . . . ಯಿರೊರಗಿ . . . ಯರು ನೋಡೆ ನಿಜ ।
ಚಿತ್ರವಲ್ಲಭರು ತಲೆ(ಯೊ)ತ್ತೆ ನಿಟ್ಟೊ . . . ।
ಛತ್ರೆರದ ಕುರುವೀರರಿದರೊಳೆಳೆದೊಯ್ದು ಸೀರೆಯನು ಸೆಳೆಯುತೆಳಸಿ ॥
ತೆತ್ತವೇಳೆಗೆ ಕಾವತ...ಗರ ಕಾಣದಾ ।
ಪತ್ತಿನೊಳಗಾಳ್ದಳೆಯೆ ಬಾಯ್ದೆರೆಯುದೆಂದು ಪಲು ।
ಬುತ್ತೆ ಪಾಂಚಾಲೆಯಾ ಕೃಷ್ಣ ಗೋವಿಂದಯೆಂದೊರಲೆ ಪಕ್ಷಿವುರಂಗ
ಭೂಪಾಲ ॥ (?)

End :

॥ ರಾಗ ॥ ಭೈರವಿ ॥

ಶ್ರೀಯನೆದೆವನೆಯೊಳರಿಸಿ ಮೆಱೆವ ಕವು ।
ನೀಯೆ ಮಂಗಳ ಮೂರುತಿ ॥
ಕಾಯಜನ ಪಡೆದ ಚೆಲುವ ಗೋಪಾಲ ।
ರಾಯನಾಡಿದನುಯ್ಯಾಲಾ ॥
ರಾಯ ಕುಲಿ ಮಾಳ ಮಣಿಗೆ ಚಿಕದೇವ ।
ರಾಯ ಚಂದ್ರಮನಿಗೊಲಿದು ॥
ಆಯುರಾರೋಗ್ಯವೀವ ಗೋಪಾಲ ।
ರಾಯನಾಡಿದ ನುಯ್ಯಾಲಾ ॥

Colophon :

ಉಯ್ಯಾಲೆ ಸಪ್ತಪದಿ ಸಂಪೂರ್ಣಂ.

ಈ ಗೀತಗೋಪಾಲ ಪ್ರಬಂಧವು ಮೈಸೂರು ಕಾವ್ಯಕಲಾನಿಧಿಯವರಿಂದ ಮುದ್ರಿತವಾಗಿದೆ.

No. 1277. ಗೀತಗೋಪಾಲ by ಚಿಕದೇವರಾಜ.

GĪTĀGŌPĀLA BY CIKADĒVARĀJA.

Substance, paper. Size, 10½ × 9½ inches. Pages, 112. Lines, 20 on a page. Extent, 1,260 granthas. Character, Kannada. Condition, good. Appearanc, new. Mode of writing, fair.

Restored in 1924—25 from the Ms. described above (No.1276).

ವಿ.ವಿ.—

ಸಮಗ್ರ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ.

No. 1278. ಗೀತಗೋಪಾಲ by ಚಿಕದೇವರಾಜ-

GĪTAGŌPĀLA BY CIKADĒVARĀJA.

Substance, Sritāla. Size, 19 × 1$\frac{11}{16}$ inches. Pages, 81. Lines, 4—9 on a page. Extent, 972 granthas. Character, Kannada. Condition, injured.A ppearance, old. Mode of writing, good.

Begins on fol. 27 a. of the Ms. described under No. 1128 *ante*.

Contains up to the 'Phalasaptapadi' in the second part.

Fol. 67 b is left blank.

Same work as that described above.

ವಿ.ವಿ.—

ಅಸಮಗ್ರ. ಸ್ವಲ್ಪ ಮಟ್ಟಿಗೆ ಶಿಥಿಲವೆನ್ನಬಹುದು. ಲಿಪಿ ಉತ್ತಮವಾಗಿದೆ. ಮೊದಲಿಂದ ಉತ್ತರ ಭಾಗದ ಫಲಸಪ್ತಪದಿಯವರೆಗಿದೆ. ಕಡೆಯದಾದ ಮೂರ್ತಿ ಧ್ಯಾನ ಸಪ್ತಪದಿಯೂ ಇರುತ್ತಿದ್ದರೆ ಸಮಗ್ರ ಪ್ರತಿಯೆನಿಸುತ್ತಿದ್ದಿತು.

ಇದರೊಡನಿರುವ ಇತರ ಗ್ರಂಥಗಳ ಬಗೆಗೆ ಡಿ. 1128 ನೆಯ ನಂಬರನ್ನು ನೋಡುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1279. ಗೀತಗೋಪಾಲ by ಚಿಕದೇವರಾಜ-

GĪTAGŌPĀLA BY CIKADĒVARĀJA.

Substance, palm leaf. Size, 1$\frac{1}{4}$× 11$\frac{1}{4}$ inches. Pages, 136. Lines, 4—5 on a page. Extent, 1,120 granthas. Character, Kannada. Condition, much injured. Appearance, old. Mode of writing, good.

Begins on fol. 1. The other work herein is (1) Saptapadigaḷu 69 a Fol. 32 b and 40 are left blank.

Wants 19th fol. and the half portion in the last colophon para; otherwise complete.

Same work as that described above.

ವಿ.ವಿ.—

ಸಮಗ್ರವೆನ್ನಬಹುದು. ಉತ್ತರಭಾಗಾಂತ್ಯ ಗದ್ಯದ ಕೊನೆಯಲ್ಲಿ ಸ್ವಲ್ಪಭಾಗವಿಲ್ಲ. ೧೯ ನೆಯ ಓಲೆಯಿಲ್ಲ. ೩೨, ೪೦ ನೆಯ ಓಲೆಗಳಲ್ಲಿ ಒಂದೇ ಬದಿಯಲ್ಲಿ ಬರೆದಿದೆ. ಅತಿ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇದರಲ್ಲಿ ವರ್ಣಿತವಾಗಿರುವ ಸಪ್ತಪದಿಗಳಲ್ಲದೆ ಹೊಸದಾಗಿ ಒಂದು ಸಪ್ತಪದಿಯಿದೆ. ಅದರ ಆದಿಯ ಸ್ವಲ್ಪ ಭಾಗ ಹೋಗಿದೆ.

, ುರುಗಗಿಇವರ್ಥದೆ ತ ಆಗಿದೆದಂ.

No. 1280. ಗೀತಗೋಪಾಲ by ಚಿಕದೇವರಾಜ.

GĪTAGŌPĀLA BY CIKADĒVARĀJA.

Substance, Srītāḷa. Size, $8\frac{5}{16} \times 1\frac{3}{4}$ inches. Pages, 2. Lines, 6 and 7 on a page. Extent, 13 granthas. Character, Kannada. Condition, injured. Appearance, old. Mode of writing, good.

Begins on fol. 36-a of the Ms. described under No. 268 *ante*, wherein the list of other works has been omitted to be mentioned. The other works therein have been mentioned in D. No. 307 wherein the name of this work has been mentioned as "Ṣaṭpadi".

Incomplete.

Contains the end of the 4th Mahima Saptapadi and beginning of the 5th Udaya Saptapadi.

Same work as that described above.

ವಿ.ವಿ.—

ಅಸಮಗ್ರ. ಇದರಲ್ಲಿ ನಾಲ್ಕನೆಯದಾದ ಮಹಿಮ ಸಪ್ತಪದಿಯ ಕೊನೆಯ ಭಾಗವೂ ಐದನೆಯದಾದ ಉಷಾಯ ಸಪ್ತಪದಿಯ ಮೊದಲ ಭಾಗವೂ ಇದೆ. ಒಂದೇ ಒಂದು ಓಲೆಯಿದೆ. ಶಿಥಿಲವಾಗಿದೆ. ಲಿಪಿ ಚನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳವೆ. ಅವಾವು ವೆಂಬುದನ್ನು ಹಿಂದಣ ೩೦೭ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1281. ಚಿಕ್ಕದೇವರಾಯ ಪದಗಳು.

CIKKADĒVARĀYA PADAGAḶU.

Substance, palm leaf. Size, $11\frac{7}{8} \times 1\frac{1}{4}$ inches. Pages, 65. Lines, 4 on a page. Extent, 375 granthas. Character, Kannada. Condition; slightly injured. Appearance, old. Mode of writing, good.

Incomplete.

Songs written in Kannada and Telugu languages in illustration o the sentiment of love in its different aspects. Cikkadēvarāja, king of Mysore is made the hero in these songs. The name of the author is not found in this. Probably Cikkupādhyāya the author of "Śṛubgāra-sūtrōdāharaṇa" a work similar to this, is also the author of the present work.

Fol. 29 b, 32 b and 34 b are left blank.

Beginning :

॥ ರಾಗ ॥ ಘಂಟಾರವ ॥

ಪಲ್ಲವಿ.—

ಈಗಲೂ ನೆನೆಯೆ ಧಿಗಿಲೆನುತಲಿದೆ ।
ಆಗನಾನಿದ್ದಿರಲು ಹಗೆಗಾದರೂ ಬೇಡವೆಂದಿಗೂ ॥

ಚರಣಗಳು.—

ಬರಿದೆ ಬಳಲಿದಳೆಂದು ಪಡೆದು ಬಂದುದಿನಿತೆಂದು ।
ಅರಿತೂ ಅರಿಯಳಯ್ಯಯ್ಯೊ ಅಕಟಾ ಎಂದು ॥
. . ದಲ್ಲದುಳಯಳೆಂದು ನಿಜದ ಮೋಹದಿರವಿಂತೆಂದು ।
ಮರೆತರೆ ಯಿಲ್ಲದಾಡುವ ಮಡದಿಯರ ಮಾತನೆಲ್ಲ ॥ (೧)

ಇವಳಿಚ್ಛೆ ಸಂದಪುದೆಂದು ಯೊಕಣ್ಣ (ನ) ಲೆ ನೋಟಪ್ಪೆವೆಂದು ।
ಇವಳಗೆ ಹಿತವರಾರೂ ಯಿಲ್ಲಲೆಯೆಂದು ॥
ಅವರವರಾಯತಗಳ ಅವರವರೆ ಬಲ್ಲರೆಂದು ।
ಕವಕೊಡುಗೂಡಿ ನುಡಿವ ಕಾಂತೆಯರ ಮಂತ್ರನೆಲ್ಲ ॥ (೨)

ಎಕ್ಕಸಕ್ಕವಿವಳಗೆಂದು ಯಿಲ್ಲಿಗಿದು ಸಲ್ಲದೆಂದು ।
ಮಿಕ್ಕಮಾತೇನು ಮರುಳು ಮೀರಿತೆಂದು ॥
ಚಿಕ್ಕದೇವರಾಜ ಧೀರಾ ಸಿಕ್ಕದಿರನಿವಳಗೆಂದು ।
ಸೊಕ್ಕು ತಲೆಗೇರಿ ನುಡಿವ ಸುದತಿಯರ ಮಾತನೆಲ್ಲ ॥ (೩)

॥ ರಾಗ ॥ ವಸಂತ ಭೈರವಿ ॥

ಪಲ್ಲವಿ.—

ಎನ್ನಮಾನಾವಮಾನವು ನಿನ್ನದೆನಗೇನು ।
ಚೆನ್ನಿಗ ಚಿಕದೇವರಾಯ ನಿನ್ನ ಚಿತ್ತವೆನ್ನ ಭಾಗ್ಯ ॥

ಚರಣಗಳು.—

ಇಂದಲ್ಲದಿನ್ನೆಂದಿಗೆಂದು ಯೆಂದಿಗೂ ಇಂತು ಸಲ್ಲೆಂದು ।
ಮಂದ್ಯವಾಳ (?) ವಿದುತಳಮುಗುಚದಿರದೆಂದು ॥
ಹಿಂದೆಣಿಸಿ ಫಲವೇ ನನ್ನಿಂದಲಿಂತು ಬಂದುದೆಂದು ।
ಹಿಂದೆ ಮುಂದಾಡಿಕೊಂಬರ ಮುಂದೆನ್ನನೆಂತು ನಡೆಸಿದರು ॥ (೧)

ಇವಳಗಿಂತೇತರಿಂದೆಂದು ಯಿಂದಿಗೂ ನಾಳೆ ಬೇರೆಂದು ।
ನವಮೋಹನಲಿ ನಾವೆಲ್ಲ ನಡೆದ ತೆರನೆಂದು ॥
ಇವಳೇನು ಗೈವಳುಪಾಯ ಅವನ ದಯುದಿರವಿಂತೆಂದು ।
ನೆವವಿಲ್ಲದಾಡುವರ ಮುಂದೆ ತೆರದಲಿ ನಡೆಸಿದರು ॥ (೨)

ಉಕ್ಕಿದುದೊಗುವದೆಂದು ಸೊಕ್ಕು ತರವಲ್ಲವೆಂದು ।
ತಕ್ಕಂತೆ ನಡೆಯಲದು ಸಲುವುದೆಂದು ॥
ಚಿಕ್ಕದೇವೇಂದ್ರನ ಬಗೆ ಸಿಕ್ಕದಿನ್ನು ಯಿವಳಗೆಂದು ।
ಕೆಕ್ಕಸಗೊಂಡಾಡುವರ ಕಣ್ಣ ಮುಂದೆಂತು ನಡೆಸಿದರು ॥ (೩)

॥ ರಾಗ ॥ ಶಂಕರಾಭರಣ—(ತೆಲುಗು ಭಾಷೆಯಲ್ಲಿ.)

ಪಲ್ಲವಿ.—

ಮೇಲು ಮೇಲು ದಾನಾ ॥

ಚರಣಗಳು.—

ರಾರಾ ರಾರಾ ಪಲುಮಾನಾ ।
ವೇರಾ ವೇರಾ ನೇನುಚಾಲು ॥
ಪೋರಾ ಪೋರಾ ನುಲುಮಾನ ।
ಲೇರಾ ಲೇರಾ ಯಿಂಬಿಕಿ ॥ (೧)

ಅಂತ ಅಂತರಂಗಮೈ ಗೋ ।
ತಂತರಂ ತಾನನಿಸೀ ॥
ಮಂತ ಮಂತ ನಮುನನಿ ।
ವಿಂತ ವಿಂತ ಸೇತುರಾ ॥ (೨)

ಯೇರಾ ಯೇರಾ ಜನಮಿಂತ ।
ತೀರಾ ತೀರಾ ದೇಸೇಂದ್ರಕೋ ॥
ಮಾರಾ ಮಾರಾ ಮಾರಮ್ಮನಿ ಮೋ ।
ವಿರಾ ವಿರಾ ಚಿಕ್ಕದೇವ ॥ (೩)

* * * * *

(ಓಲೆ ೭ a.)

॥ ರಾಗ ॥ ಕಾಂಭೋಜ ॥

ಪಲ್ಲವಿ,—

ಅಂದವೆ ಯಿೞಬಗೆಯು ಮಾಯು ।
ಆಯಿತಾಯಿ ಕೇಳು ಚಿಕದೇವರಾಯು ॥

ಚರಣಗಳು.—

ಬಲ್ಲೆ ಬಲ್ಲೆನಯ್ಯ ನಿನ್ನ ಬಗೆಯನೆಲ್ಲ ।
ಬರಿಯ ಬನ್ನಣೆಯನಿಲ್ಲಿ ಬಳಸಸಲ್ಲ ॥
ಬೆಲ್ಲ ಮಾತಿಗೆ ನಾನು ಬೆರೆವಳಲ್ಲ ।
ಬೇಡ ಬೇಡ ಯೆನ್ನುಮೇಲೆ ಬಿನದವಲ್ಲ ॥ (೧)

ಇದಿರು ನುಡಿಯು ತಕ್ಕವಳೆಯಲ್ಲ ನಾನು ।
ಯೆನ್ನ ವಂಚಿಸಿ ಬರುವ ಭಾಗ್ಯವೇನು ॥
ಮೊದಲು ದಯದಿ ನಡೆಸಿದುದಿಲ್ಲವೇ ನೀನು ।
ಮುನಿಯೆ ದೈವವಾರು ಯೆನ್ನು ಗೆಯ್ವುದೇನು ॥ (೨)

ಅಹುದು ಕೇಳಿ ಬಲ್ಲೆ ಬಿಡು ಬಿಡು ಕೈಯ್ಯ ।
ಆನು ಯೊಗರುಡಿ ಯೊಳಾಡಿದವಳಯ್ಯ ॥
ತಹಜವೆ ನಿನಗಿನಿತು ಚಾಯು ಮಾಯು ।
ನಾಕು ಸುಮ್ಮನಿರು ಚಿಕದೇವರಾಯು ॥ (೩)

* * * * *

(ಓಲೆ ೧೩ a.)

॥ ರಾಗ ॥ ತೋಡಿ ॥

ಪಲ್ಲವಿ.—

ನೆನೆನೆನೆದು ಯೆನ್ನ ಮನ ನೆರೆಮೋಹಿಸುತಿದೆ ।
ಯಿನಿಯಳೆಂದಿನದಿನದೊಳೆಸಗಿದ ವಿಲಾಸಗಳ ॥

ಚರಣಗಳು.—

ವನಿತೆ ಯೆನ್ನೊಳೇಕಾಂತವಾಡಿದ ಬಿನದ ವಾತಿ ।
ನನುವ ಸಖಿಯರಿಗಾನರುಹಲುಜ್ಜುಗಿಸೆ ॥ —
ಕೊನರಿ ಡುವ ಲಜ್ಜೆಯಿಂ ಕುದಿದು ಕೈಗಳ ಮುಗಿದು ।
ಕನಲಿ ಕಂಬನಿದುಂಬಿ ಕಾತರಿಪ ಬಗೆಯ ॥ (೨

ರಸವಸದಿ ಚಿಕದೇವರಾಯ ಯೆಂಬರೆನುಡಿಯ ।
ಕೊಸರಿನುಡಿವನು ಕೂರ್ತು ನೋಡೆ ।
ನಸು ನಾಣು ಮುನಿಸು ಸಂತಸ ಕದುಬು ಕಾತರಗ ।
ಳೆಸೆಯೆ ಮೊಗದೊಳು ಮೊಗವನಿಟ್ಟು ಮರಸುವ ಬಗೆಯ ॥ (೩

(ಕಿಳಿಕಿಂಚಿತವೆಂಬ ಭಾವ)

(ಓಲೆ ೧೪ b.)

॥ ರಾಗ ॥ ಕಾಂಭೋಜಿ ॥

ಪಲ್ಲವಿ.—

ಇನ್ನೇನು ಮದನ ನಿನಗಿದಿರಿಡುವನವಳ ।
ಎನ್ನಾಣೆ ಕೇಳು ದಿಟ ವಿಚ್ಛಕದ ನುಡಿಸುಲ್ಲ ॥

ಚರಣಗಳು.—

ಬಾಯಾರ್ದ ಕಣ್ಗಳಿಗೆ ಪನ್ನೀರನೆರೆವಂತೆ ।
ಜೀಯ ನಿನ್ನಯ ಭಾವಚಿತ್ರವನು ನೋಡಿ ॥
ವೈಯಾರದಿಂ ಮೊಗವನೊಂದಿನಿಸು ಬಾಗಿಸು ।
ತ್ತಾಯತಾಪಾಂಗದಿಂದರೆನೋಟವೆಸಗುವಳು ॥ (೧)

ಪಸಿದ ಕಿವಿಗಳಿಗಮೃತ ಪಾರಣೆಯನೀವಂತೆ ।
ರಸಿಕ ನಿನ್ನಿರವ ಲಾಲಿಸಿ ಕೇಳುತ ॥
ಅಸಿಯೊಡಲ ಜಡೆಮುರಿವುತಲಸುತಾಳೋಚಿಸುತ ।
ಬಸವಳಿದು ಕಣ್ಬಿರ್ಬ ಪಲವು ಬಗೆಗೆಯ್ವಳು ॥ (೨)

ಅರಿವಿಲ್ಲದೆದೆಗೆ ದಿವ್ಯೌಷಧವ ಕೊಡುವಂತೆ ।
ನೆರೆದು ಚಿಕದೇವೇಂದ್ರನ ನಿಜಭಾವದಿ ॥
ನಿರಿಗೊಳುವ ಪುರ್ಬಲರ್ವ ನಿಡುಗಣ್ಣ ನಸುನಡುಕ ।
ಕಿರುಬೆಮರು ಸುಯ್ಲುಗಳಿಂ ಕೆಳದಿಯರಿಗರುಹುವಳು ॥ (೩)

(ಇದು ಮೋಟ್ಟಾಯಿತ ಮೆಂಬ ಭಾವ)

* * * *

(ಓಲೆ ೨೭ ಎ.)

॥ ರಾಗ ॥ ಹುಸೇನಿ ॥

ಪಲ್ಲವಿ.—

ಎಂದುಕು ಯೀ ಮಾಟಲೇಲ ।
ಮುಂದು ನಿನ್ನೆರುಗುನಾ ಮುವ್ವಗೋಪಾಲ ॥

ಚರಣಗಳು.—

ಮನಸುರಾದು ನಾಕೊಂದು ಮಾರು-ಅಲ ।
ಕನಕಾಂಗಿವಲೆನೆ ಚೆಕ್ಕನಿದಾನಗಾನು ॥
ನಿನ್ನು ಮೆಪ್ಪಿಂಚ ನೇರ್ತುನೇ ನೇನು-ಚಾಲು ।
ವನಜಾಕ್ಷ ಸರಸಾಲು ವದ್ದು ನಾತೋನು ॥ (೧)

ನಿಲುವು ನಾಪೈ ದಯ ನೀಕಾ-ಅಲ ।
ಚೆಲಿಯತೊ ನಲಿಗಿ ಯಚ್ಚ್ಟಿತಿವೇಮೊ ಲೆಕಾನಿ ।
ತಲಪುದೆಲಿಯರಾ ಯೆಂದಾಕನನ್ನು ।
ಅಲಯಿಂಚೆ ದೈವಮು ನಗವಲೆಗಾಕಾ ॥ (೨)

ರಂತುಶಾಯಕ ಮುಂದು ರಾವಾ-ನೀವು ।
ಎಂತೈನ ನನ್ನುಗೂಡಿ ಯೆದುರಾಡಿನಾವಾ ॥
ಎಂತಲೇದಾನಾಟ ನೀವಾ-ಅಡಿ ।
ಕೊಂತಕಾಲಮು ಮುವ್ವಗೋಪಾಲದೇವ ॥ (೩)

End :

॥ ರಾಗ ॥ ಕುರಂಜಿ ॥

ಪಲ್ಲವಿ.—

ಇನಿಯನ ಬಗೆಗಳನೆಣಿಸದ ಮುನ್ನ ।
ತನುಮನವೊಂದಾಗಿ ತಲ್ಲಣಿಸುತಿದೆ ॥
ಮುನಿವುದೆತ್ತಣದಿನ್ನು ಮೋಡಿ ಯೆತ್ತಣದು ।
ಮನವ ಬೈಚಿಟ್ಟು ಮಾರ್ಮಲೆವುದೆತ್ತಣದು ॥
ಮೊನೆದೋರ್ಪುದೆತ್ತಣದು ಮೂದಲೆಯೆತ್ತಣದು ।
ತೊನೆವುದೆತ್ತಣದಿನ್ನು ದೂರುವುದೆತ್ತಣದು ॥
ಅನುಮಾನವೆತ್ತಣದು ಅಳವೆತ್ತಣದು ।
ಅನುವನಾರೈಪೆನೆಂಬಾಸೆಯೆತ್ತಣದು ॥

ಚರಣಗಳು.—

ಇದೆ ಬಂದನರಸನೆಂಬೀ ಸುಡಿ ಗೇಳ ।
ಬಿದೆ ಬೇಟದೊಳು ಮೆಯ್ಪೊಂಪುಗೊಂಡುರ್ಬಿ ॥
ಸೊದೆಯುಂಡವೊಲು ಗಾಳ ಸೋಂಕಿದವೊಲು ।
ಧರಣೀವಡೆದವೊಲು ಬೆರ್ಚಿದವೊಲು ॥

ಮದವೇರಿದವೊಲು ಮರುಳಾದವೊಲು ।
ಹದ ಮೀರಿದವೊಲು ಹರವಸಗೊಂಡವೊಲು ॥
ಮದನ ಮಂತ್ರಾವೇಶ ಮಡಲಿಟ್ಟವೊಲು ।
ಮುದದಿ ಮುನ್ನೀರೊಳು ಮುಳುಗಿ ತೇಲುತಿದೆ ॥ (೧)

ಬಿಱುನುಡಿಯಲ್ಲೆನ್ನ ಪ್ರಾಣ ವಲ್ಲಭನ ।
ಕಾಱಿತು ನೋಡದ ಮುನ್ನ ಕೊಱಗುತೆನ್ನೆರ್ದೆಯು ॥
ಮಱೆದೊರಗಿದವೊಲು ಮರವಟ್ಟವೊಲು ।
ಬೆಱಗು ವಡೆದವೊಲು ಬೆಗಡು ಗೊಂಡವೊಲು ॥
ಅಱಿವು ಗುಂದಿವೊಲಳವಡೆದವೊಲು ।
ತೆಱನಱಿಯದವೊಲು ದೆಸೆಗೆಟ್ಟವೊಲು ॥
ಪಱಿವಡಸಿದವೊಲು ಸಾಡಿಳದವೊಲು ।
ತೊಱೆದನ್ಯ ಚಿಂತೆಯ ಸೊಕ್ಕೇರುತಿದೆ ॥ (೨)

ಎರೆಯ ಚಿಕದೇವೇಂದ್ರನೆನ್ನಲಾಲಿಸಿದ ।
ನೆರೆಸೊಗಸುಗಳೆನ್ನೆರ್ದೆವನೆಯೊಳು ॥
ನೆರೆಸಿಕ್ಕಿದವೊಲು ಚಿತ್ರಿಸಿದವೊಲು ।
ಕರುವಿಟ್ಟೆರೆದವೊಲು ಕಾಸಿ ಬೆಚ್ಚವೊಲು ॥
ಸರಿಗೊಂಡವೊಲು ಸರಗೊಳಿಸಿದವೊಲು ।
ಕೊರೆದು ಕೋದವೊಲೊಂದುಗೂಡಿಸಿದವೊಲು ॥
ನೆರೆಗೆ ವಡೆದವೊಲು ನೆಲಸಿತೆಂಬವೊಲು ।
ತರಿಸಂಧಾನದಿ ತನ್ಮಯವಾಗುತಿದೆ ॥ (೩)

ವಿ.ವಿ.—

ಅಸಮಗ್ರ. ಸ್ವಲ್ಪ ಮಟ್ಟಿಗೆ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಓಲೆಗಳು ಕ್ರಮವಾಗಿಲ್ಲ. ೧೭ ನೆಯ ಓಲೆಯ ಮುಂದಕ್ಕೆ ಸಂಖ್ಯೆಯಿಲ್ಲ. ಅಲ್ಲಿಂದ ಮುಂದಕ್ಕೆ ನಾವು ಕೊಟ್ಟಿದ್ದೇವೆ. (ಆ ಓಲೆಗಳು ಅನುಸ್ಯೂತವಾಗಿಲ್ಲ) ಕೊನೆಯ ಓಲೆಯು ೩೪ ನೆಯದಾಗಿರುವುದು.

ಇದು ಹಾಡಿನಲ್ಲಿ ಬರೆದಿದೆ. ಕರ್ಣಾಟಕ, ಆಂಧ್ರ ಈ ಎರಡು ಭಾಷೆಗಳಲ್ಲಿಯೂ ಹಾಡುಗಳಿವೆ. ಮೈಸೂರು ದೊರೆ ಚಿಕ್ಕದೇವರಾಜ (ಕ್ರಿ.ಶ. ೧೬೭೨-೧೭೦೪) ನನ್ನು ನಾಯಕನನ್ನಾಗಿಟ್ಟುಕೊಂಡು ಶೃಂಗಾರಭಾವಗಳಿಗೆ ಉದಾಹರಣೆಯನ್ನು ಕವಿ ಹಾಡಿನ ರೂಪದಲ್ಲಿ ಬರೆದಿದ್ದಾನೆ. ಕೀರ್ತನೆಗಳು ಲಲಿತವಾಗಿಯೂ ರಮಣೀಯವಾಗಿಯೂ ಇವೆ. ಕವಿಯ ವಿಷಯವಾಗಿ ಏನೂ ಇದರಿಂದ ತಿಳಿದು ಬರುವುದಿಲ್ಲ. ಈ ಗ್ರಂಥವು ಚಿಕ್ಕದೇವರಾಜನ ಮಂತ್ರಿಯೂ ಆಸ್ಥಾನ ಕವಿಯೂ ಆದ ಚಿಕುಪಾಧ್ಯಾಯನು ಬರೆದಿರುವ "ಶೃಂಗಾರ ಸೂತ್ರೋದಾಹರಣೆ" ಮುಂತಾದ ಗ್ರಂಥಗಳ ಹಾಗೆಯೇ ಇರುವುದರಿಂದ ಇದನ್ನೂ ಚಿಕ್ಕುಪಾಧ್ಯಾಯ ಮಂತ್ರಿಯೇ ಬರೆದಿರಬಹುದೋ ಏನೋ ?

No. 1282. ಜೋಗುಳ ಹಾಡು.

JŌGUḶA HĀḌU.

Substance, Kadjan. Size, 10⅜ × 3⅜ inches. Pages, 17. Lines, 20 on a page. Extent, 70 granthas. Character, Kannada. Condition, Slightly injured Appearance, old. Mode of writing, good.

Begins on page 164. The other works herein are—

(1) Vaidyaviṣayah (Skt.) pp. 1–11, (2) Puṇyāhavācanam (Skt.) pp 12–14, (3) Rasāyanayōga, pp. 15–17, (4) Nirūpagaḷu Śāsanagaḷu muntāduvu—

(*a*) Tirumalasāgarada nirūpa, pp. 18–19.

(*b*) Names of the Mysore Kings, pp. 20.

(*c*) Āyatanahaḷḷiya Nirūpa, pp. 21–22.

(*d*) Nāccarammana Ābharaṇakāṇikeya Nirupa, pp. 29–33.

(*e*) Ammakana haḷḷiya bhōgapatra, pp. 43–45.

(*f*) Cāmarāja samudrada bhūdana śāsana, pp. 49–68.

(*g*) Jagadēvarāyara bhūdāna śāsana (incomplete), pp. 69–70.

(*h*) Āyatanahaḷḷiya Nirūpa, pp. 71–74.

(*i*) Rājaodeyara bhūdāna śāsananirupa (incomplete), p. 75.

(*j*) Doḍḍarāja Oḍeyara Dānapatra (incomplete) pp. 78–79.

(*k*) Tirumalayyangārara dānapatra, pp. 80–81.

(*l*) Mēlugōṭeya lasthīku, pp. 97–98.

(*m*) Kṛṣṇarāja Odeyara Nirupa, pp. 181–183.

(*n*) Pattada gadivivara, pp. 184–186.

(*o*) Pascimaranganātha svāmi gudiya Nityagatḷe Utpattiyalli Arcakādigaḷige pālu, pp. 187–191.

(*p*) Mysore doregaḷa paṭṭabhiṣēkādivivara, pp. 192–239.

(*q*) Arasugaḷa vamśāvaḷi, pp. 240–247.

(*r*) Cikkadēvarājaru sādhisida Durgādigala vivara, pp. 248-253.

(5) Viṣṇustavah (2 stanzās only) Skt., pp. 23–24.

(6) Subhāṣitam (Skt.), p. 25.

(7) Rāmāyaṇam (Skt.) p.p. 26—28.

(8) Puṇyāhavācanamantra (according ism), pp. 35–4 and 46–48.

(9) Hūmudisuvahādu, pp. 76–77.

(10) Tirunārāyanaṇige Mangalapada, pp. 828–.

(11) Kṣamāṣōḍaśī (Skt.), pp. 85–95.

(12) Ubbasada Maddu, pp. 95–96.

(13) Vaidya, pp. 99–104 and 108–113.

(14) Rāmāyaṇa, pp. 115–116.

(15) Dinavahilekka Ityādi, pp. 117–163.

(16) Jōguḷahādu, pp. 164–180 (Total pages 1–253).

Contains lullaby songs describing the playful actions of Śrīkṛṣṇa.

Beginning :

॥ ರಾಗ ॥ ಶಂಕರಾಭರಣ ॥ ತಾಳ । ಝಂಪೆ ॥

ಪಲ್ಲವಿ.—

ಜೋ ಕೃಷ್ಣ ಪರಮಾನಂದ ಗೋಪಿಯ ಕಂದ ।
ನಮ್ಮ ಗೋವಿಂದ ಜೋ ಜೋ ॥

ಚರಣಗಳು.—

ಕ್ಷೀರಾಂಬು ನಿಧಿಯೆಂಬ ಸಜ್ಜೆಯೊಳಗಿರುವ ।
ಶ್ರೀರಮಣ ಭಕ್ತರಿಚ್ಛೆಗೆ . . . ರೂಪ ॥
ಕಾರುಣ್ಯ ನಿಧಿ ಕೃಷ್ಣ ।
ನೇಱಿ ಗೋವಳತಿಯರ ನೆರೆವ ಕಡುಚೆಲುವ ॥ (೧)

ಪಲ್ಲವಿ.—

ಲಾಲಿ ವನಮಾಲಿ ಬಾಲಗೋಪಾಲ ।
ಪಾಲ ಶ್ರೀ ಕೃಷ್ಣ ಲಾಲಿ ॥

ಚರಣಗಳು.—

ಲೀಲೆ ಮಿಗೆ ವಸುದೇವ ಬಾಲನೀನಾಗಿ ।
ಪಾಲುಂಡು ಪೂತನಿಯ ಮಡುಹಿ ಚೆನ್ನಾಗಿ ॥
ಗಾಲಿ ರಕ್ಕಸನಸುವ ಕಾಲಿಂದ ನೀಗಿ ।
ಗೂಳಿಯಸುರನ ಕೊಂದೆ ಕೈಗಳಲಿ ತೂಗಿ ॥ (೧)

ಇಂದ್ರ ನೀಲದ ಹೊಗರ ನಿಳಿಗೆಯ್ವ ಮೆಯ್ಯ ।
ಚಂದದಿಂ ಮಱೆವ ಶ್ರೀ ಕೃಷ್ಣ ನಮ್ಮಯ್ಯ ।
ಚಂದಮಾಮನ ನೋಡಿ ತಾರಮ್ಮಯ್ಯ ।
ಎಂದು ನಗುತೊಮ್ಮೆ ನೀ ನೀಡಯ್ಯ ಕೈಯ್ಯ ॥ (೨)

ಕನಕ ಮಾಣಿಕದ ಸರಪಣಿಗಳನು ಜಡಿದು ।
ಜನನಿ ತೂಗುತಿರೆ ಯೆಚ್ಚರು ನಿದ್ದೆವರೆದು ॥
ಮಿನುಗುವೆಳನಗೆಗಣ್ಣ ನಿನಿಸು ಮುಗಿಮುಗಿದು ।
ನೆನೆಕೆ ಪುಸಲೀಲೆಗಳ ನಿದ್ದೆಯನೆ ಮರೆದು ॥ (೩)

End :

ನರಕಾಸುರನ ಮನೆಯು ಸೆರೆಗೆ ಸಿಕ್ಕಿರುವ ।
ಅರಸು ಕುವರಿಯರು ಹದಿನಾಱು ಸಾವಿರವ ॥
ನರಕನಂ ತರಿದು ಬಿಡಿಸಿ ನಲವಿಂದ ಚಲುವ ।
ನೆರೆದು ಮದುವೆಯನೆಸಗಿ ವಿಶ್ವರೂಪಕವ ॥ (೩೩)

ನಾರದನು ಬೇಡೆ ಹದಿನಾರು ಸಾವಿರವ ।
ನಾರಿಯರೊಳೊಬ್ಬಳನು ನನ್ನೊತ್ತಿಲಿರದ ।
ನೀರೆ ನಿನಗೆಂದು ವೃಗಾನಿಯು ಮಾತ ಗೆಲಿದ ।
ನಾರದನ ಸೋಲಿಸಿದ ನಾಗೇಂದ್ರವರದ ॥ (೩೪)

ಶ್ರೀ ಯದುಕುಲಾಂಭೋಧೀ ಚಂದ್ರಮನೆ ಜೋ ಜೋ ।
ಶ್ರೀಯುತನೆ ಕೃಷ್ಣರಾಜೆಂದ್ರನುತ ಜೋ ಜೋ ॥
ಶ್ರೀ-ರಾರೋಗ್ಯ ಪ್ರದಾಯಕನೆ ಜೋ ಜೋ ।
ಕಾಯಜನ ಪಡೆದ ಪ್ರಮೇಯು ಹರಿ ಜೋ ಜೋ ॥

ವಿ.ವಿ.—

ಕಡತದ ಪ್ರತಿ. ಸ್ವಲ್ಪ ಮಟ್ಟಿಗೆ ಶಿಥಿಲ. ಅಕ್ಷರಗಳು ಕೆಲವು ಕಡೆ ಮಾಸಿವೆ. ಇದರೊಡನೆ (1) ವೈದ್ಯ ವಿಷಯ, ಪುಣ್ಯಾಹವಾಚನ ಮುಂತಾದ ಕೆಲವು ಸಂಸ್ಕೃತ ಗ್ರಂಥಗಳೂ ನಿರೂಪಗಳು, ಶಾಸನಗಳು ಮುಂತಾದ ಕನ್ನಡ ಗ್ರಂಥಗಳೂ ಇವೆ. ಇದರ ವಿವರಕ್ಕೆ ಇಂಗ್ಲಿಷಿನಲ್ಲಿ ಕೊಟ್ಟ ಪಟ್ಟಿಯನ್ನು ನೋಡುವುದು.

ಶ್ರೀಕೃಷ್ಣನ ಬಾಲಲೀಲೆಗಳನ್ನೊಳಗೊಂಡ ಜೋಗುಳ ಹಾಡುಗಳು ಬರೆದಿವೆ. ಕೊನೆಯ ಪದದಲ್ಲಿ ಶ್ರೀಕೃಷ್ಣರಾಜೇಂದ್ರನ ಅಂಕಿತವಿದೆ. ಆವನೇ ಗ್ರಂಥಕರ್ತನಿರಬಹುದೆಂಬ ಸಂಶಯ ಕ್ಕೆಡೆಯಿದೆ.

No. 1283. ಪಾಂಡವ ಚರಿತ್ರೆ.

PĀNDAVA CARITRE.

Substance, Palm leaf. Size, 15¼ × 1½ inches. Pages, 140. Lines, 6 on a page. Extent, 1,530 granthas. Character, Kannada. Condition, much injured. Appearance, old. Mode of writing, good.

Incomplete.

The story of Pāndavas written in the form of songs. The work is said to be complete in five Sandhis. The name of the author is not known.

Beginning :

ಶ್ರೀರಮಣಿಯರಸ ಶತಕೋಟಿ ಭಾನು ಪ್ರಕಾಶ । [ಪುಣ್ಯಾಕರವು]
ಕಾರುಣ್ಯಕರ ಮುರಾರಿ ಶೌರಿ ಶರಣು ।
ವಾರಿಜ ಕುಲೋತ್ತುಂಗ ದನುಜ ।

ವೀರದಶಕಂಠ ಮದಭಂಗ ದುರಿತ ।
ದೂರಸಲಹೆನ್ನ ಕೃಪಾಂಗ ಜ . . . ।
ಘೋರಸಂಸಾರ ಭವದೂರ ನಂದಕುಮಾರ ।
ವಾರಿಜಾಂಬಕ ಸಾಹಿಮಾಂ ದೇವ ।
ಶ್ರೀ ಜಾನಕೀ ವಲ್ಲಭಾ ॥ ೧)

End :

ಕೌರವೇಶ್ವರ ನಿನೇ ಕೆಲ . .
. . . . ನೆಂದು ನಿಂದು ರುಧಿರ ।
ಜೋರಿಡಲು ಕೊಂದನನುಜರನು ಕೆಲರು ।
ಹೋರಿ ಹಿಂದೆ ಗೆದರಿನ್ನೇನು ಸುರರಿ ।
ಗಾರದಿರು ಕೌರವೇಂದ್ರನ . . . ।
. . . . ಹಿಡಿದು
ಬಾಹಿಭುಜಗಳ ಬಿಗಿದನು ಜಾಂ . . ಸಿತ ಸಹಿತ ।
ಜಾರಿದನು ಚಿತ್ರಸೇನಾ ತ್ರಾಣಾ ।
ಶ್ರೀ ಜಾನಕೀ ವಲ್ಲಭಾ ॥
ಖಲಭೀತಿಯಿಂದ . . . .

ವಿ.ವಿ.—

ಅಸಮಗ್ರ. ಸಂಧಿ ೧ ರಿಂದ ೫ ರ ೭೮ ನೆಯ ಪದ್ಯದವರೆಗಿದೆ. ನಡುವೆ ಅಲ್ಲಲ್ಲಿ ೧೦ ಓಲೆಗಳು ಹೋಗಿವೆ. ಕೊನೆಯ ಓಲೆ ೯೦ ನೆಯದು. ಅಂತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಾಡಿನ ರೂಪದಲ್ಲಿರುವಂತಿದೆ. ಪ್ರತಿಯೊಂದು ನುಡಿಯೂ "ಶ್ರೀ ಜಾನಕಿ ವಲ್ಲಭಾ" ಎಂದು ಮುಗಿಯುತ್ತದೆ. ಗ್ರಂಥದಾದಿಯಲ್ಲಿ ವಿಷ್ಣು, ಶಿವ, ಸರಸ್ವತಿ, ಗಣೇಶ, ಇವರ ಸ್ತುತಿಯಿದೆ. ಪಾಂಡವರ ಕತೆ ಇದರಲ್ಲಿ ಉಕ್ತವಾಗಿದೆ. ಈ ಗ್ರಂಥದಲ್ಲಿ ೫ ಸಂಧಿಗಳು-೫೭೧ ಪದಗಳು ಇವೆಯೆಂದು ಕವಿಚರಿತ್ರಕಾರರು (ಕವಿಚರಿತ್ರೆ ೩ ನೆಯ ಸಂಪುಟದಲ್ಲಿ) ಬರೆದಿದ್ದಾರೆ. ಕವಿಯಾರೆಂಬುದು ತಿಳಿಯುವುದಿಲ್ಲ.

No. 1284. ಪುರಂದರದಾಸರ ಕೀರ್ತನೆಗಳು by ಪುರಂದರದಾಸ.

PURANDARADĀSARA KĪRTANEGUḶU by Purandaradāsa

Stdstance, palm leaf. Size, 14½ × 1 inches. Pages, 90. Lines, 5 on a page Extent, 720 gsanthas. Character, granthas. Condition, good. Appearance new. Mode of writing, good.

Incomplete.

Contains devotional and philosophical songs ending with "Purandara Vithala" printed in praise of 'Vitthala', God Viṣṇu. This work has been

ಯೇನು ಭಾಗ್ಯವಮಾಡಿದಾಳೋ ಯಮ್ಮ ಯಶೋದೆ ।
ಶ್ರೀನಿಧಿಯಾ ಕೃಷ್ಣನ ಪಡೆದು ಮುದ್ದಿಸುವಳಂತೆ ॥
ಗಂಗಾ ಜನಕನಿಗೆ ಗಡಿಕ(ಗೆ) ನೀರೆರೆವಳಂತೆ ।
ಮಂಗಳಾಂಗಗೆ ತಾನೇನೋ ಶೃಂಗರಿಸುವಳಂತೆ ॥ (೧)

ತುಂಗ ಭೂಧರ ಧರನಾ ತೊಟ್ಟಿಲೊಳಿಕ್ಕುವಳಂತೆ ।
ಕಂಗಳಿಗಗೋಚರನಾ ಕರದಪ್ಪಿ ಕೊಂಬಳಂತೆ ॥
ಚತುರಾನನ ಪಿತನ ಸುತನೆಂದೆಣಿಸುವಳಂತೆ
ಪೃಥಿವೀ ಹಡೆದವನ ಪಾಡುವಳಂತೆ ॥
ಶತಕೋಟಿರವಿ ತೇಜನಿಗೆ ಆರತಿಯ ಯೆತ್ತುವಳಂತೆ ।
ಗತಭೀತಿಯಿಲ್ಲದವಗೆ (?) ಗುಮ್ಮನ ತೋರಿಸುವಳಂತೆ ॥

*   *   *   *   *   *

ಇವನ ಹಿಡಿದು ಕೊಂಡು ಹೋಗು ಜೋಗಿ ।
ನರಹರಿಯ ಹಿಡಿದು ಕೊಂಡು ಹೋಗು ಜೋಗಿ ॥

ಹರಿ ನಮ್ಮ ಮಾತ ಕೇಳನೆ ಬಾಲ ಬಹುಭಂಡ ॥ ಪಲ್ಲ ॥
ಹರಿ ಕುಣಿದು ಕುಣಿದು ಪುಟ್ಟನೀ ಜೀವಿ ।
ಏದರೆ ಬೆನ್ನವಂದು ಕಟ್ಟಿದ । ಕಲ್ಲು ಬೆನ್ನ
ತಾಕೆ ಹರಿ ಮೈ ದೊಳೆಯುಲಿ । ಗಂಡಣಿದೊಳಗೆ
ದಾಬ್ಯಾಡ ಬಂಧರೆ ತುಟ್ಟಿ ಬೀರಿದಾನ ॥ (೧)

*   *   *   *   *

ಯಮ ತನ್ನ ಪುರವ ಸಾರಿದನು । ನಮ್ಮ ।
ಕಮಲ ನಾಭನ ದಾಸರ ಮುಟ್ಟದಿರೆಂದು ॥
ಭುಜದೊಲೊಪ್ಪುವ ಶಂಖ ಚಕ್ರ ಮುದ್ರಾಂಕಿತ ।
ನಿಜದ್ವಾದಶ ನಾಮ ಧರಿಸಿಪ್ಪರು ॥
ತ್ರಿಜಗ ಪಾವನ ತೊಳಸಿಯ ದಳ ಸಿರವೊಪ್ಪೆ ।
ಸುಜನರಾಗಳ ಕೆಣಕದೆ ಬನ್ನಿರೋಯೆಂದು ॥ (೧)

ತಾಳಮದ್ದಳೆ ಶಂಖದಾಯಾಸ ಮೇಳವು ।
ಊಳಿಗವು ಮಾಳ್ಪ ಹರಿದಾಸರ ॥
ಕೇಳುತಲಿ ಕರವೆತ್ತಿ ಮುಗಿದು ಯಮ ।
ನಾಳುಗಳಿಂದು ಹೇಳದೆ ಬನ್ನಿರೋಯೆಂದು ॥ (೨)

ಸಾಮವೇದವನೋದಿ ಭೂಮಿಯ ಜನರನು ।
ಪಾವನವು ಮಾಟ್ಪ ಹರಿದಾಸರ ।
ಶ್ರೀವರ ಕಿಂಕರರೆಂದು ದೂರದಿ ನಿಂದು ।
ಭಾವಶುದ್ಧಿಯಲಿ ವಂದಿಸಿ ಬನ್ನಿರೋಯೆಂದು ॥ (೩)

ಮಾತಾಪಿತೃಗಳ ದುರ್ಮತಿಯಿಂದ ನುಡಿವರ ।
ಘಾತಕರನು ಪರದ್ರೋಹಿಗಳ ॥
ಪಾತಕರನು ಹಿಡಿದೆಳತಂದು ಪಂಚಮಹಾ- ।
ಪಾತಕದಲ್ಲಿ ಕೂಡಿಸಿ ಕೊಳ್ಳಿರೋ ಯೆಂದು ॥

* * * *

ಸುಳಾದಿ ॥ ರಾಗ—ಗುಂಡಕ್ರಿಯಾ—ಆದಿತಾಳ ॥

ಬೆಳಗಪ್ಪ ಜಾಮದಲ್ಲಿ । ತಿಳಿನಿದ್ರೆ ಕಂಗಳ ತೆರವುತಾಗಾ
ಉಮೆನುತಾ ಐಯ್ಯಾ ॥ ಬೆಳ ॥

ಬೆಳಕ ನೋಡುವ ಹೊನ್ನ ಕಿರುಗೆಜ್ಜೆ ಕಡಗ ।
ಘಲ ಘಲಕನೆ ತೊಟ್ಟಿಲ ನೋವುತಾ ಐಯ್ಯಾ ॥
ಹುಲಿಯುಗುರರಳೆಲೆ ಕೊರಳ ಪದಕ ತೋಳ ।
ಬಳೆವುಡಿದಾರ ಮುಂಗಯ್ಯ ಮುರಾರೇ ॥
ಥಳ ಥಳಸುವ ಮೈ ಮುರಿದು ಕೊಳುತ ಕೈ ।
ಗಳ ನೊಲೆವುತ ತುಂಬಿ ಮೊ[ಖ](ದ)ವ ಕೃಷ್ಣ ಐಯ್ಯಾ ॥

* * * *

ನಾನ್ಯಾಕೆ ಪರದೇಶಿ ನಾನ್ಯಾಕೆ ಬಡವನು । ಯನ್ನ ।
ಮಾನಾಪಮಾನಕೆ ವಿಠಲ ತಾನಿರಲಾಗಿ ॥ ನಾನ್ಯಾಕೆ ॥
ಮೂರು ಲೋಕಕೆ ಅರಸು ಶ್ರೀ ಹರಿಯೆನ್ನ ತಂದೆ ।
ನೀರವ ಮುಖಿ ಲಕುಮಿ ಯೆನ್ನತಾಯಿ ॥
ಮೂರು ಅವತಾರದಾ ಹನುಮಂತ ಯೆನ್ನ ಗುರು ವಿಷ್ಣುಭಕ್ತ ।
ಜನರೆಲ್ಲ ಬಂಧು ಬಳಗ ಯಿರಲಾಗಿ ॥ (೧)

ಇಪ್ಪತ್ತು ನಾಲ್ಕು ಅಕ್ಷರವೆಂಬೊ ಹಳೆನಾಣ್ಯ ।
ಒಪ್ಪದಿಂದಲಿ ಕೂಳತು ಉಣಲಿ ಬಹುದು ॥
ತಪ್ಪದೆ ಜ್ಞಾನ ವೈರಾಗ್ಯ ನವರತ್ನವು ।
ಮುಪ್ಪಿಲ್ಲದಾ ಭಾಗ್ಯಯೆನ್ನತಲಿರಲಾಗಿ ॥
ಎನ್ನ ಹಳವನೆ ಶ್ರೀನಿವಾಸನ ಹಳವಾ ।
ತನ್ನ ಸಲಹಿದವನೆನ್ನ ಹಳದವ ನೆಂಬೋ ।
ಪನ್ನಗ ಶಯನ ಶ್ರೀ ಪುರಂದರ ವಿಠಲಾ ।
ಚೆನ್ನಾಗಿ ರಾಮ ಕೃಷ್ಣಾ ಯೆನ್ನಲ್ಲಿಯಿರಲಾಗಿ ॥

* * * *

End :

॥ ಕಾಂಬೋದಿ ॥

ಸೋಹಮೆನ ಬ್ಯಾಡಲೋ । ದಾಸೋಹಮೆಂದು ಹೇಳಲೋ ।
ಸೋಹಮೆಂಬೋ ಮೋಹದಿಂದ ಬೇಗ ಹೋದ ಹಿರಣ್ಯ ದಾ—॥
ಸೋಹಮೆಂಬೋ ಪ್ರಹ್ಲಾದ ದೇಹ ನಿತ್ಯ ಮುಕ್ತನಾದ ॥

ನಾನೆ ದೈವವೆಂಬೊ ಮಾಲಿ ಸುಮಾಲಿ ರಾವಣ ದುಷ್ಟರು ।
ದಾನವಾರಿಯು ಹರಿಯು ಬಾಣದಿ ಮಾನ ಪ್ರಾಣವ ಬಿಟ್ಟರು ।
ಜಾನಕೀಪತಿ ದಾಸನೆಂಬ ವಿಭೀಷಣನ ಸ್ಥಿತಿ ನೋಡು ನಿ—।
ಜಾನು ವಂಶಜ ದೀನ ಪೋಷಣ ರಾಮನಾವುವ [ಮಾ](ಪಾ)ಡುನೀ ॥

ಶಿವನೆ ನಾನುಯೆಂದು ಜಲಂಧರ ಭುವನ ಮಾತ್ರಗೆ ಮುಂದು ನಿಂದ ।
ಅವನ ಹೆಂಡತಿ ಮಾನಕೆಡಿಸಿಕೊಂಡೆಮನ ಲೋಕವ ಹೊಂದಿದ ॥
ಧ್ರುವನು ತಂದೆ ತಾಯುಬಿಟ್ಟು ರಾಘವನ ಚರಣವ ಭಜಿಸಿ ಮಾ ।
ಧವನ ಕೈಯ್ಯಲಿರುವ ಸೂತ್ರವ ಪಡೆದು ಸುಖಿಯಾದನರಿಯಾ ॥

ವಾಸುದೇವ ನಾನೆಂದ ಪೌಂಡ್ರಕ ನಾಶವಾದನು ನಿಂದಕ ।
ದೋಷದಿಂದಲಿ ದಾಸನಾಗದ ಅಸುರಾರಿಗೆ ಅಂತಕ ॥
ಭೂಸುರ ಪ್ರಿಯ ವಾಸುದೇವನ ದಾಸದಾಸರ ಪೋಷಕ ।
ಆಸೆಯಿಂದಲಿ ಭಜಿಸೊ ಶ್ರೀನಿವಾಸ ಪುರಂದರ ವಿಠಲನ ॥

ಮುಖಾರಿ ॥

ಹರಿಯುಧಿಕ ಹರನಧಿಕಯೆಂದು ಹೊಡೆದಾಡದಿರು ।
ಹರಿಹರನ ಭಕ್ತರಲ್ಲವೆ ಸಾಕ್ಷಿ ನಿಮಗೆ ॥ ಹರಿಯುಧಿಕ ॥

ಹರಿಯು ಬಾಗಿಲ ಕಾಯ್ದ ಬಲಿಭಾಗ್ಯ ವಂತನಾದ ।
ಹರನು ಬಾಗಿಲ ಕಾಯ್ದ ಬಾಣನಳಿದಾ ॥
ಹರಿವೊಲಿದ ಪ್ರಹ್ಲಾದ ಬಂದ ದುರಿತವ ಗೆಲಿದ ।
ಹರವೊಲಿದ ಅವನಪಿತ ಹತವಾದನರಿಯೊ ॥

ಹರವರವ ಪಡೆದು ಭಸ್ಮಾಸುರನು ಬೆನ್ನಟ್ಟೆ ।
ಹರನ ಶಿರದಲ್ಲಿ ಕರವಿಡಲು ಬರಲು ॥
ಹರಿನೀನೆ ಗತಿಯೆಂದು ತ್ರಿಪುರಾರಿ ಮೊರೆಯಿಡಲು ।
ಕರಿವರದ ಪುರಂದರ ವಿಠಲ ಕಾಯ್ದನರಿಯೊ ! ॥

ವಿ.ವಿ.—

ಅಸಮಗ್ರ. "ಪುರಂದರ ವಿಠಲ" ಯೆಂದು ಅಂತ್ಯವಾಗುವ ಕೀರ್ತನೆಗಳಾಗಿವೆ ಎಲ್ಲ ಕೀರ್ತನೆಗಳೂ ವೈರಾಗ್ಯದ ಅಥವಾ ವಿಷ್ಣು ಭಕ್ತಿಯ ಪೋಷಕಗಳಾಗಿವೆ. ಅನೇಕ ರಾಗಗಳು ಕಾಣಬರುತ್ತವೆ. ಅಪೂರ್ವವಾದ ಕೀರ್ತನೆಗಳು ಕೆಲವನ್ನೊಳಗೊಂಡಿದೆ.

No. 1285. ಪ್ರಭುನಟನತಾರಾವಳಿ by ಮರಿರಾಚವಟ್ಟೀಶ.

PRABHUNAṬANATĀRĀVAḶI BY MARIRĀCAVAṬṬĪŚA.

Substance, palmleaf. Size 9-5/16, × 1-5/16 inches. Pages 49 lines 5 on a page. Extent 320 Granthas. Character Kanada. Condition much injured: Appearance old. mode of writing good.

Begins on fol. 1. The other works herein are.—(1) Śivapūjāmantra (Skt.), 26 a. (2) Hāḍugaḷu 32 a. (3) Miscellaneous (Śivastuti, Vaidya, etc., in Telugu language) 35 a. Fol. 39 a contains a stanza in praise of Nandikēśvara and fol. 40 contains some Vīraśsivaviśaya.

Complete.

The subject dealt with is about Goddess Māya falling in love with Prabhudēva with whom she was very much pleased for his skill at playing drum in accopaniment to her dance. The author's date is about 1650 A.D.

Beginning :

ಪಲ್ಲವಿ.—

ಎಂತು ನುತಿಪೆ ನಿನ್ನ ಯತಿಗಳ ತಲತನ್ನ ।
ಕಂತು ವಿಜಯ ಜಯ ಪ್ರಭು ಕಾಯ ನಿರ್ವಾಣ್ಯ ॥

ಪದಗಳು.—

ಶಾಂತ ನಿರಂಜನ ಶೂನ್ಯ ನಿಷ್ಕಲ ಪರತರಸು ಮಹಾಲಿಂಗ ಶಿವ ಸದಾಶಿವ ನಾದ ।
ಪರಿಪೂರ್ಣ ಬ್ರಹ್ಮವೇ ಪಂಚಲಾ . . ನಿದಿಂದ ಪೊಪ್ಪುತ್ತಿರಲ್ಲಿಗೆ ಮಾಯಾ ಕೋಲಾಹಳ ॥
ಬಿರುದಾಂಕನಾಗಿರ್ದ ಅಲ್ಲಮ ಪ್ರಭು ಬಾ . . . ಗಿರಿಸುತೆಯರಸನ ಓಲಗದೊಳಗಿರ್ದ ।
ಕರಿಮುಖ ಶಾರ್ದೂಲ ಮುಖ ಘೋರ ಮುಖದಿಂದೆ ನರಮುಖ ಶಾರ್ದೂಲ ವೃಷಭ ಲಾ . . ನರಿಂದೆ ॥
ಸಾರಶರಣ ಮಂದಾರ ಭದಕ ಭವದೂರ ಕರುಣಾ

*   *   *   *   *

ವೀರ ಶೈವಾಚಾರ ವಿಷಮ ಸಂಸಾರ ವಿಜಯ ವಿಭವ ।
ಭಾರರಹಿತ ಜಿತಕ್ರೂರ ಸಮಯ ವಿಸ್ತಾರ ಕೃಪಾರಸ
ವಾರ ಭರಿತ ಪ್ರಭುವೇ ನಿಮ್ಮ ಚಾರು ಚರಣಕ್ಕೆ ಪ್ರಸನ್ನ ದೇಶಿಕನಕು ।
ಮಾರನೆಂದೆನಿಸುವ ಪುರಿಜಚಪಟ್ಟೇಶ ನೀರಮ್ಯ ಕುಸುಮವನು ಅರ್ಪಿಸಿದ ನೀ ।
ಧಾರಿಣಿಯೊಳಗಾವನು ಪರಮೋದ್ಧಾರ ಶಿಷ್ಯ ಪ್ರಭುದೇವನು ನಟಿಸಿದ ಕೃಂ ।
ಗಾರನುತಿಯ ನಿದನು ಪಠಿಸಿಪ್ರೊ . . . ಭಕ್ತಿತಾನುವಪ್ಪ
. . . . ದಗಳಾಗುವವೆಂದೆ ನಾನು ॥ (೧೭)

ಕಂ ॥

ಗುರುಣಿಯ ಬಸವೇಶಂ [ಗುರು] ಪ್ರಭು ।
(ಗುರು) ನುತಿಯಂ ಪೂಟ್ಟಿದೆಂದು ಕರೆದೆನಗಱಿಪಲ್ ॥
ವಿರಚಿಸಿದೆಂ ಪ್ರಭು ನಟನಾ ।
ಪರಶಾರಾವಳಿಯ ನಿಳೆಗೆ ತಿಳವಪ್ಪೊಲುರೆನಾಂ ॥

ಸಾರತರ ಪ್ರಭುನಟನಾ ।
ತಾರಾವಳಿಯಿದು ಸಮಸ್ತ ಭಕ್ತ ಮಹೇಶರ್ ॥
ಆರೈದು ಪಠಿಸಿ ನುತಿಸಲ್ ।
ಮೀರಯುದ . . . ಇಷ್ಟಸಿದ್ಧಿ ವೃದ್ಧಿಗಳಕ್ಕುಂ ॥

Colophon—

. . . . ನಿರೂಪಿಸಿದ ಪ್ರಭುತಾರಾ ಸ್ವಾಮಿಯ ನಟನ ತಾರಾವಳಿ ಸಂಪೂರ್ಣಂ.

ವಿ.ವಿ.—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಶಿವಪೂಜಾ ಮಂತ್ರ (ಸಂಸ್ಕೃತ), ಮಿಶ್ರ ವಿಷಯ (ಶಿವಸ್ತುತಿ ವೈದ್ಯ ಮುಂತಾಗಿ ತೆಲುಗು ಭಾಷೆಯಲ್ಲಿ) ಗಳಿವೆ.

ಇದರಲ್ಲಿ ೨೭ ಪದ (ನುಡಿ)ಗಳಿವೆ. ಕೊನೆಯಲ್ಲಿ ೨ ಕಂದ ಪದ್ಯಗಳಿವೆ. ಕವಿ ಪ್ರಸನ್ನ ದೇಶಿಕ ಕುಮಾರ ಮರಿರಾಚವಟ್ಟೀಶನು. ಪ್ರಭು ಗುರು ಮತಿಯನ್ನು ಮಾಡೆಂದು ಗರಣಿಯ ಬಸವೇಶನು ಹೇಳಲಾಗಿ ಈ ಗ್ರಂಥವನ್ನು ಬರೆದಂತೆ ಕವಿ ಹೇಳುತ್ತಾನೆ. ಕವಿಯ ವಿಷಯವಾಗಿ ಕವಿ ಚರಿತ್ರೆಯಲ್ಲಿ "ಸಿದ್ಧ ನಂಜೇಶನು (ಸು. 1650) ರಾಚವಟ್ಟ ಯಾರಾಧ್ಯನೆಂಬ ಒಬ್ಬ ಕವಿಯ ಕೃಪೆಯಿಂದ ತನ್ನ ರಾಘವಾಂಕ ಚಾರಿತ್ರವು ಪೂರ್ತಿಯಾಯಿತು ಎಂದು ಹೇಳುತ್ತಾನೆ. * * ಇವನ ಕಾಲವು ಸುಮಾರು 1650 ಆಗಿರಬಹುದೆಂದು ಊಹಿಸುತ್ತೇವೆ" ಎಂದಿದೆ.

ಪ್ರಭು ದೇವನು ಬನವಸೆಯ ಮಧುಕೇಶ್ವರನ ಮುಂದೆ ಮದ್ದಳೆ ಬಾರಿಸಿ ನರ್ತಿಸಿದುದನ್ನು ತಿಳಿದು ಮಾಯೆಯು ಅವನನ್ನು ಕರೆಯಿಸಿ ಕೊಂಡು, ತನ್ನ ನರ್ತನಕ್ಕೆ ಅವನು ಸರಿಯಾಗಿ ಮದ್ದಳೆ ಬಾರಿಸಿದುದನ್ನು ನೋಡಿ ಮೋಹಿತಳಾದಳು ಎಂಬುದು ಇದರಲ್ಲಿ ಉಕ್ತವಾಗಿದೆ.

No. 1286. ಪ್ರಭುನಟನ ತಾರಾವಳಿ by ಮರಿರಾಚವಟ್ಟೀಶ.

PRABHUNATANA TĀRĀVAḶI by MARIRĀCAVATTĪŚA.

Substance, paper Size, $10\frac{1}{2} \times 9\frac{1}{2}$ inches. Pages, 19. Lines, 20 on a page. Extent, 315 granthas. Character, Kannada. Condition, good Appearance, new.

Restored in 1919–20 from the Ms. described above.

Begins on page 1. The other works herein are—(1) Śivapūjā Mantra (Skt.) 19. (2) Hāḍugaḷu. 21. (3) Miscellaneous—Śivastutī, Vaidya, etc. (in Telugu language).

Complete.

ವಿ.ವಿ.—

ಸಮಗ್ರ. ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪುತ್ರಿಕೆಯಾಗಿದೆ. ಇದರೊಡನೆ ಶಿವಪೂಜಾ ಮಂತ್ರ, (ಸಂಸ್ಕೃತ) ಮಿಶ್ರ ವಿಷಯ ಶಿವಸ್ತುತಿ, ವೈದ್ಯ ಮುಂತಾದುವು (ತೆಲುಗು ಭಾಷೆಯಲ್ಲಿ) ಇವೆ.

No. 1287. ಭರತ ಶಾಸ್ತ್ರ.

BHARATA ŚĀSTRA.

Substance, palm-leaf. Size, 6¾ × 1 inches. Pages, 68. Lines, 4 on a Page Extent, 240 granthas. Character, Kannada. Condition, much injured. Appearance, old. Mode of writing, not bad.

Incomplete.

Contains the original Sanskrit verses on the principles of Rāga, Tāla etc., with Kannada meaning.

Foll. 7-*b*, 8-*b*, 14-*b* and 29-*b* are left blank.

Beginning—

ಶ್ಲೋ॥ ನಾದ ಬಿಂದು ಕಳಾತೀತಂ ಶಿವಶಕ್ತಿ . . . . . ।
ಆಧಾರಂ ನಾದಬಿಂದುಶ್ಚ ವಿತೇ ಗಾನ ಸುಲಕ್ಷಣ ॥

ಟೀಕೆ॥ ನಾದ ವಿದ್ಯಕೆ ನಾದ ಬಿಂದುಗಳ ದಶ ಕಟ್ಟಳೆಯನರಿಯಬೇಕು. ಶಿವ ಶಕ್ತಿಯೆಂಬೆರಡೀಗವೆ ಆಧಾರವೆಂದು ಹೇಳಲ್ಪಟ್ಟಿದು.

* * * * *

ಭರತ ಶಾಸ್ತ್ರ—ಸಂಗೀತದ ಸ್ವರಲಕ್ಷಣ.

ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದ ಸಪ್ತ ಸ್ವರಗಳು, ಪ್ರಥಮದಲ್ಲಿ ಶುದ್ಧ, ಮಿಶ್ರ, ಸಂಕೀರ್ಣ, ಮಿಶ್ರ ಎಂಬ ನಾಲ್ಕುವಿಧ. ಪ್ರಥಮದಲ್ಲಿ ಶುದ್ಧ ಕುಂತೆನೆ—

ನಿರಾಲಂಬದಿಂದ ಓಂಕಾರ ಅಂಗವಾದಲ್ಲಿ ಪ್ರಥಮ ನಾಭೀ ಹೃದಯ ಕಂಠ ತ್ರಿಸ್ಥಾನದೆ ಮಂದ್ರ, ಮಧ್ಯ, ತಾರ ಎಂಬ ತ್ರಿಸ್ವರಂಗಳು ಹುಟ್ಟಿದುವು. ಮಂದ್ರಕ್ಕೆ ಸಾಗರ ಧ್ವನಿ, ಮಧ್ಯಕ್ಕೆ ಹರಿಣ ಧ್ವನಿ, ತಾರಕ್ಕೆ ಚಕೋರ ಧ್ವನಿ.

End—

ಮುದ್ರಿಕೆ ತಾಳದ ಕಳಸ.

ಜೆಂತಕ ಜೆಕಿಟ ಜೆಕತರಿ ತಕಿಟ ಕುದುದಃ ಕುದುದಃ ಜತತರಿತಾ ತಕ್ಕುದಿಕ್ಕುತಾ ದಿಕ್ಕು ತಕ್ಕುತಾ ದಿಕ್ಕಿಟ ತಕಿಟ ದಿತಕಿಟತಾ ತಕ್ಕಿಟ ಜೆಂಕಿಟ ತತಕಿಟ ಜೆಕಿಟ ತತತೊ ತದುಗಿಣತೊಂ ॥

ಶ್ರೀ—

ಸ್ವ.ವಿ—

ಇದರಲ್ಲಿ ಗಾನಲಕ್ಷಣ, ಸಂಗೀತದ ಸ್ವರಲಕ್ಷಣ, ರಾಗ ವಿಷಯ, ತಾಳ ವಿಷಯ ಮುಂತಾದುವು ಉಕ್ತವಾಗಿವೆ. ಸಂಸ್ಕೃತ ಮೂಲ ಶ್ಲೋಕಗಳನ್ನು ಬರೆದು ಅವಕ್ಕೆ ಟೀಕೆಯನ್ನು ಬರೆದಿದೆ. ಅತ್ಯಂತ ಶಿಥಿಲವಾದ ಪ್ರತಿ. ಒಟ್ಟು ಓಲೆಗಳು ೩೪. ೭, ೮, ೧೪ ಮತ್ತು ೨೯ ನೆಯ ಓಲೆಗಳ ಒಂದೇ ಪುಟದಲ್ಲಿ ಬರೆದಿದೆ. ಲಿಪಿ ಸಾಮಾನ್ಯವಾಗಿದೆ. ಬರೆದವರಾರೆಂಬುದು ಗೊತ್ತಾಗುವುದಿಲ್ಲ.

No. 1288. ಭಾಗವಂತಿಕೆ ಹಾಡು.

BHĀGAVANTIKE HĀḌU.

Substance, palm-leaf. Size, 10-1/16 × 1-1/8 inches. Pages, 28. Lines, 4–5 on a page. Extent, 200 granthas. Character, Kannada. Condition, very much injured. Appearance, old. Mode of writing, good.

Begins on fol. 1-a. The other work herein is—Ratnākaraṇṇagaḷa padajāti, 16-a.

Fol. 9-*a* and 15-*b* are left blank.

Complete.

Songs written in praise of the Tīrthankaras found in the Jain temple at Bidire. The name of the author is not known.

Beginning—

ಚೀನಾಂಬರ ಚಂದ್ರಿಕೆಗಳ . . . . . ಟ್ಟು । ಕಸ್ತೂರಿಯು ತಿಲಕದಿಂದ
ಕಟ್ಟಾಣಿ ಮುತ್ತಿನ ಕಂಠಸರವ ನೀಕೆಯಿಟ್ಟೊಡೆ . . . . . ಲೆಯುರಾಡಿದ
ರೋಕುಳಯು ॥ (೧)

ಮಲಯಜ ಕುಂಕುಮ ಕರ್ಪೂರ ಪನ್ನೀರ ।
ನಲವಿಂದ ಹೊನ್ನ ಕೊಪ್ಪರಿಗೆಯಲ್ಲಿ ॥
ಸುಲಲಿತ ಗೋರೋಚನಾದಿಗಳನು ತಿದ್ದಿ ।
ಜಲಜ ಮುಖಿಯರಾಡಿದರೋಕುಳಯು ॥ (೨)

ಹಸ್ತಿನಿ ಚಿತ್ರಿಣಿ ಶಂಕಿನಿ ಪದ್ಮಿನಿ ।
ವಿಸ್ತರವೆಸೆವ ಮಂಟಪದಲ್ಲಿ ॥
ವಿಸ್ತರವಹ ಚೀಗೋರ್ಳವೆಗಳೆಸೆವೃತ ।
(ವೃತ್ತ) ಕುಚೆಯು ರಾಡಿದರೋಕುಳಯು ॥ (೪)

ಇಳೆಗತಿಶಯು ವೆನಿಸುವ ಕನಕಾದ್ರಿಯು ।
ನಳನ ಪೀಠಾಗ್ರದೊ [ಳಗ](ಳು) ನೆಲಸಿ ॥
ಥಳಥಳಸುತಲಿಹ ವಿಜಯು ನಾಥನ ಮುಂದೆ ।
ಜಲಜಮುಖಿಯರಾಡಿದ ರೋಕುಳಯು ॥ (೫)

* * * *

(ಓಲೆ, ೭)

ಪಲ್ಲವಿ—

ನೆನಹಿರೆ ಮನಸಿಜನನು ಗೆಲಿದಾ ।
ಕನಕಗಿರಿಯು ಶ್ರೀ ಜಿನಪತಿಯು ॥

ಚರಣಗಳು—

ಉರಗೇಂದ್ರಾರ್ಚಿತ ಪದ(ಯು) ಗನಾ ।
ಸುರಲೋಕ . . . ತವ ಕೊಡುತಿಹನ ॥
ಪರಮದಯಾಕರನೆನಿಸಿದನ ।
ಪರಪರವಸ್ತು ತಾನಾಗಿಹನ ॥ (೧)

ಗತಿನಾಲ್ಕನು ಗೆಲಿದತಿ ಬಳನ ।
ಯತಿ ಜನಗ . . . ರ ಯೊಳ .
. ತ . ಪತಿ ನುತನೆಂದೆನ್ನಿಸಿದನ ।
ಶತಪತ್ರ ಪೀಠದೊಳ್ ನೆಲಸಿಹನ ॥ (೨)

ಭೂಮಿ ಕಾಮಿನಿಯು . . . ಭವನ ।
ನಾ . . . ಸಾಸಿರವನು ಪಡೆಗವನ ।
ಈ ಮಹಿಗತಿಶಯನೆನಿಸಿಹನ ।
ಪ್ರೇಮಗಿರಿಯು ಪಾರ್ಶ್ವ ಜಿನನ ॥ (೩)

End—

ಪಲ್ಲವಿ—

ತೋಳು ತೋಳು ಜಿನೇಂದ್ರನೆ ತೋಳನಾಡ್ಯೈ ।
ತೋಳನಾಡ್ಯೈ ಚಂದ್ರ ಪ್ರಭಜಿನ ತೋಳನಾಡ್ಯೈ ।

ಚರಣಗಳು—

ಹುಟ್ಟದ ಮೊದಲಿಂದ್ರನ ಯೊಱಗಿಸುವನೆ ತೋಳನಾಡ್ಯೈ ।
ಹೊಟ್ಟೆಯುಲಿರ್ದೆಲ್ಲವ ನಱಿದವನೆ ತೋಳನಾಡ್ಯೈ ॥
ಹುಟ್ಟಲೊಡನೆ ಪೊಂಬೆಟ್ಟಕೆ ಸಂದನೆ ತೋಳನಾಡ್ಯೈ ।
ಸೃಷ್ಟಿಗೆ ಯಿಂದ್ರನ ಮುಟ್ಟದ ಮೋಹನ ತೋಳನಾಡ್ಯೈ ॥ (೧)

ಇಂದ್ರನ ಸಾಸಿರ ಕಂಗಳ ಮಂಗಲ ತೋಳನಾಡ್ಯೈ ।
ಇಂದ್ರಸಾನಂದ ದೊಳೆಱಗಿದವನೆ ತೋಳನಾಡ್ಯೈ ॥
ಇಂದ್ರನ ಭಕ್ತಿಯ ಕುಂದದ ಕಂದನೆ ತೋಳನಾಡ್ಯೈ ।
ಇಂದ್ರನೊಡೆಯ ಹೂಲೋಕದ ತಂದೆ ತೋಳನಾಡ್ಯೈ ॥ (೨)

ಹೂಸರ ಪರಿಮ[ಲ](ಳ) ದಿಂದೊಪ್ಪುವನೆ ತೋಳನಾಡ್ಯೈ ।
ಎಸೆದ ಮಱತೆಯಿಲ್ಲದೆ ಸಲೆ ಚೆಲುವನೆ ತೋಳನಾಡ್ಯೈ ॥
ಹಾಸದೆ ತಳತಳಸುವ ಮೆಯ್ಯವನೆ ತೋಳನಾಡ್ಯೈ ।
ಸೂಸುವ ಲಾವಣ್ಯದ ನಡುಗಡಲೆ ತೋಳನಾಡ್ಯೈ । (೩)

ಸ್ವರ್ಗ ದಿವ್ಯಾಂಬರವುಡುವನೆ ತೋಳನಾಡ್ಯೈ ।
ಸ್ವರ್ಗದ ದಿವ್ಯಾಭರಣವ ತೊಡುವನೆ ತೋಳನಾಡ್ಯೈ ।
ಸ್ವರ್ಗದ ಬಾಲಕರೊಡನಾಡುವನೆ ತೋಳನಾಡ್ಯೈ ।
ಸ್ವರ್ಗದ ದಿವ್ಯಸುಖವನುಂಬುವನೆ ತೋಳನಾಡ್ಯೈ ॥ (೪)

ಚದುರರ ಹೃದಯು ದೊಳೊದವಿದ ಮದವೆ ತೋಳನಾಡೈ ।
ಬೆದರದೆ ಕಾಮನ ಮುರಿದಿಕ್ಕಿದನೆ ತೋಳನಾಡೈ ।
ಅದಿರದೆ ಮೋಹರಿಯು ಮರ್ದಿ(ಸಿದ)ನೆ ತೋಳನಾಡೈ ।
ಚದುರ ಯು . . ರ ಚಿಂತಾಮಣಿಯೆ ತೋಳನಾಡೈ ॥ (೫)

॥ ರಗಳೆ ॥

ಜಯ ಜಯ ಸುರನರ ಫಣಿಪತಿ ಪೂಜ ॥
ಜಯ ಜಯ ಕೋಟಿ ಚಂದ್ರ ದಿವ್ಯ ತೇಜ ॥

ಜಯ ಜಯ ಪರಮ ಪರಂಜ್ಯೋತಿ ರೂಪ ।
ಜಯ ಜಯ ಘಾತಿ ಕರ್ಮಂಗಳ ಲೋಪ ॥

ಜಯ ಜಯ ರುಜಾ ಜನನಾದಿ ವಿದೂರ ।
ಜಯ ಜಯ ಮದನನ ಗೆಲಿದತಿ ಧೀರ ॥

ಜಯ ಜಯ ಜಿನಶಾಸ್ತ್ರಾಂಬುಧಿ ಚಂದ್ರ ।
ಜಯ ಜಯ ಸುಜ್ಞಾನಾಂಗ ಸುಸಾಂದ್ರ ॥

ಜಯ ಜಯ ಸನ್ಮಾರ್ಗ ತನುಪ್ರಕಾಶ ।
ಜಯ ಜಯ ದುರ್ಮಾರ್ಗ . . ನು ವಿನಾಶ ॥

ಜಯ ಜಯ ಮುನಿಜನ ನಮಿತಾಬ್ಜ ಪಾದ ।
ಜಯ ಜಯ ಸರ್ವ[ರ] ನಯನಾಹ್ಲಾದ ॥

ಜಯ ಜಯ ದಶಗುಣೋರ್ಜಿತ ದಿವ್ಯಗಾತ್ರ ।
ಜಯ ಜಯ ಭವಸಾಗರ ಸುಭೈತ್ರ ॥

ಜಯ ಜಯ ರಾಗದ್ವೇಷ ಖ ಭಷ್ಟ್ಯ ।
ಜಯ ಜಯ ದೇವರ ದೇವಗೆ ಪೂಜ್ಯ ॥

ಜಯ ಜಯ ಭವ್ಯ ಜನಂಗಳ ಬಂಧು ।
ಜಯ ಜಯ ಸರ್ವ ಕೃಪಾಪರ ಸಿಂಧು ॥

ಜಯ ಜಯ ಜಿನ ತತ್ವಂಗಳ ಶಿಕ್ಷೆ ।
ಜಯ ಜಯ ಜೀವಂಗಳ ಸಂರಕ್ಷೆ ॥

ಜಯ ಜಯ ತ್ರೈಲೋಕತೆ ನೀನಾಥ ।
ಜಯ ಜಯ ಬಿದಿರೆಯ ಶ್ರೀ ಚಂದ್ರನಾಥ ॥

ಜಯ ಜಯ ಸದ್ಧರ್ಮ . . . ಸ್ತೇ ।
ಜಯ ಜಯ ನಮಸ್ತೆ ನಮಸ್ತೇ ॥

ಭಾಗವಂತಿಕೆ ಸಮಾಪ್ತಂ.

Colophon—

ವಿ.ವಿ.—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಇದರಲ್ಲಿ ಹೊದತಿಸ ಒಂಭತ್ತು ಓಲೆಗಳು ಮುರಿದು ಅವುಗಳ ಸಂಖ್ಯೆ ಹೋಗಿದೆ. ಅವುಗಳಲ್ಲಿ ಐದು ಓಲೆಗಳು

ಹೆಚ್ಚು ಮುರಿದಿರುವುದರಿಂದ ಕ್ರಮವಾಗಿ ಅವನ್ನು ಜೋಡಿಸುವುದು ಕಷ್ಟ ಸಾಧ್ಯವಾಗಿದೆ. ಕೆಲವು ಓಲೆಗಳು ಹೋಗಿವೆ. ಮುರಿದ ಓಲೆಗಳಲ್ಲಿ ಮೊದಲಿದ್ದ ಓಲೆಯೊಂದರ ಸ್ವಲ್ಪ ಭಾಗವನ್ನು ಈ ವಿವರಣೆಯು ಆದಿಯಲ್ಲಿ ಉದ್ಧರಿಸಿ ಬರೆಯಲಾಗಿದೆ. ಇದರೊಡನೆ "ರತ್ನಾಕರಣ್ಣಗಳ ಪದಜಾತಿ" ಹಾಡುಗಳವೆ.

ಈ ಗ್ರಂಥವು ಹಾಡುಗಳಲ್ಲಿ ಬರೆದಿದೆ. ಬಿದಿರೆಯಲ್ಲಿರುವ ಬಸದಿಯ ದೇವರುಗಳ ಸ್ತುತಿಯು (ಕೀರ್ತನೆಯು) ಇದರಲ್ಲಿ ಉಕ್ತವಾಗಿದೆ. ಹಾಡುಗಳಲ್ಲಿ ಪಲ್ಲವಿ, ಚರಣಗಳೆಂಬ ವಿಭಾಗಗಳವೆ. ಎಲ್ಲಾ ತೀರ್ಥಂಕರರ ಮೇಲೆಯೂ ಕೀರ್ತನೆಯಿದ್ದಂತೆ ಕಂಡುಬರುತ್ತದೆ. ಕವಿ ಜೈನಮತದವನು. ಹೆಸರು ಗೊತ್ತಾಗುವುದಿಲ್ಲ.

No. 1289. ರತ್ನಾಕರಣ್ಣಗಳ ಪದಜಾತಿ-

RATNĀKARAṆṆAGAḶA PADAJĀTI.

Substance, palm-leaf. Size, 10-1/6 × 1 1/8 inches. Pages, 90. Lines, 4—6 on a page. Extent, 620 granthas. Character, Kannada. Condition, very much injured. Appearance, old. Mode of writing, not good

Begins on folio 16-*a* of the manuscript described under No. 1288 ante.

Incomplete.

Folios are missing in the middle here and there.

A collection of songs written by different Jaiṇa writers bearing mostly on the principles of Jaina religion.

Beginning—

ಪಲ್ಲವಿ —

ಧೀರನೆಂದೆನ್ನಿ ತ್ರಿಭುವನ ಸಾರನೆಂದೆನ್ನಿ ।
ಆರೊಳು ಬೆರಸದ ಪರಮಾತ್ಮನ ।
ಸಾರಿಸದಾ ಸುಖಿಯಾದುತ್ತಮನ ।
ಧೀರನೆಂದೆನ್ನಿ ತ್ರಿಭುವನ ಸಾರನೆಂದೆನ್ನಿ ॥

ಚರಣಗಳು—

ಹಂಸೆ ಪಿಡಿದು ಹಾಲ ನೀರಿನ ಕಾಂಕ್ಷೆಯ ಬಿಡುವಂತೆ ।
ದಂ ಸಣ್ಣ ಚರಿತ ಮಯೋ ಎಂದು ॥
ಹಂಸನ ಪಿಡಿದಂಗವ ತೋಱಿದವನ ॥ (೧)

ಬಹು ಚಿಂತೆಗಳೆಂಬ ಹೊರಗಣ ಕಹಿಯ ನೆಲ್ಲವ ಬಿಸುಟು ।
ಅಹಮೇವ ಮೇಯೋ ಪಾಸ್ಮೋ ಯೆನ್ನುತ ।
ಸಿಹಿಯುರಿದ ಚಿತ್ಪದ ವಿಡಿದವನ ॥ (೨)

ವಾರಿಗೆ ವೈ ನಕೆ ಸೋಂಕವು ಸೋಂಕದ ಪರಬೊಮ್ಮನ ।
ಏಕೋಹಂ ನಿರ್ಮಮಂಽೋ ಎನ್ನುತ ರ ।
ತ್ನಾಕರ ಸ್ವಾಮಿಯು ಪದವಿಡಿದವನ ॥ (೩)

ಪಲ್ಲವಿ—

ನಾನೊಬ್ಬರ ಸೊಪ್ಪಲ್ಲ ನನಗೊಬ್ಬರ ಹಂಗಿಲ್ಲ ।
ನಾನೆ ನಾನಲ್ಲದೆ ಬೇಱತೇನು ನನಗಿಲ್ಲ ॥

ಚರಣಗಳು—

ಹಾಲು ಮೊಸರೊಡಗೂಡಿದ ಹಾಗೆನ್ನ ಜೀವನವು ।
ಮೇಳಯಿಸಿದ ತನು ವೆರವಿನ್ನುಳದವರೆನ್ನವರೆ ॥
ಸಾಲು ಕರ್ಮವ ಸುಡುವ ಶಕ್ತಿಯುಂಟೇ ಎನ್ನಾತ್ಮಗೆ ।
ಏಳು ಚಿತ್ರವ ತಱುಬಿ ನೋಡುವೆನೆದೆಯೊಳಗೆ ॥ (೧)

ಒಡೆಕೆಂದಾತ್ಮನ ಕಂಡು ಬಹುಕಾಲ ತೊಲಗಿದೆನು ।
ಮಡಿವುತ ಹುಟ್ಟುತ ಹಲವು ಜನ್ಮದಿ ತೊಳಲಿದೆನು ॥
ನುಡಿಗೆ ಗೋಚರವಲ್ಲದ ಪರಬೊಮ್ಮ ನಾನೆಂದು ।
ಮಿಡುಕದೆ ನನ್ನೊಳು ನಿಂದು ನೋಡುವೆನಾತ್ಮನನು ॥ (೨)

ಅಱಿಯದವರಿಗೆ ದೇವನಲ್ಲಲ್ಲಿ ಹೊರಗಿಹನು ।
ಅಱಿವುದು ಕಾಣ್ಬುದು ಸುಪ್ರಭೆ ಪ್ರಭುಸಿಕ್ಕಿ ರೂಪಾಗಿ ।
ಮೆಱೆವ ನಿರಂಜನ ಸಿದ್ಧನ ನೋಡುವೆನೆಂದರಿದಡೆ ॥ (೩)

(ಓಲೆ, ೧೭)

ಪಲ್ಲವಿ—

ಹಂಸಾ ನಿನ್ನ ನೀ ನೆಱೆ ನಂಬು ।
ನಿನ್ನ ನೀ ನೆಱೆ ನಂಬು ನಿನ್ನೊಳಗಿಹವು ಮೂಱು ।
ರತ್ನಗಳ ನಿಜದಿ ನೋಡ ತೋರ್ಪ ॥
ಸನ್ನೆಗಳ ಸವಿಗತ್ತಿಯನು ಮುಕ್ತಿ ।
ಗಿನ್ನು ಬೇರುಂಟೆ ಹೇಳ ॥

ಚರಣಗಳು—

ಜ್ಞಾನ ದರ್ಶನ ವೀರ್ಯ ಸುಖವೆ ಮೈಯ್ಯಾರವನು ।
ನೀನು ಶುದ್ಧಾತ್ಮ ಕಾಣ
ಭಾನು ಮೋಡದೊಳಡಗಿದಂತಿದೆಕೊ ಮೈಯ್ಯೊಳಗೆ ।
ನೀನಿಂತು ನೆಲಸಿ . . ರವ್ರೊ ಕ್ರೋಧಮಾನ ಮೊದಲಾದವೆರವು ವಚನ ।
ಮಾನ ಮಾನಸೇಂದ್ರಿಯವು ಪರಮ ಹಂಸ ॥ (೧)

End—

(ಓಲೆ, ೫೪)

ಆರಸಿರಿ ಯಾರ ತನು ಧನ ಪುತ್ರ ಮಿತ್ರರುಗ
ಳಾರಿಗೂ ಸ್ಥಿರವಲ್ಲ ಹೇಯ ಸಂಸಾರವಿದು ।
ಭೌರು ಶ್ರೀ ಜಿನಮತವ ನಂಬು ಜೀವನೆ ನಿನಗೆ ಮತ್ತೊಂದು ಶರಣಿಲ್ಲ ಮೈ
[ಮನುಜ]

ಸ್ತ್ರೀ(ಯ)ರು ಜೌವನ ವಿಭವ ಮಾಯೆ ಮದ ಮತ್ಸರವು ।
ಕಾಯ ನಿರ್ಮಲ ಹಂಸರೂಪು . . . . ।
ವಾಯುಗೊಡ್ಡಿದ (?) ಸೊಡರು ವಿಂಚು ಮಿಂಚಿನ ಪುಂಜ ನೀರ ಬಬ್ಬುಲಿಕೆ ಯಂತೆ ॥

ಹೇಯ ಸಂಸಾರವಿದು [ಶರೀರ] (ಕಾಯ) ತಾನಸ್ಥಿರವು ।
ಶ್ರೇಯಾಂಸಪತಿ ಶಾಂತಿ ಜಿನರ ಶ್ರೀ ಚರಣವನು ।
ಕಾಯಮನ ವಚನದಲಿ ನಂಬು ಜೀವನೆ ನಿನಗೆ ಮತ್ತೊಂದು ಶರಣಿಲ್ಲವೈ ॥ (೧)

ಗುರುರಾಜ ಮಂತ್ರಿ ಪುರ ಸೇನೆ ವಜ್ರಾಯುಧವು ।
ಹರಿವೈರಿ ಚದು . . . ವ ಐರಾವತವು ।
ಅರಸಿಯರು ರಂಬೆ ತಿಲೋತ್ತಮೆಯರು (?) ಮೊದಲಾದ ದೇವಕಾಂತೆಯರ ನಿಬಗ ॥

ಪಿರಿದುಮಾಯುಷ್ಯವಮೃತಾಹಾರ ಸುರಪತಿಗೆ !
ಹರುಷ ಚಿಂತಾರತ್ನ ಕಲ್ಪಕುಜ . . ಗ್ರದಲಿ ।
ಪರಮೇಶನೊಲುಮೆಯಾಗಿರ್ದು ಇಂದ್ರತ್ವ ಕ್ಷಣದೊಳ ವೈವ ವಾಯಿತು ॥ (?) (೨)

* * * * *

ಮಾಡುವ್ರದು ದೇವತಾರ್ಚನೆಯ ಗುರು ಸೇವೆಯನು ।
ಮಾಡುವುದು ದಾನಧರ್ಮಗಳ ನನವರತವಿಗೆ ।
ಮಾಡುವುದು ಸುವ್ರತವ ಸೆ . . ಪ ವಾಸ . . ಪನಿರ್ಯನೆ . . ॥
ಆಡುವುದು ಸತ್ಯವನು ಪರ . ದು . . ಗಳು
ಸಂಸಾರದ
. . . . . ಭವರೋಗ ವೈದ್ಯ ಬಂಕಾಪುರದ ಶಾಂತಿಜಿನೇರವಿಕೋಟಿ ತನು ತೇಜ ಚೆನ್ನಯುಚ . . . ॥ (೫)

. . . . . ಐದನೆಯ ಚಕ್ರೇಶ ಹದಿನೆಂಟು ದೋಷರಹಿತ
. . . ಯನೆ . . ಉಭೈ . . ನೆ ತೋರ್ಪ
ಆಪು . . . ನೆ ಚಿದ್ರೂಪ ಭವನಾಶ ಭಯ ದೂರ
ಸಂಗಮನ ಚಿನ್ನಪವ ಸಹ . . . . ॥ (೩)

ಆವಸಿರಿ—

ಬಂಕಾಪುರದ ಸಂಗಮ ಸೆಟ್ಟಿ ಹೇಳಿದ ಪದ.

ವಿ.ವಿ—

ಅತ್ಯಂತ ಶಿಥಿಲವಾದ ಪ್ರತಿ. ಒಟ್ಟು ಪುಟಗಳು ೯೦. ಬರಹವು ಉತ್ತಮವಲ್ಲ. ಇದ ರೊಡನೆ ಭಾಗವಂತಿಗೆ ಹಾಡು ಬರೆದಿದೆ. ಈ ಪುಸ್ತಕದಲ್ಲಿ ನಡುವೆ ಅನೇಕ ಓಲೆಗಳು ಹೋಗಿವೆ. ಕೊನೆಯ ಓಲೆ ೯೩ ನೆಯದು. ಇದರಲ್ಲಿ ಅನೇಕರು ಬರೆದಿರುವ ಹಾಡುಗಳು ಇರುವ ಹಾಗೆ ತೋರುತ್ತದೆ. ಪುಸ್ತಕದಾದಿಯಲ್ಲಿ "ರತ್ನಾಕರಣ್ಣಗಳ [ರತ್ನಾಕರ ಸ್ವಾಮಿಗಳಾದವರ ಎಂಬಥ (ಲ್ಲ ರೆದಿರಬಹುದೇ (?)] ಪದಜಾತಿ" ಎಂದಿದೆ. ಅಂತ್ಯದಲ್ಲಿ

"ಬಂಕಾಪುರದ ಸಂಗಮ ಸೆಟ್ಟಿ ಹೇಳಿದಪದ" ಎಂದಿದೆ. ಈ ಸಂಗಮ ಸೆಟ್ಟಿಯ ಪದಗಳೆಲ್ಲವೂ ಸಾರ್ಥಕ ಷಟ್ಪದಿಯಲ್ಲಿವೆ. ಇವನ್ನು ಹಾಡುಗಳೊಡನೆ ಸೇರಿಸುವುದು ಯುಕ್ತವೆನಿಸದು. ಇದರಲ್ಲಿರುವ ಹಾಡುಗಳು ಜನಮತ ತತ್ವ ಬೋಧಕಗಳಾಗಿಯೂ ಭಾವಗರ್ಭಿತಗಳಾಗಿಯೂ ಇವೆ.

No. 1290. ಲಕ್ಷ್ಮೀ ಸ್ವಯಂವರ ಶೋಭಾನ by ತಿರುಮಲಾರ್ಯ-

LAKṢMĪSVAYAMVARA ŚŌBHĀNA BY TIRUMALARYA

Sulstance, palmleaf. Size. 16⅞ × 1⅜ inches: Pages, 66. Lines, 5 on a page. Extent 660 granthas. Character Kannada. Condition, extremely injured. Appearance, old. Made of writing, nood.

Begins on fol. 1-*a*.

Compleate.

Songs of different kinds written in praise of Gunjā Narasimha Svāmi at Mūgūru (in Mysore district) in connection with "Kalyāṇōtsva". The author Tirumalārya was the minister of Cikadēvarāja. He wrote it at the instance of Vīrarājēndra of Mūgūru and dedicated it to Gunja Narasimha the favourite God of Vīrarājēndra.

Biginning—

ಲಕ್ಷ್ಮೀ ಸ್ವಯಂವರ ಸೋಬಾನೆ.

ದೇವರ . . . ತ್ರಿ ವಿಭುವಿನ ಪಟ್ಟದ ರಾಣಿ ಕಲ್ಯಾಣಿ ಹರಿವೇಣಿ . . . ಮನದನ್ನ ವರಸೂತ್ರವತಿಯ ಮನದನ್ನ ಸೇಸೆ . . . ಯನೆ ಮಾಕೇಶ । ದೇವನೆ ನಿನ್ನ ಬಲಗೊಂಬೆ ॥ . . . . . ಇಂತೆಲ್ಲ ದೇವರಿಗೆಱಗಿ ಮಿಕ್ಕನ ಗುರು । ಪಂ . . . ಒಡನೆ ಜಾವನಪ್ಪು ನಸುದೋಱಿತಿ ಮದುವೆಯ . . . . . ಹಾದೆಂದು ॥ ೧—೪.

* * * * *

ಪಲ್ಲವಿ—

ಮಂಗಳಂ ಮಂಗಳಂ ಮಾಧವನ ವಲ್ಲಭೆಗೆ ।
ಮಂಗಳಂ ಮಂಗಳಂ ಮಧು ಮಥನಿಗೆ ।
ಮಂಗಳಂ ಮಂಗಳಂ ಗುಂಜೆವಿಡಿದಿರುವ ನರ ।
ಸಿಂಗನಿಗೆ ಘನ ಕೃಪಾ ಪಾಂಗೆಗೆ ರಮೆಗೆ ॥

* * * * *

ಚರಣ—

ಸುರರನೆಲ್ಲರ ಸಲಹಿ ನರರನೆಲ್ಲರ ಪೊರೆಯ ।
ಸಿರಿಸಹಿತ ನರಸಿಂಹ ಪುರವರದಲಿ ॥
ಪಿರಿದಾಗಿ ಮೂಗೂರ ವೀರರಾಜೇಂದ್ರ ಗೊಲಿ ।
ದಿರುವ ಗುಂಜಾವರದ ನರಸಿಂಹಗೆ ॥ (೨)

* * * * *

ಕ್ಷೀರಸಾಗರದ ಮನೆಯವಗೆ ಕ್ಷೀರಸಾಗರ ಸುತೆ ಶ್ರೀ ಸತಿಗೆ ।
ವೀರ ರಾಜೇಂದ್ರನ ಒಡವೆ ಪೊರೆವ ಗುಂಜಾ ।
ನಾರಸಿಂಹಗೆ ಭೃಗು ನಂದನನಗೆ ॥
ನಾಕಲೆಯು ದಿನವಾದು । ದೋಕುಳ್ಳಿಯವಭೃತ ।
ವಾಕಡಲರಸ ಕಮಲಜಾದಿಗಳಿಗೆ ಲೋಕಂಗಳೆಲ್ಲ ಪರಿಮಳಸೆ ।
ಮೆರೆದುವಾ ದಿನದೊಳು ಮೆರವಣಿಗೆ ಯಿಬ್ಬರಿಗೆ ।
ಪರಮ ಸಂಭ್ರಮದ ವಿಭವದಲಿ ॥
ಪರಮ ಸಂಭ್ರಮದ ವಿಭವದಲಿ ತಾನದ ।
ನೆರೆದು ಬಣ್ಣಿಸುವವರಿಲ

ತ್ರಿಪದಿ—

ಬಳಕೆಂದ್ರ ಮುಖ್ಯರಿಗೆ ಬ್ರಹ್ಮಾದ್ಯರಿಗೆ ರತ್ನ ।
ಗಳನಿತ್ತು ಹೊದಿಸಿ ಯುಡುಗೊರೆಯು ನಬ್ಧೀಂದ್ರ
ಕಳುಹಿಸಿದನವರ ಪುರಗಳಿಗೆ ॥
ಇಂತಾ ಶ್ರೀದೇವಿ ಶ್ರೀಕಾಂತರಿಗಾದುದತ್ಯಂತ ಹರ್ಷದಲಿ ಸೊಬಗಿಂ ।
ದತ್ಯಂತ ಹರ್ಷದಲಿ ಸೊಬಗಿಂದ ಪರಿಣಯವನಂತ ಕಲ್ಯಾಣ ಗುಣಗಳಗೆ ॥

ರಾಜವಂಶದ ಸೋಮ ರಾಜನಂದನ ವೀರ ।
ರಾಜೇಂದ್ರ ಬೇಳ್ವುದೆನೆ ಬೇಳ್ವಿ ॥
ರಾಜೇಂದ್ರ ಬೇಳ್ವುದೆನೆ ಬೇಳ್ವಿ ನೀಯಬ್ಧಿ ।
ರಾಜನಂದನೆಯ ಮದುವೆಯ ॥

ಪೆರದೆ ಲಕ್ಷ್ಮೀ ಸ್ವಯಂವರ ಶೋಭನವನಿದನು ।
ನರರೊಳಾವವರು ಕೇಳುವರು ॥
ನರರೊಳಾವವರು ಕೇಳುವರು ಕಲಿವರ್ಗೆ ।
ಸಿರಿಯಾವರಿಗಧಿಕ ತರವಕ್ಕು ॥

Colophon—

ಅಂತು ಸಂಧಿ ೩ ಕ್ಕಂ ಪದನು ೧೯೬ ಕ್ಕಂ ಮಂಗಳ ಮಹಾ ಶ್ರೀ. ಶ್ರೀ ನರಪತಿ ಚಿಕ ದೇವೇಂದ್ರ ಕರುಣಾಕಲಿತ ವಿದ್ಯಾ ತಿರುಮಲೆ ಯಾಚಾರ್ಯರ ಕವಿಪೇಳ್ದ ಶ್ರೀ ಸ್ವಯಂವರ ಶೋಭಾನವಿದು ಸ್ಥಿರವಿಕ್ಕೆ.

* * * * *

(ಓಲೆ ೧೫೩-b.)

॥ ಉಯ್ಯಾಲೆ ಪದ ॥

ಪಲ್ಲವಿ.—

ಸಿಂಹ ಮಧ್ಯೆಯರು ತೂಗೆ ಗುಂಜಾನರ । ಸಿಂಹನಾಡಿದನುಯ್ಯಾ ಲಾ

* * * *

ಚರಣ—

ಸಿರಿದೇವಿ ಸಹಿತ ಜಗಕೆ ಭಕ್ತಜನ ಸುರಭೇನುವೆನಿಸಿ ಮೆರೆವ ।
ನರಸಿಂಹ ಪುರದೊಳಿರುವ ಪ್ರಹ್ಲಾದ ವರದನಾಡಿದನುಯ್ಯಾಲೆ ॥ (೪೮)
ಸೋಮಕುಲ ಸೋಮರಾಜ ಗರ್ಭಾಬ್ಧಿ ಸೋಮ ವರ ವೀರರಾಜ ॥
ಭೂ . . . . ನೊಲಿದು ಪೊರೆದ ಕಲ್ಯಾಣ ಧಾಮ ನಾಡಿದ
ನುಯ್ಯಾಲೆ ॥ (೪೯)

* * * *

। ರಾಗ—ಗುಮ್ಮ ಕಾಂಭೋಜ—ಝಂಪೆತಾಳ ।

ಪಲ್ಲವಿ—

ಶರಣು ಶ್ರೀ ನರಸಿಂಹದೇವ ಶರಣು ಶ್ರೀ ನರಸಿಂಹದೇವ ದೇವರ ದೇವಾ ।
ಶರಣು ಸಂರಕ್ಷಣೆಗೆ ಸಚರಾಚರಂಗಳಲ್ಲಿ ಭರಿತಾಂತಗಾತ್ಮ ಭಾವಾ ದೇವಾ ॥

* * *

ಚರಣ—

ಮೆರೆವಾ ಪ್ರಯಾಗ ಗಯೆ ಹಿರಿದೆನಿಪ ಕಾಶಿಯಿಂ
ವರಕಾವೇರಜೆ ಕಪಿಲೆಯರ ಸಂಗಮದ ತಡಿಯ
ನರಸಿಂಹಪುರವೆ ಪುಣ್ಯಕ್ಷೇತ್ರವೆಂದು ।
ಧರೆಗರುಹಲರ್ಚಾ ರೂಪದಿಂ ಬಂದು ।
ಗುರುಗುಂಜೆ ವಿಡಿದು ಬಿಡಗಿಂದ ನೆಲಸಿ ।
ಸಿರಿಸಹಿತ ನಲವಿಂದ ನಿಚ್ಚ ।
ದೊರೆ ವೀರರಾಜ ನೃಪನಿಂದ ಭಕ್ತಿ ।
ವಿರಚಿತ ಮಹೋತ್ಸವಗಳಿಂದ ।
ಪೊರೆವೆ ಚರಣ ಸೇವರ ನೊಲವಿಂದ ಸಲಹೊ ।
ತಿರುಮಲಾಚಾರ್ಯನನು ದೇವ ದಯೆಯಿಂದ ॥ (೫೦)

End—

(ಓಲೆ—೩೭ a.)

ಪಲ್ಲಕ್ಕಿ ಸೇವೆ ಮುಂತಾದುತ್ಸವಗಳಲ್ಲಿ ಸ್ವಾಮಿಗುಡಿಯಿಂದ ಗ್ರಾಮ ಪ್ರದಕ್ಷಿಣೆಗೆ ಹೊರಡುವಾಗಲು ಗ್ರಾ . . . . . . ಮಾಡುವ ನೆಲನುಗ್ಗಡಣೆಯ ಪರಾಕಿನ ಪದ—

ರಾಗ—ಅಸಾವೇರಿ—ರೂಪಕ ತಾಳ.

ಪಲ್ಲವಿ—

ಪಾದಾವಧಾನ ಶ್ರೀಪಾದ ಎಚ್ಚರಿಕೆ ।
ಶ್ರೀಧರ ಗುಂಜಾ . . . ॥

* * * *

ಚರಣ—

ಬೆರೆವ ಕಾವೇರಿ ಕ(ಪಿಲೆ)ಗಳ ತಡಿಯ
ನರಸಿಂಹಪುರ ವರ ನಾಥ ಪರಾಕು ॥ (೨೦)

ವಿನಯದಿಂ ಮೂಗೂರ ವೀರರಾಜೇಂದ್ರ ।
ನನುಗೆಯ್ವೊಳಗವಿದೆನಾಳೆಂ ಪರಾಕು ॥ (೨೨)

ರಾಜಿಪ ಮೂಗೂರ ರಾಜನ್ಯ ವೀರ ।
ರಾಜಸೇವಿತ ಪಾದಾಂಭೋಜ ಪರಾಕು ॥ (೨೪)

ಮಂಗಳ ಮೂರ್ತಿ ಸಂಭಾವಿತ ಲಕ್ಷ್ಮಿ ।
ಸಂಗ ಗುಂಜೆಯ ನರಸಿಂಗ ಪರಾಕು ॥ (೨೫)

ವಿ.ವಿ—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಕೊನೆಯಲ್ಲಿ ಒಂದೋಲೆಯಲ್ಲಿ ಸುಭಾಷಿತ ಶ್ಲೋಕಗಳಿವೆ (ಸಂಸ್ಕೃತದಲ್ಲಿ)

ಇದು ಹಾಡಿನ ರೂಪದಲ್ಲಿ ಬರೆದಿದೆ. ಇದರಲ್ಲಿ ಮೈಸೂರು ದೇಶದ ತಿರುಮ ಕೂಡ್ಲು ನರಸೀಪುರದ ಗುಂಜಾ ನರಸಿಂಹ ಸ್ವಾಮಿಯ ಕಲ್ಯಾಣ ಮಹೋತ್ಸವ ವಿಷಯವು ವರ್ಣಿತ ವಾಗಿದೆ ಕವಿ ಈ ಗ್ರಂಥವನ್ನು ಲಕ್ಷ್ಮೀ ಸ್ವಯಂವರ ಗುಂಜಾ ನರಸಿಂಹನುಯ್ಯಾಲೆ ಪದಗಳು, ಗುಂಜಾ ನರಸಿಂಹಾಷ್ಟಕ, ಗುಂಜಾ ನರಸಿಂಹ ಶೋಭನ, ಗುಂಜಾ ನರಸಿಂಹ ಶೃಂಗಾರ ಸಂಗೀತ ಪದಗಳು, ಗುಂಜಾ ನರಸಿಂಹನ ಪಲ್ಲಕ್ಕಿ ಸೇವೆಯ ಪದ ಎಂಬಷ್ಟು ಭಾಗಗಳಾಗಿ ವಿಭಾಗಿಸಿ ಕೊಂಡಿರುತ್ತಾನೆ. ಈ ಗ್ರಂಥಕ್ಕೆ "ಗುಂಜಾ ನರಸಿಂಹ ಕಲ್ಯಾಣ ಮಹೋತ್ಸವ" ಎಂದು ಹೆಸರು ಕೊಡುವುದು ಯುಕ್ತವಾಗಿರುವುದು. ದೇವಾಲಯದಲ್ಲಿ ಸ್ವಾಮಿಗೆ ನಡೆಯುವ ಕಲ್ಯಾಣೋತ್ಸವವು ಹೇಗೆಂಬುದನ್ನು ಇದರಲ್ಲಿ ಮನಗಾಣಬಹುದು.

ಮೂಗೂರು (ಮೈಸೂರು ಜಿಲ್ಲಾ) ದೊರೆಯಾದ ವೀರರಾಜೇಂದ್ರನು ಹೇಳಲಾಗಿ ಕವಿ ಇದನ್ನು ಬರೆದುದಾಗಿ ಹೇಳಿದಕ್ಕನೆ. ಅಲ್ಲದೆ ಗುಂಜಾ ನರಸಿಂಹ ಸ್ವಾಮಿಯು ವೀರರಾಜನ ಮುಖ್ಯದೈವವಾಗಿರುವ ಕಾರಣ ಆ ದೇವನನ್ನೇ ಈ ಗ್ರಂಥದಲ್ಲಿ ನಾಯಕನನ್ನಾಗಿ ಇಟ್ಟು ಕೊಂಡಿದ್ದಾನೆ. ಆ ನರಸಿಂಹ ಸ್ವಾಮಿ ಕೈಯ್ಯಲ್ಲಿ ತಕ್ಕಡಿಯನ್ನು ಹಿಡಿದು ತೂಕಮಾಡಿ ಕಾಶಿಮುಂತಾದ ಪ್ರಸಿದ್ಧ ಸ್ಥಳಗಳಿಗಿಂತಲೂ ನರಸೀಪುರವು ಒಂದು ಗುಲಗುಂಜಿ ತೂಕವು ಹೆಚ್ಚಾಗಿದೆಯೆಂದು ತೋರಿಸುತ್ತಿರುವ ನಾದುದರಿಂದ, ಆ ದೇವರಿಗೆ ಗುಂಜಾ ನರಸಿಂಹನೆಂದು ಹೆಸರು ವಾಡಿಕೆಯಾಗಿದೆ.

ಕವಿ ಚಿಕದೇವರಾಜನ ಮಂತ್ರಿ ತಿರುಮಲಾಚಾರ್ಯನು. ಆ ಬಗೆಗೆ ಉದಾಹೃತ ಭಾಗಗಳನ್ನು ನೋಡುವುದು.

No. 1291. ಲಕ್ಷ್ಮೀ ಸ್ವಯಂವರ ಶೋಭಾನ by ತಿರುಮಲಾರ್ಯ

LAKṢMĪ SVAYAMVARA ŚŌBHĀNA by TIRUMALĀRYA.

Substance, paper Size, 10 7/16 × 9/-1/2inches Pages 54 Lines, 20 on a page. Extent, 660 granthas. Character, Kannada. Condition, good. Appearance, New. Mode of writing, good.

Restored in 1934–35 from the manuscripts described above.

Complete.

ವಿ.ವಿ—

ಸಮಗ್ರ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪುತ್ರಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ.

No. 1292. ವಿಭೀಷಣ ಬುದ್ಧಿ.

VIBHĪṢAṆABUDDHI.

Substance, palm-leaf. Size, 15 1/4 × 1 7/16 inches Pages, 10. Lines, 4—6 on a page. Extent, 100 granthas. Characterm Kannada Condition, very much injured. Appearance, old. Made of writing, not bad.

Appearance, Old. Made of writing, not bad.

Complete.

The advice given by Vibhīṣana to Rāvaṇa is herein described in the form of a song. The author is not known.

Beginning—

. . . ಳಾತ ರಾಮನಂಘ್ರಿಯುಗವ ನೆನೆದು ಯೆದ್ದು ತೀರಿಸಿದ ನಿತ್ಯ
ಕರ್ಮವನು ಹರಿಯ ।
ನಾದರಿಸಿದ ವಿಭೀಷಣನು ನಡೆದ ವೀರರ ವಳನೆಗೆ ತನುಬರಲಿ ಕಂಡ ಸ ॥
ಹೋದರಸಿ . . . . ತಮ್ಮನ ನೋಡಿ ತಂದೆವಲ್ಲ ಸೀತೆಯ ॥ (೧)
ಅಣ್ಣನೆಂಬುದ ಕೇಳ ಮರುಗಿ ವಿಭೀಷಣನು.

End—

ಬಂದ ವಿಭೀಷಣಗಭಯವಿತ್ತು ದಯೆಯಿಂದ . . . . ।
ದಿಂದ ಮಡದಿಯವೊಡಗೂಡಿ ಸುಗರು ಚೆಂದದಿಂ ಶೋಬನವ ಮಾಡಿಸಾಮ್ರಾಜ್ಯ
ಪದವಾಳಿ
ನಿಂದನಯೋಧ್ಯಾಪುರ[ದಿಂ](ದಲಿ) ರಾಮಾಕೂ . . . . (೨೧)
. . . . ದುಷ್ಟರನು ಸಂತದಿಂ ಶಿಕ್ಷಿಸಿದೆಯೊ ರಾಮ ಅನಂತ ಶ್ರೀಹರಿ
ವಾಸುದೇವ ।
ಸಕಲ ಸಂತೋಷದಲಿ ಜನರ ಪೊರೆವ ಬಹು . . . .
. . . ರಾಮಚಂದ್ರ ರಾಮ ಕೂಡಿನಿಂದರು ಸಿರಿಯು ॥ (೨೨)

ವಿ.ವಿ—

ಸಮಗ್ರ. ಅತಿ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಕಡೆಯಲ್ಲಿ "ಶೋಭನವೆ ಶೋಭನವೆ" ವಿಶ್ವಾಮಿತ್ರನು ಬ . . ಯಜ್ಞ(ವ) ವೇಗದಿ ರಕ್ಷಿಸಿದ ವಿಶ್ವಮೂರ್ತಿ ಶ್ರೀ ವಿಷ್ಣುವಿಗೆ ॥ ೧ ॥

“ಶೋಭನವೆ ಪಾದಘೋಳ [ಸೊಕ್ಕಿ] (ಸೋಂಕೆ)” ಈ ಶೋಭನವಿದೆ.

ಇದು ಹಾಡಿನ ರೂಪದಲ್ಲದೆ. ೩೦ ನುಡಿಗಳಿವೆ. ರಾಮಾಯಣದಲ್ಲಿ ಹೇಳಿರುವ ಪ್ರಸಿದ್ಧವಾದ ವಿಷಯವೇ ಇದರಲ್ಲಿಯೂ ಉಕ್ತವಾಗಿರುವುದು. ಬರೆದವರಾರೆಂಬುದು ಗೊತ್ತಾಗುವುದಿಲ್ಲ.

No. 1293. ಶೃಂಗಾರದ ಹಾಡುಗಳು by ಚಿಕ್ಕುಪಾಧ್ಯಾಯ.

ŚṚNGĀRADA HĀḌUGAḶU BY CIKKUPĀDHYĀYA.

Substance, palm-leaf. Size, 11-3/4 × 1-1/16 inches. Pages, 96. **Lines, 4 on a page**. **Extent**, 450 granthas. Character, Kannada. Condition, **very much injured**. **Appearance**, old. Mode of writing, good.

Begins on fol. 198-*a* of the manuscripts described under No. 257 ante-wherein this work has been omitted to be included in the list of other works. The present work is mentioned in the list of other works given under No. 618 which itself is another work in the manuscript bundle D. No. 257.

Complete.

Similar to the above containing songs of erotic character Cikkadēvarāja King of Mysore is made the hero in these songs.

Beginning—

॥ ರಾಗ—ಮಧ್ಯಮಾವತಿ ॥

ಪಲ್ಲವಿ—

ತಾರೆನೀ ತರಳ ನೇತ್ರೆ ।
ವಾರಿಜನಾಭನ ವರದ ರಂಗರಾಯನ ॥

ಚರಣಗಳು—

ಕರವಿಡಿದೊಡನೆ ಕಾತರಿಸಿ ಮೇಲ್ವಾಯ್ದು ಮುಂ ।
ಗುರುಳ ದುಡುಕೆ ಮುನಿವರೆ ಮೋಹನಾಂಗಿಯಿಂ ।
ದೊರೆ ದೋಲೆ . . . ಲಲ್ಲೆಗರೆದು ಗಾಡಿಯೊಳಿದೆ ।
ಗರಗಿಸಿ ಹರಣವ ಸೆರೆವಿಡಿವ ನೀರಸಾ । (೧)
ಮೊಗದೊಳು ಮೊಗವಿಟ್ಟಗಲದೆ ಮುದ್ದಿಸಿ ।
ಮುಗುದೆ ಕೇಳ್ನನ್ನ ಚೆಲ್ವಿಗೆ ಮನಸೋತು ಕಾ ।
ವಗೆ ನೂರು ಮ್ರೋದೆನು ಮಿಗೆ ಮನ್ನಿಸೆಂದೆನ್ನ ।
ನಗಿಸಿ ನಲವಿತ್ತು ಬಗೆಗಾನಾಣ್ಮನ ॥ (೨)
ಬೇಟ ಬೆಡಗು ಬಿಂಕ ಕೂಟ ಕುಶಲ ಕೂರ್ಮೆ ।
ಯಾಟದಿಂದೆನ್ನೆದೆ ಗೋಟಿ ಗೊಂಬಸಿಯಳಿ ॥
ನಾಚಿಸಿ ಪುಳಕವ ಮೀಟಿನಿಂ (*) ರೆದು ಸವಿ ।
ನೋಟದಿಂ ನೋಡೆಂಬ ನೀಟುಗಾರ ರಂಗನ ॥ (೩)

* * * *

(ಓಲೆ, 203-b).

॥ ರಾಗ—ಭೈರವಿ ॥

ಪಲ್ಲವಿ—

ಚಿಕ್ಕದೇವೇಂದ್ರನ ನಟ್ಟಿಱಿಂ ನೋಟ್ಪುದೆ ಚಂದಮಾಮ-ಶೋ।
ತಳ್ಕಿಸಿ ತವಕದಿಂ ಕಾನೊಲಿದಿರುವುದೆ ಚಂದಮಾಮ ॥

ಚರಣಗಳು—

ಸರಸಮಾತಾಡಿ . . . . ನಲಿವುದೆ ಚಂದಮಾಮ-ಮನ।
ದಿರವ ತಿಳಿದು ಮಮತೆಯ ಮಾಡುತಿರ್ಪುದೆ ಚಂದಮಾಮ-ಎರೆ।
ಹೊರೆ ಗೆಯ್ಯದೆಂದಕೆ ಮುಂಬರಿವುದೆ ಚಂದಮಾಮ-ಮಾತ್ತೆ।
ಮಾರೆಮೋಸದಾಟವ ಮರೆತಿರುವಱಿತವೆ ಚಂದಮಾಮ ॥ (೧)

ನುಡಿಯ ಚದುರೆ ನುತಿನುತಿಸುತಳಿರ್ಪುದೆ ಚಂದಮಾಮ-ಮೆ।
ಲ್ಲಡಿಯಿಡುವಂದವ ಭಾವಿಸುವಂದವೆ ಚಂದಮಾಮ-ಒಡೆ।
ನೊಡನೆ ಸೇವೆಗೆಯ್ದೊಡನಿರುವುದೆ ಚಂದಮಾಮ-ಸಿರಿ।
ಯಡಿ ಮಾವುಗೆಯ ಶಿರದೊಳಗಾಂತಿರುವುದೆ ಚಂದಮಾಮ ॥ (೨

ಭಾವಜರೂಪನ ಭಾವಿಪ ಭಾವವೆ ಚಂದಮಾಮ-ಎನ್ನ।
ಕೋವಿದರರಸನ ಕೊಂಡು ಕೊನರ್ವುದೆ ಚಂದಮಾಮ-(ಮ)।
ತ್ತಾವಗಮುಗಲದೆಯಾನಂದವಡುವುದೆ ಚಂದಮಾಮ-ಚಿಕ್ಕ।
ದೇವೇಂದ್ರನ ಚಿತ್ತವಱಿದು ಕೂಡಿರುವುದೆ ಚಂದದಾಮ ॥ (೩)

॥ ರಾಗ—ಶುದ್ಧ ಮಾಧವಿ (ಕೌಳ).

ಪಲ್ಲವಿ—

ನಿನ್ನವಳ ಕೋಟಲೆಯ ನೀ ಪರಾಮರಿಸಕಟ।
ಚೆನ್ನ ಚಿಕದೇವರಾಯ ಚೆನ್ನವಳಗೆಂತಹುದೊ ॥

ಚರಣಗಳು—

ಗಿಳಿಯೊಳೊಳ್ನುಡಿಯಂಚೆಯೊಳೆವರಿಯೊಳೊಳ್ನಡತೆ।
ನಳಿನದಳದೊಳ್ನೋಟ ನಗೆ ಜೊನ್ನದೊಡನೆ।
ಎಳೆವಳ್ಳಿಗಂಗವೀವೃತ್ತಿಂದುವಿಗೆ ಮೊಗಗೊಡುತೆ।
ಯಳವಪ್ಪುದೆನ್ನುತೆ ಯಂಗಲಾಚುತ್ತಿರುವ ॥ (೪)

ನಡುಗುವೆದೆ ನಟ್ಟಾಲಿ ಸಣ್ಪುರ ತಿರುಗುವ ಗಲ್ಲ।
ಉಡುಗಿರುವ ಕರಣ ಪುರವಣಿಸುವೆಲರು ॥
ತೊಡಕಿದವಯವದಾಟ ತೋರ್ಕೆಗೆಟ್ಟಿರುವ ತನು।
ವಡೆವಡಿಗಡಿಗೆ ನೋವುತೆಡೆರಡಸಿಯೆಣ್ಣಿಪ್ಪ (೨)

ಎಕ್ಕಟಿಯೊಳುಜಕಳದು ಸಿಕ್ಕಿಸಿಡಿಮಿಡಿಗೊಂಡು
ದಕ್ಕಿದಳ ಚಿಕದೇವ ಧರಣಿಪತಿ ದಯದಿ
ಅಕ್ಕಪೆಂದಾಳ್ವುದೆಂ ದಂತರಂಗದಿ ನೆನೆವು
ತೊಕ್ಕತನವಾಂತಿರುತೆ ಯೊಡನೆ ಮರುಗುತ್ತಿರ್ಪ ॥ ೩ ॥

ಪಲ್ಲವಿ.—

॥ ರಾಗ ॥

ಎಂತೆಸವೆನೇನುಗೆಯ್ವೆ ತಿಳಿಯದಿದೆ...ಯಿದ
ರಂತವ ಕಾಣಲಕಳಿನಂತವಾಗಿದೆ ॥

ಚರಣಗಳು—

ನಿಟ್ಟವೆನೆಂದೆಂಬ ನೆನಪ ನೆನಸ ಸಲ್ಲ-ಬಿಪ್ಪ।
ಬಟ್ಟೆಯೆಡೆಗೆ ಬಳಸಿ ಬಳಸಿ ಸುಳಿಯಸಲ್ಲ ॥
ಮುಟ್ಟ ಮೋಹಿಸಿ ಮೋಹವ ಬೆಳಸಸಲ್ಲ-ಯೆನ್ನಿಂ।
ಕೆಟ್ಟಕೇಡ ನೆಣಿಸೆಣಿಸಿ ನೋಯಸಲ್ಲ ॥ (೧)

ಮನಕೆ ತಂದು ಮಮತೆಗೆಯ್ದು ಮಾಜಸಲ್ಲ ಕೊಂಡು।
ಕೊನೆದು ಮೆಯ್ಯೊಳಾದ ಕುಱಿಪ ಮರೆಸ ಸಲ್ಲ ॥
ಇನಿಸು ಮುನಿಸಿನೆಸಕವದವೆ ಬೆಸಸ ಸಲ್ಲ-ಯಿದ।
ರನುವ ನಱಿತು ಮತ್ತೆ ಹೊರಗನರಸ ಸಲ್ಲ ॥ (೨)

ಸೊಕ್ಕುದಕ್ಕೆ ನೋಟ ಕೂಟ ಕುಕಲವ-ಮೋಲ್ಕೆ।
ಯಕ್ಕರರುಮೆ ಲಲ್ಲಿಕೂರ್ಮೆ ಮುದ್ದುಗೆಯ್ತದ ॥
ಚಿಕ್ಕದೇವರಾಯನೆಸಪ ನೇಹದಾರದ-ಬೆರ್ಮೆ।
ಯೊಕ್ಕಬಗೆಯೆ ಬಗೆಯಿದು ಗುಟ್ಟಿನ ಪದ ॥ (೩)

End—

ರಾಗ—ಘಂಟಾರವ.

ಪಲ್ಲವಿ—

ಕರೆದು ಮನ್ನಿಸಯ್ಯ ಕಾಯುಜರೂಪ ಸರಸವಬೆಸಗು।
ಮುನಿಸು ದೊರೆ ಚಿಕ್ಕದೇವ ಭೂವಿಭ ॥

ಚರಣಗಳು—

ಇಂದು ಮಂದಾನಿಲ ವೇಗೆ ಕಂದಿ ಕುಂದಿ ಕರಗಿ ಕಡು।
ನೊಂದು ಮೆಯ್ಯ ಬಿಸುಪೇರಿ ವಿರಹದೋರಿ ॥
ಅಂದವಳಿದೊಂದು ಚಿಂತೆಯಿಂದ ಕಳಬನಿದಂದು।
ಮುಂದುಗೆಟ್ಟು ಕಳವಳಸಿ ನೊಂದು ಬೆರಗುವಟ್ಟಿರುವಳ ॥ (೧)

ಮದನಾದೆ ಗೋಲಿಗಳುಕಿ ದುರಿಸಿ ದುಗುಡ ದಾಳಚಾರಿವರಿಡಳಲಿ।
ಬೆದರಿ ಮೇರೆಯುಡುಗಿ ಮನಮರುಗಿ ಮತ್ತಿಗೆಟ್ಟು ಮೆ ॥
ಲ್ಲಿದೇಯ ನಡುನಡುಗಿ ಕಣ್ಣೀರ ಮಿಡಿದು ಪೊರಳುವಳ ॥ (೨)

ಅರಳ ಸರಕಳುಕೆ ಸೊರಗಿ ಸೊಕ್ಕಿ ಚಿಕದೇವ ।
ಧರಣಿಪಾಲ ನೆರೆದು ಲಾಲಿಸೆನ್ನನೆಂಬ ॥
ಸರಸದೋರುತಲಿವ್ರು ಮರವೆಗೊಡಲಿತ್ತು ತಲ್ಲಣಿಸಿ ।
ಕರೆಕರೆದು ನಿನ್ನ ಕಾಣದೆ ಕಾತರಿಪಳ ॥ (೩)

॥ ರಾಗ ॥ ಹುಧುಮಾಧವಿ ॥

ಪಲ್ಲವಿ.—

ಅಂದವಾದುದು ಜೇಯು ತೋರುಹ ಖಗೆ ।
ಗೊಂದಿಹುದುಪಾಯುವ್ರು ಯಿಂದು ಶ್ರೀ ಚಿಕದೇವರಾಯ ಮೋಹನ ಕಾಯು ॥

ಚರಣಗಳು —

ಪೊಸಪರಿಯಿರದೆ ಕಂಗೊಳಸುತ್ತ ಸೂಸುತ ಯಿನಿಕೋಪ ।
ದೆಸೆವಂಕವನುಸುರದಂತೆನ್ನ ಸದರಿಪುದು ॥ (೧)

ಅಂತಲ್ಲದೊಡೆ ಯಿೂಜಗೆಯು ಗಾಡಿ ಯಿೂ ಮೋಡಿ ಶಾರದಿಗ ।
ಲಂತರದಿ ಗಲಂತರರಿರಂಗದಿ ಬೇರೊಂದಂತರಿಸಲರಿದು ॥ (೨)

ಸುರತ ವಿಶ್ರಮದ ಭರದಿ ಬಂದು ನೀ ನಿಂದು ।
ಮರಳಯಿನ್ನ ನೆರವ ತವಕಲೇಸು ದೊರೆ ಚಿಕ್ಕದೇವರಾಯ ॥ (೩)

Colophon—

ಅಂತು ಪದ ೬೩ ಕ್ಕ ಮಂಗಲಂ ಶ್ರೀ.

ಪಲ್ಲವಿ.—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ. ಇದರೊಡನೆ ಇನ್ನೂ ಅನೇಕ ಪುಸ್ತಕಗಳವೆ. ಅವಾವುವೆಂಬುದನ್ನು ಹಿಂದಣ ೨೫೩ ನೆಯ ಮತ್ತು ೬೧೮ ನೆಯ ನಂಬರುಗಳಲ್ಲಿ ನೋಡಿ ತಿಳಯುವುದು.

ಇದು ಹಾಡಿನಲ್ಲಿ ಬರೆದಿದೆ. ಇದರಲ್ಲಿ ೬೩ ಹಾಡುಗಳು ಬೇರೆ ಬೇರೆ ರಾಗಗಳಿಂದ ಕೂಡಿವೆ. ನಾಯಕ ನಾಯಿಕಾ ಸಂಬಂಧವನುಳ್ಳುದಾಗಿದೆ. ಆದಿಯ ಕೆಲವು ಹಾಡುಗಳಲ್ಲಿ ಪಶ್ಚಿಮ ರಂಗನಾಥನನ್ನೂ ಉಳದುವುಗಳಲ್ಲಿ ಮೈಸೂರು ದೊರೆ ಚಿಕದೇವರಾಯನನ್ನೂ ನಾಯಕ ರನ್ನಾಗಿ ಕವಿ ಚಿತ್ರಿಸಿದ್ದಾನೆ. ಈ ನಾಯಕರ ವಿಷಯದಲ್ಲಿ ಸ್ತ್ರೀಯರ ಶೃಂಗಾರವು ವರ್ಣಿತ ವಾಗಿದೆ. ಹಾಡುಗಳು ಚನ್ನಾಗಿ ರಚಿತವಾಗಿವೆ.

ಕವಿ ಚಿಕ್ಕುಪಾಧ್ಯಾಯನು, ಇವನ ವಿಷಯವಾಗಿ ತಿಳಯಬಯಸುವವರು ಹಿಂದಣ ೬೪೩ ನೆಯ ನಂಬರನ್ನೂ ಕವಿಚರಿತ್ರೆ (ದ್ವಿತೀಯ ಸಂಪುಟ) ಯನ್ನೂ ನೋಡುವುದು.

No. 1294. ಶೃಂಗಾರದ ಹಾಡುಗಳು by ಚಿಕ್ಕುಪಾಧ್ಯಾಯ.
ŚṚNGĀRADA HĀḌUGAḶU BY CIKKUPĀDHYĀYA.

ubstance, paper. Size 10-3/8 × 9-1/2 inches. &Pages, 50. Lines, 20 on a page. Extent, 450 granthas. Character, Kannada. Condition, good. Appearance, new. Mode of writing, good.

Restored in 1930-31 from the manuscript described above.

Complete.

ವಿ.ವಿ.—

ಸಮಗ್ರ. ಕಾಗದದ ಪ್ರತಿ. ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿ ಇದರ ಮಾತೃಕೆಯು, ಲಿಪಿ ಚೆನ್ನಾಗಿದೆ.

No. 1295. ಸಂಗೀತ ಪದಗಳು.
SANGĪTA PADAGAḶU.

Substance, palm-leaf. Size, 10-3/4 × 1 inches. Pages, 162. Lines, 3 on a page. Extent, 610 granthas. Character, Kannada. Condition, much injured. Appearance, old. Mode of writing, good.

Collection of different songs in Sanskrit, Kannaḍa and Telugu—dedicated to Paṣcima Ranganātha and Tirunārāyaṇa of Yadugiri. The author is probably Cikkupādhyāya. For details see extracts below.

Beginning—

॥ ರಾಗ ॥ ಮುಖಾರಿ ॥

ಪಲ್ಲವಿ—

ಎನ್ನೊಳ್ಳರುಹದೆ ನೀನಿಂತು ಪೋಪರೆ ಪೇಳು ।
ನಿನ್ನ ಸಾಹಸಕೆ ನಾನೇನೆಂಬೆ ನಕಟ ॥

ಚರಣಗಳು—

ಪವಣರಿಯದೆ . . ಪಾಂಚಜನ್ಯ . . ।
ತವಕದಿಂದ . . . ವ ತಾಕಿತಿಂತು ॥
ಕವಚವನೊಡೆದೊತ್ತಿ ಕಪಿದಲಗಿನ ಮೊನೆ ।
ಯುವಯುವದೊಳು ನಾಂಟಿ . . . ಕಾದಿದೆ ॥ (೧)

ತಾಡುಕೆ ತೊಡರಿ ಬಿಗಿವಿಡಿದೊತ್ತಿ ಕೆಡಪುವ ।
ಬಿಡೆಯದಿಂದೊಳು ಮೊಗ ಬೆಮರೇರಿಂತು ॥
ಕಡಿದಿ . . . ಗೈಮೊಗಲಸಿರೆ ಮು ।
ಯ್ಯಡಿಗೆರಗುವೆನು ಪೇಳಾರೊಳು ಕಾದಿದೆ ॥ (೨)

ಪರಿಪರಿಯಲಿ ಭಂಗವಡೆದು ಬವಣೆಗೊಂಡು ।
ಹರವಸ . . . . . . ಹದ ಮೀರಿರೆ ॥
ತರವೆ ಪಶ್ಚಿಮರಂಗಧಾಮ ನಿನಗೀ ಬಗೆ ।
ಯರಿಯದಂತಿರೆ ಪೇಳಾರೊಳು ಕಾದಿದೆ ॥

॥ ರಾಗ ॥ ಕಾಪಿ ॥

ಪಲ್ಲವಿ—

ಈ ವಿಧದ ಭಾಷೆಗಳಬೆಂತು ಸೆಂಬುವೆನು ।
ಗೋವಿಂದ ನಿನ್ನೊಳಿತ ಗುಣಪಸರಿತರಿತು ॥

ಚರಣಗಳು—

. . ದೊಳು ಕೋ . . ಗರವಿಯೊಳು ಕೈಯಿಟ್ಟು ।
ಭಾವಿಸುವೆನೆಂದು ಮಿಗೆ ಬವಣೆಗೊಳುವೆ ॥
ಹಾವಹಾಸಿಕೆಗೆಯ್ದು ಹರುಷಮಿಗೆ ದೊರೆತನದ ।
ಠೀವಿಯೊಳು ಮಲಗಿರುವ ಭಾವವೆಂತೆಂತು ॥ (೧)

ಕೆಂಡವನೆ ಕಾದಿರುವ ಗುಂಡನಾಸುವೆನೆಂದು ।
ಗಂಡು ಮೊರೆತಲಿಂತು ಕವಿದು ಬರು . . ।
ಚಂಡತರ ಭಾನುವಿನ ಮಂಡಲದ ಮಧ್ಯದೊಳು ।
ಮಂಡಿಸಿರುವತಿಶಯದ ಮಹಿಮೆಯೆಂತೆಂತು ॥ (೨)

ಬರೆಸಿ ಭರದೊಳು ಬಾಸೆವತ್ತಳೆಯ ಶಾಸ್ತ್ರವಿಧಿ ।
ವೆರಸಿ ತೊಲೆಯೇರುವ್ರೊಡೆ ಬಿರುಬುಗೊಳುವೆ ॥
ನರಪತಿಯ ಪ್ರೇರೆದು ಮಿಗೆ ನಲಿವ ಗೋವಳ ನಿನಗೆ ।
ಸರಿತೂಕವಿಲ್ಲೆಂಬ ಪರಿಯನೆಂತೆಂತು ॥ (೩)

॥ ರಾಗ ॥ ಕಾಂಭೋಜ ॥

ಪಲ್ಲವಿ—

ಇಂಪುವೆತ್ತಿದೆ ಯೀ ನಾಡು ।
ಸೊಂಪಿನಿಂ ಸೇರಿ ಸುಖಿಸುವ ಗೂಡು ॥
ಪೆಂಪಿನ ಕನ್ನಡಿಗರು ಬೆಳಗುವ ಬೀಡು ।
ಏಂಪೊಗಳುವೆ ಯಿನ್ನಿದರೆಲ್ಲ ಜೋಡು ॥

ಚರಣಗಳು—

ಪೊಡವಿವೆಣ್ಣಿನ ರನ್ನದೊಡವೆಯು ಕೋಶ ।
ಬಿಡುಗಣ್ಣರುಂಡುಟ್ಟು ಬಿಸದಿಪ ವಾಸ ॥
ಕಡುಹಿನ ಕಲಿದೋಷವಡೆಯದ ದೇಶ ।
ಪಡಿಯಿಡೆ ವೈಕುಂಠವದಕವಿಶೇಷ ॥ (೧)

ಉಳಿಯದೀ ಸರಸತಿಗೊಲಿಪ ಬಿಡಾರ ।
ಪಳೆನುಡಿ ನೆರವಿಯ ಬೆಳೆಯ ಕೊಠಾರ (ಕೊಟ್ಟಾರ) ।
ತೊಳಗುವ ಮುನಿ [ಗಜ] (ಜನ) ಗಳಗೆ ಸಚಾರ ।
ನಳಿನಾಕ್ಷನೋಲಗಗೊಳುವ ಹಜಾರ ॥

ಪಾವನವಹ ತಿರುಪತಿಗಳ ಹೊಳಲು ।
ಶ್ರೀವೈಷ್ಣವಜನ ಸೇರುವ ನೆಳಲು ।
ದೇವಲೋಕದಿಂದಿಳಿದೊಂದು ಬಿಳಲು ।
ಯೇವೇಳುವೆ ಪುಣ್ಯಾದೀಪಿಸ ಗೊಳಲು ॥ (೩)

॥ ರಾಗ ॥ ಬಿಲಹರಿ ॥

ಪಲ್ಲವಿ—

ಆರೈದು ನೋಡೆನಯನಾನಂದವಾಗಿದೆ ।
ಶ್ರೀರಂಗ ಪಟ್ಟಣದ ಸಿರಿಯು ವೈಖರಿಯು ॥

ಚರಣಗಳು—

ಸುಮನಸರ ಪುರಿ ಸಹ್ಯಸುತೆಯು ಬಿತ್ತ್ರವಡೆದ ।
ವಿಮಲ ಸಲಿಲದೊಳು ಬಿಂಬಿಸಿದಂತಿರೆ ।
ಅಮರಾವತಿಯು ಗೆಲುವ್ರೊಡಾನಾಗನಗರಿ ಸಂ ।
ಭ್ರಮದಿ ಮೇಗಡೆಗೆದ್ದು ಬಂದಂತಿದೆ ॥ (೧)

ಖಳನಿಳಯವಾದ ಲಂಕಾಪುರಿಯುಳ ಜಸವ ।
ಹಳಿಯೆ ಕಾವೇರಿಯೊಳಗಿಳಿದಂತಿದೆ ॥
ಅಳಕಾ ನಗರಿ ತನ್ನ ನಡೆದರ್ಯಕ್ಷರ ಕಳೆಯು ।
ತೆಳಸಿ ರಂಗೇಶನಡಿಗೆಱಗಿದಂತಿದೆ ॥ (೨)

ಪರಿಪರಿಯ ಸೃಷ್ಟ್ವೈಭವವ ನೋಡಲು ಬಂದ ।
ಸರಸಿರುಹ ಸಂಭವನ ಪುರದಂತಿದೆ ॥
ಪರವಾಸುದೇವನೀ ಧರೆಗೆ ಬರೆ ಬಳಿಕ ಸಂದುದು ।
ಭರದಿ ಬಂದಿಹ ಪರಮ ಪದದಂತಿದೆ ॥ (೩)

॥ ರಾಗ ॥ ಘಂಟಾರವ ॥

ಪಲ್ಲವಿ—

ಅಂದವಾಗಿದೆ ಯೀ ಸಭೆಯಂದವಾಗಿದೆ ॥

ಚರಣಗಳು—

ಅಂದವಾಗಿದೆ ಯಿಂದು ಕುವಲಯಕಾ ।
ನಂದ ಚಿಕದೇವ ಚಂದ್ರೋದಯದಿಂ ॥
ಸಂದಣಿಸುವ ಸೂಕ್ತಿಸಾರದ ತೆರೆ ಬಳಿ ।
ಸಂದ ಕಡಲ ಪೋಲ್ವ ಸರಸಿ ಜನರ ಸಭೆಯಿಂದ ॥ (೧)

ದಯೆಯ ತವರ್ಮನೆ ಧರ್ಮದ ತಾಣ ವಿ ।
ನಯದ ನಾಟಕ ನರ್ತ್ಕಯ ನಾಡು ॥
ಜಯದ ಹಜಾರ ವಿಚಾರದ ಚಾಕಿ ನೀ ।
ತಿಯ ನೆಲೆವನೆ ಬಿರುದಿನ ಬಿಡಾರವಿದೆಂದ ॥ (೨)

ಸಿರಿಯಂತಃಪುರ ಸಿಂಗರದಂಗಡಿ ।
ಹರಿಭಕ್ತಿಯ ಗೂಡು ಹರುಷದ ಬೀಡು ॥
ಸರಸತ್ರಿಜಗಾಲಯ ಸನ್ಮತಿಯಾಶ್ರಯ
ಪುರುಷಾರ್ಥದ ಭೂಮಿ ಪುಣ್ಯದ ಸೀಮೆಯಿದೆಂದ ॥ (೨)

॥ ರಾಗ ॥ ಘಂಟಾರವ ॥

ಪಲ್ಲವಿ—

ಇಂದು ಮನದಣಿಕೆ ಯೊಡೇರಿತು ।
ಇಂದಿರೇಶನ ಕರುಣವೀಗ ಪೊಗದೋರಿತು ॥

ಚರಣಗಳು—

ಆವನ ಸತ್ಕೃಪಾವಲೋಕನದಿ ವಸು ।
ಧಾವಲಯದರಸುಗಳು ಧನ್ಯರಹರು ॥
ವಿವೇಳಿಗಾಚಿಕ್ಕದೇವರಾಜೇಂದ್ರನೊಲಿ ।
ದೀವಿಧದ ಮನ್ನಣೆಯ ವೆನ್ನೊಳೊಡರಿಸಿದ ॥ (೧)
ಧರೆಯರಿಯಲುಭಯ ವೇದಾಂತವಾವನ ಮನೆಗೆ ।
ತರತರದಿ ಸಾರ್ದ ಕುಲಧನವೆನಿಪುದು ॥
ಪರಭಕ್ತಿರಸದಿನಾ ತಿರುಮಲಾರ್ಯನುಸಿರ್ದ ।
ಹರಿಕಥಾಮೃತವೆನ್ನ ಹಸ್ತಗತವಾಯಿತು ॥ (೨)
ನೆನಹಿನೊಳದಾದ ದೇವದೇವನ [ಸೊ] (ನೊ) ಮ್ಮ ನಿಜ್ಜಪುದು ।
ಸನಕಾದಿ ಮುನಿಗಳಗಸದಳವಹುದು ॥
ತನುಮನದೊಳಾರಂಗಧಾಮ ರಮಣನ ಬಗೆಯ ।
ನನುಗೊಳಿಸಿಯಭಿನಯಿಸುವಾನಂದ ಕೈಸಾರ್ದುದು ॥ (೩)

*   *   *   *   *

ಸಂಸ್ಕೃತ ಕೀರ್ತನೆ—(ಓಲೆ ೧೧).

॥ ರಾಗ ॥ ಭೈರವಿ ॥ ಆದಿತಾಳ ॥

ಪಲ್ಲವಿ—

ಪಶ್ಚಿಮ ಶ್ರೀರಂಗಪಟ್ಟಣ ಕೃತಸಂಗ ।
ನಿಶ್ಚಿಂತ ಗುಣ ತುಂಗ ನಿಗಮಾಂತರಂಗ ॥

ಚರಣಗಳು—

ಕೇಶವ ಸುವದನ ಕೇಶಿನಿಸೂದನ ।
ಶ್ರೀಶ ಜನಾರ್ದನ ಚಿನ್ಮಯ ಕೃಷ್ಣ ॥ (೧)
ನಾರಾಯಣದೇವ ನಾನಾವಿಧ ಭಾವ ।
ನಾರದ ಕೃತಸೇವ ನಗಧರ ಕೃಷ್ಣ ॥ (೨)

ಮಾಧವ ಮುರಹರ ಮಾನ್ಯಮನೋಹರ ।
ಗೋಧನ ಗೋಚರ ಗೋಪಾಲಕೃಷ್ಣ ॥ (೩)

ಗೋವಿಂದ ಘನ ನೀಲ ಗೋಪಿಕಾ ಜನಲೋಲ ।
ಭಾವುಕ ನುತ ಶೀಲ ಪಾವನ ಕೃಷ್ಣ ॥ (೪)

ವಿಷ್ಣು ಚಿರಂತನ ವಿಬುಧಾರಿ ಕೃಂತನ ।
ವಾರ್ಷ್ಣೇಯ ಕುಲಘನ ವಸುದೇವ ಕೃಷ್ಣ ॥ (೫)

ಮಧುಸೂದನ ವೀರ ಮಹನೀಯ ತರಸಾರ ।
ವಿಧೃತ ಪಾರಾವಾರ ವಿಶ್ರುತ ಕೃಷ್ಣ ॥ (೬)

ಪರಿಪೂರ್ಣ ತ್ರಿವಿಕ್ರಮ ಭವ್ಯ ಪರಾಕ್ರಮ ।
ನಿರವಧಿಕ ವಿಕ್ರಮ ನಿರುಪಮ ಕೃಷ್ಣ ॥ (೭)

ವಾಮನ ಸುವಚನ ಬಲಿಗರ್ವ ಮೋಚನ ।
ಸೋಮಾರ್ಕಲೋಚನ ಶೋಭನ ಕೃಷ್ಣ ॥ (೮)

ಶ್ರೀಧರ ಪಾವನ ಶೃಂಗಾರ ವಿಭವನ ।
ಸಾಧಕ ಜನವನ ಸರ್ವೇಶ ಕೃಷ್ಣ ॥ (೯)

ಸಾರಸ ಹೃಷೀಕೇಶ ಸರ್ವಸದ್ಗುಣವಾಸ ।
ನಿರವಧಿಕ ಪ್ರಕಾಶ ನಿರುಪಮ ಕೃಷ್ಣ ॥ (೧೦)

ಕಾರಣ ಪದ್ಮನಾಭ ಕಮನೀಯತರ ಶೋಭ ।
ಧೀರ ಹಿರಣ್ಯಗರ್ಭ ದಿವ್ಯ ಶ್ರೀಕೃಷ್ಣ ॥ (೧೧)

ದಾಮೋದರಾಚ್ಯುತ ದೈವಸಮಾರ್ಚಿತ ।
ಶ್ರೀಮಹಿಪಂಚಿತ ಶ್ರೀಕರ ಕೃಷ್ಣ ॥ (೧೨)

ಪರಮಾನಂದಕೋಶ ಪಶ್ಚಿಮ ಶ್ರೀ ರಂಗೇಶ ।
ಉರಗಕೃತ ಸರ್ವೇಶ ನರಸಿಂಹ ಕೃಷ್ಣ ॥ (೧೩)

* * * * *

(ಓಲೆ ೩೨) ॥ ರಾಗ ॥

ಪಲ್ಲವಿ—

ಒಲಿದು ಲಾಲಿಸ್ರುದವಳನೋಜೆಯರಿತು ।
ನಲವಿತ್ತು ನಲ್ಲಿರಿಸಿ ಸಣ್ಪುಪಡಿಸುವುದು ॥

ಚರಣಗಳು—

ನಿನ್ನಡಿಗಳೊಳಗವನೆಳಸಿ ನಿಂದಿಹಳು ।
ಚೆಂಬೊನ್ನ ಪುತ್ಥಳಿಯಂತೆ ಪೊಗರುಗುವಳು ॥
ಎನ್ನಾಣೆ ಕೇಳು ಮೀಣಿವರ ವರಹವ ಗೊಲ್ಲ ।
ಚೆನ್ನೆ ಕಡು ಜದುರೆ ಚೆಲ್ಲಗಾತಿಯಾರು ॥

ಗಾಡಿಕಾತಿಯರೆಂದು ಗಣಿಸೆವಡೆದುರವಣಿಪ ।
ಸಾಡಸುಗುಡೆಯರಿರವನರಿತಿರುವೆನು ॥
ಆಡೆಲಮ್ಮೆನು ದೇವರಡಿಗೆ ಜೋಡಿರಿಸಿ ಬಿಗಿ ।
ಮಾಡಿ ಮಡಗಿದನೆಂದು ಮನದಣಿಕೆ ಮಸಗುತಿದೆ ॥ (೨)

ಜಿತವೆಂದು ಮನಸಿಜನು ಜೇವಡೆ (ದು) ಬೊಬ್ಬಿರಿಯೆ ।
ಜತೆಗೊಳಿಸಿದುದಕೆ ಬಿದಿ ಜಿತವೆಂದೆನೆ ॥
ಜಿತವೆಂದು ನಾವೆಮ್ಮ ಸೇವೆಯೊಳು ಪೆರ್ಗಳಸೆ ।
ಜತೆಗೊಳಿಸಿ ಸಲಹವಳ ಚಿಕದೇವರಾಯ ॥ (೩)

* * * * *

(ಓಲೆ, ೫೫)

ತೆಲುಗು ಕೀರ್ತನೆ.

॥ ರಾಗ ॥ ಕಾಂಭೋಜಿ ॥ ಆಟತಾಳ ॥

ಪಲ್ಲವಿ—

ಕಾವವೆ ಮಮ್ಮು ರಂಗೇಶ ।
ದೇವದೇವ ಜಗನ್ಮಯ ದಿವ್ಯ ವಿಲಾಸ ॥

ಚರಣಗಳು—

ಜ್ಞಾನ ಭಕ್ತುಲನೇಮಿ ನೇರಮು-ಕಾನಿ ।
ಕಾನಿಯಂದುಲ ನೇಮಿ ನೇರಮು ॥
ನಾನಾವಿಧಮುಲ ಕೋರಮು-ಮೇಮು ।
ನಾಟಿ ವೇಟಕಿ ಮಿಮಾರಮು-ದೇವ ॥ (೧)

ಚೇಸಿನ ಪಾಪಮುಲೆಂಚಮು-ಯಂಚಿ ।
ಸಿಗ್ಗುಲಚೇ ತಲವಂಚಮು ॥
ಆಸನು ವಿಷಯ ಪ್ರಪಂಚಮು-ಮ ।
ಮೈನತೇಗುವ ಶಯನಿಕೆ ಕೊಂಚಮು-ದೇವ ॥ (೨)

ಮಿಂಟಿಮಿ ಮೀನಾಮಧೇಯಮು-ಕನು ।
ಗಂಟಿಮಿ ನೀವೆ ಉಪಾಯಮು ॥
ಕೊಂಟಿಮಿ ಮೀಪಾದ ತೋಯಮು-ಮೂ ।
ಗುಣಮುಲೆಂಚಕ ಬ್ರೋವನ್ಯಾಯಮು-ದೇವ ॥ (೩)

ಇಗಿರೆನು ಸಂಸಾರ ಭೇದಮು- ಮೂ ।
ಕಿಪುಡಾಯನು ಮೀ ಪ್ರಸಾದಮು ॥
ತಗದಿಕ ಮಾತೋನು ವಾದಮು-ಮೀ ।
ದಾಸುಲ ದಾಸುಲ ಮಾದುಮು-ದೇವ ॥ (೪)

ಪ್ರತಿಬಂಧಕಮುಲೆಲ್ಲ ದೊಲಗೆನು-ಶ್ರೀ ।
ರಂಗೇಶ ನಿೂ ಸೇವಗಲಿಗೆನು ॥
ಸತತಮು ಗ ನಿೂದಯು ಚಲಗೆನು-ವೂ ।
ಜನ್ಮಮು ಸಫಲಮ್ಮೈ ಮಲಗೆನು-ದೇವ ॥

* * * * *

(ಓಲೆ, ೬೯)

॥ ರಾಗ ॥ ಮಧ್ಯಮಾವತಿ ॥ ಆಟತಾಳ ॥

ಪಲ್ಲವಿ—

ದೀನಾವನ ಪರಾಯಣಾ ತಿರುನಾರಾಯಣಾ ।
ನೀನೆ ದಯೆಗೆಯ್ದಿಂದೆನ್ನ ಸೆನೆದು ಸಲಹುವುದು ॥

ಚರಣಗಳು—

ಪಸಿವರಕೆಗಾಳಂದ ಬಸವಳಪ ಶಿಶುವ ।
ಬಸಗೊಂಡೋವದಾ ತಾಯಿಗೆ ಪಳವು ಬಪ್ಪಂತೆ ॥
ಪಸರಿಬೆಡರುಗಳಂ ಪಂಬಲಿಕೆಗೊಳುವೆನ್ನ ।
ಬಸಗೆಯ್ದೋವದಿರ್ದೊಡೆ ಪಳವು ನಿನಗಪ್ಪುದು ॥ (೧)

ಪರಿದುರೆ ಕೆಸರೊಳು ಪಡುವಾನೆಯುದಾರಿಗೆ ।
ಬರಿಸಧ ಮಾವುತಗೆ ಪಳವು ಬಪ್ಪಂತೆ ॥
ಪರಿಪರಿ ಬನ್ನಗಳಂ ಬವಣಿಗೊಂಡಿರುವೆನ್ನ ॥
ಭರದಿ ಪೊರೆಯದೊಡೆ ಪಳವು ನಿನಗಪ್ಪುದು ॥ (೨)

ಕಳರಿಂದನುಗೆಡುವ ಪಳಗೂಡಿ ಸುರುಬ್ಬಸ ।
ಗಳದೇವದರಸಿಗೆ ಪಳವು ಬಪ್ಪಂತೆ ॥
ಬಳಿವಗೆಗಾಳಂದಳವಳವೆನ್ನ ಕಾಯದೊಡೆ ।
ಪಳವು ನಿನಗಪ್ಪುದು ಪಾಲಿಸು ತಿರುನಾರಾಯಣಾ ॥ (೩)

End—

(ಓಲೆ, ೮೦).

॥ ರಾಗ ॥ ಕಾಂಬೋಜಿ ॥ ಝಂಪೆತಾಳ ॥

ಪಲ್ಲವಿ—

ಶ್ರೀಯಿಳೆಯರೆರೆಯ ಯದುಶೈಲವಲ್ಲಭ ಚಲುವ ।
ರಾಯ ತಿರುನಾರಾಯಣಾ ॥
ನೀಯೆನ್ನನೊಲಿದೋವಿದೊಡೆ ನಿನ್ನ ಗುಣಗಣದೊಳನಿ ।
ತಾನು ವಿಳತಪ್ಪುದೆ ಸ್ವಾಮಿ ॥

ಚರಣಗಳು—

ಸಲೆಸೆರಿಯನೆಂದೆನ್ನ ಕಡೆಗಣಿಸಿದೊಡೆ ನಿನಗೆ ಸೌಶೀಲ್ಯವೆಂತಪ್ಪುದು ।
ಬಲುಪೊಲ್ಲಗಾಲನೆಂದೆನ್ನ ಕೈಬಿಡೆ ನಿನಗೆ ವಾತ್ಸಲ್ಯಮೆಂತಪ್ಪುದು ॥
ಮಲಿವನಿವನೆಂದೆನ್ನ ಮರಳ ದಂಡಿಸೆ ನಿನಗೆ ಮಾರ್ದವಮದೆಂತಪ್ಪುದು ।
ಅಳಿವೆನ್ನ ಕಂಡು ಕಂಡರಿಯದಂತಿರಲು ನಿನಗಾರ್ಜವಮದೆಂತಪ್ಪುದು-ಹರಿ ॥ (೧)

ಜಡನಾದನೆಂದೆನಗೆ ನಲವೆಸಗದೋ ನಿನಗೆ ಸೌಹಾರ್ದಮೆಂತಪ್ಪುದು ।
ಸಡಗರದಿ ತಾರತಮ್ಯವನೋಡಿಯೆನ್ನ ಬಿಡೆ ಸಾಮ್ಯ ನಿನಗೆಂತಪ್ಪುದು ॥
ಕಳೆಯಿಲ್ಲದಳಲೊಂದಿ [ಯೆ] (ದೆ) ನ್ನನುಳದೊಡೆ ನಿನಗೆ ಕಾರುಣ್ಯಮೆಂತಪ್ಪುದು ॥
ದುಡುಕನೆನ್ನೊಳು ಕಂಡು ಕನಲಿ ಮೊಗದಿರುಗೆ ಮಾಧುರ್ಯ ನಿನಗೆಂತಪ್ಪುದು-
[ಹರಿಯೆ ॥ (೨)

ಅಡಿಗೆರಗಿದೆನಗೆ ಸಂತಸವ ನೀಯದೊಡೆ ನಿನಗೌದಾರ್ಯವೆಂತಪ್ಪುದು ।
ಕಡುಗಿಯನ್ನಲಿ [ವ] (ಮ) ರುಳು ತನಕೆ ಮುನಿದೊಡೆ ನಿನಗೆ ಗಾಂಭೀರ್ಯವೆಂತಪ್ಪುದು ॥
ಜಡಿದೆನ್ನ ತಪ್ಪುಗಳ ಗಲಭೆಗೆಯ್ದೊಡೆ ನಿನಗೆ ಚಾತುರ್ಯವೆಂತಪ್ಪುದು ॥
ಬಿಡದೆನ್ನ ಪೊರೆಯದೊಡೆ ಸ್ಥೈರ್ಯ ನಿನಗೆಂತಪ್ಪುದೊಡೆಯ ತಿರು(ನಾರಾಯಣ)-
[ಹರಿಯೆ ॥ (೩)

ವಿ.ವಿ.—

ಇದರಲ್ಲಿ ಅನೇಕ ಹಾಡುಗಳ ಸಂಗ್ರಹವಿದೆ. (೧, ೩೨, ೬೯ ನೆಯ ಓಲೆಗಳಿಂದ ಕನ್ನಡ ಹಾಡುಗಳನ್ನೂ ೧೧, ೩೭ ರಿಂದ ಸಂಸ್ಕೃತ ಹಾಡುಗಳನ್ನೂ ೪೪ ರಿಂದ ತೆಲುಗು ಹಾಡುಗಳನ್ನೂ ಆರಂಭಿಸಿ ಬರೆದಿದೆ.) ಮಾದರಿಗಾಗಿ ಸಂಸ್ಕೃತ ತೆಲುಗು ಹಾಡುಗಳಿಂದಲೂ ಒಂದೊಂದನ್ನು ಹೆಕ್ಕಿ ಬರೆದಿದೆ. ಅತ್ಯಂತ ಶಿಥಿಲವಾದ ಪ್ರತಿ. ನಡುವೆ ಅಲ್ಲಲ್ಲಿ ಓಲೆಗಳು ಹೋಗಿರುವುದರಿಂದ ಕೆಲವು ಹಾಡುಗಳು ಅಪೂರ್ಣವಾಗಿವೆ. ಓಲೆಗಳ ಸಂಖ್ಯೆಯು ಕ್ರಮವಾಗಿರಲಿಲ್ಲವಾಗಿ ಹೊಸದಾಗಿ ಕೊಡಲಾಗಿದೆ. ಕೊನೆಯ ಓಲೆಯು ೮೧ ನೆಯದು. ಲಿಪಿ ಚೆನ್ನಾಗಿದೆ.

ಹಾಡುಗಳು ಪಶ್ಚಿಮ ರಂಗನಾಥ, ಯದುಗಿರಿ ತಿರುನಾರಾಯಣ ಈ ಅಂಕಿತಗಳಲ್ಲಿ ಪ್ರಾಯಕವಾಗಿ ಬರೆದವುಗಳಾಗಿವೆ. ಪಶ್ಚಿಮ ರಂಗನಾಥನ ಅಂಕಿತಗಳಲ್ಲಿ ಬರೆದಿರುವ ಹಾಡುಗಳೇ ಹೆಚ್ಚು. ಕನ್ನಡ ನಾಡನ್ನು ವರ್ಣಿಸುವಾಗ ಶ್ರೀರಂಗಪಟ್ಟಣದೊಡನೆ ತಿರುಪತಿಯನ್ನೂ ಹೇಳಿದೆ. "ಇಂದು ಮನದೇಶಿಕೆ" ಎಂಬ ಹಾಡಿನಲ್ಲಿ "ಚಿಕದೇವರಾಜೇಂದ್ರನೊಲಿದೀ ವಿಧದ ಮನ್ನಣೆಯನೆನ್ನೊಳೊಡರಿಸಿದ" "ತಿರುಮಲಾರ್ಯನುಸಿರ್ದ ಹರಿಕಥಾಮೃತವೆನ್ನ ಹಸ್ತಗತವಾಯಿತು" ಎಂದು ಹೇಳಿದೆ. ಕವಿ ಚಿಕ್ಕುಪಾಧ್ಯಾಯನಾಗಿರಬಹುದೋ ಏನೋ?

No. 1296. ಸಂಗೀತ ರತ್ನಾಕರ.

SANGĪTA RATNĀKARA.

Substance, paper. Size, 12-1/8 × 7-9/16 inches. Pages, 44. Lines, 12—25 on a page Extent, 500 granthas. Charcater, Telugu. Condition, slightly injured. Appearance, old. Mode of writing, good and free from mistakes.

Incomplete.

Deals with the ten-fold gamakas, various kinds of svaras (musical notes), the different modes of Janyarāgas, Mēḷarāgas and the modes of playing gamakas on the stringed instruments lute and others. Twenty-two tables consisting of the details relating to music mentioned above, are given in this manuscript. The name of the author is not known.

Folio 23-*b* is left blank.

This has-been published under the Government Oriental Series, No. XXX in the year 1949–50.

Beginning—

ದಶವಿಧ ಗಮಕಗಳು—

ಶ್ಲೋ॥ ಆರೋಹ ಮವರೋಹಂಚ ಢಾಲಸ್ಫುರಿತ ಕಂಪಿತಾಃ ।
ಆಹತ ಪ್ರತ್ಯಾಹತೌಚ ತ್ರಿಪ್ರಚ್ಛಾಂದೋಳ ಮೂರ್ಛಿತಾಃ ॥

೧. ಆರೋಹಣ :—ಸ ರಿ ಗ ಮ ಪ ಧ ನಿ ಸ—ಹತ್ತೋಣ.

೨. ಅವರೋಹಣ :—ಸ ನಿ ಧ ಪ ಮ ಗ ರಿ ಸ—ಇಳಿಯೋಣ.

೩. ಢಾಲ :—ಆರೋಹಣ ಅವರೋಹಣ ಯೊ ೨ ರಲ್ಲು ಜಾರು ತಾಲಿ ಸ್ವರಗಳು ನುಡಿಸೋಣ ಢಾಲು.

೪. ಸ್ಫುರಿತಂ :—ಆರೋಹಣ ಅವರೋಹಣಗಳಲ್ಲಿ ನೊಕ್ಕ್ಯತ ಸ್ವರಗಳು ನುಡಿಸುವುದು ಸ್ಫುರಿತಂ.

೫. ಕಂಪಿತ :—ತಂತ್ರಿಯನ್ನು ಅಲುಗಾಡಿಸಿ ನುಡಿಸುವುದು ಕಂಪಿತ.

೬. ಆಹತ :—ಆರೋಹಣದಲ್ಲಿ ಜಂಟಿಸ್ವರಗಳು ನುಡಿಸುವುದೂನೂ ದೂರ ಸಂಗತಿಗಳಲ್ಲಿ ಕೈಬಿಟ್ಟು ಪುನತಾ ನುಡಿಸುವುದುನೂ ಯಿದು ಆಹತ.

೭. ಪ್ರತ್ಯಾಹತ :—ಅವರೋಹಣದಲ್ಲಿ ಜಂಟಿ ಸ್ವರಗಳು ನುಡಿಸುವುದು.

೮. ತ್ರಿಪುಚ್ಛ :—ಒಂದು ಸ್ವರದಿಂದ ಜಾರಿ ತಿರುಗಿ ಆ ಸ್ವರದಲ್ಲಿಯೇ ನಿಲ್ಲೋಣವೂ ಅದರ ನಳಗೆ ಮೇಲೆ ಸಹ ಹೋಗಿ ನಿಲ್ಲೋಣವೂ ಮೂರುಗಳು ತ್ರಿಪುಚ್ಛ.

೯. ಆಂದೋಳ :—ರಾಗ ನುಡಿಸುವಲ್ಲಿ ಚಾಕದಲ್ಲಿ ತಂತ್ರಿಯನ್ನು ಸೆಳೆದು ಒಡಂಬಡಿಕೆಯಾಗಿ ನುಡಿಸುವುದು ಆಂದೋಳ. ಇದುವೆ ಗಮಕವೆಂಬುವುದೂನೂ.

೧೦. ಮೂರ್ಛನ :—ರಾಗಗಳಿಗೆ ಯಾವ ಕಡೆ ವಿಶ್ರಮವೋ ಆ ಸ್ವರದಲ್ಲಿ ತಿರಿಗಿ ನುಡಿಸುವುದೇ ಮೂರ್ಛನಂ

ಮೇಳಕರ್ತ ರಾಗ	ರಾಗಗಳ ಜನ್ಯಗಳು	ಅವರೋಹಣ													
		ಷಡ್ಜ	ನಿಷಾದ		ಧೈವತ		ಪಂಚಮ	ಮಧ್ಯಮ		ಗಾಂಧಾರ		ಋಷಭ		ಷಡ್ಜ	
		ಪ್ರಕೃತಿ	ವಿಕೃತಿ	ಪ್ರಕೃತಿ	ವಿಕೃತಿ	ಪ್ರಕೃತಿ	ಪ್ರಕೃತಿ	ವಿಕೃತಿ	ಪ್ರಕೃತಿ	ವಿಕೃತಿ	ಪ್ರಕೃತಿ	ವಿಕೃತಿ	ಪ್ರಕೃತಿ	ಪ್ರಕೃತಿ	
ಮಾಯಾಮಾಳವ ಮೇಳ	ದೇವರಂಜಿ	ಸ	ನಿ			ಧ	ಪ		ಮ					ಸ	
ನಠ ಭೈರವಿ	ಪೂರ್ಣಪಂಚಮ	ಸ	ನಿ				ಪ		ಮ		ಗ	ರಿ		ಸ	ಸ ಮ ಮ ಧಾ ಪ ನಿ ಧ ನಿ ಸಾ— ಸ ಸ ನಿ ಧ ಮ ಮ ಸ—
ಖರಹರ ಪ್ರಿಯ	ಮಾರುವ ಧನ್ಯಾಶಿ	ಸ	ನಿ			ದ	ಪ		ಮ		ಗ	ರಿ		ಸ	ಸ ರಿ ಗ ಮ ಧ ನಿ ಸ— ಸ ನಿ ಪ ಮ ಗ ರಿ ಸ—
ಖರ	ಕಳಾನಿಧಿ	ಸ	ನಿ			ದ	ಪ		ಮ		ಗ	ರಿ		ಸ	
ಖರ	ಶುದ್ಧಸೇನಾ	ಸ	ನಿ			ದ	ಪ		ಮ		ಗ	ರಿ		ಸ	
ಖರ	ಜಯನಾರಾಯಣಿ	ಸ	ನಿ			ದ	ಪ		ಮ	ಗ			ರಿ	ಸ	

ಪ.ವಿ.—

ಅಸಮಗ್ರ. ಇದರಲ್ಲಿ ದಶವಿಧಗಮಕಗಳು, ರಾಗಕ್ರಮ, ಸ್ವರನಿರ್ಣಯ, ಮೇಳ ರಾಗಗಳು ಮತ್ತು ಅವುಗಳ ಜನ್ಯರಾಗಗಳ ಆರೋಹಣಾವರೋಹಣಗಳು, ರಾಗಗಳಲ್ಲಿ ಗಮಕವನ್ನು ಹಿಡಿಯುವ ಸ್ವರಗಳು, ತಂತ್ರೀವಾದ್ಯದಲ್ಲಿ ಗಮಕವನ್ನು ಬಾರಿಸುವಿಕೆ, ಔಡವ, ಷಾಡವ ಸಂಪೂರ್ಣ ವಕ್ರರಾಗಗಳು, ರಾಗಗಳ (ಕೆಲವುಗಳ) ಸಾಮಾನ್ಯ ಸಂಚಾರ ಇವು ನಿರೂಪಿತವಾಗಿವೆ. ಇದು ಕಾಗದದ ಪ್ರತಿ. ಶಿಥಿಲವಾಗಿದೆ. ಲಿಪಿ ತೆಲುಗು (ಭಾಷೆ ಕನ್ನಡ). ಚೆನ್ನಾಗಿದೆ.

ಈ ಗ್ರಂಥವು ಮದ್ರಾಸ್ ಓರಿಯಂಟಲ್ ಲೈಬ್ರರಿಯುವರಿಂದ 1949-50 ರಲ್ಲಿ ಮುದ್ರಿತವಾಗಿದೆ.

No. 1297. ಸಪ್ತಪದಿ-

SAPTAPADI.

Substance, palm-leaf. Size, 11-5/8 × 1-3/16 inches. Pages, 90. Lines, 4 on a page Extent, 560 granthas. Character, Kannada. Condition, much injured. Appearance, old. Mode of writing, good.

Begins on fol. 69-*a* of the manuscript described under No. 1279 ante.

Incomplete.

Similar to Gītāgōpāla. It is mostly an erotic poem, describing the sentiments of love in different aspects. Cikkadēvarāja made the hero. The name of the author is not known.

Beginning—

ಇದಱಿತೊಳ್ಳೊರ್ವೊರ್ದಲ ತ್ರಿಪದಿಯೊಳಷ್ಟದೇವತಾ ಸ್ಮರಣಾರೂಪವಾದ ಮಂಗಳಮಂ) ಕಥಾನಾಯಕ ಗುಣವರ್ಣನ ರೂಪವಾದ ವಸ್ತುನಿರ್ದೇಶಮುಮಂ ಬೆರಸಿ ಪೇಳ್ವೆರ್.

॥ ರಾಗ ॥ ಯದುಕುಲಕಾಂಬೋಧಿ ॥

ಪಲ್ಲವಿ.—

ಮಂಗಳ ಮಹಿಶೂರ [ವ] ರ (ಸ) ನಿಗೆ। ವಿಗೆ।
ಮಂಗಳ ಚಿಕದೇವರಾಯನಿಗೆ॥

ಚರಣ—

ಪರಿತಂದ ಧರ್ಮವಿಪಕ್ಷರೆನಿಪ ಭೂ।
ಪರನನಿಬರ ಪೊಯ್ದು ಬಸವಳಸಿ॥
ಉಱಿತಿ ಧರ್ಮರಾಜ್ಯವನುನ್ನತಿ ಗೊಳಸಿದ।
ಪುರುಷೋತ್ತಮನಿಗೆ ಪುಂಡರೀಕಾಕ್ಷಗೆ॥

ಚರಣಕೆಱಗಿದರ ಮರುಳುಗಳಯ ಸ।
ಚ್ಚರಿತ ವಿಜ್ಞಾನ ಸದ್ಭಕ್ತಿಗಳ ॥
ಇರವ ತಿಳಪಿ ಕಟ್ಟಿರಕದೊಳೊಪ್ಪುವ।
ನರಪತಿ ಯಾದವ ನಾರಾಯಣನಿಗೆ ॥ (೨)

ಆ ನಾರದಾದ್ಯರಂ ತಾನಂದವಡೆಯಿಸಿ।
ಈ ನೆಲದೊಳಗಿರುವವರೆಲ್ಲರನು।
ಜೇನ ಸರಿಯು ಪೋಲ್ವ ತಾಣದೊಳ್ತಣಿಯಿಪ।
ಗಾನಾಮೃತಾಬ್ಧಿಗೆ ಗರುಡ ಧ್ವಜನಿಗೆ ॥ (೩)

* * * * *

(ಓಲೆ ೭೨.)

ಈಯಾಱನೆಯ ನವಪದಿಯೊಳೀ ಮಹಾರಾಯನೊಡ್ಡೋಲಗದೊಳೆಚ್ಚರಿಸಿ ಬಿನ್ನವಿಸಿ ನುಡಿವ ಕೈವಾಱಿಗಳ ನುಡಿಯ ನೆವದಿಂದಿವನ ಪಾದಸೇವಕರಪ್ಪ ವೀರಪುರುಷರ **ವೀರಾಯಿ**ತಂಗಳಂ ಬಿತ್ತರಿಸಿ ನುಡಿವರ್.

॥ ರಾಗ ॥ ಹುಸೇನಿ ॥

ಪಲ್ಲವಿ—
ರಾಯ ಪರಾಕು ಶ್ರೀ ಚಿಕದೇವ ರಾಯ ಪರಾಕು।
ಜೀಯ ನಿನ್ನಡಿಗಳ ಸೇವೆಗೆಯ್ದುದ ರೊಳಿ।
ದಾಯದ ಪಾಂಗವನನುಗೊಳಿಸುವುದಿತ್ತ ॥

ಚರಣಗಳು—
ಅಳಮಯದೊಳು ಬಂದು ಪೊಸವೂರ ಮುತ್ತಿದ।
ಯಶವಂತರಾವ ನೆಳ್ಬಿಸಿ ತಱುಬಿ ॥
ಬಸವಳಯಿಸಿ ಮೂಗ ವಱಿಸಿ ಪಾತಿಳಯಿಸಿ।
ದಸವು ವೀರ ರಿವರವಧರಿಸುವುದಿತ್ತ ॥ (೧)

ಎಲ್ಲಾ ನಾಡುಗಳ ಪೊಕ್ಕಱಿದವ್ರೊಲೆಂದುಬ್ಬಿ।
ಚೆಲ್ಲವಾಡುತ ಗಡಿಸೆಱಗಿಗೆ ಪರಿದ ॥
ಬಲ್ಲಿದ ವಿಟ್ಠಲಬಾಲೆರಾವನುಱಿ।
ಕೊಲ್ಲದ ಕೊಲೆಗೊಂದ ಕೂರಾಳುಗಳಿತ್ತ ॥ (೨)

ಲೂಟಿಯ ಮಾಯಿಮರಾಟರೆಲ್ಲರೊಳುಱಿ।
ಮೇಟಿಯ ಜೈತಜಿ ಕಾಟಕರನು ॥
ದಾಟಿಸಿ ಜವನೂರ ದಾರಿವಿಡಿಸಿ ನಾಡೆ।
ಕಾಟವ ಬಿಡಿಸಿದ ಗಾಡಿಕಾಱರಿತ್ತ ॥ (೩)

ವಿದುಲ ಶಾಹನ ನಿರವುಗೆಡಿಸಿದೆ ನಿ:
ನ್ನೀದೇಶದೊಳದಿರಿಲ್ಲೆಂದು ಬೆಱತಿತ ॥
ದಾದಜೆಕಾಕಡೆಯ ತಲೆಯ ಚೆಂಡಾಡಿದ ।
ಪಾದಸೇವಕರಿತ್ತ ಬಗೆಗೊಳಿಸುವುದೊಮ್ಮೆ ॥ (೪)

ತಱುಬಿ ಕುತುಪಶಾಹದಳವನವರ ಪಡೆ ।
ಗುಱುಪುವಳವಿಗೆ ಕುದುರೆಯಾನೆಗಳ ॥
ಸಿರೆಗೆಯ್ದು ತುಮಕೂರು ಚಿಕ್ಕನಾಯಕನ ಹಳ್ಳಿ ।
ತುಱುಗೆಱೆತಿಗಳ ಕೊಂಡೆ ಧುರಧೀರರಿವರಿತ್ತ ॥ (೫)

ಮೇಲುವಾಯ್ದೆಯ್ತಂದು ಮಿತಿಗೆಟ್ಟ ಕೆಳದಿ ನೃ ।
ಪಾಲಬಲವ ಭಂಗಪಡಿಸಿ ಬಾಡಿಳಿಸಿ ॥
ಬೇಲೂರು ಮೊದಲಾದ ಸಾಲೂರುಗಳ ಕೊಂಡು ।
ಕಾಲೂಱಿನಿಲದಂತೆ ಕೆಡಹಿದರಿವರಿತ್ತ ॥ (೬)

ನಾಡೊಳಿರುವ ನೆಲವೀಡು ಗೋಂಟೆಯೊಳಡು ।
ಜೋಡಿಲವೆಂದು ಕೊಂಡಾಡೆ ಕೋವಿದರೂ ॥
ರೂಢಿವಡೆದ ಬೆಂಗಳೂರನಾಕ್ರಮಿಸಿದ ।
ಗಾಡಿಕಾಱರೊಳಿತ್ತ ಕಡೆಗಣ್ಣ ಕವಿಸೊಮ್ಮೆ ॥ (೭)

ಕುದುರೆ ಯೆಣ್ಬಾಸಿರ ಕಾಲಾಳ್ಗಳು ಲಕ್ಕ ।
ಮದದಾನೆ ನೂಱಱಿಂ ಮಲೆತು ಮಾಱಾಂತ ॥
ಮಧುರೆಯಖಾನ್ಸಾನ ಫೌಜ ಮರ್ದಿಸಿ ಮಱವನ ।
ಸದೆದೆ ಕೊಂಗುನಾಡ ಸಾಧಿಸಿದವರಿತ್ತ ॥ (೮)

ಬಳಸಿದೆಣ್ದೆಸೆಯೊಳು ಪಡಿಬರಿಸಿದ ಕೊಂಗ ।
ತೆಲುಗ ಮರವ ಕಳ್ಳ ಮಲೆಯಾಳ ಕೊಡಗ ॥
ಮಲೆಸ ತುಲುಕ ಬೇಡ ಮಾವಳಿ ಮೊರಸ ।
ನೆಲೆವೀಡುಗಳ ಕೊಂಡೆ ಗೆಲವುಗಾಱಿತ್ತ ॥ (೯)

ಈ ವಿಳಸೆಯ ಪಂಚಪದಿಯೊಳಿವನ ದಿಗ್ವಿಜಯ ಯಾತ್ರೆಯೊಳ್ ಪಗೆರಾಯರೊಡನವರ ಹಿತವಿಗರ್ ಪೇೞ್ವ ಹಿತೋಪದೇಶದ ನೆವದಿಂದಿವನ ಗೆಲ್ಲಂಗಳೊಳ್ಕೆಲವಂ ಗುಱುತುಗೆಯ್ದು ಪೇೞ್ವರ್.

॥ ರಾಗ ॥ [ಖಾಬಿ] (ಕಾಪಿ) ॥

ಪಲ್ಲವಿ—

ಅದೆ ಬಂದನದೆ ಬಂದ ನೆಂತೆಂಬರಗಂಡ ।
ಇದಿರಾಂತವೆವೆಂದು ನೀವಿರವುಗೆಡದಿರಿರೊ ।
ಪದಪದ್ಮಕೆಱಗಿರೊ ಬಾಳಿರೊ ಬದುಕಿರೊ ॥

ಕಡುಗೆಸಱಿನೊಳಾನೆ ಕಾಲೂರಿ ಸಿಲುಕೆ ತೆಂ ।
ದೆಡಬಲದರಸುಗಳೆಲ್ಲರ ಕವಿಸಿ ಯಿ ॥
ಟ್ಟಿಡೆಯು ವೇಳೆಯೊಳು ಬಂದಕ್ಕೋಜಿಯು ಬ ।
ಲ್ವಡೆಯನೋಡಿಸಿ ಯಶವಂತರಾವ ಮುಡಿ ।
ಪಿಡಿದು ಕೆಡಪಿ ಮೂಗ ಬೇರುವೆರಸು ಕೊಯ್ದು ॥ (1)

ಮಧುರೆ ತಂಜಾವೂರ ಮರ್ದಿಸಿ ಮಱವನ ।
ಮದವ ನಿಳುಹಿ ಬಱುಮೆಯ್ಗೆವಡೆದು ಮೆಯ್‌ ।
ಹದಗೆಟ್ಟು ಹರಿತಂದು ಕಡೆಗಡಿಯೆಡೆಯೊಳು ।
ಪದವಿಟ್ಠಲ ಪಿಟ್ಠಲಬಾಲೆರಾವಿನ ಫೌಜ ।
ಸದೆದೋಡಿಸಿ ಕೂಡೆ ಸರ್ವಸ್ವವನು ಕೊಂಡು ॥ (2)

ಮುಗಿಲನಾಡೆನಿತಕ್ಕ ಮೂಗುಱಿಬ್ಬಸಗೆಯ್ದು ।
ಪಗದಿ ಚೌತಾಯಿಯು ಪಟ್ಟಪಗಲೆ ಕೊಂಡೆ ।
ವಿಗಡ ಜೈತಜಿ ತನ್ನ ಬಿಂಕದೊಳೆಯ್ತರೆ ।
ತಗುಳಯುವನ ಫೌಜ ತಬ್ಬಿಬ್ಬುಗೊಳಿಸುತ ।
ಲಗಡೆಱಗಿದವ್ರೊಲು ಲಾಗಿಸಿ ಬಡಿದವ ॥ (3)

ಗಜವಾಜಿಯುಂಟೆಂಬ ಗರ್ವದಿ ಮೆಯ್ಗೆಟ್ಟು ।
ನಿಜಪರದೇಶವ ನೆಗ್ಗಿ ನಿರ್ದಯದೊಳು ।
ಪ್ರಜೆಯ ಬಡಿದು ಛತ್ರಪತಿಯೆಂದು ಬೆಱಿತ ಶಂ ।
ಭುಜಿ ಸಾತರೆಗೊಂದು ಭುಜವೆನಿಸುವ ದಾ ।
ದಜಿ ಕಾಕಡೆಯ ಪಂಡಲೆಯ ಚೆಂಡಾಡಿದ ॥ (4)

ಸೊಕ್ಕಿ ಮೇಲ್ವಾಯ್ದು ಬಂದಿಕ್ಕೇರಿಯವರ ।
ಕಕ್ಕಸ ದುರ್ಗಂಗಳ ಕೆಯ್ವಸಗೆಯ್ದು ॥
ಸಕ್ಕರೆ ಪಟ್ಟಣವನು ಸರಸಮಾರ್ಗದಿ ಕೊಂ ।
ಡುಕ್ಕಿ ಚಿಕ್ಕಮಗಳೂರನಾಕ್ರಮಿಸಿ ಮೆಯ್‌ ।
ಸೊಕ್ಕನಿಳುಹಿದ ಶ್ರೀ ಚಿಕ್ಕದೇವರಾಜೇಂದ್ರ ॥ (5)

ಇಂತು ಮೊದಲ ಸಪ್ತಪದಿಯೊಳ್‌ ನಾಯಕಗುಣಾನುವರ್ಣನಂಗೆಯ್ದು ಯಿೂ ಯೆರಡನೆಯ ಸಪ್ತಪದಿಯೊಳ್‌ ಶ್ರೀ ಚಿಕದೇವಮಹಾರಾಯಂಗೆ ಮನಂ ಸೋಲ್ದ ವಿರಹಿಣಿಯರಿರವಮಾವರ ನುಡಿಗಳಂ ನಿರೂಪಿಸುವರ್‌. ಇದಱೊಳ್‌ ಮೊದಲ ತ್ರಿಪದಿಯೊಳವನ ಗುಣಂಗಳಂ ಕೇಳ್ದು ಕಿವಿವೇಂಟದೊಳ್‌ ಮನಂ ಸೋಲ್ದವನೊಳಗಮಂ ಬಯಸಿ ಚಿಂತಿಸುವ ಕಾಂತೆ ತನ್ನಂತರಂಗಮಂ ಕೆಳದಿಯೊಳ್‌ ಪೇೞ್ವಳ್‌.

End :

ಏಳನೆಯ ತ್ರಿಪದಿಯೊಳ್‌ ಶ್ರೀ ಚಿಕ್ಕದೇವಮಹಾರಾಯಂ ನೆವಮಿಲ್ಲದ ನೇಹದಿಂ ತನ್ನಂ [illegible] ಲಾಲಿಸುಪತಿಕೆಯುಮಂ ಸ್ವೀಕರಿಸದ ಸವತಿಯರ್‌ ಬೆದಱಿಸಿ ನುಡಿವ ಮಾತಿಗಳ್ಳು ಬಂದು

ಕೇಳ್ದು ಕೆಳದಿಯರೊಡನೆ "ತಮ್ಮ ಸ್ವಾತಂತ್ರ್ಯದಿಂ ಬೆರ್ಚಿದವರ್ಗೆಲ್ಲಸೆ ಭಯಮಂ ತವಂ ನಡೆಸಿ ಬಂತೆ ನಡೆವೆನಗಾಪಗಂ ನಿರ್ಭಯ" ಮೆಂದು ತನ್ನ ಸೌಭಾಗ್ಯಮಂ ಮೆಱೆವಳ್.

॥ ರಾಗ ॥ ಮಧುಮಾಧವಿ ॥

ಪಲ್ಲವಿ.—

ಎದೆಯ ಮೆಟ್ಟಿನಿಂದವ್ರೊಲಿರುವೆ ಮತ್ತೇನು ।
ಇದಱಮೇಲೆ ಬರುವುದೇನು ಬಂದರೂ ಬರಲಿ ॥

ಚರಣಗಳು.—

ಕಱುಬಿ ಖತಿಗೊಳ್ವವರ ಗಱುಮುಱುಗುಟ್ಟುವರ ।
ಬೆಱಗುವಟ್ಟು ನಿಲುವರ ಬೆದರಿಸುವರ ।
ಕೊರತೆಯನೆಣಿಸುವರ ಕುಚಿತ್ರವಾಗಿ ಕಾಂಬರ । (?)
ಬೆಱತು ನುಡಿವವರ ಸೆಱತು ನೋಡುವರ ॥ (1)

ಚಿಂತಿಸಿಯಳಲುವರ ಸಿಡಿಮಿಡಿಗೊಳ್ವವರ ।
ಪಂತವನಾಡಿಕೊಂಬರ ಬಲ್ಮೆದೋರ್ಪರ ॥
ತಂತಮ್ಮ ಪೊಗಳ್ಕೊಂಬರ ತಱಹಿಸಲಾರದವರ ।
ಅಂತರವನಱಿಯದವರ ಅಂತಂತೆಂದು ನುಡಿವರ ॥ (2)

ಮೊಗದಿರುಹುವವರ ಮಾನದೊಳಿರುವರ ।
ಹಗೆಸಾಧಿಸುವವರ ಹಮ್ಮೈಸುವರ ।
ಮುಗುಳ್ನಗೆದೋರುವರ ಮೋಡಿಯ ಕಾಣಿಸುವರ ।
ಯೊಗುವೆ ಚಿಕದೇವರಾಯನೇನು ಮೆಚ್ಚಿದನೆಂಬರ ॥ (3)

ಎದೆಯ ಮೆಟ್ಟಿ ನಿಂದವ್ರೊಲಿರುವೆ; ಎನ್ನಂ ಕಱುಬುವ ಸವತಿಯರಂ ಕೀಳ್ಪಡಿಸಿಯವರ ಕಣ್ಣ ಮುಂದವರಿಂದತಿಶಯಮಾಗಿರ್ಪೆಂ. ಮತ್ತೇನು. ಕಾಂತನ ದಯಮೆನ್ನೊಳ್ ಪರಿಪೂರ್ಣ ಮಾಗಿರೆ ಇತರ ಗಣನೆಯೇನು. ಇದರ ಮೇಲೆ ಬರುವುದೇನು? ಬಂದರೂ ಬರಲಿ. ಇನಿತುಂ ದಿವಸಂ ನಡೆಸಿದಂತಲ್ಲದೆ ಸವತಿಯರ್ ಪೊಸಬಗೆಯೊಳ್ ಪಿರಿದುಂ ದುರ್ಯತ್ನಂಗಳಂ ಮಾಡಿದೊಡಂ ಮಾಟಿಕ್ಕೆ. ಮತ್ತಮೆನ್ನೊಳ್ ಕಾಂತನ ದಯಂ ನೆಲೆಗೊಳ್ಗೆಂದೀ ತ್ರಿಪದಿಗೆ ತಾತ್ಪರ್ಯಂ.

ಇಂತೇೞಿಂ ಸಪ್ತಪದಿಗಳಿಂ ಶೃಂಗಾರರಸಮಂ ಸಾಂಗಮಾಗಿ ನಿರೂಪಿಸಿ ಮತ್ತಮೊಂದು ತ್ರಿಪದಿಯಿಂ ತನ್ನೊಳ್ ನೆವಮಿಲ್ಲದೆ ದಯಗೆಯ್ವ ಚಿಕದೇವರಾಯನಂ ನಾರಾಯಣಂಗೆತ್ತವ ನೊಳಗಂಗೆಯ್ವುದೆ ತನಗೆ ಜನ್ಮಜನ್ಮಂಗಳೊಳಂ ದೊರಕೊಳ್ಗೆಯೆಂದಾಸೆವಡುವ ಕಾಂತೆಯ ನುಡಿಗಳಿಂ ಮಂಗಳಂಗೆಯ್ದು ಪ್ರಬಂಧಮಂ ನೆರವೇರಿಸುವರ್.

॥ ರಾಗ ॥

ಪಲ್ಲವಿ.—

ಕಣ್ಣಿಗೆ ರೈಯ್ಯವಾಗಿರ್ಪ ಕಾಲಕಾಲವು [ಯೆಳೆ] (ಇಳೆ) ।
ವೆಣ್ಣೆನೆರೆಯ ಚಿಕದೇವೇಂದ್ರ ಶೌರಿಯೆನ್ನ ॥

ಚರಣಗಳು—

ಅವರವರಸಕಂಗಳವರಿಗೆ ಬೆಳಗೆಯಿಂ ।
ದವರಿವರಂತೆನ್ನ ನಲಗೆಯ್ಯದೆ ॥
ನೆವವಿನಿತಿಲ್ಲದ ನೇಹವ ಬೆರಸಿ ಮಿಗೆ ।
ತವಕಿಗರೆನಿಪ ಯಾದವನಾರಾಯಣನೆನ್ನ ॥ (1)

ತಪ್ಪಿಗೆ ಮೊಗದೆಗೆದೊಳ್ಪಿಗೊಲಿವೆ ನೆಂಬ ।
ತಪ್ಪುದಾರಿಯೊಳೆನ್ನ ತಣಿಯಿಸದೆ ।
ಮುಪ್ಪುರಿಯೇರುವ ಮೋಹವ ಬೆರಸಿ ಮಿಗೆ ।
ತಪ್ಪನೊಪ್ಪಗೊಂಬ ಧರಣಿವರಾಹನೆನ್ನ ॥ (2)

ಆವರಿಗಾವುದನಾವವೇಳೆಯೊಳೀವು ।
ದಾವೇಳೆಯೊಳವರ್ಗದನೀವೆನೆಂದು ॥
ಈವಗೆದೋರದೆ ಯೆನ್ನ ತನ್ನವಳಿಂ ।
ದೋವಿ ನಲಿವ ಚಿಕದೇವರಾಯ ನೆನ್ನ ॥ (3)

ವಿ.ವಿ—

ಸಪ್ತಪದಿ. ಅಸಮಗ್ರವೆಂದು ತೋರುತ್ತದೆ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಗೀತಗೋಪಾಲವಿದೆ.

ಇದು ಗೀತಗೋಪಾಲದಂತೆಯೇ ಇದೆ. ಇದನ್ನು ಶೃಂಗಾರ ಸಂಗೀತ ಪ್ರಬಂಧವೆಂದು ಹೇಳಬಹುದು. ಇದರಲ್ಲಿ ಚಿಕ್ಕದೇವರಾಯನು (ಮೈಸೂರು ದೊರೆ—ಕ್ರಿ.ಶ. ೧೬೭೨-೧೭೦೪) ನಾಯಕನು. ಅವನ ಪ್ರಾಣಕಾಂತೆಯರೇ ನಾಯಕಿಯರು. ಈ ಗ್ರಂಥದಲ್ಲಿ ಆರು ಸಪ್ತಪದಿಗಳೂ ಒಂದು ದಶಪದಿಯೂ ಇವೆ. ಒಂದೊಂದು ಸಪ್ತಪದಿಗಳಲ್ಲಿಯೂ ಏಳೇಳು ಪದಗಳು ಅಥವಾ ಹಾಡುಗಳು ಇವೆ. ದಶಪದಿಯಲ್ಲಿ ಹತ್ತು ಹಾಡುಗಳಿವೆ. ಈ ಹಾಡುಗಳು ಪಲ್ಲವಿ ಚರಣಗಳಿಂದ ಕೂಡಿ ಅನೇಕ ರಾಗಗಳಿಂದ ಬರೆದವುಗಳಾಗಿವೆ. ಮಧ್ಯೆ ಒಂದು ದಶಪದಿಯಿದ್ದರೂ ಈ ಸಮೂಹಕ್ಕೆ ಒಟ್ಟಿನಲ್ಲಿ ಸಪ್ತಪದಿಗಳೆಂದೇ ಹೆಸರು. ಇದರ ಹಾಡುಗಳಲ್ಲಿ ಕೆಲವಕ್ಕೆ ಮೂರು ಚರಣಗಳೂ ಕೆಲವಕ್ಕೆ ಐದೂ ಮತ್ತೆ ಕೆಲವಕ್ಕೆ ಒಂಭತ್ತು ಚರಣಗಳೂ ಈ ಮುಂತಾಗಿವೆ. ಈ ಸಪ್ತಪದಿಗಳಲ್ಲಿ ಕ್ರಮವಾಗಿ ಮೊದಲನೆಯದರಲ್ಲಿ ನಾಯಕ ಗುಣಾನುವರ್ಣನವೂ ಎರಡು ಮತ್ತು ಮೂರನೆಯವುಗಳಲ್ಲಿ ನಾಯಕನಿಗೆ ಮನಸೋತ ಕಾಂತೆಯರ ವೃತ್ತಾಂತವೂ ನಾಲ್ಕನೆಯದರಲ್ಲಿ ನಾಯಕ ವೃತ್ತಾಂತವೂ ಐದನೆಯ (ದಶಪದಿ) ದರಲ್ಲಿ ಸ್ತ್ರೀಯರ ಹತ್ತುವಿಧ ಶೃಂಗಾರಭಾವವರ್ಣನವೂ ಆರನೆಯದರಲ್ಲಿ ಖಂಡಿತಾ ಕಾಂತೆಯರ ವೃತ್ತಾಂತವೂ ಏಳನೆಯದರಲ್ಲಿ ವಿರಹೋತ್ಕಂಠಿತಾ ಸ್ವಾಧೀನ ಪತಿಕಾ ನಾಯಿಕೆಯರ ವೃತ್ತಾಂತವೂ ಉಕ್ತವಾಗಿವೆ. ಕವಿಯಾರೆಂಬುದು ಈ ಗ್ರಂಥದಿಂದ ತಿಳಿದುಬರುವುದಿಲ್ಲ. ಚಿಕದೇವರಾಜನ ವರ್ಣನಾ ವಿಷಯವಾಗಿರುವುದರಿಂದ, ಆ ಕಾಲದಲ್ಲಿ ಅವನ ಆಸ್ಥಾನ ಕವಿಗಳಾಗಿದ್ದ ಯಾರಾದರೂ ಒಬ್ಬರು ಬರೆದಿರಬಹುದು. ಈ ಗ್ರಂಥವು ಈವರೆಗೂ ಮುದ್ರಿತವಾಗಿರುವ ಹಾಗೆ ನಮಗೆ ತಿಳಿದುಬರುವುದಿಲ್ಲ. ಈ ಪ್ರಬಂಧ ಬಂಧವು ಸರಳವಾಗಿಯೂ

ಸರಸವಾಗಿಯೂ ಇದೆಯೆಂದು ಹೇಳಬಹುದು. ಉಳಿದ ವಿಷಯಗಳನ್ನು ಉದಾಹೃತಭಾಗಗಳಿಂದ ನೋಡಿ ತಿಳಿಯುವುದು. ಈ ಗ್ರಂಥವು ಆರಂಭವಾಗುವ ಓಲೆಯ ಸಂಖ್ಯೆ ಹದಿಮೂರಾಗಿರುವುದರಿಂದ ಇದರ ಆದಿಯ ಭಾಗವು ಸ್ವಲ್ಪಮಟ್ಟಿಗೆ ಲುಪ್ತವಾಗಿದೆಯೋ ಏನೊ.

No. 1298. ಹಸೆಗೆ ಕರೆವ ಹಾಡು by ರಾಮಚಂದ್ರ.

HASEGE KAREVA HĀḌU BY RĀMACANDRA.

Substance, palm-leaf. Size, 10 15/16 × 1⅛ inches. Pages 6. Lines 6 on a page. Extent, 42 granthas. Character, Kannada. Condition, much injured. Appearance, old. Mode of writing, good.

Begins on foll. 29-*a* of the manuscript described under No. 641 ante. The first two folios are broken on one side and the last on both sides.

Incomplete.

Contains two songs usually sung on marriage occasions by females and addressed to the bride and the bridegroom. One Rāmacandra appears to be the author.

Beginning—

ವಾಣಿಯ ಫಣಿ ವೇಣಿಯ ಗೀರ್ವಾಣಿಯ ।
ಜನವಿನುತೆಯ ಬೊಮ್ಮನ ।
ರಾಣಿಯ ಗುಣಾವಣಿಯ ॥
ವೀಣಾವಾದಿನಿಯ ಮನದಣಿಯಲು ನಮಿಸುವೆ ।
ವೀಣಾಪಾಣಿಯ ಪದಯುಗಕೆ ಮುದದಿಂದೆ ॥ (1)

ಮೇನಕೆ ಹರಿನಾಯಕೆ ರಂಭೆಯು ।
ನಾನಾ ಸುರಲಲನೆಯರತಿಶಯ
ಮೀನಾಕ್ಷಿಯರಿಂದು ಮುಖಿಯರು । ಮುಖಿಯರು ನೆರೆದಾಡುತ ಪಾಡುತ ।
ಜಾನಕಿಯ ಹಸೆಗೆ ಕರೆತಾರೆ ॥ (2)

End—

ಹೇಮಾಚಲವನು ವಿನಯದಿ ಸೋಮಾನನೆ ರಾತ್ರಿ . . . ।
. . . . . . ದಾನಿಕರದಿ . . . ನಾರತಿಯಾ ।
ರಾಮ(ನಿ)ಗೆತ್ತಿದಾರೆ ಸತಿಯರು ॥ (28)

ಸವಿವಾತಿನ ಸುವಿಲಾಸದ ಕ . . . ಕುಲದ ಪತಿಯ
ಪದಯುಗಕೆ । ಪದಯುಗಕರ್ಪಿತ ಶೋಭಾನವ
ಕವಿ ರಾಮಚಂದ್ರ ರಾ . . . ಯುಗಳಿ ಕಾಮನ
ಕಂಗೊಳಿಸುವನೀಗಳಿ ತರಳೆ ನಾಗಸಂಪಗೆಯ ।
ಬಿರಿಮುಗುಳೆ । ಬಿರಿಮುಗುಳೆ . . . ಕಾಲಿಗೆ ॥ (31)

ಕಳಕಸ್ತೂರಿ ವೀಣೆ ಜಾಣೆ ಸುಳಸಾಭಿಯು
ಮುದ್ರೆ ಭದ್ರೆ . . . ಕಾಂಭೋಜ ॥

ವಿ.ವಿ.—

ಅಸಮಗ್ರ. ಇದರಲ್ಲಿ ಎರಡು ಹಾಡುಗಳಿವೆ. ಮೊದಲ ಹಾಡಿನಲ್ಲಿ ೨೧ ಚರಣಗಳು ಪೂರ್ಣವಾಗಿ ಸಿಕ್ಕುತ್ತವೆ. ಮುಂದಣ ಓಲೆ ಮುರಿದಿದೆ. ಅದರಲ್ಲಿ ಮುಂದಣ ೯ ಚರಣಗಳೂ ಎರಡನೆಯ ಹಾಡಿನ ಆದ್ಯ ಭಾಗವೂ ಇವೆ. ಇದು ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಮಲ್ಲಿಕಾರ್ಜುನ ಶತಕವಿದೆ.

ಇದರಲ್ಲಿ ಹಸೆಗೆ ಕರೆವ ಹಾಡಿದೆ. ಚರಣಗಳು "ಹಸೆಗೇಳು, ಹಸೆಗೆ ಕರೆತಾರೆ (ಕರೆದಾರು), ಬಾ ಈ ಹಸೆಯು ಜಗಲಿಗೆ" ಹೀಗೆ ಪೂರ್ಣವಾಗುತ್ತವೆ. ಜನಕ ಸುತೆ ಸೀತಾ ದೇವಿಯನ್ನು ಸುವಾಸಿನಿಯರು ಹಸೆಗೆ ಕರೆದಂತೆ ಇದರಲ್ಲಿ ವಿಷಯವಿದೆ. ಇಂತಹ ಹಾಡು ಗಳನ್ನು ಮದುವೆ, ಮುಂಜಿ ಮುಂತಾದ ಉತ್ಸವಕಾಲಗಳಲ್ಲಿ ವಧೂವರಾದಿಗಳು ಹಸೆಮಣೆಯ ಮೇಲೆ ಕುಳಿತಿರುವಾಗ ಮುತ್ತೈದೆಯರು ಹೇಳುತ್ತಾರೆ.

ಹಾಡಿನ ಕೊನೆಯಲ್ಲಿ ಒಂದೆಡೆ "ಶೋಭಾನವ (ಶೋಬನವ-ಸೋಬಾನೆ) ಕವಿ ರಾಮಚಂದ್ರ" ಎಂದಿದೆ. ಮುಂದಣ ಭಾಗದ ಓಲೆ ಮುರಿದಿದೆ. ಮುಂದಣ ಸಂದರ್ಭವು ಗೊತ್ತಾಗುವುದಿಲ್ಲ. ಹೀಗಿರಲು ಇದನ್ನು ಬರೆದವನು ಯಾರೆಂದು ನಿಶ್ಚಯವಾಗಿ ಹೇಳಲಾಗುವು ದಿಲ್ಲ. ಕವಿಯ ಹೆಸರು ಮೇಲ್ಕಂಡಂತೆ ರಾಮಚಂದ್ರನೆಂದು ನಿಜವಾಗಿದ್ದರೂ ಇರಬಹುದು.

No. 1299. ಹಸೆಗೆ ಕರೆವ ಹಾಡು by ರಾಮಚಂದ್ರ.

HASEGE KAREVA HĀḌU BY RĀMACANDRA.

Substance, paper. Size, 10 7/16 × 9 7/16 inches. Pages, 4. Lines, 20 on a page. Extent, 42 granthas. Character, Kannada. Condition, good. Appearance, new. Mode of writing, fair.

Restored in 1924–25 from the manuscripts described above.

Begins on page 25 of the manuscript described under No. 847 ante.

Incomplete.

ವಿ.ವಿ.—

ಅಸಮಗ್ರ. ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಮಲ್ಲಿಕಾರ್ಜುನ ಶತಕ (ವೃತ್ತದಲ್ಲಿ) ಇದೆ.

No. 1300. ಹಾಡು.

HĀḌU.

Substance, palm-leaf. Size, 13¾ × 1 7/16 inches. Pages, 3. Lines, 4—5 on a page. Extent, 15 granthas. Character, Kannada. Condition, very much injured. Appearance, old. Mode of writing, not bad.

Contains only one song describing some unjust acts that took place in Mysore during the time of Cikkadēvarāja. The author is one Ponna.

Beginning — and End

ಪಲ್ಲವಿ—

ಹೋಗಿ ಬಹರಪ್ಪಣೆಯು ಹೊನ್ನಕವಿಗೆ ।
ನಾಗಶಯನನ ಪುರದಿ ನ್ಯಾಯ ವೆಳ್ಳನಿತಿಲ್ಲ ॥

ಚರಣ—

ಅರಸು ಚಿಕದೇವರಾಜೇಂದ್ರ . . . . . ।
. . . . . ದಿಂ ಕಾಯ್ದು ಹನ್ನೆರಡು ವರುಷ ॥
ಅರಸರಿಯ ನಾನರಿವೆ ಅರ್ಥಪರಿಕರ್ಯದಲಿ ।
ಅರಸು ಅರಿಯದ ಬಿ . . . ಆಯಿತನ್ನೋಲಗವು ॥ (1)

ತಿಳಿ . . . ಯದ ತಿಂದಿ ತಿರುಮಲೈಂಗಾರು ।
ಬಳಲು ಗೈಯ್ಯಾಳಿ ಕಳವರಹನಿರ್ಕಿಶಯನು ॥
ಒಳಗಿರುವ ಅರಸಿಗರುಹುವರಿಲ್ಲ ಕರಿತಿಲದ ।
. . . ಯ ಪೋಲತಿಯ್ಯು ರಾಜ್ಯದ ಸಿರಿಯ ಸಂಪತ್ತು ॥ (2)

ಸೇನಾನಿರುವರತಿನೆಂದು ಮನುವೆಯ ಹೇಳಿ ।
ಯೇನು ಯೆನ್ನದೆ ಯದನು . . . . ಗೇಳಿ ॥
ಮೋನದಿಂದಿರುತಿಹನು ಕೊಳುಗುಳ ಧನಂಜಯನು - ಸು ।
ಮ್ಮಾನದಿಂ ಸ್ವಾಮಿಕಾರ್ಯವೆ ತನಗೆ ಗತಿಯೆಂದು ॥ (3)

ತನ್ನ ಹಣ ತನ್ನ . . . . ತಿರುಮಲದೇವ ।
ರನ್ನ ಕಾಡುತವಿಹರು ನವವಿಧದ ನಾಯಕರು ।
ತಿನ್ನುವರು ಅರಮನೆಯ ಹೊನ್ನುಗಳ ಕೇಳದರೆ ।
ಅನ್ಯಾಯ . . . ಪಟ್ಟಿಯ ಕೊಟ್ಟು ಕಾಡುವರು ॥ (4)

ರಂಗನಿಗೆ ನಿದ್ರೆ ನರಸಿಂಗನಿಗೆ ಆಳಿಕೆ ।
ಅಂಗಸಿತ ವರಹನಿಗೆ ಎತ್ತು ಮೊ . . . ॥
. . . ಚಾಮುಂಡಿ ತೃಣೆಯರಿಗೆ ।
ಹಂಗಿಲ್ಲ ಮೊರೆಯಲಾಲಿಸಿ ಕೇಳ್ವರಾರಿನ್ನು ॥ (5)

ಅಗ್ರಾರ ಸೊನ್ನೆ ಪಂ . . . . ದೂಳಿ ।
ಉಗ್ರದೇವತೆಗಳಿಗೆ ಗುಟುಕು ನೀರು ॥
ಕುಗ್ರಾಮ ಸತ್ರ ನಿಸ್ಸತ್ರ ಪ್ರಜೆಗರೆವಾಸಿ ।
ಅಗ್ರಜರಿಗಾತನ್ನ ಕು . . . . ॥ (6)

. . . . . ನಾರಿಯು ಹೊರಡ ಹಾಕಿದಲ್ಲದೆ ಕಾ ।
ವೇರಮ್ಮ ಒಳಕೊಂಬಳೀ ಖಳರನು ॥
ಸಾರಿದುದ್ದದ . . . ಚಾಮುಂಡಿ . . . . ।
. . . . ಕಮ್ಮ ॥ (7)

ಸಂಬಳವು ತಗ್ಗು ಉಂಬಳಿಸ್ವಾಸ್ತಿ ಸೇನಾಯು ।
ಯೆಂಬಲ್ಲಿಗಿಲ್ಲ ವರ್ತನೆ ಗಿರ್ತನೆ ॥
ಉಂಬರುಡುವರೆಯು . . . . ಲಾ ।
ಡೊಂಬಿಯಾಯಿತು ಪೌರುಷತ್ವ ಸರ್ವಾಗಾತ್ರ್ಯಾ ॥ (8)

ಕಾಶಿ ಕೇದಾರ ಶ್ರೀಶೈಲ ತಿರುಪತಿಗಳಲಿ ।
ವಾಸವಾಗಿಹರು . . . . ಯಿೂ ।
ದೇಶವನು ನಮ್ಮರಸು ಆಳುವತ್ತನಕ ಅನ್ನದಾ ।
ನೀಶ ಸುಬ್ರಹ್ಮಣ್ಯನಿರುವ ಕುಕ್ಕೆಯು ಪುರಕೆ ॥ (9) (?)

ಭೂರಿ . . . . ಬಳಿಕ ಬರಬಹುದು ।
ಶ್ರೀರಂಗಪಟ್ಟಣಕೆ ರಂಗನೀ ಗತಿ . . . . ॥

ವಿ.ವಿ.—

ಅತ್ಯಂತ ಶಿಥಿಲವಾದ ಪ್ರತಿ. ಎರಡೇ ಓಲೆಗಳಿವೆ ಹುಳುತಿಂದಿದೆ. ಲಿಪಿ ಸಾಮಾನ್ಯವಾಗಿದೆ.

ಇದರಲ್ಲಿ ಒಂದೇ ಒಂದು ಹಾಡಿದೆ. ಪಲ್ಲವಿ ಮತ್ತು ಒಂಭತ್ತು ನುಡಿಗಳಿವೆ. ಹತ್ತನೆಯದು ಅರ್ಧವಿದೆ. ಇದರಲ್ಲಿ ಮೈಸೂರು ಚಿಕದೇವರಾಜನ ಕಾಲದಲ್ಲಿ ನಡೆದ ಅಕ್ರಮಗಳು ಉಕ್ತವಾಗಿವೆ. ಕವಿ "ಹೊನ್ನ" ಎಂಬುವನು. ಈ ಬಗೆಗೆ ಉದಾಹೃತ ಭಾಗಗಳನ್ನು ನೋಡುವುದು.

No. 1301. ಹಾಡು.

HĀḌU.

Substance, palm-leaf. Size, 16¾ × 1 3/8 inches. Pages 2. Lines, 5 and 2 cna pages Extent, 12 granthas. Character, Kannada. Condition, very much injured. Appearance, old. Mode of writing, not good.

Begins on foll. 10-*a*. The other work herein is (1) Torave Rāmāyaṇa (Angadasandhāna) 1-*a*.

Incomplete.

Contains only the last 5 caraṇas (8–12) of one song the subject of which is the stealing of Gopi's sarees by Srīkrishna.

The author is not known.

Beginning and End—

. . . . ಗಿತಾಕರೆದು ।
ಕಾಂತೆಯರ ಸೀರೆಯನಿತ್ತೆನೆನುತಲಿ ಕಡೆಗೆದ್ದು ಬಾಯಿಂದ ॥
ನಿಂತುಜಲದಿ ಸ್ತ್ರೀಯರು ನಾಚುತ ನೀ [ತವೆ] (ತಿಯು) ಗೋಪಾಲ ।
ಪಂತವೇತಕೆ ನಮ್ಮ . . . . . ರಿಗಳ ॥ (8)

ಕೇಳಿರೆ ಸ್ತ್ರೀಗಳಿ ಜಲದಿಂದ ಕೆಲಕೆದ್ದು ಬಂದು ನೀವು ತೋಳನೆರಡೆ ।
ಮೇಲಕೆತ್ತಿಕೊಂಡು ನಾಚದೆ ತಾಳಿಗೆ ಬಾಯಿಂದ ॥
ನೀಲವರ್ಣಸ್ವಾಮಿಯುಪರೇತ್ರಿ ನಿನ್ನದು ಗೋಪಾಲ ।
ಬಾಲಕೃಷ್ಣ ಅಭಿಮಾನಭಂಗವಲ್ಲವೆ ಹರಿಯೆ ॥ (9)

ಅಭಿಮಾನಗಳ ತೊರೆದು ತರುಣಿಯರು ಎದುರಾಗಿ ತಾವು ನಿಂದು ।
ಕಪಟನಾಟಕಕೃಷ್ಣ ತಾರಯ್ಯಯೆನುತಲಿ ಒಂದು ಕೈಯನೆತ್ತಿಮುಗಿದರು॥
ಒಂದು ಕೈಲಿ ಮುಗಿದರೆ ಗೋಪಾಲ ಒಪ್ಪದೆ ಆಗದೆಂದು ।
ಕಂದರ್ಪಜನಕನೆ ಕಾಯುಯ್ಯಯೆನುತಲಿ ಎರಡು ಕೈಯನೆತ್ತಿಮುಗಿದರು ॥ (10)

ಸುರರೆಲ್ಲರು ನೋಡಿ ಆಕಾಶದೊಳು । ಕರೆದರು ಪೂಮಳೆಯು ।
ಹರಿ ಅಚ್ಚುತ ಮೆಚ್ಚಿ ವಸ್ತ್ರಭೂಷಣಗಳ । ಆಗಲೆ ಪಾಲಿಸಿದ ।
ಮಾತನಾಡುವ ಸ್ತ್ರೀಯರ ಮುಖನೋಡಿ ಮನ್ನಿಸಿ ।
ಗೋಪಾಲ ಆ ತರುಣಿಯರಿಗೆ ವಸ್ತ್ರಭೂಷಣವಿಟ್ಟು ಅಮರರೊಪ್ಪಿಮೋದಿಸಿದ । (11)

ಪೀತಾಂಬರ(ಧರ) ಕೃಷ್ಣ ತರುಣಿಯರ ಪ್ರಿಯದಿಂದೊಡ ಗೂ . . . ।
. . . ಳು ಗೋಕುಲದೊಳು ಪ್ರೊಲವಿಂದ ಭುಜಗೇಂದ್ರಸನ್ನುತನು॥
ಆ ಮಹಿಮನು ನೀನೆ ಮರ್ತ್ಯದೊಳು ಅ . . . ವ ತೋರಿ ।
ಕಾಮಜಕ್ರಪಿತ ಕಂಬದ ನರಸಿಂಹ ಕನಕಗಿರಿಯೊಳು ನೆಲಸಿ ॥
ಪ್ರೇಮದಿಸಾತನೂರ ಧರ್ಮಜ್ಞಾನ ಪಸರಂದೊಲಿದಿರಲು ॥
ಕ್ಷೇಮದಿ ಶ್ರೀಕೃಷ್ಣ ಬಾಲೆಯರ . . . . ನಪಿತ್ತು ಸುಜನರ ರಕ್ಷಿಪನು ॥ (12)

ವಿ.ವಿ.—

ಅತಿ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ತೊರವೆ ರಾಮಾಯಣ (ಅಂಗದ ಸಂಧಾನ) ಇದೆ.

ಇದರಲ್ಲಿ ಒಂದೇ ಒಂದು ಹಾಡಿದೆ. ಇದರ ಮೊದಲ ಏಳು ಚರಣಗಳಿಲ್ಲ. ಕಡೆಯ ನಾಲ್ಕೈದು ಚರಣಗಳು ಮಾತ್ರ ಇವೆ. ಈ ಹಾಡಿನಲ್ಲಿ ಗೋಪಿಕಾವಸ್ತ್ರಾಪಹರಣ ವಿಷಯವು ಅಡಕವಾಗಿದೆ. ಅಲ್ಲದೆ "ಕಂಬದ ನರಸಿಂಹ, ಕನಕಗಿರಿ, ಸಾತನೂರು" ಈ ಅಂಕಿತಗಳು ಕಂಡುಬರುತ್ತವೆ. ಇದನ್ನು ಬರೆದವರಾರೆಂಬುದು ಗೊತ್ತಾಗುವುದಿಲ್ಲ.

No. 1302 ಹಾಡು (ದೇವಕದಂಬ ಸಂಕೀರ್ತನೆ).

HĀḌU (DĒVAKADAMBA SANKĪRTANE).

Substance, plam-leaf. Size, 13¼ × 1-5/16 inches. Pages, 3. Lines, 5 on a page. Extent, 17 granthas. Character, Kannada. Condition, injured. Appearance, old. Mode of writing, good.

Begins on foli. 73-*a* of the manuscript described under No. 901 ante, wherein this work has been omitted to be mentioned as other work.

Contains one song consisting of five caranas in praise of various Gods situated at different holy places.

Beginning and End—

ರಾಗ ॥ ಧನ್ಯಾಸಿ ॥

ಪಲ್ಲವಿ—

ನೆನೆಯಿ ಹರಿಹರ ಜಗನ್ನಾಥ ಕಾಶಿಯ ಪತಿಯ ।
ನೆನೆಯಿ ಶ್ರೀಬಿಂದುಮಾಧವನ ಕುಂಭೇಶ್ವರನ ॥
ನೆನೆಯಿ ಕಂಚಿಯ ವರದರಾಜ ವೈದ್ಯೇಶ್ವರನ ।
ನೆನೆಯಿ ಮಾನವರೆ ಅನುದಿನ ಬಿಡದೆ । ನಿನೆಯಿ ಕಾಶಿಯ ಪತಿಯನು ॥

ಉರಗಾಚಲದ ವೆಂಕಟೇಶನಂ ಕೈಲಾಸ ।
ಗಿರಿಯ ಶಂಕರನ ಯದುಗಿರಿಯ ನರಸಿಂಹನಂ ।
ಅರುಣಾಚಲೇಶ ಮಂಗಳಗಿರಿಯ ನರಹರಿಯ ।
ವರ ಕಕುದ್ಗಿರಿ ವಾಸನ ॥

ಕರಿವರದನೆನಿಪ್ಪದಂತ ಗಿರಿಯಕೃಷ್ಣನ ಪುಷ್ಪ
ಗಿರಿಯ ಮಲ್ಲೇಶ ಬೆಳ್ಗಿರಿ ತಿಮ್ಮರಾಯ ಶ್ರೀ
ಗಿರಿನಿಲಯ ಮಲ್ಲಿಕಾರ್ಜುನ ಸಳಘಗಿರಿಯ
ಸಿರಿಯರಸ ತೊರವೆ ನೃಸಿಂಹನೆ । ಬಿಡದೆ ನೆನೆಯಿ ಕಾಶಿಯ ಪತಿಯನು ॥ (1)

ರಾಮೇಶ್ವರದ ರಾಮಲಿಂಗ ಕಸ್ತೂರಿಲಿಂಗ ।
ಸೋಮಧರ ಕೇದಾರಲಿಂಗ ಸುಕದಂಬ ಪುರಿ ।
ರಾಮಕೈಲಾಸಲಿಂಗನು ವೀರನಾರಾಯಣ ಸೋಮೇಶಲಕ್ಷ್ಮೀಶನ ॥
ಭೂಮಿಗತ್ಯಧಿಕನಂಜುಂಡ ಶಕುನಿಯ ರಾಯ ।
ಕಾಮರಿ . . . . . ಪಿಲೇಶ್ವರನ ವಿಟ್ಠಲನ ।
ಸ್ವಾಮಿ ವಿರೂಪಾಕ್ಷ ಓಂಭಳನಾರಸಿಂಹ ಸುರ ।
ಪ್ರೇಮಿ ಚಿದಂಬರಲಿಂಗನ ಬಿಡದೆ । ನೆನೆಯಿ ಕಾಶಿಯಪತಿಯನು ॥ (2)

ಭಾಗೀರಥಿಯ . . . . ಧು ।
ಭೋಗಾವತಿಯ ತುಂಗಭದ್ರೆ ವೇತ್ರಾವತಿಯ ।
ವೈತರಿಯ ವರದಾಯಮುನೆಯ ಗೋದಾವರಿ ಪ್ರಯಾಗ ಫಲ್ಗುನಿ ತ್ರಿವೇಣಿ ।
ನಾಗರದೆ ಸತಿ ಕುಮುದ್ವತಿ ಭೀಮ ರಥಿಯ ಸಂ ।
ಭೋಗ ಕಾವೇರಿ ಕಪ್ಪಿನಿ ತಾಮ್ರಪರ್ಣಿಯೂ ।
ವಾಗೀಶಹಲ್ಯ ದ್ರೌಪದಿ ಸೀತೆ ತಾರೆ ಮಂಡೋದರಿಯ ರಾಗದಿಂದ ।
ಜನರು । ನೆನೆಯಿ ಕಾಶಿಯ ಪತಿಯನು ॥ (3)

ನಾರಾಯ . . . . ಜಂಬುಲಿಂಗ ಮಧ್ಯಾರ್ಜುನಂ ।
ನಾರಂಗಪಾಣಿ ತಾಂಡವ ಪಂಚನಂದೀಶ ।
ತೇರಮಲ್ಲೇಶ ಉಡುಪಿನ ಕೃಷ್ಣ ಈಶಕಾವೇರಿ ಶ್ರೀರಂಗನಾಥ ॥

ವಾರಿಜಪುರಿಯ ಮಲ್ಲಿಕಾರ್ಜುನ ಜನಾ . . . ।
. . . ರ್ಥ ಪುರಾರಿಕ . . . ಶ ತುಜಗೆರೆ ತಿಮ್ಮರಾಯ ನಿ ।
ಟ್ಟೂರ ಕಲ್ಲೇಶದಕ್ಷಾದ್ರಿಯರ್ಕೇಶ ಮದ್ದು ಶ್ರೀನರಸಿಂಹನ ।
ಬಿಡದೆ । ನೆಪೆಯಿ ಕಾಶಿಯ ಪತಿಯನು ॥ (4)

End—

ಚರಣ—

ಧರೆಗಧಿಕಂ ಒಂದಂಬರಲಿಂಗನನಂತಶಯನ ।
ತಿರುವರಂಗೇಶ ಮಧುಲಿಂಗ ಚೌಪ್ಯಂದೀಶ ॥
ಸುರಗಿಯ ತಿರುವೆಂಕಟೇಶ ಮಾರ್ಕಂಡೇಶ ।
ಕರುಣದಾ . . . . ॥
. . . . ಅಗಸ್ತ್ಯೇಶಲಿಂಗನು ವೆಲ ।
ಪುರದ ಕೇಶವನ ಸುಬ್ರಹ್ಮಣ್ಯಸ್ವಾಮಿಯನು ।
ಹಿರಿಯಬಾಗೂರ ಚನ್ನಿಗ ತೀರ್ಥರಾಮೇಶ್ವರದ ಶಂ ।
ಕರ ನಾರಾ . . . . . ಪತಿಯನು ॥ (5)

ವಿ. ವಿ.—

ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಕುಮಾರರಾಮನ ಕಥೆಯಿದೆ. ಈ ಪ್ರತಿಯಲ್ಲಿ ಒಂದೇ ಒಂದು ಹಾಡಿದೆ. ಬರೆದವರಾರೆಂದು ತಿಳಿಯದು. ಹಾಡಿನ ಕೊನೆಯಲ್ಲಿ "ಶ್ರೀದೇವ ಕದಂಬದ ಸಂಕೀರ್ತನೆಯನ್ನೋದಿದ ಪುಣ್ಯವು ಕಂಠೀರವಸ್ವಾಮಿ ನರಸಭೂಪಾಲನವರಿಗೆ ಮ . . . ." ಎಂದಿದೆ.

No. 1303. ಹಾಡುಗಳು.

HĀḌUGAḶU.

Substance, palm-leaf. Size, 7½ × 1-1/16 inches. Pages 24. Lines 4—6 on a page. Extent, 85 granthas. Character, Kannada. Condition, extremely injured. Appearance, old. Mode of writing, good.

Incomplete.

Songs in praise of God Viṣṇu written by Purandara Dāsa, etc.

Beginning—

ಅಗಲಿರಲಾರೆನೊ ನಿನ್ನ ಅರೆನಿಮಿಷವು ರನ್ನ

* * * * *

ನಿನ್ನ ನಂಬಿದೆನೊ ಗೋಪಾಲ ನಿನ್ನ ನಂಬಿದೆ . . . ॥
ನಿನ್ನ ನಂಬಿದೆ ಯೆನ್ನನೀ ರಕ್ಷಿಸು । . . . ನ್ನಕ . . . ಸಿದ ಕೃಷ್ಣ ॥
ಪೀತಾಂಬರಧರನೆ ಪೀಯೂಷ . . . ಸುರ ಸೇವ್ಯನೆ ।
ಪ್ರಾತಃಕಾಲದೊಳೆದ್ದು ಪರಮಮಂತ್ರ . . . ॥
ಪ್ರೀತಿಯಿಂದಲಿ ನಿನ್ನ ನಾಮವೆಯಮದಿನ ।

ಕಮಲಲೋಚನನೆ ಕಮನೀಯ ಗುಣರತ್ನ ಭೂಷಿತನೆ ।
ಸುಮಶರಜನಕ ಪರಂಜ್ಯೋತಿ ರೂಪ ನಿನ್ನ ಚರಣ ।
ಕಮಲವ ನಂಬಿದೆನೊ ಶ್ರೀಕೃಷ್ಣ

ದೇವ . . . ಗನೆ ಗೋಪಾಲ . . . ನ್ನಜ . . . ನೆ ।
ದೇವಕೇತನಯನೆ ದೇವೇಂದ್ರವಂದ್ಯನೆ ।
ಭಾವಜರೂಪ ಶ್ರೀಪರಮ ಕೇಶವಮೂರ್ತಿ । (6)

* * * * *

ಪಲ್ಲವಿ.—

ಕೋಮಲಾಂಗ ರಾಮಾ । ಮಾಮವ ಭದ್ರಗಿರಿ
ರಾಮ ಮಾಧವ

ಚರಣಗಳು—

ಜನಕಸುತಾನಂದ . . . ನಾ ರಾಮ ।
ಕನಕಾಸುಜಯವೈರೂನ . . . ರಾಮ ॥
ಮುನಿಕುಲ ಪೂಜಿತ ಚರಣ ರಾಮ ।
ಮೌಕ್ತಿಕ ರಂಜಿತ ಭವನ ರಾಮ ।
ವನನಿಧಿಬಂಧನ ವಾನರ ಪೋಷಣ ।
ಧನದ ಪುಷ್ಪಕಯಾನ ದಾಸಸಂಪ್ರೇಕ್ಷಣ ॥

ಸರಸಿಜಾ . . . ಸೀತಾರಾಮ ।
ಸನ್ನುತ ಸಾಗರ ಜಾತಾರಾಮ ।
ಮಾರ . . . ಮುನಿಗಣ ಸೀತಾರಾಮ ।
ಮೋಹನ ಭಕ್ತ ಪಾರಿಜಾತ ರಾಮ
ಖರದೂಷಣ . . . ತಕ ಖಂಡಿತರಾವಣ
ಪರಮೇಶಪಾಲಯ ಭದ್ರಾಚಲನಿಲಯ ॥

End—
ಪಲ್ಲವಿ—

. . . ಬಾರೊ . . . ಕುಮಾರ . . ಮಗನು ।
ಗೋಪಾಲ ಮುದದಿಂದ ॥

ಚರಣಗಳು—

. . . . ।
. . . . ಮಾಡುತಿದೆ ।
ಎ . . ಡಿ ಹಾರಂ . . . ಮಿಂದು ಪಂಚಾಮೃತವನೆ ಉಂಡು ।
ಎನ್ನನಗಲಿ ಪೋದಾ . . . ಗೋಪಾಲ ॥ (1)

ಪಟ್ಟೆಮಂಚದ ಮೇಲೆ ತಟ್ಟೆಯಲಿ ವೀಳ್ಯವನು ।
ದಿಟ್ಟನೆ ನೋಡಿದರ ದಿಗುಲೆನ್ನುತಿದೆಕೊ ॥
ಬಟ್ಟ . . . ವನು . . . ದು ಬಳೆಲು ಮುಡಿಯ ಮೇಲೆ
ಮುಟ್ಟಿ ಮೋಹಿಸುವ ಆ ಮುದ್ದುಗೋಪಾಲ ॥ (2)

ಹೊಳೆವನಳತೋಳು ಪಟ್ಟೆಕುಪ್ಪಸದ ಮೇಲೆ ।
ತಳತಳಿಪ ಬಳೆಬಂದಿ ಮಣಿರತ್ನೆಯು ॥
ಪೊಳೆವ ಪೀತಾಂಬರವು ನಡುವಿನೊಡ್ಯಾಣವು ।
ಆಳ . . ಟಿವೆ ಮುದ್ದು ಚೆನ್ನಗೋಪಾಲ ॥ (೩)

ವಿ.ವಿ—

ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರಲ್ಲಿ ವಿಷ್ಣು ಸಂಬಂಧವಾಗಿ ಅನೇಕ ಹಾಡುಗಳು ಸಂಗ್ರಹೀತಗಳಾಗಿವೆ. ಹಾಡುಗಳ ಕೊನೆಯಲ್ಲಿ "ಪರಮ ಕೇಶವಮೂರ್ತಿ, ಪುರಂದರ ವಿಠಲ, ಭದ್ರಗಿರಿ ರಾಮ" ಮುಂತಾಗಿ ಅಂಕಿತಗಳು ಕಂಡುಬರುತ್ತವೆ.

No. 1304. ಹಾಡುಗಳು.

HĀḌUGAḶU.

Substance, palm-leaf. Size, 11 × 1⅛ inches. Pages 71. Lines 4—5 on a page Extent, 410 granthas. Character, Kannada. Condition, much injured. Appearance, old. Mode of writing, not bad.

Begins on foli. 11-*a*. The other work here in is :—Siddhanīti, **1-a.**

Incomplete.

Contains devotional and erotic songs.

Beginning—

ಬೇಡ ಬೇಡವೆಂದರೆ ಕೊಡಿದರು ಬತ್ತಸಾಡನು । (?)
ನಾಡನೆಂಟರೊಳಗೆ ಯೆನ್ನಯೊಳು (?) ಕೇಡಕೆಡಿಸಿದ ॥ (೧)

ಗಂಗೆ ಮಳಾಯಿ ಮ್ಯೆಯಿಲರನು ಯಿರುವಾಗ । (?)
ಯೆನ್ನ . . . . . ಹೊನ್ನು ಹಣ . . . ।
ಎನ್ನ ಮಾತ ಕೇಳದೆ ತನಗೆ ಪ್ರೊಂದ ಕಲಕಟಿ ನಾಯಿ ।
ಕುನ್ನಿಯಾಗಿ ಬೊಗಳುವುದ ಬಿಡಿಸಿಬಿಟ್ಟರು ॥ (೨)

* * * *

(ಓಲೆ ೧೪.)

ಪಲ್ಲವಿ—

ಕಂದಿ ಕಂದಿ ಕುಂದಿ ಕುಂದಿ ನೊಂದು ನೊಂದು ನೊಂದೆನಾಯೊ ।
ಬೆಂದ ಸಂಸಾರವೆಂಬ ದಂದುಗದೊಳು ಪ್ರೊಲಕುತ ॥

ಚರಣ—

ಅ . . . . . . ವ್ಯರ್ಥವಹ ಕಾಯುವನು ಯಿದು ।
ನಿತ್ಯವೆಂದು ಬಗೆದು ನಾನು ಕರ್ತೃನಿಮ್ಮನರಿಯದೆ ।
ಮೃತ್ಯುವಿನ ಭಯದೆ ಕರುಣಿಸಿದೆ ಯೆನ್ನ ।
ಕರ್ತೃ ನಿಧಿಯೆ ಕರುಣೆಯಿಂದ
ಎತ್ತಿಕೊಳ್ಳೊ ಶಂಕರ—॥ ಕಂದಿ ಕಂದಿ ॥ (೧)

End—

ಕಟ್ಟಾಣಿ ಮುತ್ತ ಕೇಳು ಪ್ರಪ್ಪದ ಬಣ್ಣ
ವಿಟ್ಟರೆ ತಿರುಗುವರೆ ಹೊಸ ।
ಮುತ್ತಿ . . . . ದ ಹವಳವ ।
ಬೆರದಂತೆ ಕುಶಲವನೆ ನಾಬಲ್ಲೆ ॥ (೩)

ಹೆಣ್ಣೆ ನೀ ಸಣ್ಣವಳೆ ಒಲಿಸಿಕೊಂಬ ।
ಅಂಗವನೆ ನಾಬ . . . . ಬಳೆ ಮುಚ್ಚಿದೆ ನ್ಯೆಯೊಯೊಯೊ ಬಾಳೆಯು ।
ಹಣ್ಣು ಅವತಿ ಕರಗಿಸಲೆ ಪ್ರಣ್ಯಾನಾಯಕ ಹೋಗಿ ಪರ ।
ಹೆಣ್ಣಿಗೆ . . . . ನಾನೋಡಿ ತಾಳಲಾರೆ ॥ (೪)
ತಕ್ಕೈಸಿದಿ . . ವೆಂದು ಯಿರುಳೆ . . . ಕವ ಮಾಡುತಿಹಳು ।
ಚಿಕ್ಕಪ್ರಾಯದ ಸೋಮೇಶ ಕಣಿವೆಯು ಗಂಗೇಶ . . ಂ ಕನೆ ನೇರಾದ ಕಣ್ಣೆ ॥ (೫)

ವಿ.ವಿ—

ಇದರಲ್ಲಿ ಹಾಡುಗಳನ್ನು ಸಂಗ್ರಹಿಸಿ ಬರೆದಿದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ಸಿದ್ಧನೀತಿಯಿದೆ.

ಇದು ಹಾಡಿನ ರೂಪದಲ್ಲಿದೆ. ಹಾಡುಗಳು ಭಕ್ತಿ, ಶೃಂಗಾರ ಈ ವಿಷಯಗಳನ್ನೊಳಗೊಂಡುವಾಗಿವೆ.

No. 1305. ಹಾಡುಗಳು.
HĀḌUGAḶU.

Substance, palm-leaf. Size, 10-3/16 × 1-1/16 inches. Pages 16. Lines, 5 on a page. Extent, 115 granthas. Character, Kannada. Condition, extremely injured. Appearance old. Mode of writing, not bad.

Begins on foli. 10-*a*. The other work here in is—Harada nīti, 1-*a*.

Incomplete.

Contains devotional and philosophical songs.

Beginning—

॥ ಶ್ರೀ ಕೃಷ್ಣ ಸಂಕೀರ್ತನೆ ॥

॥ ರಾಗ ॥ ಪಹಡಿ ॥

ಪಲ್ಲವಿ—

ನಾರಾಯಣನೆ ನಮೋ ನಮೋ ಭವ ।
ನಾರದ ಸನ್ನುತ ನಮೋ ನಮೋ ॥

ಚರಣಗಳು—

ಮುರಹರ ನಗಧರ ಮುಕುಂದ ಮಾಧವ ।
ಗರುಡಗಮನ ಪಂಕಜನಾಭ ॥
ಪರಮ ಪುರುಷ ಭವ ಭ—ಕೇಶ ।
ಶರಧ್ಯಗ ಶರೀರ ನಮೋ ನಮೋ ॥ (೧)

ಜಲಧಿ ಶಯನ ರವಿ ಚಂದ್ರ ವಿಲೋಚನ ।
ಜಲರುಹ ಭವನುತ ಚರಣಯುಗ ॥
ಬಲಿಬಂಧನ ಗೋಪೀಜನ ವಲ್ಲಭ ।
ನಳನೋ [ದ್ಧರ] (ದರ) ತೇ ನಮೋ ನಮೋ ॥ ೧)

ಆದಿದೇವ ಸಕಲಾಗಮ ಪೂಜಿತ ।
ಯಾದವ ಕುಲಮೋಹನ ರೂಪ ।
ವೇದೋ [ದ್ಭವ] (ದ್ಧರ) ತಿರುವೆಂಕಟೇಶ ವೇಣು ।
ನಾದಪ್ರಿಯ ತೇ ನಮೋ ನಮೋ ॥ (೨)

End—

ಬೈದವರೆನ್ನ ಬಂಧುಗಳೆಂಬೆ ಹೊಯ್ದವರನ್ನ ಹೊರೆದವರೆಂಬೆ ।
ನಿಂದಿಸಿದವರೆನ್ನ ತಂದೆತಾಯೆಂಬೆ . . . ದವರೆನ್ನ . . . ಳಿದ್ದರೆಂಬೆ ॥

ಚರಣ—

ಸತಿ ಪುತ್ರರಿಬ್ಬರ ಸರಿಯನ್ನದಿದ್ದರೇ ನ ।
ಚ್ಯುತ ವಿಠಲ ನೀನೊಲಿದಂತೆ ಸ್ವಾಮಿ ॥

ಪಲ್ಲವಿ—

ನರವೃಂದದಲಿ ನಾ ಜನಿಸಿದೆ . . . . . .
ತರುವೃಂದದಲಿ ಜನಿಸದೆ ಹೋದೆ ।
ಕೊಳಲೆ ನೀ ಪುಣ್ಯಗೆಯ್ದುಯೆಲ್ಲ ।
ಗೋವಳನಧರಾಮೃತವನು ಸೇವಿಸೆ (ನ) ಲಿದು ॥

ಚರಣ—

ವರಮೂರುತಿ ಸ್ವಾಮಿ ಚೆನ್ನ ಗೋಪೀನಾಥನ ।
ಚರಣವ ನೆನೆದು ಸುಖಿಯಾಗು ಮನವೆ ॥

ಪಲ್ಲವಿ—

ಭಾಗೀರಥಿ ಬಾಗಿಲಲಿ ಬಂದಿರಲು ।
ಬಾವಿಯನಱಸುವೆ ಬಾಹಿರ ಮನವೆ ॥
ದುರುಳತನ ಬೆನ್ನಬಿಡದಿದೆ . . . . ರ ।
ತಲೆಯ ಪಿಡಿದಾತೆಱದಂತೆ ॥

ಚರಣ—

ಸಾಯಿಗುದುರೆಗೆ ಹುಲ್ಲನಡಂತೆ ಬೆಂತಾದೆ ।
ಯೋಗೀಂದ್ರ ವಿಠಲನ ಮಱೆಹೊಗು ಮನವೆ ॥

ಪಲ್ಲವಿ—

ಉರಿಗಂಜೆ ಕರಿಗಂಜೆ ಕರಿಗಂಜೆ
ಉರಗನ ಭಯ ಕಂಜೆ ಹರಿವನೀರಿಗಂಜೆ ।
ಸುರಗಿಯ ಮೊನೆಗಂಜೆ ಒಂದಕಂಜುವೆ ನಾ ಪ್ರೊಂದಕ್ಕೆ ಅಳುಕುವೆ
ಪರಧನ ಪರಸ್ತ್ರೀಯ . . . .

.ವಿ—

ಅಸಮಗ್ರ.—ಅನೇಕ ಹಾಡುಗಳಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಈ ಪ್ರತಿಯೊಡನೆ ಹರದ ನೀತಿಯೂ ಇದೆ ಇದರಲ್ಲಿ "ಱ" ಅಕ್ಷರ ಪ್ರಯೋಗವು ಕಂಡು ಬರುತ್ತದೆ.

ಇದು ಗಾನಕ್ಕೆ ಯೋಗ್ಯವಾಗಿದೆ. ಅನೇಕ ಹಾಡುಗಳಿವೆ. ಭಗವತ್ಸ್ವರೂಪವಾಗಿವೆ; ತತ್ವಗಳಿಂದ ಅಡಕವಾಗಿವೆ; ರಮ್ಯವಾಗಿವೆ. ಕಡೆಯ ಭಾಗದಲ್ಲಿರುವ ಹಾಡುಗಳನ್ನು ನೋಡಿದರೆ ವರ್ಣಗಳ ಬಾನೆಯಂತೆ ತೋರುತ್ತದೆ. ಆದರೆ ಆತ್ಮಬೋಧೆ ಮುಂತಾದ ವಿಷಯ ಗಳಿಂದ ಕೂಡಿದೆ. ಹಾಡುಗಳ ಕೊನೆಯಲ್ಲಿ "ತಿರುವೆಂಕಟೇಶ, ವಿಠಲ, ಚೆನ್ನಗೋಪೀನಾಥ, ತೊರವೆಯ ನರಹರಿ, ಅಚಲಾನಂದ ವಿಠಲ, ಯೋಗೀಂದ್ರ ವಿಠಲ" ಮುಂತಾದ ಅಂಕಿತಗಳಿವೆ. "ಅಚಲಾನಂದ ವಿಠಲ" ಎಂಬ ಅಂಕಿತವು ಹೆಚ್ಚಾಗಿ ಕಂಡುಬರುತ್ತದೆ.

No. 1306. ಹಾಡುಗಳು.

HĀḌUGAḶU.

Substance, Srit Āla. Size, 8-7/16 × 1-7/8 inches. Pages 14. Lines 8—9. on a page. Extent 156 granthas. Character, Kannada. Condition, injured. Appearance, old. Mode of writing, good.

Incomplete.

Begins on fol. 76-*a* of the manuscript described under Sanskrit D. No. 11080 wherein this work has been omitted to be included in the list of other works.

Contains songs of philosophyical nature addressed to the mind, describing the greatness of Śiva. The author is not known from this.

Beginning—

ಪಲ್ಲವಿ—

ಪದುಳವಲ್ಲವೆ ನೋಡೆ ಪದುಳವಲ್ಲವೆ ।
ಸದಮಲಾತಲಿಂಗದಲ್ಲಿ । ಹುದುಗಿದಂತ ಶರಣಜನಕ್ಕೆ ॥ (ಪಲ್ಲ)

ಚರಣಗಳು—

ಅಂಗ ಹಸ್ತ ಶಕ್ತಿ ಭಕ್ತಿ । ಲಿಂಗ ತೃಪ್ತಿ ವರ್ಣ ಮುಖವು ।
ಕಂಗಳಲ್ಲಿ ಕಂಡು ಯಿಷ್ಟ । ಲಿಂಗದಲ್ಲಿ ಬೆರೆದವರ್ಗೆ ॥ (೧)

ಆದಿಯಂತ್ಯ ಮಾದಿಯಂತ್ಯ- । ವಾದಿ ಮಾಡಿ ಸೋಹವೊಂದು ॥
ವಾದವರ್ಣವೆರಡುವಳಿದು । ನಾದಬ್ರಹ್ಮವಾದವರ್ಗೆ ॥ (೨)

ಕಂಗಳಿರೆಯು ಮುಗಿದು ಯಮುನೆ ।
ಗಂಗೆಯುಜನ ರಮಣಿ ರವಿಯು ।
ತಿಂಗಳಗ್ನಿ ಕೂಡಿದಲ್ಲಿ
ಪ್ಲೊಂಗೆವಾಯುಮನಾಲ್ಕೆಸಿ ॥ (೩)

ಚಕ್ರವಾರು ಚಕ್ರವೆರಡು
ಚಕ್ರವೊಂದೇ [ವಾ] (ಯಾ) ದ ಬ್ರಹ್ಮ ।
ಚಕ್ರ। ಜಾತಿಯಲ್ಲಿ ಬೆರೆದು ।
ವಿಕ್ರಮಾಂಕರಾದವರ್ಗೆ ॥ (೪)

ಆದಿಸಂಗಮೇಶನಿರವ ।
ವೇದವುಯುದಿ ತಿಳದು ನಿಜದ ।
ಹಾದಿಹಿಡಿದು ಹೋದವರ್ಗೆ
. . . . . ॥ (೫)

॥ ಶ್ರೀರಾಗ ॥ ಸೂವಾಲಿ ॥

ಪಲ್ಲವಿ—

ನೋಡಲಾಗದೆ ! ದೇವ ನೋಡಲಾಗದೆ ।
ಕೂಡಿ ನಿನ್ನ ದಿಟ್ಟಮೂರು । ನಾಡಲೇಸು ಮಾಡಲೆನ್ನ । ನೋಡಲಾಗದೆ ॥ (ಪಲ್ಲ)
ಮಿಸುಕಲೀಯದೆನ್ನ ಮೋಹ ।
ವಿಸರವೆಂಬ ವನವನುರುಹಿ ॥
ಭಸಿತವೆನಿಸಿ ರುದ್ರ ನಿನ್ನ
ನೊಸಲ ವಹ್ನಿ ನೇತ್ರದಿಂದ ॥ (೧)

ಕಲುಷತಿಮಿರ ಮುಸುಕಿ ಮುಗಿದು ।
ನಲಿಯದೆನ್ನ ಹೃದಯ ನಳಿನ ॥
ಹಲರೆ ದಿವ್ಯರೂಪ ನಿನ್ನ ।
ಬಲದ ಭಾನು ನಯನದಿಂದ ॥ (೨)

ತರಣಿ ಕುಲ ಚಕೋರಿ ತಣಿಯೆ ।
ಹರುಷ ಶರಧಿ ಮೀರಲೆನ್ನ ।
ವರದ ಶಂಭುಲಿಂಗವಾಮ ।
ದುರಸುಧಾಕರಾಕ್ಷಿಯಿಂದ ॥ (೩)

* * * *

(ಓಲೆ ೭೮)

॥ ಶ್ರೀರಾಗ ॥ ಸೌರಾಷ್ಟ್ರ ॥

ಕೋಗಿಲೆ । ಚೆಲ್ವ ಕೋಗಿಲೆ । ಮುದ್ದುಕೋಗಿಲೆ ಜಾಣ ಕೋಗಿಲೆ॥ (ಪದ)
ಹಿಂದೆ ತಪದೊಳೀಶನೊಂದಿರು ತಿರಲೆಚ್ಚು ।
ಬೆಂದಕಾಮನಬಿಟ್ಟು ಕೋಗಿಲೆ । ಕೋಗಿಲೆ ॥
ಬಂದು ಬೇಗದೊಳು ಬಾಲೇಂದುಧರನ ಕೂಡಿ ।
ಕುಂದದೆ ನೀ ಬಾಳು ಕೋಗಿಲೆ ! ಕೋಗಿಲೆ ! (೧)

ಮನುಮುನಿಗಳ ನೀತಿಯನು ಕೆಡಿಸುವ ದುಷ್ಟ ।
ಮನಸಿಜನನು ಮೀರಿ ಕೋಗಿಲೆ ॥
ಘನವಾದವನು ತನ್ನ ನೆನೆವರಿಗೊಲಿದೀವ ।
ಧನದ ಮಿತ್ರನ ಸಾರು ಕೋಗಿಲೆ ॥ (೨)

ಸಲ್ಲರನಗಲಿದ ಮಲ್ಲಿದೆಂಘುರಕೊಲ್ವ ।
ಫುಲ್ಲಶರನ ಪಿಂಗಿ ಕೋಗಿಲೆ ॥
ಎಲ್ಲ ಜೀವರಿಗೆರ ವಿಲ್ಲದೊಲವನೀವ ।
ಬಲ್ಲಪನೊಳರು ಕೋಗಿಲೆ ॥ (೩)

ಮಂಗಳರವದೊಳನಂಗನ ಬಣ್ಣಿಸಿ ।
ಭಂಗವಲ್ಲವೆನೋಡು ಕೋಗಿಲೆ ॥
ಕಂಗೊಳಸುವ ರೂಪಮಂಗಲೆಯ ರಸನ ।
ಹಿಂಗದೆ ನೀಪಾಡು ಕೋಗಿಲೆ ॥ (೪)

ದುರುಳ ಕಂತುವಿನೊಡನಿರೆ ಲೋಕದೊಳು ನಿನ್ನ ।
ಪರಪುಷ್ಟನೆಂಬರು ಕೋಗಿಲೆ ॥
ಧರೆಗೆ ಜನಕನಾದ ಗುರು ಶಂಭುಲಿಂಗದ ।
ಚರಣ ಪಲ್ಲವಪಿಡಿ ಕೋಗಿಲೆ ॥ (೫)

* * * *

(ಓಲೆ ೩೯)

॥ ರಾಗ ॥ ಸೌರಾಷ್ಟ್ರ ॥

ಪಲ್ಲವಿ—

ಬಲ್ಲಿದ ನೀನೆಂದು ಬಡವರ ಬಾಯ್ಗೆ ಬಡಿಯದಿರೆಚ್ಚರಿಕೆ ।
ಎಳ್ಳಷ್ಟು ತಪ್ಪಿದರೆ ಕಾಲನರಕದೊಳಕ್ಕುವ ನೆಚ್ಚರಿಕೆ ॥

ಚರಣಗಳು.—

ಮಾಡು ದಾನಧರ್ಮ ಪರೋಪಕಾರವ ಮರೆಯದಿರೆಚ್ಚರಿಕೆ ।
ಕೇಡನೆಣಿಸದಂತಿರು ನೀ ನಂಬಿದರೊಳು ಕೆಡುವೆ ನೀ ನೆಚ್ಚರಿಕೆ ॥
ಮೂಢರೊಡನಾಡಿ ಮುಂದುವರಿದು ಮುಳುಗಾಡದಿರೆಚ್ಚರಿಕೆ ।
ನಾಡೊಳು ಸುಜನರ ನೋಡಿ ನೀ ನಡೆಮುಂದೆ ನಟನೆ ಬೇಡೆಚ್ಚರಿಕೆ ॥ (೧)

ಮುನ್ನಮಾಡಿದಪೂರ್ವ ಫಲದಿಂದ ಬಂದಿತು ಮುನ್ನದೆ ನೋಡೆಚ್ಚರಿಕೆ ।
ಬೆನ್ನನೊದೆವ ಯಮದೂತರು ಬರುತಹ ಬೆರೆಯದಿರೆಚ್ಚರಿಕೆ ॥
ಹೊನ್ನು ಹೆಣ್ಣು ಮಣ್ಣು ನಿನ್ನನೆ ವಂಚಿಸಿ ಹೋಗುವುದೆಚ್ಚರಿಕೆ ।
ಚೆನ್ನಾಗಿ ಗಳಸಿದೆ ನೀನುಂಡೆನೆಂದೆಂಬ ಚೇಷ್ಟೆ ಬೇಡೆಚ್ಚರಿಕೆ ॥ (೨)

ಬಾಳು ಬದುಕು ಬರಿಸಿರಿ ಪಿತ ಮಾತೆಯ ಬಯ್ಯದಿರೆಚ್ಚರಿಕೆ ।
ಕಾಲನವರು ಆವಾಗ ಕರೆವರೋ ಕಾಣ್ಬರದೆಚ್ಚರಿಕೆ ॥
ಹಾಳುಬದುಕಿಗಾಗಿ ಹಲವರ ಕೊಡಣ ಹಗೆಯಬೇಡೆಚ್ಚರಿಕೆ ।
ಶೂಲಿಲೋಕ ಪತಿಗಿರಿಜೇಶನ ಚರಣವ ಮರೆಯದಿರೆಚ್ಚರಿಕೆ ॥ (೩)

॥ ಭೋಗ ಷಟ್ಪದಿ ॥

ಪಲ್ಲವಿ—

ಧರೆಯು ಭೋಗವನ್ನು ನಚ್ಚಿ । ಹರನಮರೆದು ಕೆಡಲುಬೇಡ ।
ಧರೆಯು ಭೋಗ ಕನಸಿನಂತೆ ಕೇಳು ಮಾನವಾ ॥

ಚರಣಗಳು—

ತಿರುಕನೊರ್ವ ನೂರಮುಂದೆ ।
ಮುರುಕು ಧರ್ಮಶಾಲೆಯಲ್ಲಿ ।
ಒರಗಿಯಿರಲು ಪ್ರೊಂದುಕನಸ ಕಂಡನೆಂತೆನೆ ॥
ಪುರದ [ಅರಸು] (ರಾಜ) ಸತ್ತನವಗೆ ।
ವರಕುಮಾರ [ರುಗಳುಯಿಲ್ಲ] (ರಿಲ್ಲದಿರಲು)
ಕರಿಯುಕೈಯ್ಯ ಕುಸುಮಮಾಲೆಯಿತ್ತು ಪುರದೊಳು ॥ (೧)

End—

ಮಂಗಳೆಯರಸಗೆ ಮಂಗಳಂ ಶಿವ ।
ಲಿಂಗಮಹೇಶಗೆ ಮಂಗಳಂ ॥

ಚರಣಗಳು—

ಗಣನೆಗತೀತಗೆ ಗಾನಪ್ರಿಯಗೆ ।
ಫಣಿಪ ಕುಂಡಲಗೆ ಪಾವನ ಶೀಲಗೆ ॥
ಗುಣಮಣಿಭೂಷಗೆ ಗೋಪಪತಾಕಗೆ ।
ಪ್ರಣವಸ್ವರೂಪಗೆ ಮಂಗಳಂ ॥ (೧)

ಹರಿನುತ ಚರಣಗೆ ಹರಿಣಕಲಾಗ್ರಗೆ ।
ಕರುಣಾಸಾಗರಗೆ ಕಾಮವಿದೂರಗೆ ಮಂಗಳಂ ॥
ಮರಣವಿರಹಿತಗೆ ಮದನಸಂಹರಗೆ ।
ತರುಣೇಂದುಮೌಳಿಗೆ ಮಂಗಳಂ ॥ (೨)

ನಿಗಮತುರಂಗಗೆ ನಿರುತಚಿದಂಗಗೆ ।
ನಗಪತಿಚಾಪಗೆ ನತಪಾಲಗೆ ॥
ಗಗನಶಿರೋಜಗೆ ಘನಕುಲರಾಜಗೆ ।
ಖಗಕೋಟಿತೇಜಗೆ ಕಾಂತನಿಗೆ ಮಂಗಳಂ ॥ (೩)

ವಿ.ವಿ—

ಅಸಮಗ್ರ. ಸ್ವಲ್ಪ ಮಟ್ಟಿಗೆ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳವೆ. ಅವಾವುವೆಂಬುದನ್ನು ಸಂಸ್ಕೃತ ಡಿ. ನಂಬರು 11080 ರಲ್ಲಿ ನೋಡುವುದು.

ಇದರಲ್ಲಿ ಹಾಡುಗಳು ಅನೇಕ ರಾಗಗಳಲ್ಲಿ ಬರೆದಿರುವುವುಗಳಾಗಿವೆ. ನಡುವೆ ಭೋಗ ಷಟ್ಪದಿಗಳೂ ಉಂಟು. ಶಿವಪಾರಮ್ಯವನ್ನು ಸೂಚಿಸತಕ್ಕವುಗಳಾಗಿವೆ. ರಮ್ಯವಾಗಿವೆ. ಕವಿಯಾ ರೆಂಬುದು ತಿಳಿದು ಬರುವುದಿಲ್ಲ.

No. 1307. ಹಾಡುಗಳು.

HĀḌUGAḶU.

Substance, palm-leaf. Size, 9-9/16 × 1-1/16 inches. Pages 10. Lines 5 on a page. Extent, 50 granthas. Character, Kannada. Condition, slightly injured. Appearance, old. Mode of writing, not bad.

Begins on foll. 29-*a* of the manuscripts described under No. 687 ante.

Contains only two songs which are sung early in the morning. The author is not known.

Beginning—

॥ ಉದಯರಾಗ ॥

ಪಲ್ಲವಿ—

ಏಳಯ್ಯಾ ಬೆಳಗಾಯಿತು ಏಳಯ್ಯಾ ಬೆಳಗಾಯಿತು ॥
ಕುಂಕುಮದ ವರ್ಣವಾಗಿದೆ ಪೂರ್ವದೆಸೆಯಲ್ಲಿ ।
ಪಂಕಜಗಳರಳದುವು ಪಾಡುತ್ತಿವೆ ತುಂಬಿಗಳು ।
ಶಂಕರನ ತನುಜನೇಳೋ ಸ್ವಾಮಿ ಯೇಳಯ್ಯಾ ಬೆಳಗಾಯಿತು ॥

* * * *

ಚರಣ—

ಭಲರೆ ಭಾಪುರೆ ವೀರಭದ್ರ ಕಾಳಿಯರಮಣ ।
ಗೆಲವಿತ್ತು ಅಭಯದಲ್ಲಿ ತುಳಿದ ಪಣೆಯಿಂದ ॥
ಸಲಹೊ ಸದ್ಭಕ್ತಾದಿ ಜನರ ನೀ ಕರುಣದಲಿ ।
ನಲವಿಂದ ಕೊಂಪವಾರಳಿ ನಿಂದು ರಕ್ಷಿಸುವ ಚಲದಂಕ ॥
ಶ್ರೀ ವೀರಭದ್ರನೇಳೋ ಸ್ವಾಮಿ ಬೆಳಗಾಯಿತೇಳಯ್ಯಾ ॥

ಪಲ್ಲವಿ—

ಬೆಳಗಾಯಿತೇಳು ಸಾಸಿರದಳದ ಮಧ್ಯದಲಿ ।
ಬೆಳಗು ಪಸರಿಸಿ ಹೊಳೆವ ಥಳಥಳಸುವಾ ಪ್ರಭೆಯು ।
ಬೆಳಗು ಬೀರಿತು ಪರಂಜ್ಯೋತಿ ಯುದ್ಭವಿಸಿ ।
ಮಹಾ ಬೆಳಗಿನೊಳು ಬೆಳಗಾಯಿತು ॥

End—

ನಾದವೇ ಶಬ್ದ ನಿಶ್ಶಬ್ದವೇ ಬ್ರಹ್ಮ ।
ನಾದದೊಳಗಳ ಸುನಾದಧ್ವನಿಯು ।
ನಾದವಡಗಲು ಪ್ರಜ್ವಲಿಸಿ ಪ್ರಭೆಯಾಗಿ ನಿರುತವಾಕಾಶದಿಂದ ॥
ನಾದಬಿಂದುಕಲಾತೀತದೊಳು ಮೈಮರೆದು ।
ಭೇದವಿಲ್ಲದೆ ಮಹಾ ಬೆಳಗಿನೊಳುಬೆಳಗಾದ ।
ಆದಿ ನಿಜಗುರು ಕೂಡಲ ಚೆನ್ನ ಸಂಗಮನೊಳು ಬೆಳಗು ಪರಿಪೂರ್ಣ [ವಾಯಿತು]
(ವಾಯ್ತು) ॥ (೨)

ವಿ.ವಿ—

ಸ್ವಲ್ಪ ಮಟ್ಟಿಗೆ ಶಿಥಿಲವಾಗಿರುವ ಪ್ರತಿ. ಲಿಪಿ ಸಾಮಾನ್ಯವಾಗಿದೆ.

ಇದರಲ್ಲಿ ಉದಯಕಾಲದಲ್ಲಿ ಹೇಳುವ (ಉದಯರಾಗ) ಎರಡು ಹಾಡುಗಳಿವೆ. ಇವುಗಳಲ್ಲಿ ಮೊದಲನೆಯದು ಚೌಪದಿ ದಾಟಿಯನ್ನೂ ಎರಡನೆಯದು ಷಟ್ಪದಿ ದಾಟಿಯನ್ನೂ ಹೋಲುತ್ತವೆ. ಬರೆದವರಾರೆಂಬುದು ತಿಳಿಯುವುದಿಲ್ಲ.

No. 1308. ಹಾಡುಗಳು.

HĀḌUGAḶU.

Substance, Sritala. Size, 10-3/8 × 1-7/8 inches. Pages 5. Lines 9—13 on a page. Extent, 80 granthas. Character, Kannada. Condition, injured. Appearance, old. Mode of writing, not bad.

Begins on fol. 15-*a* of the manuscript described under No. 430 ante wherein this work has been omitted to be mentioned as an other work.

Incomplete.

Contains some songs about Śiva and Jina. The author is not known.

Beginning—

ಪಲ್ಲವಿ—

ಪಾಲಯ ಮಹಾಲಿಂಗೇಶ್ವರ ಪಾರ್ವತೀವರ ।
ಬಾಲಕ ಮಖಿಲೇಶ್ವರ ॥ ॥ ಪಾಲಯ ॥

* * * *

ಚರಣ—

ವಿನೂರ ಪುರವಾಸ ಪ್ರೀತ ಶ್ರೀ ವೈದ್ಯನಾಥ
ಸೇನಾನಿಗಜಾನನ ತಾತ ಜ್ಞಾನವಿಭಾವಿತ
ದಾನವಶೀಕೃತ ಮಾನವ ದೈವತ
ದಾನವ ಸೇವಿತ ನಿ . . ನ . . ಪಾನುತ ದಾನ . . ।
ಮೌನಿಸಮಾನ ಸಮಾನಿತ ವಿಹೀನ ವಿಜ್ಞಾನದ
ನೂನ ನಿದಾನ ಮುದಾನುತಮೇನಿದ ಭಾನದ ॥ (೨)

ಪಲ್ಲವಿ—

ನುಡಿಯಬಾರದೇನೆ ಸಿದ್ಧಿ ಬೆಡಗಿನಬಲೆ ಸುಖದೊಳ್ ವೃದ್ಧಿ ।
ಪೊಡವಿಯೊಳಗೆ ಮಡದಿ ರನ್ನೆ ದೃಢಶೀಲಕಾಂತಗೆ ಚನ್ನೆ ॥

ಚರಣ—

ಸಿದ್ಧಿಕೇಳ್ ಬುದ್ಧಿಶಾಲೆ ಹೊದ್ದಿದೆನು ನಿನ್ನ ಮೇಲೆ ।
ಉದ್ಧರಿಸೆಲೆ ಶುದ್ಧಶೀಲೆ ಬದ್ಧದಿಂದಲೆ ॥

End—

॥ ಅಷ್ಟಕ ॥

ಹೆಣ್ಣು ಹೊನ್ನು ಮಣ್ಣು ಮೂರಕ್ಕೆ ಸಿಕ್ಕದ
ಕಣ್ಣು ಮೂರುಳ್ಳ ಮುಕ್ಕಣ್ಣನ ಜರೆದ ।
ಚೆನ್ನಾಗಿ ಶಾಶ್ವತ ಸುಖವಿತ್ತು ಸಲಹೆನ್ನ ।
ನಿನ್ನ ನುತಿಪೆ ಶಾಂತ್ರಿಜಿನ ಗುಣಾರನ್ನ ॥ (೧)

* * * *

ಮೂಲ್ಕಿಗೆ ಹೋದಳು ಸಿದ್ಧಿ . . ಮುಂ . . ಕಲ್ಕ್ಯವತಾರದ ಶಾಂತಗೆರಂ-।
ನಾಲ್ಕುವರ್ಣದ ಸ್ತ್ರೀಯರಿಂದೆಡಲ್ಕೆ ಸಿದ್ಧಿಲೋಕಕೆ ಚೆಂಡೆ ॥
(ನುಡಿಯ ಬಾರದೇನೆ ಸಿದ್ಧಮ್ಮ) — (೮)

ವಿ.ವಿ.—

ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ೧೭ ನೆಯ ಓಲೆಯ ಅರ್ಧ ಭಾಗವು ಮುರಿದಿದೆ. ಆ ಓಲೆಯ ಎರಡನೆಯ ಪಕ್ಕದಲ್ಲಿ ಬರೆದುದು ಈ ಹಾಡಿಗೆ ಸಂಬಂಧಿಸಿಲ್ಲ. ಇದ ರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ ೪೩೦ ನೆಯ ನಂಬರನ್ನು ನೋಡುವುದು.

ಇದರಲ್ಲಿ ಈಶ್ವರ, ಜಿನ ಇವರ ಸಂಬಂಧವಾದ ಕೆಲವು ಹಾಡುಗಳಿವೆ. ಈಶ್ವರನ ಮೇಲೆ ಬರೆದಿರುವ ಹಾಡು ಸಂಸ್ಕೃತದಲ್ಲಿದೆ. ಬರೆದವರಾರೆಂಬುದು ತಿಳಿಯುವುದಿಲ್ಲ.

No. 1309. ಹಾಡುಗಳು-

HĀḌUGAḶU.

Substance, Srit Āla. Size, 19-1/16 × 1-13/16 inches. Pages 6. Lines 6—7 on page. Extent, 120 granthas. Character, Kannada. Condition, injured. Appearance, old. Mode of writing, good.

Begins on fol. 24-*a* of the manuscript described under No. 1128 ante.

Incomplete—

Contains some songs in Kannada and Telugu about King Kanṭhīrava

Beginning—

ರಾಗ ॥ ಭೈರವಿ ॥ ಆದಿತಾಳ ॥

ಪಲ್ಲವಿ—

ಮರೆಯಲಾಗದು ಆ ಚೆಲುವೆಯನು ಮರೆದೊಡೆಯು ಹಾ ಮನವು ನಿಲ್ಲದು ।
ಮರೆವೆಡೆಯೊಳಾರೂಪವಾದರೆ ಮರೆವುದೆಂತುಟೊ ಶಿವ ಶಿವ ॥

ಚರಣ—

ಮನದೊಳಗೆ-ನಾನೆನೆವ ಮುನ್ನವೆ ಮನದಲಿದ್ದಂದದಲಿ—ನಡೆಪಳು ।
ಮನವು ಮುಂಚಿತು ಹಿಂಚಿತೆನ್ನಯ ಮದನಕೇಳಿಯೊಳೊದಗುವ ।
ಘನತವಕದಲಿ ಮೇಲುವಾಯ್ದಳು ಮುನಿಸತೋರದೆ ಮುನಿದು ಮೆಚ್ಚುತ ।
ತನುವು ತನುವೊಂದಂತೆ ಸೊಗಯಿಪ ತರುಣಿ ರಮಣೀಮಣಿಯನು ॥ (೧)

॥ ರಾಗ ॥ ಭೈರವಿ ॥ ತ್ರಿಪುಟ ॥

ಚರಣ—

ರಾಜರಾಜಸಮಾನ ಭೋಗವಿರಾಜಮಾನ ಮನೋಜಭಾಸುರ ।
ರಾಜ ಬಿಂಬಸಮಾನ ಚಾಮರ ವೀಜಿತಾಮರ ರಾಜವಿದ್ಯಾ ॥
ಭೋಜ ಮೈಸೂರ ದೇವ ಭೂಪತನುಜ ನವಕೃತ ।
ವೈಜ ಕವಿತಾಜಾಲ ಪೂಜಿತ ರಾಜ ಕಂಠೀರವೇಂದ್ರ ॥ (೩)

End—

ರಾಗ ॥ ಕಾಂಭೋಜ । ಒಡ್ಡಿ ಮಠ್ಯತಾಳ ॥

ಚರಣ—

ಚೆಲಿಯೆ ಚಪ್ಪರ ಕಾಲಮಂಚಮುಪ್ಪೈನಿ ಚಕ್ಕಂಚಿ ಅದ್ದಮುಟ್ಟೈ ನೀಡಗನುಕೊನಿ ।
ಕೊಲುತ ಮದನ ಕೇಳಲೊನಿರೀತಿ ಜಾಚಿ ತಿ . . ಯು ವಿಭ್ರಮಿಸಿ ನೀವು ॥
ಕೆಲಕರೋ ನಾನಾಮಿ ಕಂಠೀರವೇಂದ್ರುಡು ನೇರ್ಪುನ ಉಪರತಿ ಕೋರ್ಚುಕೊನ್ನಾಡಂಟ ।
ಪಲುಮಾರದ್ದಮು ವಾರಜಾಪ್ಪುಲ ಜಾಚುಕ ಪದರಿ ಚಿರುನವ್ವುಕೋನುನ್ನದಾನವ್ವುಡು ॥ (೨)

ವಿ.ವಿ.—

ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರಲ್ಲಿ ಮೊದಲು ಕನ್ನಡದಲ್ಲಿಯೂ ಕಡೆಯಲ್ಲಿ ತೆಲುಗಿನಲ್ಲಿಯೂ ಕಂಠೀರವರಾಜೇಂದ್ರನ ಸಂಬಂಧವಾಗಿ ಕೆಲವು ಶೃಂಗಾರದ ಹಾಡುಗಳಿವೆ. ಬರೆದವರಾರೆಂಬುದು ಗೊತ್ತಾಗುವುದಿಲ್ಲ.

No. 1310. ಹಾಡುಗಳು.

HĀḌUGAḶU.

Substance, plam-leaf. Size, 11-3/4 × 1-1/4 inches. Pages 18. Lines 3 and 4 on a page. Extent, 90 granthas. Character, Kannada. Condition, injured. Appearance, old. Mode of writing, fair.

Begins on fol. 11-*a*. The other work herein is Bālapāthagaḷu 1-*a*.

Contains same caupadi songs on Mysore Kings, etc.

Beginning—

ಪಲ್ಲವಿ—

ಅರಿರಾಯ (ಜ) ಸುತರ ಪುಸ್ತಕ ಕೂಲನೆನಿಪಾ ।
ಬಿರುದ ಪಡೆದೆಸೆವ ಚಿಕ್ಕಯ್ಯ ಕುಲದೀಪಾ ॥

ಚರಣ—

ಪೊಳೆವ ವರೆವಂಬುದಿ ನಾಮುವನಲಂಕರಿಸಿ ।
ತೊಳಪ ಚೌಕಳಿ ಕಂಠಮಾಲೆಗಳ ಧರಿಸಿ ॥
ನಳನಳಪ ದುಕೂಲಗಳ ಮೈಯೊಳ್ಳಳವಡಿಸಿ ।
ಸೆಳಸ ಮಿತ್ರರುಸವೊಲೊಪ್ಪಿದೆ ತೇಜವೆರಸಿ ॥ (೧)

* * * *

ಧರಣೀಶ ದೇವರಾಜೇಂದ್ರನ ಕುಮಾರ ।
ಸ್ಥಿರತರ ಗುಣೋದಾರ ಕೀರ್ತಿವಿಸ್ತಾರ ।
ವರರಾಜವರ್‍ಯ ನಿಜವಂಶೋದ್ಧಾರ ।
ಹರುಷದಿಂ ಬಾಳು ಚಿಕ್ಕಯ್ಯ ಧುರಧೀರ ॥ (೨)

End—

ಪಲ್ಲವಿ—

ಶಶಿಯು ಸೂಡಿದನ ಮೋಹದ ಪ್ರಿಯದ ರಾಣಿ ।
ವಸುಧೆಯೊಳು ಪ್ರಭೆಯುಳ್ಳ ಗಂಗಾಭವಾನೀ ॥

* * * *

ಸಾರಿವೊರೆಯುತ್ತ ಭೋರೆಂದು ಹರಿಯುತ್ತ ।
ಧಾರಿಣಿಗೆ ಯಿಲ್ಬಗಿಯುವಾಡಿ ಹರಿಯುತ್ತ ॥
ಆರೈದು ಮನುಜರಿಗೆ ಅಭಯಗಳ ಕೊಡುತ ।
ಕರುಣಾನಿಧಿ ಕಾವೇರಿ ಜನರ ರಕ್ಷಿಸುತ ॥

ವಿ.ವಿ.—

ಇದರಲ್ಲಿ ಕೆಲವು ಚೌಪದಿ ಹಾಡುಗಳವೆ. (ಮೈಸೂರರಸರು ಮುಂತಾದವರ ಮೇಲೆ). ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

No. 1311. ಹಾಡುಗಳು by ಪವಾಡ-

HĀḌUGAḶU BY PAVĀḌA.

Substance, palm-leaf. Size, 5-3/8 × 1 inche. Pages 15. Lines 4 on a page. Extent, 45 granthas. Character, Kannada. Condition, much injured. Apa pearance, old. Mode of writing, not bad.

Begins on fol. 26-*b* of the manuscript described under No. 464 ante, wherein this has been omitted to be included in the list of other work.

Contains only one song in praise of Siddhalingēśvara.

Beginning—

ರಾಗ ॥ ತೆಲುಗ ॥ ಕಾಂಬೋಧಿ ॥

ಪಲ್ಲವಿ—

ಪರಮ ಪಾವನ ಪುಣ್ಯಚರಿತ ಭಕ್ತಾನಂದ ।
ಭರಿತ ಭವಪಾಶರಹಿತ ॥
ಶರಣಜನಪಾಲ ಸದ್ಗುಣಶೀಲ ಜಯಲೋಲ ।
ಗುರುವೆ ತೋಂಟದ ಸಿದ್ಧಲಿಂಗ—ಜಗ ।
ದ್ಗುರುವೆ ತೋಂಟದ ಸಿದ್ಧಲಿಂಗ ॥

* * *

End :

ಚರಣ.—

ಶಿವಗಂಗೆಯುರಸನ ಭವಸಿದ್ಧವಲ್ಲಭನ ।
ಶಿವತತ್ವವಚನಾಮೃತವನು ॥
ಬಹಳ ವಿಧದಿಂದೋದಿದರೆ ಕೇಳ್ದರೆ . . ಬಿಸಿದರೆ ।
ಭವ ಬಂಧನವ ನೀಗುವರು ॥
ಶಿವಕವೀಶ್ವರರ ಚರಣಾಂಘ್ರಿಸರಸಿಜ ಭೃಂಗ
ಕವಿಪವಾಡನಿಗಿಷ್ಟ್ರಫಲವ—ವರ ॥
ಕವಿಪವಾಡನಿಗಿಷ್ಟ ಫಲವ ।
ಸುವಿಲಾಸದಿಂದೀವ ಯಿಡೆಯೂರ ಸ್ಥಿರಸದಾ ।
ಶಿವ . . . . . ॥ (೧೧)

ವಿ.ವಿ.—

ಇದರಲ್ಲಿ ಒಂದೇ ಒಂದು ಹಾಡಿದೆ. ಅದರ ಕೊನೆಯಲ್ಲಿ ಸ್ವಲ್ಪ ಭಾಗ ಹೋಗಿದೆ. ಈ ಹಾಡು ತೋಂಟದ ಸಿದ್ಧಲಿಂಗೇಶ್ವರ ಸ್ತುತಿಯಾಗಿದೆ. ಹಾಡಿನಲ್ಲಿ "ವರಕವಿಪವಾಡನಿಗಿಷ್ಟಫಲವ ಸುವಿಲಾಸದಿಂದೀವಯಿಡೆಯೂರ ಸ್ಥಿರ ಸದಾಶಿವ" ಎಂದಿರುವುದರಿಂದ ಇದರ ಕರ್ತನು "ಕವಿಪವಾಡನು" ಎಂದೆನಬೇಕಾಗುತ್ತದೆ. ಇವನ ಊರು ಯಿಡೆಯೂರಾಗಿರಬಹುದು. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ಗುರುರಗಳೆ ಮುಂತಾದ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ ೪೭೪ ನೆಯ ನಂಬರನ್ನು ನೋಡುವುದು.

No. 1312. ಹಾಡುಗಳು-
HĀḌUGAḶU.

Substance, palm-leaf. Size, 12 × 1-1/8 inches. Pages 20. Lines 4 and 5 on a page. Extent, 150 granthas. Character, Kannada. Condition, injured. Appearance, old. Mode of writing, fair.

Begins on folio 83-*a* of the manuscript described under No. 226 ante, wherein the beginning folio of this work has been wrongly mentioned as 93-*a* in the list of other works.

Incomplete.

This is a collection of songs in different times written in praise on various Gods.

Beginning :

॥ ರಾಗ ॥ ಭೈರವಿ ॥

ಪಲ್ಲವಿ.—

ಪ್ರಾಣಿನಲ್ಲ ಯೆರಡವ ಕಂಡೆನಲ್ಲಸೆರಗ . . . ಟ್ಟಸಲ್ಲ ಗುರುವೆನಹುದೆಲ್ಲ ॥
ಮಲ್ಲಿಗೆದುರುಬು ಸಡಿಲಿ ಕಣ್ಣು ಕೆಂಪೇರಿ।
ಗಲ್ಲದಿ ಉಗುರ ರೇಖೆಗಳಿವೆ ॥

ನಿಲ್ಲದೆ ಉಸುರುವೆ ಗಳಸಿ ತೋರುತಲಿವೆ ।
ಮಲ್ಲಿಕಾರ್ಜುನನೆ ಮಾಜುವರೇನೊ ॥ (೧)

* * * *

ಚರಣ.—

ನನ್ನ ವಂಚಿಸಿ ಹೋಗಿ ನಿನ್ನಜಡೆಯಲೊರ್ವ ಕನ್ನೆಯನಿಂಬಿಟ್ಟಿಯೊ ದೇಹ ।
ಕನ್ನಡಜಾಣ ಜಂಬೂರ ಜ(ಂಬು) ಕೇಶ್ವರ ಮನ್ನಿಸಿ ತನ್ನಪ್ರಿಯಳನಪ್ಪಿ ॥ (೩)

End :

ಚರಣ.—

ಗರುವೆಗೆ ಗಾನವಿನೋದಿನಿಯೆನಿಪಳಿಗೆ ।
ಸುರಮುನಿಗಳ ಹೃದಯದಿ ನೆಲಸಿದಳಿಗೆ ।
ಅರಿತೊಮ್ಮೆ ತೀರ್ಥವ ಧರಿಸಿದ ನರರಿಗೆ ।
ವರಗಳ ಕೊಡುವಳಿಗೆ ॥
ಧರೆಯೊಳಧಿಕವಾದ ವರ ನುಗ್ಗಹಳ್ಳಿಯ ।
ಪುರದ ಮಧ್ಯದಿ ನಡುಕೇರಿಯಲಿ ನೆಲಸಿಹ ।
ನರಸಿಂಹನ ಕೆಲದಲಿ ನಿಂದಿರುತಿಹ ಶ್ರೀತುಲಸೀದೇವಿಗೆ ॥ (೩)

॥ ರಾಗ ॥ ಭೈರವಿ ॥

ಪಲ್ಲವಿ.—

ನಂಬಿದೆನಯ್ಯ - ನಿಮ್ಮ ಅಂಬುಜ ಚರಣವ ।
ಬೆಂಬಿಡದೆ ರಕ್ಷಿಸೊ ಶ್ರೀಶಂಭು ಸದಾಶಿವ ॥

ಚರಣ.—

ದಶಕಂಠಗೊಲಿದನೆ ಪಶುಪತಿಯೆನಿಪನೆ ।
ಎಸೆವ ರುದ್ರಾವತಾರ ನಸುನಗೆ ಮೊಗ . . .

ವಿ.ವಿ.—

ಇದರಲ್ಲಿ ಅನೇಕ ರಾಗಗಳಲ್ಲಿ ಅನೇಕ ದೇವರುಗಳ ಮೇಲೆ ಬರೆದಿರುವ ಹಾಡುಗಳವೆ. ನಡುವೆ ತೆಲುಗಿನಲ್ಲಿ ಬರೆದ ಹಾಡೊಂದಿದೆ. ಯಾರೋ ತಮಗೆ ಬೇಕಾದ ಕೀರ್ತನೆಗಳನ್ನು ಸಂಗ್ರಹಿಸಿ ಬರೆದಿಟ್ಟುಕೊಂಡಂತಿದೆ. ಓಲೆಗಳ ಸಂಖ್ಯೆಯು ಕ್ರಮವಾಗಿರದೆ ನಡುವೆ ಅಲ್ಲಲ್ಲಿ ಕೆಲವು ಲುಪ್ತವಾಗಿರುವ ಕಾರಣ ಕೆಲವು ಹಾಡುಗಳು ಪೂರ್ಣವಾಗಿ ದೊರೆಯುವುದಿಲ್ಲ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ರುಕ್ಮಾಂಗದ ಚರಿತ್ರೆ, ನರಸಿಂಹಸ್ತುತಿ (ಪತ್ತಿಯನ್ನು ಬರೆದುದು—ಕಂದದಲ್ಲಿ) ಅಲಂಕಾರ (ಸಂಸ್ಕೃತದಲ್ಲಿ) ವಿಷಯ ಇವೂ ಇವೆ.

No. 1313. ಹಾಡುಗಳು.

HĀḌUGAḶU.

Substance, Sritāla. Size, 10½ × 1¼ inches. Pages 5. Lines, 5 on a page. Extent, 31 granthas. Character, Kannada. Condition, injured. Appearance, old. Mode of writing, good.

Begins on fol. 116-*a* of the manuscript described under No. 502 ante wherein this work has been omitted to be mentioned as another work.

Contains only three moral songs addressed to Śambhulinga, Guru-śānta and Śankaralinga.

Beginning :

ಪಲ್ಲವಿ.—

ಶ್ರೀಗುರುವ್ರೊಡನುಪದೇಶ ಲಾಲಿಸಿ ।
ಆಗಳೆ ಹುದು ನರರಿಗೆ ಮುಕ್ತಿ ॥

ಚರಣ.—

ದುರಿತ ಕರ್ಮವನೊಲ್ಲದಿರು ಪುಣ್ಯವನೆ ಮಾಡು ।
ಹರನಡಿವಿಡಿ ಶಾಂತರೊಡನಾಡು ॥
ಕರುಣವಿರಲಿ ಜೀವರೊಳು ನೀತಿವಿದನಾಗು ।
ಪೊರೆ ಪೊರ್ದಿದರನೆಂದು ಬೆಸಸುವ ॥ (೧)

* * * *

ಆರು ನಾನೆಂದು ವಿಚಾರಿಸಿ ವಿಷಮ ಸಂ ।
ಸಾರವಿದನೇಕನ ಸೇ [ಂದಿ] (ರಿ) ರು ॥
ಘೋರಮರ್ದನ ಶಂಭುಲಿಂಗನನೊಲಿಸಿ ಗಂ ।
ಭೀರ ಸುಖದೊಳಿರೆಂದು ಬೆಸಸುವ ॥ (೫)

End :

ಪಲ್ಲವಿ.—

ಅಂಗವಿಕಾರಕೆ ಮುಂದುವರಿವೆ ಮನ ಘನ
ಲಿಂಗದ ಸೇವೆಯನೊಲ್ಲದಿನ್ನೆಂತೊ ॥

* * * *

ಚರಣ.—

ಎನ್ನ ಪಾದಹಸ್ತ ನಾಲಗೆ ಶಿರಗಳ ।
ಕೆನ್ನ ಜಡತ್ವವ ತೊಲಗಿಸಿ ।
ನಿನ್ನ ಕಾರುಣ್ಯ ಪ್ರಸಾದವನಿತ್ತೆನ್ನ ।
ಮನ್ನಿಸಬೇಕಯ್ಯ ತಂದೆ ಶಂಕರಲಿಂಗ ॥ (೫)

ವಿ.ವಿ.—

ಶ್ರೀ ತಾಳಪ್ರತಿ. ಮೂರೇ ಓಲೆಗಳಿವೆ. ಲಿಪಿ ಚೆನ್ನಾಗಿದೆ. ಇದರೊಡನೆ ಬಸವ ಷಟ್ಸ್ಥಲ ವಚನವಿದೆ.

ಇದರಲ್ಲಿ "ಶಂಭುಲಿಂಗ, ಗುರುಶಾಂತ, ಶಂಕರಲಿಂಗ" ಈ ಅಂಕಿತಗಳನ್ನುಳ್ಳ ಮೂರು ಹಾಡುಗಳಿವೆ. ಹಾಡುಗಳ ಚರಣದ ೧ ಮತ್ತು ೩ ನೆಯ ಪಾದಗಳು ಸಾಂಗತ್ಯದ ಧಾಟಿಯಲ್ಲಿವೆ. ಈ ಹಾಡುಗಳ ನಡುವೆ ಶಿವನ ದ್ವಾದಶನಾಮ ಸ್ತೋತ್ರವೂ (ಸಂಸ್ಕೃತದಲ್ಲಿ) ಇದೆ. ಮತ್ತು, ಈ ಹಾಡುಗಳು ನೀತಿ ಜ್ಞಾನ ಬೋಧಕಗಳಾಗಿಯೂ, ಪಲ್ಲವಿ ಚರಣಗಳನ್ನುಳ್ಳವಾಗಿಯೂ ಇವೆ.

No. 1314. ಹಾಡುಗಳು.

HĀḌUGAḶU.

Substance, palm-leaf. Size, 15 3/16 × 1½ inches. Pages 4. Lines, 4–5 on a page. Extent, 25 granthas. Character, Kannada. Condition, injured. Appearance, old. Mode of writing, good.

Begins on fol. 106-a of manuscript described under No. 894, ante. Incomplete.

Contains songs addressed to Cāmāmbika and Cikadēvēndra.

Fol. 107 is broken.

Beginning :

॥ ರಾಗ ॥ ರೇಗುಪ್ತಿ ॥

ಪಲ್ಲವಿ.—

ಕೃಪೆಯಿಂದ ಮನ್ನಿಸು ತ್ರಿಪುರ ಸಂಹಾರಿ । (!)
ಚಪಲ ಚಿತ್ತವ ಬಿಡಿಸು ಚಾಮಾಂಬಿಕಾದೇವಿ ॥

ಚರಣ.—

ಪೊಳೆವ ಶ್ರೀಪಾದದಂದುಗೆಯುಡಿಗೆ ಪೊಂಬಟ್ಟೆ ।
ಸೆಳೆನಡುವಿನೊಳು ಯಿಳಿಯು ಬೆಳಗುವ ಪ್ರೊಡ್ಯಾಣ ॥
ಕಳಸಕುಚ ಮಧ್ಯದೊಳೊಪ್ಪುವ ಮುತ್ತಿನ ಹಾರ ।
ಥಳಥಳಸುತಿಹ ತಾರಾಮಣಿಗಳಂತಿದೆ ದೇವಿ ॥ (೧)

End :

॥ ರಾಗ ॥ ನೀಲಾಂಬರಿ ॥

ಪಲ್ಲವಿ.—

ಅಗಲಿ ಸೈರಿಪುದೆಂತು ಅಕಟಕಟ ಅವಳ ।
* * * *

ಚರಣ.—

ತೊಡೆತೊಡೆಯನುರನುರವ ತೋಳ್ತೋಳನಗಲ . . . . ।
. . . . ॥
. . . . ಸ್ವರದಿ ಚಿಕದೇವೇಂದ್ರ ॥
ಬಿಡುಬಿಡೆಂದೊಡನೊಡನೆ ಬೆಂಡೇಳುವವಳ ॥ (೨)

ವಿ.ವಿ.—

ಇದರಲ್ಲಿ ಚಾಮಾಂಬಿಕಾ, ಚಿಕ್ಕದೇವೇಂದ್ರ ಈ ಅಂಕಿತಗಳುಳ್ಳ ಕೆಲವು ಹಾಡುಗಳ ಸಂಗ್ರಹವಿದೆ. ಓಲೆಗಳು ಎರಡೇ ಇವೆ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಅವಾವುವೆಂಬುದನ್ನು ಹಿಂದಣ ೮೯೪ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 1315. ಹಾಡುಗಳು-
HĀḌUGAḶU.

Substance, Sritāla. Size, 10⅝ × 1⅝ inches. Pages 2. Lines, 5 and 6 on a page. Extent, 15 granthas. Character, Kannada. Condition, injured. Appearance, old. Mode of writing, not bad.

Begins on fol. 9-*a*. The other works herein are :—(1) Āryāṣṭottara-śatanāmāvali (Skt) 1-*a*, (2) Gaṇēśāṣṭottaraśatanāmāvali (Skt) 2-*a* (3) Vināyakaṣṭaka (Skt) 4-*a*. (4) Lingāstaka (Skt) 5-*a*. (5) Śivaliṅgādi-dēvatā stute (Skt) 7-*a*. (6) Bhāgavata-Rāmāyaṇa Sangraha slokas (Skt) 8-*a*. (7) Rāmāṣṭaka (Kannada) 10-*a*.

Contains only two songs—one philosophical and the other in praise of Mūkāmbika.

Foll. 2*b*, 8*b* and 12*b* are left blank.

Beginning :

॥ ರಾಗ ॥ ಮಲಹರಿ ॥

ಪಲ್ಲವಿ.—

ತಾನಾರು ದೇಹವಾರು ದಿವ್ಯಜ್ಞಾನದಲಿ ತಿಳಿದವನೆ ಪರಮಯೋಗಿ ।
ತಾನಾರು ದೇಹವಾರು ॥

ಚರಣ.—

ಸೂತಕಾಬ್ಧಿಯಲಿ ನವಮಾಸ ತಿಂಗಳು ರುಧಿರ ।
ಧಾತಿಸಲಿ ಬಿಂದು ಪಡವೆರಸಿ ಬೆಳೆದಾ ॥
ಪಾತಕವದೊಂದು ಮೂರುತ್ರಿಯಾದ ತನುವೆಂದು ।
ತಾ ತಿಳಿದು ಒಳಸಿಕ್ಕದವನೀಗ ಯೋಗಿ ॥ (೧)

End :

ಪೊಡವಿಗಧಿಕ ಪುಣ್ಯಕ್ಷೇತ್ರವಿದೆಂದು ।
ದೃಢವಾಗಿ ಕೊಲ್ಲಾಪುರದಲ್ಲಿ ನಿಂದು ।
ಕಡುಜಾಣ ವೆಂಕಟೇಂದ್ರಗೆ ಯೊಂದೆಂದು
ಬಿಡದೆ ರಕ್ಷಿಸು ಮೂಕಾಂಬಿಕೆ ದಯಾಸಿಂಧು ॥ (೨)

ವಿ.ವಿ.—

ಅತಿ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ಆರ್ಯಾಷ್ಟೋತ್ತರ ಶತನಾಮಾವಲೀ (ಸಂಸ್ಕೃತ), ಗಣೇಶಾಷ್ಟೋತ್ತರ ಶತನಾಮಾವಲೀ (ಸಂಸ್ಕೃತ), ವಿನಾಯಕಾಷ್ಟಕ, ಲಿಂಗಾಷ್ಟಕ, ಶಿವಲಿಂಗಾದಿ ದೇವತಾಸ್ತುತಿ, ಭಾಗವತ ರಾಮಾಯಣ ಸಂಗ್ರಹ ಶ್ಲೋಕಗಳೆರಡು (ಇವಾರೂ ಸಂಸ್ಕೃತದಲ್ಲಿ), ರಾಮಾಷ್ಟಕ (ಕನ್ನಡ) ಗಳು ಇವೆ. ಪುಸ್ತಕದ ಕೊನೆಯದಾದ ೧೦ ನೆಯ ಓಲೆಯಲ್ಲಿ ಈ ಕೆಳಗಿನ ಮೂರು ಸುಭಾಷಿತ ಶ್ಲೋಕಗಳವೆ;

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ।
ಪುತ್ರಸ್ಯಸ್ಥವಿರೇ ಭಾರ್ಯಾ (ಪುತ್ರಸ್ತು ಸ್ಥಾವಿರೇಭಾವೇ) ನಾರೀ ನ ಸ್ವತಂತ್ರಾ
ಸದಾ ॥ (?) (೧)

ಕಾರ್ಯೇಷು ಮಂತ್ರೀ ಕರಣೇಷು ದಾಸೀ ಭುಕ್ತೇಷು ಮಾತಾ ಶಯನೇತು ವೇಶ್ಯಾ ।
ಧರ್ಮೇಷು ಧರ್ಮಿ ಕ್ಷಮಯಾ ಧರಿತ್ರೀ ಷಟ್ಕರ್ಮಯುಕ್ತಾ ಚ ಕುಲಾಂಗನಾಸ್ಯಾತ್ ॥ (೧)

ವಿವಾದ ಶೀಲಿನೀ ಸ್ವಯಮರ್ಥಚಾರಿಣೀ ।
ಪರಾನುಕೂಲಿನೀ ಬಹುಪಾಕಪಾಕಿನೀ ।
ಆಕ್ರಂದಿನೀ ಚಾನ್ಯಗೃಹೇ ನಿವಾಸಿನೀ ।
. . . ಂತಿ ಭಾರ್ಯಾ ದಶಪುತ್ರಮಾತಾ ॥ (೨)

ಇದರಲ್ಲಿ ಎರಡು ಹಾಡುಗಳಿವೆ. ಮೊದಲನೆಯದು ತತ್ವ ಬೋಧಕವಾದುದು. ಎರಡನೆಯದು ಮೂಕಾಂಬಿಕಾ ಸ್ತುತಿ. ಇದರಲ್ಲಿ "ವೆಂಕಟೇಂದ್ರ" ಎಂದು ಬರೆದವನ ಅಂಕಿತವಿದೆ.

No. 1316. ಹಾಡುಗಳು.

HĀḌUGAḶU.

Substance, Sritāla. Size, 10⅞ × 1⅝ inches. Pages, 3. Lines, 7 on a page. Extent 25 granthas. Character, Kannada. Condition, injured. Appearance, old. Mode of writing, good.

Begins on fol. 115-*a* of the manuscript described under No. 488 *ante*.

Contains only two songs attributed to Ṣaḍakṣaraliṅga and Allamaprabhu.

Beginning :

॥ ಭೋಗಷಟ್ಪದಿ ॥

ಪಲ್ಲವಿ.—

ಇಂದ್ರಿಯಂಗಳಹೆಂಗಳಿಗೆ । ಮುಂದುವರಿದು ಮನವು ಕೆಟ್ಟು ।
ಇಂದುಧರನ ಕಡೆಗೆ ಮುಖವು ಮದಗಲೊಯ್ಯನೆ ॥

* * * *

ಚರಣ.—

ಅಂಗನೆಯರು ತೊಡೆ . . . ಡಿದ । ಅಂಗಪೊಂಗವಾಸಿಸುವಡೆ ।
ಹಿಂಗದೆನ್ನಸಾಸಪುಟವು ನೆಗಡಿಯಾಗಲಿ ॥
ಮಂಗಳಾತ್ಮಕ ಷಡಕ್ಷರಿಯ । ಲಿಂಗನಂಘ್ರಿಗೆತ್ತ ಕುಸುಮ ।
ಪುಂಗ . . . . . . ವಡೆ ಘ್ರಾಣ ವಿಕಸವಾಗಲಿ ॥ (೫)

End :

ಪಲ್ಲವಿ.—

ಅಂತರಂಗದ ಕೇಲಿನ್ನಾರಿಗೆ ತಿಳಿಯದು ಚೆಂದಮಾಮಾ
ಚಿಂತಾಯದ ಪ್ರಭುಸ್ವಾಮಿಯಲ್ಲಮ ಬಲ್ಲಾ ॥

* * * *

ಚರಣ.—

ಮನದ ಕೊನೆಯ ಮೇಲೆ ನೆಲೆಯಾಗಿ ಯಿರುವನು ಚಂದಮಾಮಾ ।
ಜನರಿಗೆ ಕಾಣದ ಚಿನ್ಮಯ ಪರಶಿವ ಚಂದಮಾಮಾ ॥
ಅನುಶ್ರುತ ಕರಿಬಸವನ ಪ್ರಾಣ ಲಿಂಗವೆ ಚಂದಮಾಮಾ ।
ದಿನಕರ ಕೋಟಿ ಪ್ರಕಾಶ ಅಲ್ಲಮಪ್ರಭು ಚಂದಮಾಮಾ ॥ (೫)

ವಿ.ವಿ.—

ಇದರಲ್ಲಿ ಷಡಕ್ಷರಲಿಂಗ ಮತ್ತು ಅಲ್ಲಮ ಪ್ರಭು ಅಂಕಿತಗಳುಳ್ಳ ಎರಡು ಹಾಡುಗಳಿವೆ. ಮೊದಲನೆಯದು ಭೋಗ ಷಟ್ಪದಿಯಲ್ಲಿ ಬರೆದಿದೆ. ಇದು ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಪ್ರಭುಲಿಂಗಲೀಲೆಯಿದೆ. ಆ ಬಗೆಗೆ ಹಿಂದಣ ೪೭೭ ನೆಯ ನಂಬರನ್ನು ನೋಡುವುದು

No. 1317. ಹಾಡುಗಳು.

HĀḌUGAḶU.

Substance, palm-leaf. Size, $7\frac{1}{2} \times 1\frac{3}{8}$ inches. Pages, 87. Lines, 4 on a page. Extent, 285 granthas. Character, Kannada. Condition, much injured. Appearance, old. Mode of writing, good.

Complete.

This is a collection of songs by different authors such as Purandaradāsa, etc.

Beginning :

॥ ರಾಗ ॥ ಸಾಟಿ ॥

ಪಲ್ಲವಿ.—

ಜಯತು ಶ್ರೀರಘುರಾಮ ಚರಣ ಕಮಲಜ ವಿನುತಾ ।
ಜಯತು ಅಂಜನೆಯ ಸುತ ಬಹುಪುಣ್ಯ ಚರಿತಾ ।
ಜಯತು . . . . ದಾನವ ಶಿಕ್ಷ ಮೋಕ್ಷತಾ ।
ಜಯತು ಭುಜಬಲವಂತ ಭಲರೆ ಹನುಮಂತಾ ॥

ಚರಣಗಳು.—

ಮಂಜುಮುಸುಕಿದ ತೆರದಿ ರಣದೊಳು ।
ಕಳ್ಳರ ಕೈಯಿಂದ ಭೂ . ಪಿಬ . . ಮುಡಿವುತಿರಲು ॥ (?)
ಸಂಜೀವನವ ತಂದ ರಾಮಸೇವೆಗೆ.ವಜ್ರ ।
ಪಂಜರವಾದ ರಣಭೀಮ ನಿಸ್ಸೀಮ ॥ (೧)

ಶರಧಿಯನು ದಾಂಟಿ ದಶಶಿರವನೆ ಪೊಕ್ಕು ।
ವರರತ್ನದುಂಗುರವನಿತ್ತು ಭೂಸುತೆಗೆ ॥
ದುರುಳ ರಾವಣನ ನಿಗ್ರಹಿಸಿ ಲಂಕೆಯ ಸುಟ್ಟೆ ।
ಭರದಿ ಅಸುರರ ಕಡಿದೆ ಕೀರ್ತಿಯನು ಪಡೆದೆ ॥ (೨)

ಪೊಡವಿಯಲಿ ತುಂಗಭದ್ರಾ ತೀರ ನೆಲೆಯಾದಿ ।
ಸಡಗರದಿ ಶ್ರೀವಗೆಯದುರ್ಗದೊಳು ನೆಲಸಿ ।
ಬಿಡದೆ ಮೇಲ್ಗಿರಿಯ ವೆಂಕಟನ ಸೇವಕನಾಗಿ ।
ಭರದೆ ಅಸುರರನು ಕಡಿದೆ ಕೀರ್ತಿಯನು ಪಡೆದೆ ॥ (೩)

॥ ರಾಗ ॥ ಕಾಂಭೋಜಿ ॥

ಪಲ್ಲವಿ.—

ಎನ್ನೊಳು ನೀನಿಂತು . . . ಯ ಯೇತಕೊ ಪ್ರಿಯ ।
ಮನ್ನಿಸುವ ಮಮತೆಯಿಂದ ಚೆನ್ನಿಗ ಗೋಪಾಲರಾಮ ॥

ಚರಣಗಳು.—

ಕಂಡೆನೊ ನಾನಿನ್ನ ಕಣ್ಣನೋಟಗಳ ।
ಮಂಡೆಗೆ ಮುಸುಕಿಟ್ಟು ಮರಳದ ಪರಿಯ ॥
. . ಡತಗರಿಲೆನ್ನಿಸುವ ನಿಲಿಗಳ ।
ಬಂಡುಮಾಡಿದೆ ಬಲು . . ನಕದೊಳಗಿ . . ವ ॥ (೧)

ಮರೆಯ ಮಾಡಿಯ ಯೆನ್ನ ಮೈಯನ್ನ ಸೆಣೆವೆ ।
ಕರುಳ ತಿದ್ದುವವೊಲು ಕೊರಳನು ಪಿಡಿವೆ ॥
ನೆರೆನಂಬಿದವಳೊಳು ನ್ಯಾಯವು ತರವೆ ।
ಪರನಾರಿಯರಕೂಡೆ ಪತಿಯಾಗಿ ಮೆರೆವೆ ॥ (೨)

ಬಲ್ಲವನೆಂದರೆ ಬತ್ತಲೆ ನಿಲುವೆ ।
ಕಲ್ಲುಮನದಿ ನೀ ಕಲಿಯಾಗಿ ಮೆರೆವೆ ॥
ನಲ್ಲ ನಿನ್ನವಳೊಳು ನ್ಯಾಯವು ತರವೆ ।
ಫುಲ್ಲನಾಭನೆ ಮುಚ್ಚ್ತಪುರ ನರಹರಿಯೆ ॥ (೩)

॥ ರಾಗ ॥

ಪಲ್ಲವಿ.—

ತಾರಮ್ಮಯ್ಯ ನಾಡೆ-ತಾ । ವಾರಿಜನಾಭನು ಒಲಿವಿನಿಂದ ॥
ಕ್ಷೀರಸಾಗರ ಘೃತ ಬೆಣ್ಣೆಯ ಮುದ್ದೆಯ । ನೂರೆಂಟನೀವೆನೆಂದಳು ಗೋಪಿ ॥

ಚರಣಗಳು.—

ಸೋಧಿಸಿದ ಚಿನ್ನದ ವಾಕು ಕೃಷ್ಣಗೆ ।
ಸೊಗಸಿನ ಬಳೆ ಮುಂಗೈಸರಿಗೆ ॥
ಸಾಧಿಸಿ ತಮನನ ಗೆಲಿದು ವೇದವ ತಂದ ।
ಯಾದವಕುಲ ಮೋಹನ ರನ್ನ ॥ (೧)

ನೀಲ ಮುತ್ತು ಮಾಣಿಕ ವಜ್ರ ವೈಡೂರ್ಯದ ।
ಗೋಮೇಧಿಕ ಪಚ್ಚೆ ಕಡಗಗಳು ॥
ಹೇಮ ಪುಷ್ಪರಾಗದ ಉಂಗುರವಿಟ್ಟು ಕೈಗೆ
ಪೂಗಳ ಪರಿಮಳ ಗಮಗಮಿಸುತಲೆ (?) ॥ (೨)

ಈ ಪರಿಯಿಂದಲೆ ಗೋಪಿ ಪೇಳಲು ।
ಆ ಪರಮಾತ್ಮನು ಹರುಷದಿಂದ ॥
ಲೋಕರಕ್ಷಕನಾದ ಉಡುಪಿಯ ।
ಶ್ರೀಕೃಷ್ಣ ನಾಲ್ಕು ಹಸ್ತದಲಿ ತಾನಾಡಿದನೆ ॥ (೩)

॥ ರಾಗ—ಕೇದಾರ ಗೌಳ ॥

ಪಲ್ಲವಿ.—

ದರುಶನಕೆ ಕರ್ತೃ ನಮ್ಮ ಯತಿರಾಜ ।
ಪರಮಗುರು ರಾಮಾನುಜ ॥

ಚರಣಗಳು.—

ಕೃತಯುಗಕೆ ಅನಂತ ನೀನೆ ।
[ತ್ರಾಯಾತಿ] (ತ್ರೇತಾಯುಗಕೆ) ಉನ್ನತ ಲಕ್ಷ್ಮಣ ದೇವರೆ ॥
ದ್ವಾಪರಕೆ ಹಿತಗೊಡುವ ಬಲರಾಮನೆ ।
ಕಲಿಯುಗಕೆ ಗತಿಕೊಡುವ ಯತಿರಾಜನೆ ॥ (೧)

ಪರವಾದಿ ಗಜಸಿಂಹನೆ । ಚಾರ್ವಾಕ ।
ದುರುಳಜನ ಗಿರಿ ಪರುಷನೆ ।
ಶರಣಜನ ಅರ್ಚಿತನೆ । ಮುಂದಣ ।
ಪರಗತಿಯ ನೊಲಿದೀವನೆ ॥ (೨)

ವೇದಾಂತ ತತ್ವಸಾರ ಮೂರ್ತಿ ನೀ । ಆಧಾರ ವೈಷ್ಣವರ ।
ಆದಿಶೇಷಾವತಾರ ಶ್ರೀಪೆರುಂ[ಪೂ](ಬೂ)ದೂರು ಶ್ರೀಭಾಷ್ಯಕಾರ ॥ (೩)

॥ ರಾಗ—ಮಧು ಮಾಧವಿ ॥

ಪಲ್ಲವಿ.—

ಪಂತವಿದೇಕೆ ಪಲ್ಲವ ಪಾಣಿ ಚೆಲ್ವ । ಕಂತುವಿಕರೊಳು ಕಾಳತ ವೇಣಿ ಬಲು ।
ಹೊಂತಕಾರಿ ಯದುಗಿರಿಯ ಚೆಲ್ವನ ಕೂಡೆ ।
ಸಂತವಾಗಿರಲಿಲ್ಲವೆ ದೇವನ ಕೂಡೆ ।
ಸಂತವಾಗಿರಲಿಲ್ಲವೆ ಸ್ವಾಮಿಯ ಕೂಡೆ ॥

ಚರಣಗಳು.—

ಬಾಲೆನೀ ಬಗೆಯ ನರಿಯೆ ಕಾಣೆ । ಅನು ।
ಕೂಲವಾಗಿರು ಅವನೊಳು ಜಾಣೆ । ನಿನ್ನ ।
ಹೋಲೆ ಮಮತೆ ಮೋಹ ನಿನ್ನಾಣೆ । ಹೀಗೆ ।
ಹಾಲೊಳು ಹುಳಿಯ ಹಿಂಡುವರ ಮಾತನು ನೀನು ।
ಕೇಳುವುದುಚಿತವಲ್ಲ ಅವಳೊಮ್ಮೆ ಪೇಳುವದಳವೆಯುಲ್ಲ ।
ಏಂ ನಿನಗಿಷ್ಟು ತಾಳುಮೆ ನಿನ್ನೊಳಿಲ್ಲ ಸರಸ ಸಲ್ಲ ॥ (೧)

ಕಲಿಯು ನೀತಿಯು ಬಲ್ಲವನ ಕೂಡೆ । ಕೋಪ ।
ಸಲುವುದು ಸಲ್ಲದೆಂಬುದ ನೋಡೆ । ಕಂಜ ।
ಬಲಮನವಿಡಿದು ಬಾಳಗೆ ಕೇಳೆ । ಕಂಜ । ದಲೆಯುರು . . ದ
ಬಿಂದುವಿನಂತೆ ।
ಅವನ ಚಿತ್ರಕಾವ್ಯದಂತೆಯೆ ನಿನಗಿಷ್ಟು ಮೌನ ವೇಕೆ ಬಂತೆ ।
ಏಂ ನಿನಗಿಷ್ಟು ಸನುಮಾನವೇಕೆ ಕಾಂತೆ ಮುನಿವುದಂತೆ ॥ (೨)

ನಾಟಕಧಾರಿ ಯೆಂದರಿಯೆ ಯೆಲ್ಲ ಬಲು ।
ನಾಟಿಯುವಗೆ ತ್ರಿಜಗದೊಳಲ್ಲ ನಾ ।
ಖೂಟಕ ತನವನಾಡುವಳಲ್ಲ ಮೇಲು ।
ಗೋಟಿಯಾಚಾರ್ಯರೊಡೆಯ ಚೆಲ್ವರಾಯರ
ಕೂಟದಿಂದಳವ ನೋಡೆ ನಾನಾ * *
ಕೂಟರತ್ರಿಯ ಲೋಲಾಡೊ ಸೊಗಸು ಮಾಡೊ ॥ (೩)

* * * *

(ಓಲೆ, ೧೧)

॥ ರಾಗ—ಮಧುಮಾಧವಿ ॥

ಪಲ್ಲವಿ.—

ಆಣೆಕಾರನು ಕಾಣೆ ಅರಸು ಗೋಪಾಲ ।
[ವೆ](ಏ)ಣಾಲೋಚನೆ ರಂಗ ಕೇಣಿ ಗೊಂಬುವನು ॥

ಚರಣಗಳು.—

ನೋಟದಲಿ ನೋಡಿ ತಿಳವನು ಜಾತಿ ಮಂಗಳಲಿ
ವೇಟದಲಿ ಮನಕೆ ಮಾಯುವ ಬೀರುವಾ ॥
ಕೋಟಲೆಗೆ ಗುರಿಮಾಡಿ ಹೊರದೊರದು ರಕ್ಷಿಪನು ।
ಕೂಟದಲಿ ಕುಶಲಿಗಳ ಕೊನರಿ ಗೂಡುವನು ॥ (೧)

ಜಾತಿಧರ್ಮವ ತಿಳದು ನೂತನದ ಬೆಣ್ಗಳಗೆ ।
ಪ್ರೀತಿಯನು ಮಾಡಿ ಸೊಗಸನು ಬೀರುವಾ ॥
ನೋತಂತೆ ಸತಿಯರಿಗೆ ಸಿಕ್ಕಿಜಾರುವ ಕಡೆಗೆ ।
ಕಾತರಿಸಿ ಕಾಲ್ಗೆರಗಿ ಕನಲಿಗೂಡುವನು ॥ (೨)

ತರಳೆ ರನ್ನಳೆ ಕೇಳೆ ತನ್ನ ನಂಬಿದವರಿಗೆ ।
ಭರದಿ ಪುಣ್ಯಶ್ಲೋಕನೆನಿಸಿ ಮೆರೆವಾ ॥
ಧುರಧೀರ ಮಹಿಶೂರ ದೊರೆ ಚಿಕ್ಕದೇವೇಂದ್ರ ।
ಕರೆದು ನೆರೆದನು ಕಾಣೆ ಕಾಮಿನಿ ನಿನ್ನಾಣೆ ॥ (೩)

॥ ರಾಗ—ಯದುಕುಲ ಕಾಂಭೋಜಿ ॥

ಪಲ್ಲವಿ.—

ಪಾಲಿಸೆನ್ನನು ಯದುಗಿರೀಶಾ ಯೊ ।
ಮೇಲು ಕೋಟಿ ಯೆನಿಪ ಭೂವೈಕುಂಠವಾಸ ॥

ಚರಣಗಳು.—

ನಡೆವಳಿಯ ಕೇಳಿ ಹುರುಳಿಲ್ಲ ನುಡಿವ ।
ನುಡಿಗಳಲಿ ಪುಸಿಯಿಲ್ಲದಿಲ್ಲ ಲೋಕ ।
ಕೊಡೆಯ ನೀನೆಯೆಂಬರೆಲ್ಲ ನಿ ।
ನ್ನಡಿಯ ಮಹಿಮೆಯನರಿವ್ರೊಡಾರಿಗಳವಲ್ಲ । (೧)

ದೋಷಾಪರಾಧಗಳ ಮರೆದು ದುರಿತ ।
ಪಾಶಂಗಳೆಲ್ಲವನು ಪರಿದು ಪ್ರೇಮ ।
ಲೇಶ ಬಾರೆಂದೆನ್ನ ಕರೆದು ಸ ।
ರ್ವೇಶ ನೆರೆ ನಂಬಿದವನಂತರವನರಿತು । (೨)

ತಿರುನಾರಾಯಣನೆ ದಯಾಳುವೆಂದು ।
ಮೊರೆಯಿಡುವ ಸ್ತುತಿಗಳನೆ ಕೇಳು ಎನ್ನ ॥
ಮರೆವುದುಚಿತವೆ ಪೇಳು ಬೇಳು ನಿನ್ನ ।
ಬಿರುದು ಬಿಡುವುದು [ನಿ](ಚಿ)ತವೆಯಾಯಿತೇಳು ॥ (೩)

*　　　*　　　*　　　*

॥ ಓಲೆ, ೧೬ ॥

॥ ರಾಗ—ಮುಖಾರಿ ॥

ಪಲ್ಲವಿ.—

ಪಾಪಿ ಬಲ್ಲನೆ ಪರರ ಸುಖದುಃಖದಿಂಗಿತವ ।
ಕೋಪಿ ಬಲ್ಲನೆ ಸುಗುಣ ಶಾಂತಾರ್ಥವ ॥

ಚರಣಗಳು.—

ಹೇನು ಬಲ್ಲದೆ ಮುಡಿದ ಪರಿಮಳದ ವಾಸನೆಯ ।
ಶ್ವಾನ ಬಲ್ಲದೆ ರಾಗ ಭೇದಂಗಳ ॥
ಮೀನು ಬಲ್ಲದೆ ನೀರು ಚೌಳು ಸ್ವಾದೆಂಬುದನು ।
ಹಾವು ಬಲ್ಲದೆ ತನಗೆ ಹಾಲನೆರೆದವರ ॥ (೧)

ಕತ್ತೆ ಬಲ್ಲದೆ ಮೇಲೆ ಹೊತ್ತಿರುವ ನೀತಿಯನು ।
ಮೃತ್ಯು ಬಲ್ಲದೆ ದಯಾದಾಕ್ಷಿಣ್ಯವ ॥
ತೊತ್ತು ಬಲ್ಲಳೆ ಹೀನ ಮಾನದಭಿಮಾನವನು ।
ಪುತ್ರ ಬಲ್ಲದೆ ಬೆಕ್ಕು ಮನೆಯ ಮೀಸಲನು ॥ (೨)

ಕೋಣ ಬಲ್ಲದೆ ಕುದುರೆಯಂತೆ ವೈಯಾಳಿಯನು ।
ಕೋಡಗ ಬಲ್ಲದೆ ರತ್ನದಾಭರಣವ ॥
ಬೇಡಿದ ವರಗಳ ನೀವ ಪುರಂದರವಿಠಲನಲ್ಲದೆ ।
ನಾಡದೈವಗಳೆಲ್ಲ ಕೊಡಬಲ್ಲವೆ ॥ (೩)

* * * *

(ಓಲೆ, ೨೦)

ಪಲ್ಲವಿ.—

ಸ್ವಾಮಿಯಹುದು ಸಕಲ ಜನರಿಗೆ ಭೂಮಿಯಲ್ಲಿ ।
ಕಾಮಿತಾರ್ಥವಿತ್ತು ಕಡೆಗೆ ಮೋಕ್ಷವೀವ ತಿರುಮಲಾರ್ಯ ॥

ಚರಣಗಳು.—

ಒಡೆಯನಾಗಿಯುರ್ವಿಯಲ್ಲಿ ಕೊಡುವ ದಾನಧರ್ಮಗಳನು ।
ಅಡಿಯ ಸೇರಿದವರಿಗೆಲ್ಲ ಪ್ರೊಡನೆಯೊಲಿದು ಕಾವ್ಯವೀವ ॥
ತೊಡರುಗಳನು ಬಿಡಿಸಿ ತೋರುವ ಭೋಗ ಭಾಗ್ಯ ।
ದೊಡವೆಗಳಲಿ ಸುಖವ ಬೀರುವ ಪ್ರಾಣಿಗಳಿಗೆ ।
ಬಿಡದೆ ಬೇಗ ಹಿತವ ನೂರುವ ಪಾಪಗಳನು ।
ಬಡಿದು ಕೆಡಹಿ ಸುಖದೊಳಿರಿಸುವ ತಿರುಮಲಾರ್ಯ ॥ (೧)

ಕರೆದು ಜನರ ಕಷ್ಟವನ್ನು ಪಿರಿದು ಪುಣ್ಯ ಫಲವನೀವ ।
ಪಿರಿದು ತನ್ನ ನಂಬಿದವರ ಪೊರೆದು ಪೂರ್ಣಕೃಪೆಯ ಮಾಡಿ ।
ಅರಿಯದವರಿಗರಿವು ಗೊಳಿಸುವ ಧರ್ಮ ಕರ್ಮ ।
ದಿರವುಗಳನು ತೋರಿ ಕಲಿಸುವ ತಂದೆ ತಾಯಿ ।
ತೆರದೊಳೊಲಿದು ತೃಪ್ತಿ ಬಡಿಸುವ ಧಾತ್ರಿಯಲ್ಲಿ ।
ಪರರ ತನ್ನ ಪರಿಯೊಳಿರಿಸುವ ತಿರುಮಲಾರ್ಯ ॥ (೨)

End:

॥ ರಾಗ—ಉದಯರಾಗ ॥

ಪಲ್ಲವಿ.—

ಬದುಕಿದೆನು ಬದುಕಿದೆನು ಭವವೆನಗೆ ಹಿಂಗಿತು ।
ಪದುಮನಾಭನ ಸಿರಿಪಾದದೊಲವೆನಗಾಯಿತು

ಚರಣಗಳು.—

ಹರಿಯ ತೀರ್ಥ ಪ್ರಸಾದವುಯೆನಗೆ ದೊರಕಿತು ।
ಹರಿಕಥಾಮೃತವೆನ್ನ ಕಿವಿಗೊದಗಿತು ॥
ಹರಿದಾಸರುಗಳೆನ್ನ ಬಂಧು ಬಳಗವಾದರು ।
ಹರಿಯ ಶ್ರೀ ಮುದ್ರೆಯೆನಗೆ ಆಭರಣವಾಯಿತ್ತು ॥ (೧)

ಮುಕ್ತರಾದರು ಯೆನ್ನ ನೂರೊಂದು ಕುಲದವರು ।
ಮುಕ್ತಿಮಾರ್ಗಕ್ಕೆ ಯೋಗ್ಯ ನಾನಾದೆನು ॥
ಸುಕೃತಿ ದೇಹಕ್ಕನ (?) ಮನಸಿಗೆ ಮನವೆಳಸಿತು ।
ಅಕಳಂಕ ಶ್ರೀಹರಿಯ ನಾಮ ದಿವ್ಯಕೊದಗಿತ್ತು ॥ (೨)

ಹಿಂದೆನ್ನ ಸಂತ[ತ](ತಿ)ಯು ಸಕಲ ಸಂಪದವಾಯ್ತು ।
ಮುಂದೆನ್ನ ಜನ್ಮ[ಸಾ](ಸ) ಫಲವಾಯಿತು ॥
ತಂದೆ ಶ್ರೀಹರಿ ಸಿರಿಪುರಂದರ ವಿಠಲ ರಾಯನೆ ।
ಬಂದೆನ್ನ ಹೃದಯದೊಳು ನೆಲೆಯಾಗಿನಿಂದೆ ॥ (೩)

॥ ರಾಗ—ಕಲ್ಯಾಣಿ ॥

ಪಲ್ಲವಿ.—

ಹುಚ್ಚು ಮದ್ದನಿಕ್ಕಿದೆಯಲ್ಲ
ಕಿಚ್ಚು ಹತ್ತಿಯೆನ್ನ . . . । ಕೆ ಕರ್ಮ ಹೀವ್ರುತಿದೆ ॥

ಚರಣಗಳು.—

ಕೋಟಿ ಜನ್ಮದ ಪಾಪ ಹಿಂಗುವಂತೆ ನಿನ್ನ ಪಾದ ।
ಪೀಠ ಕರ್ಚಿಸಿದ ಕುಂಕುಮ ಗಂಧವ ॥
ಪಾಟಿಸಿಯೆನ್ನುರಕೆ ಪೂಸಲು ನಿನ್ನ ಹೊಸ್ತಿಲನು ।
ದಾಟುವರೆ ಮನವೊಳ್ದಿದೆಕೊ ಬಾ ನಲ್ಲನೆ ॥ (೧)

ಪರಮ ಪುರುಷರ ಮೊಕವನು ನೋಡದ ಹಾಗೆ ಶ್ರೀ ।
ಹರಿ ನಿನ್ನ ತೀರ್ಥ ಪ್ರಸಾದವನು ಕರೆದು ಯೆ ॥
ನ್ನುದರಕೆ ಉಣಿಸಿದ ಬಗೆಯಿಂದ ಸಲಹೊಕ್ಕು ಸೊರ್ಕೈ ।
ಸೊರಳದೆ ಬಾ ನಲ್ಲನೆ ॥ (೨)

ಮೂಲೋಕದೊಳು ಸಲುವಂತೆ ಯೆನ್ನಬಾಹು ।
ಮೂಲದಲಿ ಉಗುರ್ಗೊನೆ ಮಚ್ಚನೊತ್ತಿಗೆ ॥
ಸಲವಾಡದದರಿಂದ (?) ಸೊಬಗು ಕಾಗಿನೆಲೆ ।
ಚಾ[ಲಲನೆ ಆ]ದಿ ಕೇಶವನ ಮೆಚ್ಚಿದೆ ಬಾ ನಲ್ಲನೆ ॥ (೩)

ಶ್ರೀಃ ಶ್ರೀಃ ಶ್ರೀಃ

ವಿ.ವಿ.—

(ಹಾಡುಗಳ ಸಂಗ್ರಹವು) ಸಮಗ್ರ. ಅತಿ ಶಿಥಿಲವಾಗಿದೆ. ಲಿಪಿ ಉತ್ತಮವಾಗಿದೆ.

ಇದರಲ್ಲಿ ಹಾಡುಗಳನ್ನು ಸಂಗ್ರಹಿಸಿ ಬರೆದಿದೆ. ಪ್ರತಿಯೊಂದು ಹಾಡೂ ಪಲ್ಲವಿ ಚರಣಗಳಿಂದ ಕೂಡಿದೆ. ಈ ವಿವರವು ಕಂಡುಬರುವಂತೆ ಕೆಲವನ್ನು ಆರಿಸಿ ಉದ್ಧರಿಸಿ ಬರೆಯಲಾಗಿದೆ ನೋಡುವುದು. ಬರೆಹ ಗಾರನಾರೆಂಬುದು ಇದರಿಂದ ಗೊತ್ತಾಗುವುದಿಲ್ಲ.

No. 1318. ಹಾಡುಗಳು.

HĀḌUGAḶU.

Substance, palm-leaf. Size, 15⅞ × 1⅛ inches. Pages, 234. Lines, 4—6 on a page. Extent, 2,200 granthas. Character, Kannada. Condition, much injured. Appearance, old. Mode of writing, good.

Begins on fol. 1*a*. The other work herein is Mahimnaḥ stavaḥ (Skt.) 122*a*.

Incomplete.

Collection of different songs almost all written in Caupadi metre, some of the verses are such as those being sung by school children during Dasara festivals.

Fol. 125 contains some riddle verses and Fol. 126 contains some aphorisms of Astrology in Sanskrit.

Foll. 2*b*, 3*b*, 52*a*, 67*b*, 69*b*, 99*b*, 113*b*, 116*b* and 126*b* are left blank.

Beginning :

ಪಲ್ಲವಿ.—

ಶಂಭುವಿಗೆ ಸಮದಂಡಿಯೆಂಬ ಬಲವಂತ ।
ಸಂಭ್ರಮದ ಸುಂಕಚಾವಡಿಯ ಹನುಮಂತ ॥

ಚರಣಗಳು.—

ಅಂಬುಜದಳಾಕ್ಷಿ ಯಂಜನೆಗೆ ಸುತನಾದೆ ।
ಯಿಂಬಾದ ಮಣ್ಣೆಯೆಂದು ಯಿನನ• ಬಳಗೆಯಿದ್ದೆ ॥
ಜಂಭರಿಪು ಬರೆ ಕಾದಿ ಚಿರವರವ ಪಡೆದೆ ।
ನಂಬುಗೆಯ ಮಂತ್ರಿ ವಾನರ ಮುಖ್ಯಗಾದೆ ॥ (೧)

ರಾಮಮೂರ್ತಿಗೆ ಸಾದುರ್ಗ ರವಿಜನಿಗೆ ಒಲಿಸಿ ।
ಭೂಮಿ ಕಪಿಗಳ ಕರೆಸಿ ಬುದ್ಧಿಯನು ಕಲಿಸಿ ॥
ಆ ಮಹಾಂಬುಧಿದಾಟಿ ಅಸುರಪುರಿ ಬಳಸಿ ।
ಪ್ರೇಮ ಮಿಗೆ ಅರಸಿ ಭೂಮಿಜೆಗೆ ನೀ ನಮಿಸಿ ॥ (೨)

ಕೊಟ್ಟು ಮುದ್ರಿಕೆಯ ಕೈಕೊಂಡು ರತುನವನು ।
ನೆಟ್ಟನೆ ತಿರಿಗೆ ಮುರಿದಿಟ್ಟು ವನಗಳನು ॥
ಅಟ್ಟರಕ್ಕಸರೆದೆಯ ಮೆಟ್ಟಿ ತುಳಿದವನು ।
ದಿಟ್ಟತನದಲಿ ಹೊಕ್ಕು ಸುಟ್ಟೆ ಲಂಕೆಯನು ॥ (೩)

ರಾವಣನ ಕಡೆ ನುಡಿದು ಗ . . . . ಡು ।
ಯಿವಜನ ವರುಹಿ ಮಣಿಯಿತ್ತು ಬೆಂಗೊಂಡು ॥
ಭಾವ ಶರದಲಿ ಬಂಧನಕ್ಕೆ ಮುಂಕೊಂಡು ।
ದೇವರ್ಕಳೊಲಿಯೆ ಸಂಜೀವಿ (ಯಂ) ಕೈಯ್ಕೊಂಡು ॥ (೪)

ಬಂದು ಕಪಿಗಳ ಕಾಯ್ದು ಬಡಿದು ರಕ್ಕಸರ ।
ಚಂದದಿಂ ದೇವಿಯರ ಸ್ವಾಮಿಗೊಲಿಸಿ ಪರಾ ॥
ನಂದದಿಂ ಭರತಂಗೆ ಸುದ್ದಿಯು ಪೇಳ್ದ ಚದುರ ।
ಕುಂದಪವಮಾನ ನಂದನ ನೀ ಮಾನ್ಯವರ ॥ (೫)

ವೇದ ಶಾಸ್ತ್ರ ಪುರಾಣ ವಿದ್ಯೆ ಸಕಲವನು ।
ಶೋಧಿಸಿಯೆ ತಿಳಿದು ಸುಪ್ರೌಢಮತಿ ನೀನು ॥
ಈ ಧರೆಯೊಳ್ ನಿಮ್ಮ ಮಹಿಮೆಯೆಂತು ಬಣ್ಣಿಪೆನು ।
ನೀ ದಯಾಂಬುಧಿ ನಾನು ನೆರೆನಂಬಿದವನು ॥ (೬)

. . . . ।
ನೀ ಮುದದಿ ಸಿರಿಪದವ ನೆರೆಪೂಜೆಗೆಯ್ದು ॥
ಭೀಮ ವಿಕ್ರಮ ಹನುಮಸ್ವಾಮಿ ನೀನಹುದು ।
ಕಾಮಿತಾರ್ಥ . . . . . ದು ॥ (೭)

(ಓಲೆ, ೩)

ವೈದ್ಯನ ಮೇಲೆ ಹೇಳ ತಕ್ಕ ಪದ್ಯ.

ನವನಾಡಿಗಳ ಪರೀಕ್ಷೆಯು ಬಲ್ಲ ಜಾಣ ।
ಭುವಿಯೊಳಗೆ ಔಷಧಂಗಳ ಕೊಡುವ ತ್ರಾಣ ॥
ವಿವರಿಸಿಯೆ ರೋಗಗಳ ವಿಸ್ತರಿಪ ನಿಪುಣ ।
ಯುಕನಿಗೆ ಯಾರು ಈ ಕ್ಷಿತಿಯೊಳು ಪ್ರವೀಣ ॥ (೧)

* * *

(ಓಲೆ, ೪)

ಪಲ್ಲವಿ.—

. . . . ಭಂಗ ।
ಸರಸ ಮುನಿಜನ ಸಂಗ ಸಂಗೀತ ಲಿಂಗ ॥

ಚರಣಗಳು.—

ಭಾನು ಶಶಿಬಿಂಬಧರ ಭವ್ಯಗುಣಹಾರ ।
ಗಾನಲೋಲ ರತೀಂದ್ರ ಗರ್ವಹರ ಶೂರ ॥
ಜ್ಞಾನಯೋಗ ವಿಲಾಸ ಕಲಿತ ವಿಸ್ತಾರ ।
. . . . . . ತ್ರಿಪುರ ಸಂಹಾರ ॥ (೧)

ಶೂರಘೋರ ಕಪಾಲ ಶೂರಕರ ಕಮಲ ।
ಧೀರವರ ಭಸ್ಮಾಂಗ ದಿವ್ಯಹರ ಶೀಲ ॥
ಕಾರುಣ್ಯ ಮೂರ್ತಿ ಶಂಕರ ಚರ್ಮ ಚೇಲ ।
ಶ್ರೀರಮ್ಯ ಮಹಿ . . . . . ॥ (೨)

* * *

(ಓಲೆ, ೧೪ b)

ಸ್ವಸ್ತಿ ಶುಭಮಸ್ತು ದೀರ್ಘಾಯುಷ್ಯಮಸ್ತು ।
ವಸ್ತುವಾಹನ ಸಕಲ ಸಾಮ್ರಾಜ್ಯಮಸ್ತು ॥
ಅಸ್ತು ನವರತ್ನ ಕಂಠಾಭರಣಮಸ್ತು ।
ವಿಸ್ತರಿಸಿ ಚೌಪದನ ಕೇಳ ಶುಭಮಸ್ತು ॥ (೧)

ಸ್ವಸ್ತಿ ಶ್ರೀಯಾರೋಗ್ಯ ನಿಮಗಾಗಲೆಂದು ।
ವಿಸ್ತರದಿ ಐಶ್ವರ್ಯ ನಿಮಗಾಗಲೆಂದು ।
ಪುತ್ರಪೌತ್ರಾದಿಗಳು ನಿಮಗಾಗಲೆಂದು ।
ಅರ್ಥಿಯಿಂ ಹರಸಿದೆವು ಬಾಲಕರು ಬಂದು ॥ (೨)

* * * *

(ಓಲೆ, ೨೦)

ಪಲ್ಲವಿ.—

ಶ್ರೀ ವಿನಾಯಕ ನಿಮ್ಮ ದಿವ್ಯ ಚರಣಗಳ ।
ನಾವು ಭಜಿಸುವೆವು ಕೊಡು ನವ್ಯ ಬುದ್ಧಿಗಳ ॥

ಚರಣಗಳು.—

ವರಗಂಧ ಕಸ್ತೂರಿ ಪರಿಮಳಾಕ್ಷತೆಯು ।
ಮರುಗು ಮಲ್ಲಿಗೆ ಜಾಜಿ ಸುರಗಿ ಸಂಪಗೆಯು ।
ಇರುವಂತಿದವನ ಪಾದರಿಯು ಕೇತಕಿಯು ।
ತರತರದಿ ಅರ್ಪಿಸುವೆ ದಯದಿ ಸಲಹಯ್ಯ ॥ (೧)

* * * *

ವೆಂಕಟ ನೃಸಿಂಹ ಘನವಿಭುವಳಯ ನಾದ ।
ಕಿಂಕಿಣಿ ವಿಭೂಷೆ ಸಂಗೀತಾನುಮೋದ ॥
ಲಂಕಾರ ಮೋದಕ ಸಲಕ್ಷಣ ವಿನೋದ ।
ನೀಕಾಯೊ ನಲವಿಂದ ನಿಜವಿಘ್ನಭೇದ ॥ (೩)

* * * *

ಮಾಸ ಹನ್ನೆರಡಕ್ಕೆ ಮಹರ್ನವಮಿಯೊಂದು ।
ಆಶ್ರಯಿಸಿ ನಿಮ್ಮನಾವು ಹರಸಿದೆವು ಬಂದು ॥
ಬೇಸರಿಕೆಯಿಲ್ಲದೆ ಲಾಲಿಸಿ ನಿಮ್ಮ ನಿಂದು ।
ಮೋಸಕಿಕ್ಕಲಿ ಬೇಡ ಹೊನ್ನ ಕೊಡಿ ತಂದು ॥ (೪)

(ಓಲೆ, ೨೨)

ಪಲ್ಲವಿ.—

ಪರಮ ಪಾವನ ಮೂರ್ತಿ ಕರುಣಿ ಬಲವಂತ ।
ವರಕೊಯಂಬುತ್ತೂರ ವರದ ಹನುಮಂತ ॥

(ಪಲ್ಲ)

ಚರಣಗಳು.—

ರಾಮ ಪಾದಾಬ್ಜಾತರ ರಮಣೀಯ ಭೃಂಗ ।
ಭೀಮ ಬಲದಶಕಂಠ ಭೀಷಣೋತ್ತುಂಗ ॥
ಆ ಮಹಾ ರಣಧೀರನತಿಕಾಯ ಭಂಗ ।
ಕಾಮಿತಾರ್ಥವನೀವ ನಾಮವಿದ್ಯಾಂಗ ॥ (೧)

ಚಂಡಬಲ ದೈತ್ಯೇಂದು ಖಂಡನೋದ್ದಂಡ ।
ಮಂಡಿತ ಕಪೋಲಯುಗ ಕುಂಡಲ ಸುಗಂಡ ॥
ಪುಂಡರೀಕಾಕ್ಷ ಸುರಪೂಜ್ಯ ಪ್ರಚಂಡ ।
ಗಂಡುಗಲಿಯುಹುದು ರಿಪುಕದನ ಮಾರ್ತಾಂಡ ॥ (೨)

ವರಕೊಯಂಬುತ್ತೂರ ಸರಸಿಯನುಸರಸಿ ।
ಸ್ಥಿರವಾಗಿನಿಂದು ವರಗಳನುಪತಿಕರಿಸಿ ॥
ಶರಣರ್ಗೆ ವರವೀವೆ ಪರಮದಯವೆರಸಿ ।
ಹರುಷ ವಾರಿಧಿ ವಿಜಯ ಹನುವಂತ ನೆನಿಸಿ ॥ (೩)

*   *   *   *

(ಓಲೆ, ೯೬)

ಪಲ್ಲವಿ.—

ಸರಸ ಸದ್ಗುಣಸಾಂದ್ರ ಸಾಹಸೋಪೇಂದ್ರ ।
ನರಪತಿ ಕುಲೋತ್ತುಂಗ ನರಸರಾಜೇಂದ್ರ ॥

ಚರಣಗಳು.—

ಉದಯದಲಿ ರಘುಪತಿಯ ಪದಪಯೋಜವನು ।
ಮುದದಿಂದ ನೆನೆದು ಸಂಧ್ಯಾದಿ ಕೃತ್ಯವನು ॥
ವಿದಿತವಾಗಿಯೆ ಮಾಡಿ ಬುಧಜನಂಗಳನು ।
ಪದೆಪಿನಿಂದಾದರಿಪೆ ಭಾವಜ್ಞ ನೀನು ॥ (೧)

ಸಕಲ ಸಾಮಂತನೃಪ ನಿಕರ ಮಾರ್ತಾಂಡ ।
ವಿಕಸಿತ ಮುಖಾಂಭೋಜ ವಿಪ್ರವೋದ್ದಂಡ ॥
ಪ್ರಕಟ ಕುಂಜರ ಕರಾಯುತ ಬಾಹುದಂಡ ।
ಚಿಕಿತಾರಿ ರಾಜಮ್ಮ ಸಮರ ಪ್ರಚಂಡ ॥ (೨)

(ಓಲೆ, ೧೦೩)

ಪಲ್ಲವಿ.—

ಅಮಿತ ಕೀರ್ತಿ ವಿಶಾಲ ಅರಿಜನ ವಿಭಾಳ ।
ರಮಣೀಯ ಚಿಕ್ಕದೇವರಾಜ ಭೂಪಾಲ ॥

ಚರಣಗಳು.—

ಉದಯದಲಿ ಭಜಿಸಿ ಯದುಪತಿಯ ಪಾದವನು ।
ಮುದದಿಂದ ಮಾಡುತ್ತ ನಿತ್ಯದಾನವನು ॥
ಪದೆಪಿನಿಂ ಭೂಸುರರ ಮಂತ್ರಾಕ್ಷತೆಯನು ।
ಚೆದುರನಿಂದನುಕರಿಸಿ ರಂಜಿಸುವೆ ನೀನು ॥ (೧)

ಅನುಪಮದ ರತ್ನಸಿಂಹಾಸನಾಗ್ರದಲಿ ।
ಕನಕಮಯವಾದ ಗದ್ದುಗೆಯ ಬೆಡಗಿನಲಿ ॥
ವನಿತೆಯರ ಉಭಯ ಚಾಮರದ ಸಾಲಿನಲಿ ।
ಅನವರತ ಕಂಗೊಳಪೆ ನೀನೋಲಗದಲಿ ॥ (೨)

ಮನ್ನೆಯರು ಸೇನಾನಿ ಮಂತ್ರಿ ಪರಿಜನರು ।
ಉನ್ನತದ ಭಟವಂದಿ ಸೂತಮಾಗಧರು ॥
ಬಿನ್ನಣದ ಕವಿ ಗಮಕಿ ವಾದಿ ವೈಣಿಕರು ।
ನಿನ್ನೋಲಗದ ಸಾಲೆಯೊಳಗೆ ರಂಜಿಪರು ॥ (೩)

ಅಂಗ ಕಾಶ್ಮೀರ ಮಲೆಯಾಳ ಭೂಭುಜರು ।
ವಂಗ ಗುರ್ಜರ ಚೋಳ ಯವನ ನಾಯಕರು ॥
ತುಂಗ ಲಾಟ ಮರಾಟ ತುಳುವಾದಿ ನೃಪರು ।
ಸಂಗರದಿ ಮಿಗೆ ಪರಾಭವವನೆಯ್ದುವರು ॥ (೪)

ಶ್ರೀರಂಗನಾಥ ಪದಭಕ್ತಿರಮಮಾಣ ।
ಕಾರುಣಿಕ ದೊಡ್ಡದೇವಾತ್ಮಜ ಧುರೀಣ ॥
ಚಾರು ಪ್ರತಾಪ ಸಕಲಕಲಾ ಪ್ರವೀಣ ।
ಶ್ರೀ ರಂಗ ಪುರದ ಚಿಕದೇವ ಭೂರಮಣ ॥ (೫)

* * *

(ಓಲೆ, ೧೧೨)

ಪಲ್ಲವಿ.—

ಸಮರ ವಿಜಯ ಪ್ರಚಂಡ ಸಾಹಸೋಪೇಂದ್ರ ।
ಕಮನೀಯ ಹೈದರ ನವಾಬು ಗುಣ ಸಾಂದ್ರ ॥

ಚರಣಗಳು.—

ಅರುಣೋದಯದಲಿ ಅಲ್ಲಾವ ನೆರೆಭಜಿಸಿ ।
ಗುರುತರದ ರನ್ನಪಾಗನು ಶಿರದೊಳಿರಿಸಿ ॥
ಪರಿಪರಿಯ ಅಂಕಿತಾಭರಣಗಳ ತೊಡಿಸಿ ।
ಬಿರುದು ಬೆಂಡೆಯಗಳನು ಬೇಗದಲಿ ಧರಿಸಿ ॥ (೧)

ವರಪಂಚಕಲ್ಯಾಣಿ ತುರಗವನು ಯೇರಿ ।
ಅರಿಗರ್ಭ ನಿರ್ಭೇದ ಮಹಧ್ವನಿಯ ತೋರಿ ॥
ಪುರಹರನ ಶೂರಭಟರ ರೊಗ್ಗಿನಲಿ ಮೀರಿ ।
ಪಿರಿದಾಗಿ ಬರುತಿಹರು ಬೆಂಬಿಡದೆ ಸಾರಿ ॥ (೨)

ಭೇರಿ ದುಂದುಭಿ ಧಣಂ ಧಣರೆಂದು ಮೊರೆಯೆ ।
ಭೋರಿ ಹೆಗ್ಗಾಳೆಗಳು ಭೋರೆಂದು ಮೊರೆಯೆ ॥
ವೀರಿ ರಾವುತ ಬಾರು ಫೌಜುಗಳು ನಡೆಯೆ ।
ಸಾರಿಹೊರಟನು ಕೀರ್ತಿ ಧರೆಯೊಳಗೆ ಮೆರೆಯೆ ॥ (೩)

ಎದುರಾಗಿ ಕಾಳಗಕೆ ಬರುವ ಬಲ ನೋಡಿ ।
ಮುದದಿಂದ ಖಡ್ಗವನು ಜಡಿದು ಮೋನೆಮಾಡಿ ॥
ಒದಗಿ ರಣರಂಗದಲಿ ಹೊಕ್ಕು ಯಿರಿದಾಡಿ ।
ಸದೆ ಬಡಿದು ಅರಿನೃಪರ ಶಿರವ ಚೆಂಡಾಡಿ ॥ (೪)

ಚಪ್ಪನ್ನ ದೇಶಾಧಿಪತಿಗಳನು ಸೇರಿ ।
ಕಪ್ಪವನು ತಂದೀಯೆ ಕಾಣ್ಬರನುದಿನದಿ ॥
ತಪ್ಪಿದೊಡೆ ಶಿಕ್ಷಿಸುವನೆಂಬ ಅತಿಭಯದಿ ।
ಯೊಪ್ಪಿಯೋಲೈಸುವರು ನಿನ್ನ ಯೆಡಬಲದಿ ॥ (೫)

[ಸಿನ್ನ] (ಚಿನ್ನ) ಭೇರಿಧ್ವನಿಯು ಕೇಳ್ದ ಮಾತ್ರದಲಿ ।
ಮನ್ನೆಯರು ಮಂಡಲಾಧಿಪರು ಭೀತಿಯಲಿ ॥
ಉನ್ನತದ ದುರ್ಗಗಳ ಬಿಟ್ಟು ಧೃತಿ ಸಡಿಲಿ ।
ಮನ್ನಿಸಿ ಸಲಹೆಂದು ಬೀಳ್ವರಡಿಗಳಲಿ ॥ (೬)

ಅಂತೆಂಬವರ ಗಂಡ ಅಸಹಾಯ ಶೂರ ।
ನಿತ್ಯದಿಂ ಮಹಿಶೂರಪುರ ವರೋದ್ಧಾರ ॥
ಸತ್ಯದಿಂ ಸೇರಿದೊಡೆ ಪೊರೆವ ಗಂಭೀರ ।
ಮತ್ತಗಜ ಹೈದರ ನವಾಬು ರಣಶೂರ ॥ (೭)

End :

ಪಲ್ಲವಿ.—

ಶ್ರೀ ರಾಮ ನೊಲುಮೆಯೊಳು ಹೇದ ಶಾಸ್ತ್ರಕರು ।
ಧಾರಿಣಿಯೊಳು ರಾಮಚಂದ್ರ ಜೋಯಿಸರಿವರು ॥

ಚರಣ.—

ನಿತ್ಯ ಪ್ರಾತಃ ಸ್ನಾನ ಸಂಧಿ ಜಪಯುತರು ।
ಮತ್ತೆ ಪೌರಾಣ ಶಾಸ್ತ್ರದಲಿ ಪೆಗ್ಗಳರು ॥
ಅತ್ಯಧಿಕ ಅನ್ನದಾನವನು ಮಾಡುವರು ।
ಸತ್ಯ ಸಜ್ಜನರು ಸದ್ಗುಣ ಕೀರ್ತಿಯುತರು ॥ (೧)

ಬರೆಹದಲಿ ಬ್ರಹ್ಮನಿಗೆ ಸರಿಯೆನಿಸುತಿಹರು ।
ನೆರೆವೇದ ಶಾಸ್ತ್ರದಲಿ ದಕ್ಕಡಿಗರಿವರು ॥
ಬರೆದೋದುವಲ್ಲಿ ಬಹು ವಾಗ್ಜಾಲರಿವರು ।
ಕರೆದು ಕೊಡುವೆಡೆಗೆ ಕರ್ಣನ ಪೋಲುತಿಹರು ॥ (೨)

ಕನ್ನಡವು ತೆಲುಗು ನಾಗರ ಗ್ರಂಥ ಲಿಪಿಯು।
ಚೆನ್ನಸಾರದಿ ಮೆಚ್ಚಿ ಸುವರೀ ಪರಿಯು ॥
ನಿಮ್ಮನ್ನೆ ಬರೆದೋದಿ ಆರಾತು ಪ್ರತಿಯು ।
ನಿಮಗೆ ಸರಿಯಿಲ್ಲ ಯೀ ಜಗದೊಳಪ್ರತಿಯು ॥ (?) (೩)

ವಿ.ವಿ.—

ಅಸಮಗ್ರವೆನ್ನಬಹುದು. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರಲ್ಲಿ ಚೌಪದಿಯ ಹಾಡುಗಳೇ ಹೇರಳವಾಗಿವೆ. ಮಾದರಿಗಾಗಿ ಕೆಲವನ್ನು ಉದಾಹರಿಸಲಾಗಿದೆ. ಕೆಲವು ಒಗಟಿಯ ಪದ್ಯಗಳು ೧೨೫ ನೆಯ ಓಲೆಯಲ್ಲಿವೆ. ಮಹಿಮ್ನಃಸ್ತವ (ಓಲೆಗಳು ೧೨೭-೧೨೮) ವೂ, ಜ್ಯೋತಿಷ್ಯಕ್ಕೆ ಸಂಬಂಧಿಸಿದ ಕೆಲವು ಸೂತ್ರ (ಓಲೆ ೧೨೬) ಗಳೂ (ಸಂಸ್ಕೃತ ಭಾಷೆಯಲ್ಲಿ) ಇಡರೊಡನೆ ಇವೆ.

ಇದು ಹಾಡಿನಲ್ಲಿ ಬರೆದಿದೆ. ಇದರಲ್ಲಿ ಉಕ್ತವಾಗಿರುವ ವಿಷಯಗಳನ್ನು ಉದ್ಧರಿಸಿರುವ ಭಾಗಗಳಿಂದ ತಕ್ಕಮಟ್ಟಿಗೆ ತಿಳಿದುಕೊಳ್ಳಬಹುದು. ಈ ಹಾಡುಗಳ ನಡುವೆ ತೆಲುಗು ಪದ್ಯಗಳೂ ಕಲೆತಿವೆ. ಇದು ಅನೇಕ ಎಡೆಗಳಿಂದ ಬೇಕಾದ ವಿಷಯಗಳನ್ನು ಬರೆಹಗಾರನು ಸಂಗ್ರಹಿಸಿ ಬರೆದಿಟ್ಟು ಕೊಂಡುದಾಗಿರುವಂತೆ ತೋರುತ್ತದೆ. ಮತ್ತು, ಸುಮಾರು ಎರಡು ಶತಮಾನಗಳಿಂದೀಚೆಗೆ ಬರೆದಿರತಕ್ಕುದಾಗಿದೆ.

No. 1319. ಹಾಡುಗಳು.

HĀḌUGAḶU.

Substance, palm-leaf. Size, $7\frac{7}{8} \times 1$ inches. Pages, 10. Lines, 4—5 on a page. Extent, 30 granthas. Character, Kannada. Condition, injured. Appearance, old. Mode of writing, good.

Begins on fol. 32*a*. The other works herein are (1) Stanzas selected from Jagannāthavijaya, Līlāvati, etc., 1*a*, (2) Hāḍugalu (in Telugu) 14*a*.

Incomplete.

A collection of mediaeval songs.

Beginning :

ಪಳ್ಳಿದ ತರುಣಿಯು ಪಾಜೆಗೆಡಸರೆ ।
ಸಲಹೊ ಭಕ್ತ ಪರಾಯಣ
ಚಲವಿದೇತಕೊ ಚದುರ ಧೀರ ನಿನ್ನಸದನ ಕೀರ್ತಿನಾರಾಯಣ ॥
ಮಡದಿ ನಿನ್ನಯ ಬರವ ನೋಡಲು ಪು . . ಚಿಂತಿಸಿ ಸುಯ್ವಳು ।
ಪಡನೆ ಮೌನದಿ ಮಾತನಾಡಳು ।
ವನಿತೆ ತಾಪದಿ ತಾಳಳೊ ॥
ಜಡತನ ವ್ಮೈಗುಂದಿದಯುಣ್ಣದೆ ।
ಬಳುಕಿ ವಿರಹದಿ ಸುಯ್ವಳು ॥

ವಡಸೆ ಮೌನದಿ ಮಾತನಾಡಳೊ ।
ವನಿತೆ ತಾ ಮೂರ್ಛೆಗೆಯ್ವಳೊ ॥

End:

ಉಂಡುಂಡು ಅಶನವರೋಚಿಕೆ ।
ಮಿಂಡಿಯರೊಳ್ ಕೂಡೆ ಕೂಡೆ ಸುರತಮರೋಚಿಕೆ ।
ಉಂಡುಂಡು ವಿದ್ಯಾಮೃತವನು ಭೂ ।
ಮಂಡಲದೊಳ್ ದಣಿದರಾರು ಸುಜನ ಮನೋಜ ॥

ವಿ.ವಿ.—

ಇದರಲ್ಲಿ ಕೆಲವು ಹಾಡುಗಳಿವೆ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ವರ್ಷಾಕಾಲ, ಚಂದ್ರೋದಯ, ನೀತಿ ಮುಂತಾದ ವರ್ಣನಾ ಪದಗಳು ಕೆಲವೂ (ಜಗನ್ನಾಥ ವಿಜಯ, ಲೀಲಾವತಿ ಮುಂತಾದ ಗ್ರಂಥಗಳಿಂದ ಆರಿಸಿ ಬರೆದಿರ ತಕ್ಕವು), ತೆಲುಗು ಹಾಡುಗಳು ಕೆಲವೂ ಇವೆ.

No. 1320. ಹಾಡುಗಳು.

HĀḌUGAḶU.

Substance, palm-leaf. Size, $11\frac{3}{4} \times 1\frac{3}{16}$ inches. Pages, 22. Lines, 4—6 on a page. Extent, 155 granthas. Character, Kannada. Condition, very much injured. Appearance, old. Mode of writing, good.

Begins on fol. 1*a*. The other work herein is :—Pāṭulu (in Telugu) 14*a* to 65*b*.

Incomplete.

Collection of a few devotional and erotic songs. The name of the author is not known. But at the end of two songs mention is made of Tirumalārya, who is perhaps the author of these songs.

Beginning :

ಪಲ್ಲವಿ.—

ನಾರಾಯಣನ ಚರಣಗಳ ನಂಬಿರೊ-ಎಮು ।
ಗಾರೂ ಗತಿಯಿಲ್ಲವೆಂದಳುಕೆ ಕೈಗೆಡದೆ ॥

ಚರಣಗಳು.—

ಅಂದಿದ ಪಶುವು ಕರುವಿನ ಮಾಸುಗಳ ಸವಿದು ।
ಮುಂದೆ ಸುಳಿವರ ತರುಬಿ ಪಾಯ್ವತೆರದಿ ॥
ಪಿಂದೆ ಮಾಡಿದ ಪಾಪಗಳನೆಲ್ಲ ಪರಿಹರಿಸಿ ।
ಮುಂದೆ ಪಾಪಗಳ . . . ರದಂತೆ ಸಲಹುವನು ॥ (೧)

ಪರಮ ಪೂರುಷನೆಂದು ತುರುಗಾಯ್ವ ಗೊಲ್ಲರೊಳು ।
ನೆರೆದೇಕರಸವೆನಿಸಿ ಯಿರ್ದಂದದಿ ॥
ನರರು ಮಲಿನರು ಯೆಂದು ಕೊರತೆಯೆಣಿಸದೆವೆರಸಿ ।
ಹರುಷದೊಳು ಯೆಮ್ಮ ಸೇವೆಯ ಕೈಕೊಳುವನು ॥ (೨

ನೆಗೆನಂಬಿದಾ ಗಜೇಂದ್ರನ ಮೊರೆಯ ಕೇಳ ಬಂ ।
ದುರೆ ಚಕ್ರದಿಂ ನೆಗಳನರಿದಂದದಿ ॥
ಸ್ಮರಿಸಿದಾಕ್ಷಣದಿ ಭಕ್ತರ ಬಾಧೆಗಳ ಬಿಡಿಸಿ ।
ಪೊರೆವೆನೆಂದರ್ಚಾವತಾರವಡೆದಿಹನು ॥ (೩)

ಶರಣಾಗತರ ಪೊರೆವೆನೆಂದಭಯ ಹಸ್ತವನು ।
ಪರರ ದಂಡಿಪೆನೆಂದು ಕೈದುಗಳನು ॥
ಧರಿಸಿ ಯದುಗಿರಿಯ ಶಿಖರದೊಳೊಲಿದು ನಿಂದಿಹುದೆ ।
ಪರಮ ದೃಷ್ಟಾಂ(ತ) . . ಭುವನಕಿದನರಿತು ॥ (೪)

ಪರಮ ಸಾತ್ವಿಕರ ಪುತ್ರವೆಂತೊ ಪರಿಕಿಸದೆ ಯೊ ।
ದುರುಳನೊರೆದುದ ಕೇಳ್ವುದೆಂತೆನ್ನದೆ ॥
ತಿರುಮಲಾಚಾರ್ಯರುಪದೇಶವಿದು ಪರಮಾರ್ಥ ।
ವರುಹಿದೆನು ಯೆನ್ನ ಬಂಟೊಣೆಗ . . ದಿರದೆ ॥ (೫)

* * * * *

(ಓಲೆ—೪ b)

ಪಲ್ಲವಿ.—

ಸ್ಮರಿಸಿ ಕಣ್ಣಾರೆ ಸೇವಿಸಿ ಪೂಜಿಸುವೆನು ।
ಮರೆಯದಾವಗಮಾನು ಮಂಗಳಾತ್ಮನನು ॥

ಚರಣಗಳು.—

ಕಳೆವೆತ್ತ ಕೆಂದಾವರೆಯ ಪಳಿವ ಚರಣಗಳ ।
ಪೊಳೆವ ಪೊಂಗಾಳೆಗಳ ಪೋಲ್ವ ಜಂಘೆಗಳ ॥
ಎಳೆ ಬಾಳೆಗಂಬಗಳಗೆಣೆಯೆನಿಸುವೂರುಗಳ ।
ನುಲಿವ ಕಾಂಚಿಯದಾಮದೊಳು ಮಿರುಪ ಕಟಿಯ ॥ (೧)

ಪೊಗರುಗುವ ಪೊಂದುಗುಲದಿಂದೆಸೆವ ಬಡನಡುವ ।
ಜಗದೀಶನನು ಪೆತ್ತ ನಾಭಿಸರಸಿಜವ ॥
ಅಗರು ಕುಂಕುಮದ ತಿಗುರಿಂದ ಮಿಗೆ ಮೆಱೆವುರವ ।
ಜಗಜಗಿಪ ಶಂಖ ಚಕ್ರಾಂಕ ಬಾಹುಗಳ ॥ (೨)

ಕಂಬುವನು ಕಳೆಗೊಂಡು ಮೆರೆವ ನುಣ್ಗೊರೆ ಗೊರಳ ।
ನಂಬುಜಾರಿಯ ಸಿರಿಯ ನಗುವ ಸಿರಿಮೊಗವ ।
ಬಿಂಬಾಧರವನುಂಬ ಬೆಡಗುದೋರುವ ಕೊಳಲ ।
ಪಂಬುಜವನನುಕರಿಸುವೆಸಳುಗಣ್ಣುಗಳ ॥ (೩)

ತಿಲಕುಸುಮದಂಗವನು ಧಿಕ್ಕರಿಪ ನಾಸಿಕವ ।
ಕೊಳಲುಲಿಯು ಗತ್ರಿಗತಿಗೆ ಕುಣಿವ ಪುರ್ಬುಗಳ ॥
ತೊಳಪ ನೊಸಲಿನೊಳಮರ್ದ ಬೆರೆಸಾವು ತ್ರಿಲಕಗಳ ।
ತಳತಳಪ ಕರ್ಣಾಭರಣ ಕಿರೀಟಗಳ ॥ (೪)

ಪರಿವ ಸಹ್ಯಜೆ ಲೋಕಪಾವನೆಯು ಸಂಗಮದಿ ।
ಕರಿಗಿರಿಯು ಪಶ್ಚಿಮದ ದೆಸೆಯೊಳವತರಿಸಿ ॥
ಗಿರಿಯೆತ್ತಿ ಮಳೆಗಾಯ್ದು ಕೊಳಲು ಗೋವಳನೆನಿಸಿ ।
ತಿರುಮಲಾರ್ಯರಿಗೊಲಿದು ಮೆರೆವ ಸಿರಿಹರಿಯು ॥ (೫)

End :

ಪಲ್ಲವಿ.—

ಆಗು ಸರಿ ನಿನಗೆ ಕಾವೇರಿ ತಾಯೆ ।
ಮೂರುವರೆ ಕೋಟಿ ತೀರ್ಥಗಳ ಮಹಿಮೆಯು ನೋಡೆ ॥

ಚರಣಗಳು.—

ಕಾವೇರಿ ಸೋಂಕಿ ಬಹ ಗಾಳಿ ಬೀಸುವ ದೇಶ ।
ವಾವುದೋ ಅಲ್ಲಿಯವರ್ಗೆ ಮುಕ್ತಿ ॥
ತೀವರದೊಳಹುದೆಂದು ದೇವಾದಿಗಳು ಬಂದು ।
ತಾವಿನಿಂದಬ್ಧಿ ಪರ್ಯಂತ ಮುಳ್ಗಲ್ಲಿಹರು ॥ (೧)

ಪಾಪದೊಳು ತಾನು ಜನಿಸಿದೆನೆಂಬ ಗರ್ವದಿಂ ।
ಪಾದೇಶಗಂಗೆ ನಿನ್ನೊಡನೆ ಸೆಣಸಿ ॥
ವಾದಿಸಲು ನೀನು ನಿನ್ನುದರದೊಳು ಮೂರೆಡೆಯೊ ।
ಆದಿಪುರುಷನ ಪಡೆದೆಯಾ ಮಹಿಮೆಯನು ನೋಡೆ ॥ (೨)

ಪರವಾಸುದೇವ . . . . . ದೊಳಗ ।

॥ ರಾಗ ॥ ಯದುಕುಲ ಕಾಂಬೋಧಿ ॥

ಪಲ್ಲವಿ.—

ಆ ನಡತೆ ಆ ಘನತೆ ಆ ಜಾಣ್ಮೆ ಆ ಪೋಲ್ಮೆ ಆವನಿಗೆ ಅಳವಡುವುದಮ್ಮಾ ಕೇಳು ।
ಜಾಣೆ ಪರಿಕಿಸೆ ಕಳುಲೆ ಚೆಲುವ ರಾಜೇಂದ್ರ ಪಾಂಚಾಲಪುರುಷನು ಕಾಣೆಯಮ್ಮಾ ॥

ಚರಣಗಳು.—

ಮಾನಿನಿಯರೊಳವರಿತು ಮನವ ಮೆಚ್ಚಿ ಸುವ್ರತ ಮನಸಿಜನೆ ಯಿವನೆನಿಪನಮ್ಮಾ । ಮನದಿ ।
ಸಾನುರಾಗದೊಳವನ ನೆರೆದು ಸಂತಸದೊಳಿಹ ಸತಿಯೆ ಪುಣ್ಯವತಿ ಕೇಳಮ್ಮಾ ॥
ನಾನುಳಿದು ಒರೆವೆಯೆನ್ನಾಣೆ ನಿನ್ನೊಡನೆ ಮರೆಯೆನು ಮನಸೋತೆನಾನಮ್ಮಾ । ಇನ್ನು ।
ತಾಣದಿರಲಾರೆ ಮೋಕ್ಷಣವೆ ಎನ್ನಯ ಪ್ರಾಣಕಾಂತನನು ಕರೆದು ತಾರಮ್ಮಾ ॥ (೧)

* * * * *

ನಡೆ ನೆನಹು ನುಡಿಗಳೊಂದೆನಿಸಿ . . ನಡೆವ . . . . . ।
ಕಂಡು ಕೇಳ್ದವರೊಳಗಿವನಂತೆ ಪುಣ್ಯ ಪುರುಷನ ಕಾಣೆಯಮ್ಮಾ ॥
ಒಡನೆ ಯೆನ್ನಯ ಭಾಗ್ಯವೊದಗಿತದು ಕಾರಣದಿ ಉಚಿತಜ್ಞನಿದೆ ಬಂದನಮ್ಮಾ ।
ಇಂದು ನಡೆಗರದಿ ಕಳಲೆ ಚೆಲುವೆರಾಜ ನೊಡಗೂಡಿ ಸಾಮ್ರಾಜ್ಯ ಸುಖವಾದುದಮ್ಮಾ ॥
[(೩)

ವಿ.ವಿ.—

ಅಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ. ಈ ಪುಸ್ತಕದೊಡನೆ ತೆಲುಗು ಹಾಡುಗಳೂ ಇವೆ.

ಇದು ಹಾಡಿನ ರೂಪದಲ್ಲಿದೆ. ಭಕ್ತಿ, ಶೃಂಗಾರ ವಿಷಯಗಳನ್ನೊಳಗೊಂಡಿದೆ. ಕವಿ ಯಾರೆಂಬುದು ತಿಳಿದು ಬರುವುದಿಲ್ಲ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದ ನೋಡಿ ತಿಳಿಯುವುದು.

No. 1321. ಹಾಡುಗಳು.

HĀḌUGAḶU.

Substance, palm-leaf. Size, 8 3/16 × 1¼ inches. Pages, 91. Lines, 4.5 on a page. Extent, 420 granthas. Character, Kannada. Condition, very much injured. Appearance, old. Mode of writing, fair.

Similar to the above. The name of the author is not known.

Beginning :

. . . . ವಿರಿಂಚಿನಾಸ್ತಿ ॥ (?) (೧)
ಕನಕ ಶಿಖರ ಚಾಪ . . . ಸಂಘಟಿತ . . ತ ಭೋಗನಾಥ ।
ಕನದಮೇಯ ಗುಣ ಸನಾಥ ಕಪಟ ರಾಕ್ಷಸಾಧಿ ನಾಥ ।
ವನರುಹಾ . . . . ।
. . . . ವರದ ಪಾಹಿ ವಿಶ್ವನಾಥ ॥ (೨)

* * * * *

ಕಣ್ಣೆಂಜೊನ್ನೈದಿಲೆಯ ಕಪ್ಪುರವ ಮಾಡಿ ಲಾ ।
ವಣ್ಯ ಪಂಚಾಮೃತವ ಯೆಡೆಮಾಡುವ ॥
ಪುಣ್ಯಾಂಗನೆಯರುಂಟೆ ಅಂಗದೇಶದೊಳಹಡೆ ।
ಯೆಣ್ಣೆ ಮುಂಗಾಣದ ಮದಾಂಧಪರ ದೆಸೆಗೆ ॥ (೧)

* * * *

ರೂಪಗುಣಸೌಂದರ್ಯ ಚಾಪಲವನಿಡುತಿರುವ ।
ಚಾಪಲಾಕ್ಷಿಯರ ಕೈಯ್ಯ ಮೋಹನ ಭಿಕ್ಷವ ॥
ಕಾಪಾಡಿದುಂಡ ಮದವೇರಿ ತಿರುಗುವ ಮ ।
. . . . ದಾ . ದ ಕವಿಲಿಂಗ ಕಪಿನೀಪತಿ ಸಂಚಿಂಚಗೆ ॥ (೩)

End :

ಅರುಣನುದಯಾಕಿನ್ನು ಹರಿಯುದ ಮಂಜುಂಟಿ ।
ತರ . . . . ವಿರಾತರುಂಟಿ ॥
ಹರಭಕ್ತ ಜ್ಞಾನಿಗೆ ಪರಿಭವಗಳುಂಟಿ ।
ಹರ ಶಂ . . . . . ವ್ರುಂಟಿ ಶರ ॥ (೫)

ವಿ.ವಿ.—

ಇದರಲ್ಲಿ ಕನ್ನಡ, ಸಂಸ್ಕೃತ, ತೆಲುಗು ಭಾಷೆಗಳಲ್ಲಿ ಹಾಡುಗಳು ಬರೆದಿವೆ. ಅತ್ಯಂತ ಶಿಥಿಲವಾದ ಪ್ರತಿ. ಬರೆವಣಿಗೆ ಚೆನ್ನಾಗಿದೆ. ಈ ಹಾಡುಗಳು ಸಂಗೃಹೀತಗಳಾಗಿರುವಂತೆ ತೋರುತ್ತದೆ. ಪುಸ್ತಕದಾದಿಯಲ್ಲಿ "ತಿಮ್ಮರಾಯಪ್ಪನ ಕೀರ್ತನೆ ಪುಸ್ತಕ"ಕ್ಕೆ ಎಂದಿದೆ.

ಇದರಲ್ಲಿರುವ ಹಾಡುಗಳು ಅನೇಕ ರಾಗಗಳಲ್ಲಿ ಬರೆದಿರುವುವುಗಳಾಗಿವೆ. ಇವನ್ನು ರಚಿಸಿದವರಾರೆಂಬುದು ಪೂರ್ಣವಾಗಿ ತಿಳಿದು ಬರುವುದಿಲ್ಲ. ಇವು ಶೃಂಗಾರ, ಭಕ್ತಿ ವಿಷಯಗಳಿಂದ ಕೂಡಿರುವುವುಗಳಾಗಿವೆ.

No. 1322. ಹಾಡುಗಳು.

HĀḌUGAḶU.

Substance, Srītala. Size, $12\frac{3}{4} \times 1\frac{4}{16}$ inches. Pages, 25. Lines, 6-10 on a page. Extent, 280 granthas. Character, Kannada. Condition, injured. Appearance, old. Mode of writing, good.

Incomplete.

Collection of devotional and erotic songs in different rāgams written in Kannada, Telugu and Sanskrit.

Fol. 8*b* is left blank. Foll. 14 and 15 contain a horoscope of one Lakṣmīramaṇa, son of Aṇṇayabhārati, who was born in the Śaka year 1592 corresponding to 1670-A.D.

Beginning :

॥ ಉದಯರಾಗ ॥

ಪಲ್ಲವಿ.—

ಮಾತೆಯು ನುತಜನ ಜಾತೆಯು ಹರಿಮನಃ
ಪ್ರೀತೆಯು ಭುವನ ವಿಖ್ಯಾತೆಯು ॥
ನೀತಿಯುನ್ನತ ಕರದಾತೆಯು ಶಿವನ ಸಂ ।
ಘಾತೆಯು ನೋಡುವ ಬನ್ನಿರಯ್ಯ ॥
ಕಾವೇರಿಯು ಭವಹಾರಿಯು ಮುಕ್ತಿಕಾರಿಯು ।
ನೋಡುವ ಬನ್ನಿರಯ್ಯ ಭವಹಾರಿಯು ॥

ಶ್ಲೋಕ.—

ಮಜ್ಜಂತು ಮುನಯಃ ಸರ್ವೇ ಭವಾನೇಕೋಗತಿರ್ಮಜೌ ।
ಅಂಬತ್ವದ್ದರ್ಶನಾನ್ಮುಕ್ತಿಃ ನದಾಸೇ ಸ್ನಾನಜಂ ಫಲಂ ॥

ಪದ.—

ಬಂದು ಸಕಲ ಮುನಿವೃಂದ ನೆರೆದು ಮಿಾಯಲಂದು ನಾರದಮುನಿ ಪೊಗಳುತಿರೆ।
ದೇಹವಿಲ್ಲ ನೋಡಿದಳೆ ಮುಕುತಿಯಹುದೆಂದರೆ ಮುಳುಗಲದೇತಕಯ್ಯಾ? ॥ ೧)

* * * * *

ಆವಾವ ಜನ್ಮ ಕರ್ಮಂಗಳು ಸವೆವ್ರವು।
ಕಾವೇರಿಯ ಕಂಡು ಸುಖ ಬಾಳರೈ ॥
ಶ್ರೀರಂಗಸ್ವಾಮಿ ಪುರಂದರ ವಿಠಲನ।
ಸೇವೆಯೊಳನುದಿನವಿಪ್ಪುದಯ್ಯ ॥ ಕಾವೇರಿಯ ಭವ್ಯಹಾರಿಯ ॥ (೭)

End :

॥ ರಾಗ ॥

ಪಲ್ಲವಿ.—

ಬುದ್ಧಿಯಾಗಿ ಬದುಕೆಂದು ಹೇಳದೆ ನಾನು ಅಪ್ಪ-।
ಬದ್ಧನಾಗಿ ಕೇಡಬೇಡ ಆತ್ಮನೇ ನೀನು ॥

ಚರಣಗಳು.—

ದಾನಧರ್ಮವೆಂಬ ಕಟ್ಟೋಗರವ ಕಟ್ಟು ಸು।
ಜ್ಞಾನವೆಂಬ ವಜ್ರಪಂಜರವನೆ ಕೊಟ್ಟು।
ಹೀನ ವಿಷಯವೆಂಬ ನೀಚಸಂಗವನೆ ಬಿಟ್ಟು ಅ।
ಜ್ಞಾನವೆಂಬ ಘನಾ [ದಾ] ರಣ್ಯವನೆ ಸುಟ್ಟು ॥ (೧)

ಸತ್ಯವೆಂಬ ತಾಯ ಮಾತ ಮಿಾರದಿರಯ್ಯ।
ಉತ್ತಮ ಘನತ್ವ ತಂದೆಯೊಳು ಬಾಳಯ್ಯ।
ಮುಕ್ತಿಗೆ ಸಂತತವೆಂಬ ಸತಿಯನಾಳಯ್ಯ ನಿನಗೆ।
ಪ್ರತ್ಯಕ್ಷನೆಂದೆಂಬ ಪುತ್ರನಾಗಬೇಕಯ್ಯ ॥ (೨)

ಬಾಳುವಾಗ ಸರ್ವಜನ ಬಂಧುಗಳೆಲ್ಲ ಕೆ।
ಟ್ಟಾಲಿಪರಿವಾಗ ಮಾತಾಡಿಸುವರಿಲ್ಲ।
ಹಾಳು ಸಂಸಾರ ಸ್ಥಿರವೆಂಬುದು ತಾಹೊಲ್ಲ ಭಕ್ತ।
ಲೋಲ ಮಂದರೇಶನೆಂಬ ಸ್ವಾಮಿ ತಾ ಬಲ್ಲ ॥ (೩)

॥ ರಾಗ ।

ಪಲ್ಲವಿ.—

ತನ್ನಾತ್ಮನ ತಾನೇ ನೋಡಬೇಕು।
ಪರಂಜ್ಯೋತಿಯ ತಾನೆ ತಿಳಿಯಬೇಕು ॥

ಚರಣಗಳು.—

ಆನೆ ಕೆಸರೊಳು ಬಿದ್ದರೆತ್ತುವರಾರುಂಟು ತನ್ನ।
ತಾನೆ ಧೈರ್ಯವಿಡಿದೇಳುವಂತೆ ಯೇಳುವಂತೆ ॥
ತನ್ನಾತ್ಮನ ಧ್ಯಾನವ ಮಾಡುವುದರಂತೆ-ಅದರಂತೆ ಯಿದಕೆ।
ಹಾನಿಯೇಕನ್ಯತ್ರ ಚಿಂತೆ ॥ (೧)

ಅಜ್ಞಾನ ಸ್ವರೂಪನಾಗಿ ಅಜ್ಞಾನದಿ ಪರರನು।
ಸುಜ್ಞಾನಿ ತನ್ನಾತ್ಮನ ಕಂಡು-ಧ್ಯಾನ॥
ಯಜ್ಞವಾಡುವಾಗ ನಿಜಗಂಡು ಸುಯಿ।
ಯಜ್ಞ ಸ್ತಂಭವಾದು (?) ಕರ್ಮದ ಹಿಂಡು॥ (೨)

ಸಂಸಿಜಾಗುಪಾಯದಷ್ಯ (?) ಪೇಳ್ವೆನೈಸೆ ಗುರು ತನ್ನ।
ಸಂಸಾರವ ತಾನೆ ಕೆಡಿಸಬೇಕು-ಯಿದಕೆ॥
ಸಂಶಯ (೦) ಬಟ್ಟನಯೋಗ ಕಾಕು ಗುರು।
ಹಂಸನಾಥ ವರದ ತತ್ವದ ಬೇಕು॥ (೩)

॥ ರಾಗ ॥

ಪಲ್ಲವಿ.—

ಕೇಳದನೆಂದು ಹೋಗಿ ಹೇಳಿ ಹೀಗೆಂದು।
ನೀಲವೇಣಿಯು ಪಲ್ಲವ ಪಾಣಿಯು ಪನ್ನಗವೇಣಿಯು ಕಟ್ಟಾಣಿಯು॥

ಚರಣಗಳು.—

ಸೊಕ್ಕಾನೆ ನಡೆಯು ಸೋಪರ್ಣಡಿಯು ಸುದತಿ ರನ್ನೆಯು।
ಚಿಕ್ಕಪ್ರಾಯದ ಚದುರ ತನದ ಚೆಲುವ ಚೆನ್ನೆಯು।
ಕಕ್ಕಸ ಕುಚದ ಕೋಮಲಾಂಗಿ ಕಾಂತಿಸಂಪನ್ನೆಯು ತನಗೆ।
ತಕ್ಕನಾರಿಯು ರತಿವ್ರುದಾರಿಯು ಹೊಂತಕಾರಿಯು ಪ್ರಿಯಾರಿಯು॥ (೧)

ಮಲ್ಲಿಗೆ ಗಂಧಿಯು ಮಮತೆಯುಳ್ಳ ಮುದ್ದು ಗಿಣಿಯುನು।
ಚೆಲ್ಲಗಂಗಳ ಚೆಂದುಟಿ ಯಿರುವ ಚಿನ್ನದ ಕಣಿಯುನು॥
ಮೆಲ್ಲದೆಗಾತ್ರಿಯು ಮುಗುಳು ನಗೆಯು ಮುತ್ತಿನ ಮಣಿಯುನು ಪ್ರಾಣ।
ವಲ್ಲಭ ಕಾಣೆ ಕನ್ನಡ ಜಾಣೆ ಕಸ್ತೂರಿ ವೀಣೆ ಕೇಳು ನಿನ್ನಾಣೆ॥ (೨)

ಕಂಗಳ ಬಯಕೆ ಮನದಾಸೆಯು ಕೊಡುವ ದಾನಿಯು।
ಸಂಗ ಸೌಖ್ಯವ ನೀವ ಸೊಬಗಿನ ಸೋನೆಯು॥
ಇಂಗಿತವರಿತು ಯಿಚ್ಛೆಗೊಳಿಪ ಯನ್ನ ಮಾನಿನಿಯು ಹೋಗಿ।

ವಿ.ವಿ.—

ಅಸಮಗ್ರ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಈ ಪುಸ್ತಕದಲ್ಲಿ ಕನ್ನಡ, ತೆಲುಗು, ಸಂಸ್ಕೃತ (ಗೀತಗೋವಿಂದದ ಕೀರ್ತನೆ ಮುಂತಾದುವು) ಈ ಭಾಷೆಗಳಲ್ಲಿ ಹಾಡುಗಳಿವೆ. ಇದರ ಕೊನೆಯಲ್ಲಿ "ಅಣ್ಣಯ್ಯ ಭಾರತಿಗಳ ಕುಮಾರ ಲಕ್ಷ್ಮೀರಮಣ"ನ ಜನ್ಮ ಪತ್ರಿಕೆ (ಶಕ ೧೫೭೨) ಯು ಎರಡು ಓಲೆಗಳಿವೆ.

ಇದರಲ್ಲಿರುವ ಹಾಡುಗಳು ಶೃಂಗಾರ, ಭಕ್ತಿ, ಜ್ಞಾನಬೋಧಕಗಳಾಗಿವೆ ಅನೇಕ ರಾಗಗಳಲ್ಲಿ ಬರೆದವುಗಳಾಗಿವೆ. ಇವುಗಳ ಬಂಧವು ಚೆನ್ನಾಗಿದೆ.

No. 1323. ಹಾಡುಗಳು.

HĀḌUGAḶU.

Substance, palm-leaf. Size, 6¾ × 1⅜ inches. Pages, 280. Lines, 3-5 on a page. Extent, 500 granthas. Character, Kannada. Condition, very much injured. Appearance, old. Mode of writing, not bad.

A collection of Lullabies and songs of praise including those by Purandaradāsa. The compiler of these songs should be a Śrīvaiṣṇava by religion and a native of Mysore. For details see extracts below.

Beginning :

॥ ಲಾಲಿ ಹಾಡು ॥

ಪಲ್ಲವಿ.—

ಲಾಲಿ . . . . ।
ಬಾಲಗೋಪಾಲ ಶ್ರೀಪತಿ ಕೃಷ್ಣ ಲಾಲಿ ॥

ಚರಣಗಳು.—

. . . . ಂಬುನಿಧಿಯಂ ಬಲ್ಸಿಜೆ ।
ಶ್ರೀರಮಣ ಭಕ್ತರಿಚ್ಛೆಗೆ ನಲಿದು ಬರುವ ।
ಕಾರುಣ್ಯ ನಿಧಿ ಕೃಷ್ಣ ಕಾಯುವ ಕರು ತುರುಹ।
. . . ರಂ ಮೆರೆವ ಕಡ (ಗ) ರುವ ॥ (೧)

ಲೀಲೆ . . . . . . ಬಾಲ ನೀನಾಗಿ ।
ಪಾಲುಂಡು ಪೂತನೆ . . ಹಿ ಜೆನ್ನಾಗಿ ॥
ಗಾಲಿರಕ್ಕಸನನುವ . . . . ।
. . . . ಯಸುರನ ಕೊಂದೆ ಕೆ . . . . ॥ (೨)

* * * * *

ಕಟ್ಟಿದೊರಳೊಡ ನಂ ಗಾಲಿಕ್ಕಿ ನಡೆದು ।
ಯಿಟ್ಟೀಸಿದೆಡೆ ಮರಗಳೆಡೆಯಲಿ ನುಗಿದು ॥
ಬೆಟ್ಟದಂತಿ [ಯ] (ಹ) ಮರನ ಬೇರ್ವೇರಸಿ ಮುರಿದು ।
ನೆಟ್ಟನಲ್ಲಿರುವ ಜಿಷ್ಣಯ ಬೆ . . . ನಲಿದು ॥ (೭)

ಬಾಗುರಿ ಚೆಂಡಾಟಕ್ಕೆ ಪೊಕ್ಕು ಬಾಲಕರ ।
ಹೇಗಲೇರ . . ಳಿ ಗೋಲುಗಳ ನಾಡುನರ ॥
ಡಗೆಯ ಹತ್ತಿಸಿ . . ಡುಗು ಗುಡಾಡಿಸುತ್ತ ವರ ।
. . . ಕೆ ನವನೀತ ಚೋರರ ॥ (೪)

* * * * *

ವನಿ . . . ವತಿಯ ನೊಲಿಸಿದನೆ ಜೋ ಜೋ ।
ವನಜಾಕ್ಷಿ ಕಾಳಿಂದಿ ವಿನಯ ಹರಿ ಜೋ ಜೋ ॥
ವಿನುತೆ ಗುಣವತಿ ಮಿತ್ರವಿಂದೇಶ ಜೋ ಜೋ ।
ಅನುಪಮನೆ ನಿತ್ಯಕಲ್ಯಾಣಾತ್ಮ ಜೋ ಜೋ ॥ (೨೨

ಚಂಡ ಶಿಶುಪಾಲ ಶಿರಚ್ಛೇದಕನೆ ಲಾಲಿ ।
ಗಂಡುಗಲಿ ದಂತವಕ್ತ್ರಾಂತಕನೆ ಲಾಲಿ ॥

ಹಿಂಡು ಕೌರವ ಪಡೆಯ [ಹೀ] (ನಿ) ಳೆಹಿದನೆ ಲಾಲಿ ।
ಪಾಂಡವರ ಸತಿಯ ಪರಿಪಾಲಿಪನೆ ಲಾಲಿ ॥ (೨೪)

ಶ್ರೀಯದುಕುಲಾಂಭೋ [ಜ] (ಧಿ) ಚಂದ್ರಮನೆ ಜೋ ಜೋ ।
ಶ್ರೀಯುತನೆ ಕೃಷ್ಣರಾಜೇಂದ್ರ ನುತ ಜೋ ಜೋ ॥

ಆಯುರಾರೋಗ್ಯದಾಯಕನೆ ಜೋ ಜೋ ।
ಕಾಯಜನ ಪಡೆದ ಪ್ರ (ಮೇ) ಯ ಹರಿ ಜೋ ಜೋ ॥ (೨೫)

॥ ರಾಗ ॥ ಧನ್ಯಾಸಿ ॥

ಪಲ್ಲವಿ.—

ಶರಣು ಶ್ರಿತಜನ ಪಾವನೆ ಶರಣು ಶ್ರಿತಜನವಿನುತೆ ।
ಶರಣು ತ್ರಿಗುಣಾತೀತೆ ಶರಣು ಶ್ರೀಜಗನ್ಮಾತೆ ॥

ಶರಣು ಭುವನಖ್ಯಾತೆ ಶರಣಾಗತ ಪ್ರೀತೆ ।
ಶರಣು ಬ್ರಹ್ಮನ ಜಾತೆ ಶರಣು ಮುನಿಜನ ಪೂಜಿತೆ ಕಾವೇರಿ ॥

ಚರಣಗಳು.—

ಧಾರಿಣಿಯ ಜನರ ರಕ್ಷಿಪೆನೆಂಬ ದಯದಿ ಕಾ ।
ವೇರಿಯೆಂಬ ನಾಮಾಂಕಿತದಿ ನಡೆತಂದು ।
ಘೋರಿಡುತ ಗಗ . . ಬೆಟ್ಟವನೆಲ್ಲ ಕೊರೆದು ಗಂ ।
ಭೀರದಿಂದಲೆ ಹರಿವುತ ॥

ವಾರಿಯಾರ್ಭಟಿಸುತಿಹ ತೆರೆಗಳನುವೆರಸಿ ಸಂ ।
ಚಾರವನು ಮಾಡಿ . . ಮಂಡಲವ ಬಳಿಕ ಕ ।
ಸ್ತೂರಿ ರಂಗನ ಉಭಯದೊಳು ಹರಿವ ಕಲುಷ ಸಂ ।
ಹಾರಿ ಕಾರುಣ್ಯಮೂರ್ತಿ ಕಾವೇರಿ ॥ (೧)

* * * * *

ದೃಢದಿ ಪೂಜಿಸಿ ಕಬ್ಬು ಕಡಲೆ ಬಾಳೆಯ ಹಣ್ಣು ।
ಒಡೆದ ತೆಂಗಿನ ಕಾಯಿ ನೈವೇದ್ಯವನು ಮಾಡಿ ॥

ಬಿಡಿಮುತ್ತಿನಾರತಿಯ ಬೆಳಗಿ ಧವಳವ ಹಾಡಿ ।
ಪಡೆವರಿಷ್ಟಾರ್ಥಗಳನು ಕಾವೇರಿ ॥ (೨)

* * * * *

ಘನಭಕ್ತಿಯಿಂದ ನಿನ್ನನು ಭಾವಿಸು [ತ್ತ] (ವ) ಜನರ ।
ಮನದ ಮಲಿನವ ತೊಳೆದು ಮತ್ತೆ ಸುಜ್ಞಾನ ವೆಂ ॥
ದೆನಿಪ ಮಾರ್ಗವ ತೋಱಿ ಮಾಯೆಯನು ಜರಿದು ಬಳ ।
ಕನಘ ಸಂಪದವನಿತ್ತು ॥
ಇನಕುಲೋದ್ಭವ ರಂಗನಾಯಕನ ಬಳಸಿನೊಳು ।
ವನಮಾಲೆಯಾಗೊಪ್ಪುತಲಿರುವ ಕಾವೇರಿ ॥ (೪)

* * * * *

॥ ರಾಗ ॥ ಮುಖಾರಿ ॥

ಪಲ್ಲವಿ.—

ಹರಿಯಧಿಕ ಹರನಧಿಕನೆಂದು ಹೊಡೆದಾಡದಿರಿ ।
ಹರಿಹರ ಭಕ್ತರಲ್ಲ . . . ಕ್ಷ ನಿಮಗೆ ।

ಚರಣಗಳು.—

ಹರಿಯನೆಂಬಿಯೆ ವಿಭೀಷಣ ನೀತಿಭೂಷಣನು ।
ಹರನೊಲಿಯೆ ರಾವಣನು (ಹತ) ವಾದನು ॥
ಹರಿಯ ನಂಬಿದ ಭೀಮ ನಮ್ಮ ಪರಿಪೂರ್ಣ ಕಾಮ । (?)
ಹರನಾಳು ಜರಾಸಂಧನಾಹವದಿ ನೊಂದ ॥ (೧)

ಹರಿಸಹಾಯದಿ . . ರವ . . ನು ತಾಜಯ ಶರಣ
ಹರ ವರವ ಕೊಟ್ಟ ಕಾ . . . . (ಪುಟ ೩೦)
ಶ್ರೀ ಪರಕಾಲಗುರುವೇ ನಮಃ ।
ಶ್ರೀನಿವಾಸ ಪರಕಾಲಗುರುವೇ ನಮಃ (೩೧)

* * * * *

॥ ರಾಗ ॥

ಪಲ್ಲವಿ.—

ಅಭ್ಯಾಸವಂ ಮಾಡಬೇಕೊ ಬಿಡದೆ "ಶ್ರೀಗು ।
ರುಭ್ಯೋನಮಃ" ಎಂಬ ನಾಮಂಗಳಂ ಬಿಡದೆ ॥

ಚರಣಗಳು.—

ಕೇಶವ ನಾರಾಯಣ ಮಾಧವ ಗೋವಿಂದ ಭವ ।
ನಾಶಭಕ್ತರ ಹೃದಯ ಕಮಲಾ . . ಮಣಿ ॥
ದೋಷವಿರಹಿತ ವಿಷ್ಣು ಮಧುಸೂದನ ತ್ರಿವಿಕ್ರಮ ಸು ।
ರೇಶ ಸರ್ವೋತ್ತಮ ನಾಮಂಗಳಂ ಬಿಡದೆ ॥ (೧)

* * * * *

ಅಸಮ ಪಟುಭಟರ ಕಾಳಗದಿ ನುಂಗಿದ ಪಾದ ।
ರಸ . . ವಿದಿ . . ಗೊದಗುವ ತೆರದೊಳು ॥
ಬಿಸಜಾಕ್ಷಕಾಗಿ ನೆಲೆಯಾದಿ ಕೇಶವನ ।
(ಅಸಮ) ದಿವ್ಯ ನಾಮಂಗಳಂ ಬಿಡದೆ ॥ (ಪುಟ ೭೯) (೪)

॥ ರಾಗ ॥ ಶ್ರೀರಾಗ ॥

ಪಲ್ಲವಿ.—

ಎಲ್ಲಿ ಬೆಣ್ಣೆಯು ಬಚ್ಚಿಡುವೆನು।
ಕಳ್ಳ ಕೃಷ್ಣನ ಹಾವಳಿ ಘನವಾಯಿತು॥

ಚರಣಗಳು.—

ಮೊಲಲು ಸಿಕದೆಂದಿಡುವೆನೆ—ಆವ।
ಬೆಳೆಯಲಕಾಂಡವಡಿಯಲಿಲ್ಲ॥
ತಿಳಿಯದ ಕೆಲದಲ್ಲಿರಿಸುವೆನೆ।
ಬೆಳಕುಗಳೆಲ್ಲ ಯಿವನ ಕಂಗಳ ಥಾಳ॥ (೧)

ಎವೆಯಿಡದಿಲ್ಲಿ ಕಾದಿರುವೆನೆ—ಆ।
ದಿಶಿವರ್ಗಳೆಲ್ಲ ಯಿವನ ಮಾಯೆ॥
ಅವನೀಶರಿಗೆ ಮೊರೆಯಿಡುವೆನೆ।
ಯಿವ . . ಬಂ . . ದಾದಿಗಳೆಲ್ಲರು॥ (೨)

ಈಗಲೆ ಯಿನಿತು ಕೂಳ್ಪವ . . ಮುಂದೆ
ಯಾಗಲಿಸನುವಗೆ ತನುವನು॥
ಕೂಗಿ ಹೇಳಲು ಹುತ್ತೆ ದೂರಗವ್ಯಾಗ ಮುಂದೆ।
ಹೀಗೆ ಪುರಂದರ ವಿಠಲ ನಟ್ಟುಳಗೆ॥ (೩)

॥ ರಾಗ ॥ ಕೇದಾರ ಗೌಳ ॥

ಪಲ್ಲವಿ.—

ಸುಮ್ಮನೆ ಬೆಟ್ಟವಲ್ಲ।
ಗಮ್ಮನೆ ನೋಡಿದರೆ ಪಾಪವರ್ಜಿತವಂತೆ॥

ಚರಣಗಳು.—

ಅಂತರಂಗ ಮಂತ್ರವ ಭೂಕಾಂತೆಗಿತ್ತ ನಿಲೆಯಂತೆ।
ದಂತಿಪರಿ ಆದಿವಾಹರು ಮದುವೆಯಾದರಂತೆ॥
ಸಂತತ ಕಲ್ಯಾಣಿ ಹರಿಯು ಸರ್ವಾಂಗ ತೀರ್ಥವಂತೆ।
ಪಂಚಭಾಗವತರು ಬಂದು ಮುಕ್ತಿಪಡೆದರಂತೆ॥ (೧)

ಶ್ವಾನ ಮೊದಲಾದ ಸರ್ವ ಜೀವ ಜಂತು (ಗಳ) ಗೆ ಪುಣ್ಯವಂತೆ।
ಭಾನುವರಿಗೆ ಯುದರಿಂದಲೀಡೇರಿದಂತೆ॥
ಜ್ಞಾನ ಮಂಟಪವಂತೆ ಜ್ಞಾನ ತಪಸ್ಸಿಗೆ ತಾವಂತೆ।
ಮಾನವರು ಬಂದು ಬಂದು ಸೇವೆಮಾಡಿದರಂತೆ॥ (೨)

ಸತ್ಯಲೋಕಕೆ ಬ್ರಹ್ಮನಂತೆ ಯತಿರಾಜ ಕುಮಾರನಂತೆ।
ಸತ್ಯಸುಚರಿತ್ರ ರಘುರಾಮಲಕ್ಷ್ಮಣರಂತೆ॥
ಅತ್ಯಂತ ಬಲರಾಮ ಶ್ರೀ ಕೃಷ್ಣಯಾದವರು ಬಂದು।
ಒತ್ತಿನಲಿ ಮನೆಗಟ್ಟಿ ಪೂಜೆಮಾಡಿದರಂತೆ॥ (೩)

ಸಾಸಿರ ಹೆಡೆಯು [ಫಣೆಯು] ಮಹಾಶೇಷನ ಮೆಯ್ಯಂತೆ ।
ದೇಶದೇಶದ ಚಕ್ರಧರರು ತಿರಿಗಿ ತಿರುಗುವರಂತೆ ॥
ವಿಶಾಲದ ಬಳ್ಳಿಯಂತೆ ಕಾಶಿಗಂಗೆಯಿಹಳಂತೆ ।
ವಾಸವಾದ ಠಾವಂತೆ ದೇಶದೇಶದಿ ನೆರೆವರಂತೆ ॥ (೪)

ನಾರದ ಪುರಾಣ ಕೇಳಿ ಪ್ರಹ್ಲಾದ[ಗೆ] ತಿಳಿದ[ರ]ಂತೆ ।
ಕ್ಷೀರವಾರಿಧಿಯಂ ಬಂದು ಬಳಸಿ ನೋಡಿದರಂತೆ ॥
ಸಾರಹೃದಯರಾದಿ ಕೇಶವನೆನ್ನೊಡೆಯನ ಶಿಖರಯೋಗ ।
ನಾರಸಿಂಹನ ಪ್ರತಿಷ್ಠೆ ಮಾಡಿದರಂತೆ ॥ (೫)

* * * * *

॥ ರಾಗ ॥ ಶಂಕರಾಭರಣ ॥

ಪಲ್ಲವಿ.—

ಎನ್ನನು ಸಲಹು ತಿರುನಾರಾಯಣ ।
ನಿನ್ನೊಳಗದೊಳರಿಸು ತಿರುನಾರಾಯಣ॥

ಚರಣಗಳು.—

ಸನ್ಮಾರ್ಗಗಳ ತೋರು ತಿರುನಾರಾಯಣ ।
ದುರ್ಮಾರ್ಗಗಳ ಬಿಡಿಸು ತಿರುನಾರಾಯಣ ॥
ಕರ್ಮ ಕೋಟಿಯು ಖಂಡಿಸು ತಿರುನಾರಾಯಣ ।
ಕೂರ್ಮೆಯನೆನ್ನೊಳರಿಸು ತಿರುನಾರಾಯಣ ॥ (ಪತ್ರ ೮೩)

End :

ಚರಣಗಳು.—

ಧರೆಯೊಳು ವಸುದೇಹನುದರದೊಳುದಿಸಿದ್ದ ಆನೆ ।
ಮದವೆದ್ದ ಬಳಿಕೆನ್ನ ಮನೆಗೆ ಬಂದಾನೆ ॥
ಅದುಬುತದ ಲೀಲೆಯಿಂದೆನ್ನ ಮೋ[ಹಾ] (ಹಿಸಿ) ಸಿದಾನೆ ।
ಸದೆದು ಪೂತನಿಯನತಿಶಯವಡೆದೆನ್ನಾನೆ ॥ (೧)

ಗೊಲ್ಲತಿಯರ ಮನೆಯು ನಿಲ್ಲದೆ ಪೊಗುವಾನೆ ।
ಅಲ್ಲಿ ಬೆಣ್ಣೆಯು ಕದ್ದು ಮೆಲುವ ಮರಿಯಾನೆ ॥
ಚೆಲ್ಲಿ ಪಾಲ್ಮೊಸರುಗಳ ನಿಲ್ಲದೆ ಸವಿವಾನೆ ।
ಕಲ್ಲಿಯೊಗರವನುಂಬುಲ್ಲಾಸದಾನೆ ॥ (೨)

ತೊಟ್ಟಿಲೊಳಗಳುತ ಶಕಟನನೊದೆದು ಸದೆದಾನೆ ।
ದಿಟ್ಟತನದಿಂದೊರಳ ನೆಳೆದ ಮರಿಯಾನೆ ॥
ಗಟ್ಟಿಮತ್ತಿಯುಮರನ ಗಮಕದಿಂ ಮುರಿದಾನೆ ।
ದಟ್ಟಡಿಯಿಡುತೆನ್ನ ಅಟ್ಟಿಬರುತಾನೆ ॥ (೪)

ಮುತ್ತಿನ ಕಾಯಿಗಳು ನೊಸಲೊಳಗೆ ತಳತಳಿಪಾನೆ ।
ತಿದ್ದಿ ಪೊಸ ಕಸ್ತೂರಿಯು ತಿಲಕವಿಟ್ಟಾನೆ ॥
ಪೊದ್ದು ಪೀತಾಂಬರವ ಪೊಂಗೆಜ್ಜೆಯೊಲಿವಾನೆ ।
ಮುದ್ದಾದ ಮುಂಗೈ ಮುರಾರಿ ಮೆರೆವಾನೆ ॥ (೫)

ಪೊಂಗೊಳಲ ಧ್ವನಿಯೊಳಬಲೆಯರ ಮೋಹಿಸಿದಾನೆ ।
ಶೃಂಗಾರದಾ ಶಂಖ ಚಕ್ರದಲಿ ಮೆರೆವಾನೆ ॥
ಸಂಗಡಿಗರೊಡನೆ ಗೋವ್ಗಳನು ಪಾಲಿಸಿದಾನೆ ।
ಮುಂಗುರುಳ ಪೊಳೆವ ಮೋಹನದ ಮರಿಯಾನೆ ॥ (೬)

ವಿಷದ ಮಡುವನೆ ಕಲಕಿ ಯಸಮಬಲವುಳ್ಳಾನೆ ।
ಯೆಸೆವ ಕಾಳಿಂಗನ ಪೆಡೆಯನೇರಿ ನಲಿವಾನೆ ॥
ವಿಷವಧೇನುಕರೆಂಬ ಅಸುರರನು ಗೆಲಿದಾನೆ ।
ನಸುನಗುತ ಬಂದಿಲ್ಲಿ ನಲಿವ ಮರಿಯಾನೆ ॥ (೭)

ಕರಭಕ ತೃಣಾವರ್ತರಿರವ ನಡಸಿದ್ದಾನೆ ।
ತರುಣಿಯರೊಳು ಜಲಕ್ರೀಡೆಯಾಡಿ ನಲಿವಾನೆ ॥
ವರವೃಂದಾವನದೊಳಾಡುತ ಮಣ್ಣ ಸವಿದಾನೆ ।
ಭರದಿ ಬಾಯೊಳಗಜಾಂಡವ ತೋರಿದಾನೆ ॥ (೮)

ಮಿತ್ರಿಯರ ಸೀರೆಗಳನಟಿತ್ತಿಯಿಂದಪಹರಿಸಿ ।
ಮತ್ತೆ ಮರನೇರಿ ನಲಿಯುತ್ತಮಿರುವಾನೆ ॥
ಕಿತ್ತು ಗೋವರ್ಧನವ ಕಿರುಬೆರಳಲಾಂತಾನೆ ।
ಮುತ್ತಿನರಳಿವ ಪೊಳೆವ ಮುದ್ದಿನೆನ್ನಾನೆ ॥ (೯)

ಮುಗಿಲೊಳಹ ಚಂದ್ರಮನ ಮಿಗೆಕರೆದ [ಳಾಂತಾನೆ] (ಳುವ-ಆನೆ)
ದಿಗಿದಿಗಿಪ ಕಾಳ್ಗಿಚ್ಚ ನುಂಗಿ ನಲಿವಾನೆ ॥
ನಿಗಿ ನಿಗಿಪ ಕೌಸ್ತುಭವನಿಟ್ಟು ರಂಜಿಸುವಾನೆ ।
ಜಗದೊಳಾಂ ಪ್ರತಿಯೆನಿಪ ಸೊಗಸಿನೆನ್ನಾನೆ ॥ (೧೦)

ಅಕ್ರೂರ ಬರಲು ಸತ್ಕರಿಸಿ ಮನ್ನಿಸಿದಾನೆ ।
ಗಕ್ಕನೆ ರಥವೇರಿ ಮಥುರೆಗೆ ತೆರಳಿದಾನೆ ॥
ಸೊಕ್ಕಿದ ರಜಕನ ಕೊಂದು ಶುಭದಿ ಮಡಿಯುಟ್ಟಾನೆ ।
ಯಕ್ಕರದಿ ಶ್ರೀಗಂಧವನು ತಿಗುರಿದಾನೆ ॥ (೧೧)

ತಲೆಯ ಪಿಡಿದೆತ್ತಿ ಕುಬ್ಜೆಯನೊಲಿಸಿ ಕೊಂಡಾನೆ ।
ಛಲದಿ ಪೂಮಾಲೆಯನು ಧರಿಸಿಮೆರೆವಾನೆ ॥
ಜಲರಾಹು ಸಹಿತ ಧನುಶಾಲೆಯನು ಪೊಕ್ಕಾನೆ ।
ಜಲುಬಿಲ್ಲ ಮುರಿದು ರಕ್ಕಸರ ಗೆಲಿದಾನೆ ॥ (೧೨)

ಬಳಿಕ ಕಂಸನ ಪಟ್ಟದಾನೆಯನು ಮುರಿದಾನೆ ।
ಬಲದಿ ಚಾಣೂರ ಮುಷ್ಟಿಕರ ಗೆಲಿದಾನೆ ॥
ಖಳ ಕಂಸನಂ ತುಳಿದು ಸದೆದು ಮರ್ದಿಸಿದಾನೆ ।
ಸಳಹಿ ಪಡೆದವರ ಸೆರೆಯನು ಬಿಡಿಸಿದಾನೆ ॥ (೧೩)

ಮುನಿ ಸಾಂದೀಪನೊಳು ವಿದ್ಯವನೆಲ್ಲ ಕಲಿತಾನೆ ।
ವನಿತೆ ರುಕ್ಮಿಣಿಯ ನೊಡಗೂಡಿ ನಲಿವಾನೆ ।
ಘನ ಪುರಾಂತರದ ಮಧ್ಯದಲಿ ನೆಲಸಿರುವಾನೆ ।
ಅನಘ ಕೇಶವ ರಾಮಚಂದ್ರನೆನಿಪ ಮಹಿಯಾನೆ ॥ (೧೪)

ಎಂದತಿಶಯಾದಿ ಗೋಪಿ ಮಗನನಾಡಿಸಿದಳೆಂದು ॥

ವಿ.ವಿ.—

ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾದುದು. ಈ ಪುಸ್ತಕದಲ್ಲಿ "ಕೃಷ್ಣ ರಾಜೇಂದ್ರನುತ" ಎಂದು ಒಂದೆಡೆಯಲ್ಲಿಯೂ, "ಶ್ರೀನಿವಾಸ ಪರಕಾಲ ಗುರವೇ ನಮಃ" ಎಂದು ಮತ್ತೊಂದೆಡೆಯಲ್ಲಿಯೂ ಬರೆದಿದೆ. ಈ ಕಾರಣದಿಂದ ಇದನ್ನು ಬರೆದವನು ಶ್ರೀವೈಷ್ಣವನೂ ಮೈಸೂರು ದೇಶಕ್ಕೆ ಸೇರಿದವನೂ ಎಂದು ಊಹಿಸಬಹುದು. ಇದರಲ್ಲಿ ಪುರಂದರದಾಸ, ಕನಕದಾಸ, ವಿಟ್ಠಲದಾಸರು ಮುಂತಾದವರು ರಚಿಸಿರುವ ಕೀರ್ತನೆಗಳೂ ಯಾದವಗಿರಿ ಚೆಲ್ವನಾರಾಯಣ ಮೊದಲಾದ ದೇವರ ಮೇಲಣ ಕೀರ್ತನೆಗಳೂ, ಜೋಗುಳ, ಲಾಲಿಗಳೂ ಸಂಗ್ರಹಿಸಿ ಬರೆದಿವೆ. ಹಾಡುಗಳು ಪಲ್ಲವಿ ಅನೇಕ ಚರಣಗಳುಳ್ಳವಾಗಿಯೂ ರಮ್ಯವಾಗಿಯೂ ಇವೆ.

No. 1324 ಹಾಡುಗಳು (ರಾಮಚರಿತ್ರೆ).
HĀḌUGAḶU (RĀMACARITRE).

Substance, palm-leaf. Size, 17½ × 1⅜ inches. Pages, 7. Lines, 5 on a page. Extent, 60 granthas. Character, Kannada. Condition, very much injured. Appearance, old. Mode of writing, good.

Begins on fol. 84*a* of the manuscript described under No. 207 *ante* wherein this work has been mentioned as "Ramacarite" in the list of other works.

Incomplete.

Similar to the above. Majority of the songs are written in praise of Śrī Rāma worshipped at Bhadrādri. The name of the author is not known.

Beginning :

॥ ರಾಗ ॥ ಕಾಂಭೋಜಿ ॥

ಪಲ್ಲವಿ.—

ಪತಿಕರಿಸು ಯೆನ್ನ ಪತಿ ಪಿತನು ಗುರುದೈವವಾ ॥
ಪದಾ . . . . ನೆ ರಾಮಾ . . .
. . . ಂದ ಬಿನ್ನಹವ ಲಾಲಿಸಾ ಜಗ ।
ತ್ಕ್ರತಿಯೆ ವೆಂಕಟೇಶ ರಾಮಾ ॥ ಪಲ್ಲವಿ ॥

ಕರುಣಾಪಯೋಧಿ ಶ್ರೀಕರಮೂರ್ತಿಯೆಂದು ನಾ ।
ಮರೆಹೊಕ್ಕೆನೋ ಸ್ವಾಮಿ ರಾವೊ ॥
ಪರಿಪರಿಯ ಚಿಂತೆಯಲಿ ತೊಳಲಿ . . . .
ಕರಗಿದ ಬಳಿಕ ರಾವೊ . . . ॥
ವರವೀವ ಭಕ್ತಜನ ವತ್ಸಲನು ಎಂಬ ಜಗ ।
ಬಿರುದಿನವ ನೀನಲ್ಲೆ ರಾವೊ ॥
ಕರೆದರೋ ಎಂದೆಂಬ ಕರುಣಾಳು ಗಜರಾಜ ।
ವರದ ಜಲದಶ್ಯಾಮ ರಾಮ ॥ (೧)

ಸೊಗಸಿನಲಿ ಶರಣಜನ ಸುಖಜಾಲ ವಜ್ರ ಪಂ ।
ಜರನೆಂದು ಪೊಗಳುವುದು ರಾಮ ॥
ಯುಗವಹುದು ಪ . . . ಕಟಾಕ್ಷ . . . ಕತೆಗೆ ।
ನಗಜಾರಿ [ನ] (ನು) ತನಾಮ ರಾಮ ॥ (೨)

ಮುಕ್ತಿದಾಯಕ ಸಕಲ ಮುನಿವಂದ್ಯನೆನಿಪ ಅ ।
ವ್ಯಕ್ತ ಚಿನ್ಮಯ ರೂಪ ರಾಮ ॥
ರಕ್ತಿಯಹುದೆ ಅಕಾರಣ ಕಷ್ಟಪಡಿಸುವುದು ।
ರಾಜೀವದಳನೇತ್ರ ರಾಮ ॥ (೩)

* * * *

ಶೇಷಶಾಯಿ ಮುಕುಂದ ಶ್ರೀವರಾಂಕಿತನೆ ಖರ ।
ದೂಷಣ ತ್ರಿಶಿರ ಹರ ರಾಮ ।
ಶೇಷಾಚಲನಿವಾಸ ಶ್ರೀವೆಂಕಟೇಶ ಸ ।
ರ್ವೇಶ ರಕ್ಷಿಸು ಯೆನ್ನ ರಾಮ ॥ (೭)

End :

. . . . ಲಾವಾ . . ಲೆ ರಾಮಾನುಕೂಲೆ ।
ಭ್ರಮರನೀಲಾಳಕ ಜಾಲೆ ಬಂಧುರ ಶೀಲೆ ॥
ಶಮಿತ ದುರಿತ ಕದಂಬೆ ಚಾರುನಿತಂಬೆ ।
ವಿಮಲ ಮುಖ ಚಂದ್ರಬಿಂಬೆ ವೇದ . . . . ॥
ಭವಾ . . ಮೆ . . ಹಿ ಸಾದುಮಾನಿ ಪಾಹಿ ।
ಜನಕರಾಜ . . ತನಾ . . ಜಾತವಿನಾಯೆ . . ಜನನಿ ॥

ಚತುರ ಭೂಷಿತಾಲಂಕಾರೆ ಸೌವ್ಯಮಂ . . .
ವಿತತ ಧಮ್ಮಿಲ್ಲ ಕಾ . . . . ವಿದರೂಪೆ ॥
ನತಜನ ಹೃದಯಲಾಪೆ ನಂ . . . ತಾಲಾಪೆ ಜನನಿ ॥

ಬುಧಜನ ನುತಿಪಾತ್ರೆ . . . . . . ನೇತ್ರೆ ॥
ಮಧು . . ರಾ . . ರ . . . . ವಿಲಾಸೆ ।
ಪ್ರಥಿತ ರಮ್ಯಗುಣಪಾಸೆ ಭದ್ರಾದ್ರಿವಾಸೆ - ಜನನಿ ॥ (೩)

॥ ರಾಗ ॥ ಭೈರವಿ ॥

. . . .
ಸಿಜ . . . ಮಂದ ಹಸಿತ ವದನ ಮಣಿಮಯ
ಘನರಸನ ಭದ್ರಗಿರೀಶ ॥
ಕರುಣಾಸಾಗರ ಕಂಬುಕಂಧರ ।
ಕಮನೀಯ ಕೇಯೂರ ಹಾರ ।
. . . .
. . . . ಗಂಭೀರ ಭದ್ರಗಿರೀಶ ॥ (೩)

ಪಲ್ಲವಿ.—

ತರಣಿ ಕುಲಜಲಧಿ ತಾರೇಶ ರಾಮ ।
ಪರಮ [ಕರುಣ] (ಕಾರುಣಿಕ) ಸೀತಾಪ್ರಾಣೇಶ ರಾಮ ॥

ಚರಣಗಳು.—

ಪರಿಪೂರ್ಣ! ಭಾನುಕೋಟಿಪ್ರಕಾಶ ರಾಮ ।
ನಿರು . . . . ॥
. . . . ಯ ಪರಮ ಕೃಪಾಲಯ ರಾಮ ।
ಪಾ . . ತ ಭದ್ರಾದ್ರಿನಿಲಯ ರಾಮ ॥ (೧)

ಖರದೂಷಣ ಸಂಹಾರ ಗಂಭೀರ ರಾಮ ॥
ಖಂಡಿತ ಮಾರೀಚ ಶರೀರ . . . ॥
. . . . ।
. . . . ಮಣಿಹಾರ ಕೋಟೀರ ರಾಮ ॥ (೨)

ಪರಿಹೃತ ದಶವದನ ನಾಮ ರಾಮ ।
ಪರಮ ಪುರುಷದೇವ ಭವ ಭೀಮ ॥
ಹರಮುನಿ . . . . ರಾಮ ॥
ವರದಾ ರಾಮ ॥ (೩)

ವಿ.ವಿ.—

ಅತ್ಯಂತ ಶಿಥಿಲವಾದ ಪ್ರತಿ. ಓಲೆಗಳೆಲ್ಲ ಮುರಿದಿವೆ. ಲಿಪಿ ಚೆನ್ನಾಗಿದೆ. ಹಾಡುಗಳಿರುವುದು ನಾಲ್ಕು ಓಲೆಗಳಲ್ಲಿ ಮಾತ್ರ. ಇದರೊಡನೆ ದಶಾವತಾರ ಮುಂತಾದ ಇನ್ನು ಕೆಲವು ಪುಸ್ತಕಗಳಿವೆ ಆ ಬಗೆಗೆ ಹಿಂದಣ ೬೦೭ ನೆಯ ನಂಬರನ್ನು ನೋಡುವುದು

ಈ ಪುಸ್ತಕದಾದಿಯಲ್ಲಿ "ರಾಮಚರಿತ್ರೆ" ಎಂದು ಬರೆದಿದೆ. ಶೇಷಾಚಲ, ಭದ್ರಾಚಲ (ಸ್ವಾಮಿಗಳ) ದೇವತಾಸ್ತುತಿರೂಪವಾದ ಕೀರ್ತನೆಗಳು ಇದರಲ್ಲಿ ಉಕ್ತವಾಗಿವೆ. ಅದರಲ್ಲಿಯೂ ಭದ್ರಾದ್ರಿಯ ಸೀತಾರಾಮದೇವರ ಕೀರ್ತನೆಗಳೇ ಹೆಚ್ಚು. ಇದನ್ನು ಬರೆದವರಾರೆಂಬುದು ಇದರಿಂದ ತಿಳಿದು ಬರುವುದಿಲ್ಲ.

No. 1325 ಹಾಡುಗಳು (ರಾಮಚರಿತ್ರೆ).

HĀḌUGAḶU (RĀMACARITRE).

Substance, paper. Size, 10 $\frac{7}{16}$ × 9⅜ inches. Pages, 8. Lines, 20 on a page. Extent, 60 granthas. Character, Kannada. Condition, good. Appearance, new. Mode of writing, good.

Restored in 1932–33 from the Manuscript described above.

Begins on page 1. The other work herein is :—Auṣadha, 9.

Incomplete.

ವಿ.ವಿ.—

ಇದರಲ್ಲಿ ಅನೇಕ ಹಾಡುಗಳಿವೆ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಮಾತೃಕೆಯಲ್ಲಿರುವ ಕೊನೆಯ ಭಾಗವು ಇದರಲ್ಲಿ ನಡುವಿನಲ್ಲಿದೆ. ಅದರ ನಡು ಭಾಗವು ಇದರಲ್ಲಿ ಕಡೆಯ ಭಾಗವಾಗಿದೆ. ಇದರೊಡನೆ "ಔಷಧ" ಎಂಬ ಇನ್ನೊಂದು ಗ್ರಂಥವೂ ಇದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಶೇಷಾಚಲ, ಭದ್ರಾಚಲ ದೇವತಾಸ್ತುತಿ ರೂಪವಾದ ಕೀರ್ತನೆಗಳು ಇದರಲ್ಲಿವೆ. ಬರೆದವರಾರೆಂಬುದು ಗೊತ್ತಾಗುವುದಿಲ್ಲ.

No. 1326 ಹಾಡುಗಳು.

HĀḌUGAḶU.

Substance, palm-leaf. Size, 11½ × 1 $\frac{3}{16}$ inches. Pages, 7. Lines, 5 on a page. Extent, 50 granthas. Character, Kannada. Condition, very much injured. Appearance, old. Mode of writing, not bad.

Begins on fol. 5*b*. The other works herein are (1) Akṣarānka stuti (Sans.) 10, (2) Caturbhadrikā-Viṣṇustuti (Sans.), (3) Gōpāladaṇḍaka (Sans.) 4*a*.

Incomplete.

Contains songs written in Sanskrit and Kannada. The last song describes the ten incarnations of Viṣṇu.

॥ ರಾಗ ॥ ಭೈರವಿ ॥

ಪಲ್ಲವಿ.—

ಶ್ರೀಮುಖ ಪಂಕಜಾಶ್ರಿತ ಭೃಂಗಾ - ಸತ್ಯ ।
ಭಾಮಾ - ಮಣಿಭೋಗ ಭುಜಂಗಾ ಯೋ ಯಾ !
ಸೋಮಾರ್ಕ ನಯನ ರಚಿತ ಗಂಗಾ - ಯೋಗಿ
ಸ್ತೋಮ ಮಾನಸ ನಾಟ್ಯರಂಗ - ನಿತ್ಯ ಶುಭಾಂಗ ॥

End :

॥ ರಾಗ ॥

ಪಲ್ಲವಿ.—

ದುರಿತಾರಿ ಹರಿಯೆಂದು ಸ್ಮರಿಸಿರಲು ಹಿಂದೆ ।
ಅರಸಿ ಕರಿಯನು ಕಾಯ್ದ ಪರಿಯ ಕಂಡರಿಯಾ ॥

* * * * *

ಚರಣ.—

ತಂದು ಸಾಧ್ಯಕೆ ತ್ರಿಪುರವ ಗೆದ್ದ ಬುದ್ಧನ ।
ಕುಂದದೆ ಕಲ್ಕಿರೂಪನೆ ತಾಳ್ದನ ॥
ಹೊಂದಿದ ಭಕುತರ ಹೊರೆವ ದೇವ ನಿತ್ಯಾ ।
ನಂದ ರಜತಪುರದರಸ ಮಾಧವನ ॥ (೩)

ವಿ.ವಿ.—

ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ಅಕ್ಷರಾಂಕಸ್ಮೃತಿ, ಚತುರ್ಭದ್ರಿಕಾ ವಿಷ್ಣುಸ್ಮೃತಿ, ಗೋಪಾಲ ದಂಡಕ (ಮೂರೂ ಸಂಸ್ಕೃತದಲ್ಲಿವೆ) ಗಳಿವೆ.

ಇದರಲ್ಲಿ ಸಂಸ್ಕೃತ, ಕರ್ಣಾಟಕ ಭಾಷೆಗಳಲ್ಲಿ ಕೆಲವು ಹಾಡುಗಳಿವೆ. ಕೊನೆಯಲ್ಲಿರುವ ಹಾಡು ದಶಾವತಾರ ಸಂಬಂಧವಾದುದು. ಬರೆದವರಾರೆಂಬುದು ತಿಳಿದು ಬರುವುದಿಲ್ಲ.

No. 1327 ಹಾಡುಗಳು.

HĀḌUGAḶU.

Substance, palm-leaf. Size, $9\frac{5}{16} \times 1\frac{5}{16}$ inches. Pages, 5. Lines, 4 on a page. Extent, 17 granthas. Character, Kannada. Condition, much injured. Appearance, old. Mode of writing, good.

Begins on fol. 32*a* of the manuscript described under No. 1285 *ante*.

Contains only two songs bearing on Vīraśaivism.

Beginning :

ಪಲ್ಲವಿ.—

ಪ್ರಾಣಲಿಂಗಾಂಗಿಗಳು ನಮ್ಮವರು . . . . . ನಮ್ಮವರು ।
ರಾಣಿಪ ಶ್ರೀ ವೀರಶೈವ ಮಹೋಬಲ ರಾಜ್ಯವನಾಳುವರ್ ನಮ್ಮವರು ॥

ಪದಗಳು.—

ಆರುವ್ರತಂಗಳನಾರು ಶೀಲಂಗಳನಾರೊಂದು ಮುಕ್ತಿಸೋಪಾನಗಳ ।
ಆರುವರ್ಣಾರ್ಥಂಗಳರಿದಾಚರಿಸುವ ಕಾರಣಪುರುಷರು ನಮ್ಮವರು ॥ (೧)

* * * * *

ಚಾರುತರೋಂಕಾರ ಮಂತ್ರದೊಳ್ ಲಿಂಗಾಂಗಸಂಗವ ನರಿದವರ್ ನಮ್ಮವರು ।
ಕಾರಣ ಶ್ರೀಗುರು ಗಂಗರಾಜ ಶಾಂತ ಘನ ಲಿಂಗೈಕ್ಯರು ನಮ್ಮವರು ॥ (೫)

End :

ಪಲ್ಲವಿ.—

ನಾಪಿಯೋನೆಂದು ತಿಳಿಯಿರಿ ಶ್ರೀವೀರ
ಶೈವರಿರಾ ಸತ್ಪ್ರಾಣೇಶಲಿಂಗದ ॥

ಪದಗಳು.—

ಗುರಿಯಾಗಿ ಮೊದಲಲಿ ಗುರುವು ತಾನಹನು ।
ತರತರದಲಿ ತಾನೆ ತಂದೆಯಾಗಿಹನು ॥
ಸ್ಥಿರಗುರುದೃಷ್ಟಿ ಸಹೋದರನಾದನು ।
ಗುರುತರ ನೋಟದಿ ಕುವರನು ತಾನಾದ ॥ (೧)

* * * * *

ವೇದಾತ್ಮರಲಿ ಬೆರಸದೆ ಬೆರಸಿಹ ಭಿನ್ನ ।
ಭೇದವಳಿಯೆ ತಾನು ಬೆರಸಿಹನು ಮತ್ತೆ ।
ಭೇದಾಭೇದೋಭಯವಳಿದರಿವರ
ವಾದ ಗಂಗರಾಜ ಚೆನ್ನಕಾಂತನಹನು ॥ (೨)

ವಿ.ವಿ.—

ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ 1285 ನೆಯ ನಂಬರನ್ನು ನೋಡುವುದು.

ಇದರಲ್ಲಿ ಎರಡು ಹಾಡುಗಳಿವೆ. ತತ್ವಬೋಧಕಗಳಾಗಿವೆ. ಬರೆದವರಾರೆಂಬುದು ಗೊತ್ತಾಗುವುದಿಲ್ಲ.

No. 1328 ಹಾಡುಗಳು.

HĀḌUGAḶU.

Substance, paper. Size, 10½ × 9½ inches. Pages, 2. Lines, 20 on a page. Extent, 17 granthas. Character, Kannada. Condition, fair. Appearance, new.

Restored in 1919–20 from the manuscript described above.

Begins on page 21 of the manuscript described under No. 1286 *ante.*

ವಿ.ವಿ.—

ಕಾಗದದ ಪ್ರತಿ. ತತ್ವಬೋಧಕಗಳಾದ ಎರಡು ಹಾಡುಗಳಿವೆ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯಾಗಿದೆ. ಇದರೊಡನೆ ಇನ್ನೂ ಕೆಲವು ಗ್ರಂಥಗಳಿವೆ. ಆ ಬಗೆಗೆ ಹಿಂದಣ 1286 ನೆಯ ನಂಬರನ್ನು ನೋಡುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1329 ಹಾಡುಗಳು.

HĀḌUGAḶU.

Substance, palm-leaf. Size, 11⅝ × 1 $\frac{5}{16}$ inches. Pages, 60. Lines, 3 on a page. Extent, 180 granthas. Character, Kannada. Condition, much injured. Appearance, old. Mode of writing, good.

Begins on fol. 1*a* of the manuscript described under No. 629 *ante.*

This is a collection of songs referring to Basavarāja, Kṛṣṇa, etc.

Beginning :

ಕಡಿದು ಅರಿರಾಯರಾಹುತರನೆಲ್ಲರನು ।
ಹಿಡಿದಾನೆ ಕುದುರೆ ಕಾಲಾಳ ತಲೆಗಳನು ॥
ಹೊಡೆದು ಚೆಂಡಾಡಿ . . . ನಿಕ್ಕುವನು ।
ಬಿಡದೆ ದೊರೆಗಳ ಭಂಗಪಡಿಸುತ್ತಲಿಹನು ॥ (೪)

* * * * *

ಧರಣಿಪತಿ ದೇವರಾಜೇಂದ್ರನಿಗೆ ಅತಿಹಿತನು ।
ಸುಗುಣಮಣಿ ಮುದ್ದಯ್ಯನಾತ್ಮಜನು . . . ॥ (೭)

End :

ಪಲ್ಲವಿ.—

ಅಮರ ಪೂಜಿತನೆ ಅಂಗಜನ ಪಿತೃವನೆ ।
ಕಮಲಲೋಚನ ಕೃಷ್ಣದೇವ ಕೃಪಾಕರನೆ ॥

ಚರಣ.—

ಬೆರಳ ತುದಿಯಲಿ ಬೆಟ್ಟವನು ತಾಳದವನೆ ।
ದುರುಳ ರಾವಣನ ಶಿರದಿಂದ ಹತಿಸಿದನೆ ॥
ಮರಳಿ ವಿಭೀಷಣಗೆ ಸ್ಥಿರಪಟ್ಟ ಕಟ್ಟಿದನೆ ।
ತರಳೆಯರು ಹದಿನಾರು ಸಾವಿರವನಾಳಿದನೆ ॥ (೧)
ಸತಿಯರೂಪಿಂದ ಭಸ್ಮಾಸುರನ ಕೊಂದೆ ।
ಶ್ರುತಿ ಮರ . . ವ ಕೊಯ್ದು . . . ॥

ವಿ.ವಿ.—

ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ತುಂಬಾ ತಪ್ಪಿದೆ. ಇದರೊಡನೆ ಇನ್ನೂ ಕೆಲವು ವಿಷಯಗಳಿವೆ. ಅವಾವುವೆಂಬುದಕ್ಕೆ ಹಿಂದಣ ೬೨೯ ನೆಯ ನಂಬರನ್ನು ನೋಡುವುದು.

ಇದನ್ನು ಹಾಡುಗಳ ಸಂಗ್ರಹವೆನ್ನಬಹುದು. ಇದರಲ್ಲಿ ಕೃಷ್ಣ, ಬಸವರಾಜ, ದೇವರಾಜ ಹಿತನಾದ ಮುದ್ದಯ್ಯನಾತ್ಮಜ ಮುಂತಾದವರ ಮೇಲೆ ಹಾಡುಗಳಿವೆ. ಬರೆದವರಾರೆಂಬುದು ಗೊತ್ತಾಗುವುದಿಲ್ಲ.

No. 1330 ಹಾಡುಗಳು by ಶಾಂತಾರ್ಯ.

HĀḌUGAḶU BY ŚĀNTĀRYA.

Substance, palm-leaf. Size, $9\frac{7}{8} \times 1\frac{3}{8}$ inches. Pages, 17. Lines, 6-7 on a page. Extent, 135 granthas. Character, Kannada. Condition, injured. Appearance, old. Mode of writing, not bad.

Begins on fol. 33*a* of the manuscript described under No. 755 *ante,* Complete.

Devotional songs written in praise of Śāntavīrēśvara. He is made the hero and the love that women bore for him is described in these songs. The author is Śāntārya, who lived at Sōsale in Mysore State.

Beginning :

ಪಲ್ಲವಿ.—

ಪಾಹಿಮಾಂ ಪರಮೇಶ ಪುಣ್ಯವಿಲಾಸ ನಂದಿ ।
ವಾಹ ನಿನ್ನ ನಂಬಿದೆ ಮುನ್ನ ॥
ದೇಹವರ್ಜಿತ ದಿವಿಜಹಿತ ಸಲೆ ಸಂ
ದೋಹದೂರ ಸತ್ಯೋದ್ಧಾರ ॥

ಚರಣಗಳು.—

ಅಂಗಜಭಂಗನಿರಂಗ ಶರಣಾಂತರಂಗ ಕುಟಿಲ ಕುಜನೋತ್ಪಾಟ ।
ಮಂಗಳಮಹಿಮತರಂಗ ಮಾತಂಗಾಜಿನಾಂಗಧರ ದನುಜಾಪಹಾರ ॥
ತುಂಗನಿಗಮ ತುರಂಗಮ ಹಸ್ತಕುರಂಗ ಭೂಷ ಭುವನೋಲ್ಲಾಸ ।
ಜಂಗಮರೂಪ ಜಗಂಗಳ ಪೊರೆವ ಪತಂಗಧಾಮ ಪಾವನನಾಮ ॥ (೧)

ಭೂಧರ ಧನ್ವ ದಯಾನಿಧಿ ಸುಜನಪಿನೋದ ವಿಗ್ರಹ ನಮಿತೋತ್ಸಾಹ ॥
ವೇದಾಗಮತರ್ಕಾಡಿಯತೀತ ಜಗದಾಧಾರ ಜನಮಂದಾರ ॥
ಶ್ರೀಧರ ನಯನಾಂಕಪಾದದ್ವಯಾಪರವಾದಿ ಖಂಡ ಪಂಚಮ ತುಂಡ ।
ಆದಿತ್ಯಬ್ಜಾನಲನೇತ್ರತ್ರಯ ಶ್ರಿತಬಾಂಧವ ಶರಣಯ್ಯದೇವ ॥ (೨)

ಉರಗ ಫಣಾಮಣಿ ಕಂಠ ಧೃತ ಶುಭಕರ ಶೂಲಿಸತ್ಕಪಾಲಿ ।
ಖರಕರತೇಜೋಮಯ ಮಹಿಮೋದಯ ಗಿರಿಕಾಂತ ಕರುಣಾಸ್ವಾಂತ ॥
ಸರಸಕವೀಶ್ವರ ಸಾಗರವರ್ಧನ ಸ್ಮರಮಿತ್ರ ಸುಲಲಿತಗಾತ್ರ ।
ಜರಾಮರಣಧ್ವಂಸ ಜಯಶಾಂತ ವೀರೇಶ್ವರಲಿಂಗಾ ಕರುಣಾಪಾಂಗಾ ॥ (೩)

॥ ರಾಗ— . . . ಂಬ ಕಾಂಭೋಜ ॥

ಪಲ್ಲವಿ.—

ಕಾಮಿನಿಯರುಯ್ಯಾಲಾಡಿದರು ಕಡುಗಾಡಿಯೊಳು ।
ಶ್ರೀಮಹಾಶಾಂತವೀರೇಶ್ವರನ ನೆನೆದು ॥

ಚರಣಗಳು.—

ಹೊಳೆಯ ನೀಲದ ಕಂಬವಲೆಯ ಮರಕತದ ತೊಲೆ ।
ಗಿಳಿಯ ಕನವರದ ಸರಪಳಿಯು ಮಣಿಮಣೆಗಳ ।
ಲ್ಗಳಿಯುಲಳವಟ್ಟಿಂದ ಬೆಳೆಯ ಬೆಡಗಿನೊಳು ಬಂ ।
ದೆಳೆವರೆಯುದಂಗನೆಯರು - ಬೇಗ
ಕುಳತುಯ್ಯಾಲೆಯೊಳು ಕೋಯೆಂದು - ಹಾಸ
ದೊಳು ಸರಪಳಿಯ ಪಿಡಿವುತಂದು - ಪಾದ ।
ನೆಳನವನು ನೀಡಿ ಝೇಣರೆಂದು - ಉಲಿಯು ।
ಲಳಿತಂದುಗೆಗಳಲ್ಲು ಸಂದು - ಪಾಡ ।
ತೆಳಸಿದರು ಪರಶಿವನ ಪದವ ಮನ ಬಂದು ॥ (೧)

ಪೆಸ್ನೆಯರು ಚೆಲುವ ಸಂಪನ್ನೆಯರು ಸಕಲ ವಿ ।
ಥ್ಪನ್ನೆಯರ ಕಲೆಯರಿವ ಕನ್ನೆಯರು ಕರುಣಗುಣಿ । (?)
ಠಪನ್ನೆಯರು ಬಲ್ಲ ಚಾವನ್ನಗಂಧಿಯರು ಕಿ ।
ಸನ್ನಿಭಾವನೆಯು ರೆಲ್ಲ - ನಿಲ್ಲ
ಬೆನ್ನಯ್ಯನಬ್ಜಾಕ್ಷ ಪ್ರಿಯ ಪ್ರಮಥ -
ಸನ್ನಿಹಿತ ಶರಣು ಬೆಣ್ಮಯ್ಯ - ಕೊಡಲಿ
ಚೆನ್ನಬಜ್ಜರನೇಣುಗೆಯ್ಯ - ತೊಳಪ ।
ಕನ್ನಡಿಗ ಕಾಯೊ ದಮ್ಮಯ್ಯ - ಎಂದು ।
ಹೊನ್ನಯ್ಯಲೆಯನೇಱಿ ನುತಿಸೆ ಪಲವಗೆಯ ॥ (೨)

ಪಱಿಯ ಕಾರ್ಪುಗಿಲ ಮುಡಿ ಸರಿಯ ಮುಡಿದರಲೊಡವೆ ।
ಮೊಱೆಯ ಮರಿದುಂಬಿ ದನಿಗೆದರೆ ಕೋಗಿಲ ಹಿಂಡು ।
ನೆರೆಯುವೊಗದೊಳು ನಗೆಯು ಸುರಿಯೆ ಕಂಗಳ ಥಾಳ ।
ಬೊಱೆಯಲಯ್ಯಲೆಯನೇಱಿ - ವಿಱಿ ॥
ಪರಿಪೂರ್ಣ ಮಹಿಮಾಭಿರಾಮ - ದಯಾ ।
ಭರಿತ ಭಕ್ತೌಘ ಸುಪ್ರೇಮ - ಕಲಾ ।
ಧರ ಜಾಟ ಕಾರುಣ್ಯಧಾಮ - ಮುನೀ ।
ಶ್ವರಶರಧಿ ಸಂಪೂರ್ಣ ಸೋಮ - ಹೇಮ ।
ಧರಣಿ ಭೃದ್ಧರ್ಮ ಹಿತ ವಿರಲಿಮ್ಮೊಳೆಂದು ॥ (೩)

ಏಱಿ ದಶನದ ಶಾಂತಿ ಮಿಱಿ ಮೈ ಬೆಮರುವನಿ ।
ಸೋರೆ ನಿಡುಜಡೆ ನೆಲಸ ನೂಱಿ ಮುತ್ತಿನ ಹಾರ ।
ತೋಱಿ ಮುಂದಲೆದು ಕಲಸಾರೆ ಕಂಚುಕ ಜಾರೆ ।
ನಾರಿಯರು ನಲಿವುತಮಮಾ - ಸಾರ ॥
ಸಾರಿ ಸೂರ್ಯಾನಲತ್ರ್ಯಕ್ಷ - ದನುಜ ।
ಮಾರಾಂತಕಾಥಪುರ ವಿಪಕ್ಷ - ವಿನುತ ।
ಸಾರಸಕ್ಕವಿದಯಾ ಕಟಾಕ್ಷ - ಮಹಾ
ಮೇರುಸದ್ಭವನ ಮಮಪಕ್ಷ - ಬೆಲನ
ನೀರೇಳಪಾಲಿಪ ನಿರಾಪೇಕ್ಷನೆಂದು ॥ (೪)

ಶಿಱಿ ಮೆಯ್ಗಂಪು ಕೇಲಾಡೆ ಲಾವಣ್ಯರಸ ।
ಮೂಡೆ ಮುಗುಳ್ನಗೆಗಳೆಲ್ಲಾಡೆ ವಸ್ತ್ರದ ಸೆರಗು ।
ಕೂಡೆ ಬೆನ್ನೆರೆಯಲೆಕೆಯಾಡಲತಿ ಚಿತ್ರ ಕ್ರುತಿ ।
ಗೂಡುತಾಲಾಪವೆರಸಿ ಸ್ಮರಿಸಿ ॥
ಪ್ರೌಢೆಯರು ಪ್ರಣವ ಪ್ರಕಾಶಾ - ಧೀರ
ನೀಡಜ ಧ್ವಜ ಭಸಿತ ಭೂಷಾ - ಮಹಾ ।
ಕ್ಷ್ವೇಡ ಕಂಧರ ಧರನಿರಾಶಾ - ವರದ ।
ಮಾಡೊಲ್ದು ಕಾಂತವೀರೇಶ - ಎಂದು
ಪ್ರೌಢೆಯರು ಪೊಗಳಯ್ದಲಾಪ ಬರೆ ಹರುಷ ॥ (೫)

End :

॥ ರಾಗ—ಕನ್ನಡ ಕಾಂಭೋಜಿ ॥

ಪಲ್ಲವಿ.—

ಸ್ವಾತಿಯ ಮಳೆಹೊಯ್ದು ಸೋಜಿಗವನು ಕೇಳು ।
ನೀತಳುವದೆ ಸೋಸಲೆಯ ಕೆಂಪನಂಜೇಶ ॥

ಚರಣಗಳು.—

ಪ್ರಗಲಿಸದೆ ಕೋಟಿಸ್ತಿನ ಕಿರಣಂಗಳ ।
ಹಗಲುಗತ್ತಲೆ ಮುಸುಕಿತೋ ನೋಡಲೆಂಬಂತೆ ।
ಮುಗಿಲೆದ್ದು ಕವಿದೆಂತು ದೆಸೆಯ ತೆಕ್ಕನೆ ತೀವೆ ।
ಮುಗಿಲ್ದನಿ ಗುಡುಗುಡು ಛಳಲಿಂದಾರ್ಭಟಿಸಲ್ಕೆ ।
ಮುಗಿಲ್ವೆಳಗೊಗೆಯಲು ಚಂಡಮಾರುತ ಮಹಾ ।
ನಗವ ಕಿಳ್ತೀಡಾಡಲು - ಕಾಡಿನ ।
ಖಗಮೃಗವೆಲ್ಲ ಕಂಗೆಡಲು - ಕಱೆತೆಯ ಮಳೆ ।
ಮುಗಿಲು ಹ . . . ದು ಬಿಳ್ದಂತೆಲ್ಲಿ ನೋಡಲು ॥ (೧)

ಕಾರಮುಗಿಲ್ದೀರ ಜಗ ಸಂಹಾರಕ್ಕೆ ಮು । (?)
ನ್ನೀರ ಕಳುಪಿ [ದೊ] (ದವ್ರೊ) ಲು ಗದುಗ ಕ್ರಮುಕ ಜಂ ।
ಭೀರ ಪಣ್ಣಿ . . . ಣ ರಹ . . ಧರಣಿಯ ಮೇಲೆ ।
ಭೋರೆಂದು ಕಱೆತೆಯ ಬೆಱತುಕೊಂಡು ಮಿಗವಕ್ಕಿ ।
ಸೇರಲಿಕ್ಕೆಗಳಿಲ್ಲದೆ ಪಲುಬಲ್ಕೆ ಹೊ ।
ನೀರು ಹೊಯ್ದುಂ . . . ದಿ . . ಮರಗಳ
ಬೇರಕೀಳುತಲುಗ್ರದಿ - ಕೌಂಡಲಿ ಭೃಗು ।
ಚಾರುನದಿಯು ಮೇಱತೆದಪ್ಪಲು ಶೀಘ್ರದಿ ॥ (೨)

ಎಕ್ಕಲನೆರಳೆ ಕಾಳ್ಗೋಣ ಬಲ್ಲೂಕ ಪುಲಿ ।
ಸೊಕ್ಕಿದಾನೆಯು ಕಾಡಕುಕ್ಕುರ ಶಶಕನು ।
ಮರ್ಕಟ ವಂಚಕ ಮಾರ್ಜಾಲ ಪುಣುಗಿನ ।
ಬೆಕ್ಕು ಜವಾದಿಯು ಮಿಗವ . . ಪಶು ಮೇಷ ।
ಮಿಕ್ಕ ನಾನಾ ಪಕ್ಕಿಮನುಜರು ನೀರೊಳು
ಸಿಕ್ಕಿವಕ್ಕಾಡಿ ಬಾರೆ ಪ್ರಾಣವ ಬಿಟ್ಟು
ಕರ್ಕಸಮಳೆಯಸಾರೆ . . . ನು ಕಂಡು ।
ದುಃಖಾಂಬುಧಿಯೊಳಖಿಳಜನ ಮುಳುಗಿರೆ ॥ (೩)

ಊರೂರ ಮನುಜರೊಕ್ಕಲ ತೆಗೆದೋಡಲು ।
ಭೋರೆಂದು ಭೃಗುನದಿ ಕೌಂಡಲಿ . . ಗಗಿಣಿ ।
ಮೇರೆದಪ್ಪುತಮಿಗಲೆಯ್ತಂದು ಗೋಡುವೆ ।
ಸಾರಕಳವೆ ರಾಗಿ ಮುಂತಾದ . . ದೆಗಳ ।
ತೂಱಿಸಿ ಬಡಿದೆತ್ತಿ . . . ನಾಥರು ಕೆಣ್ಣಿ . . ಟ್ಟು
ಕೈಗೆಟ್ಟುತು ಉಂಬರೆ ನಿಲ್ಲ ।
ಭೂರಿ ಹಣವ ಕೊಟ್ಟೆವು ಕಂಗೆಟ್ಟೆವು ।
ಧಾರಿಣಿಯೊಳಗೆ . . . . ವು ॥ (೪)

ಈ ಪರಿ.ಕ೦ಡಲಿ ಭೃಗು . . . ಥಿ ದ್ವಿತೀಯಾವು ।
ಹಾಪರಿ . . . ಸಮಸ್ತ ಲೋಕಂಗಳ . . .
. . . . ಮಾಡಿದ ಕಥೆಯು ಸೋಸಲಿಯು ದ
ಯಾಪರ ಕೆಂಪನಂಜೇಶನೊಡನೆ ಸಲ್ಲಾಪದಿಂ ಶಾಂ
ತಾರ್ಯ ಪೇಳ್ವನಾಲಿಪುದದ್ರಿ ।
ಚಾಪನ ಭಕ್ತರೆಲ್ಲ ಸ್ವಾತಿಮಳೆ ಪೊಯ್ದು
ತಾಪತ್ರಯವು ಬಂತಲ್ಲ ಶಾಂತವೀರೇಶ
ತಾಪಿರಿದೊಡ್ಡಿದ ಸೂತ್ರವಿದೆಲ್ಲ ॥ (೫)

—ಶ್ರೀ—

ವಿ.ವಿ.—

ಸಮಗ್ರ. ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾದುದು. ಇದರೊಡನೆ ಶಿವಲಿಂಗ ಚಾರಿತ್ರ, ಬಸವ ಪವಾಡದ ರಗಳೆ ಎಂಬ ಪುಸ್ತಕಗಳಿವೆ.

ಇದು ಹಾಡಿನಲ್ಲಿ ಬರೆದಿದೆ. ಶಾಂತವೀರೇಶ್ವರ ಸ್ತುತಿರೂಪವಾಗಿದೆ. ಸ್ತ್ರೀಯರು ಶಾಂತವೀರೇಶ್ವರನಲ್ಲಿಟ್ಟಿದ್ದ ಪ್ರೇಮವನ್ನು ವರ್ಣಿಸಿ ಕವಿ ಪರಸ್ಪರ ಅವರಿಗೆ ನಾಯಿಕಾ ನಾಯಕ ಭಾವವನ್ನು ಹೇಳುತ್ತಾನೆ. ಹಾಡುಗಳು ಶೃಂಗಾರ, ಭಕ್ತಿ ವಿಷಯಗಳಿಂದ ಕೂಡಿವೆ. ಒಂದೊಂದು ಹಾಡಿನಲ್ಲಿಯೂ ಪಲ್ಲವಿ, ಚರಣಗಳೆಂಬೆರಡು ವಿಭಾಗಗಳಿವೆ. ಬಂಧವು ಚೆನ್ನಾಗಿದೆ.

ಕವಿ ಶಾಂತಾರ್ಯನೆಂದು ತಿಳಿಯುತ್ತದೆ. ಈತನ ಸ್ಥಳ ಸೋಸಲೆಯೆಂಬ (ಮೈಸೂರು ಜಿಲ್ಲೆಗೆ ಸೇರಿದುದು) ಊರು. ಇವನು ಈ ಹಾಡುಗಳನ್ನು ಆ ಊರಿನಲ್ಲಿದ್ದ ಶಿವಭಕ್ತ, ಕೆಂಪನಂಜೇಶನೊಡನೆ ಹೇಳಿದುದಾಗಿ ಬರೆದಿದ್ದಾನೆ.

No. 1331 ಹಾಡುಗಳು.

HĀḌUGAḶU.

Substance, palm-leaf. Size, 14 × 1 inches. Pages, 98. Lines, 4 on a page. Extent, 540 granthas. Character, Kannada. Condition, much injured. Appearance, old. Mode of writing, good.

Begins on fol. 1*a* and 46*b*. The other works herein are:—(1) Caupadada ogaṭe, 38*b* and 59*a* (ganita also), (2) Chandōmbudhi 41*b*.

Foll. 18*b*, 49*b*, 58*b* and 64*b* are left blank.

Songs written in praise of Gaṇapati, Sarasvati, Śiva, Viṣṇu, Tibbādēvi, Bannimahankāli, etc. The name of the author is not known. For details see extracts below.

Beginning :

॥ ರಾಗ ॥

ಪಲ್ಲವಿ.—

ತ್ರಿಜಗ ವಂದಿತನೆ । ಅಜಹರಿ ನಮಿತ ಪದನೆ ।
ಭುಜಗ ಭೂಷಣನ ಸುತ ವಿಘ್ನದಾಯಕನೆ ॥

ಚರಣಗಳು.—

ಶುಂಡಾಲವದನ ಯೇಕದಂತ ದ್ವಾಯು . . .
. . . . . ಡ ಪರಕು . . . ನೆಸೆವ ಗಾತ್ರಸಂಯುತನೆ ॥
ಚಂಡಕರ ಶುಭ್ರಾಂಶು ಸಮತೇಜಯುತನೆ ।
ಕೊಂಡಲಿ ವ್ರಜದಿಂದ ನೇರ್ವ ಪೊಂದಿತನೆ ॥ (೧)

* * * * *

॥ ರಾಗ ॥

ಪಲ್ಲವಿ.—

ಶ್ರೀಮದತಿಶಯ ದೇವದುಂದುಭಿರಾಜ ।
ಸ್ವಾಮಿ ಜಯಜಯ ವಿಜಯನಾಥ ಜಿನರಾಜ ॥

ಚರಣಗಳು.—

ನರನಾಗ ಸುರಸಮಿತಿ ಶುಭಪಾದ ಪೂಜ ।
ತರಣಿ ಶಶಿ ಶತಕೋಟಿ ಜಿತವಿಶದ ತೇಜ ।
ಪರಮಮುನಿನಯನರೋಲಂಬ ನೀರೇಜ ।
ನಿರತಿಶಯ ನಿರ್ವಾಣಗುಣಗಣವಿರಾಜ ॥ (೨)

ಮೇರುನಗ ಪೀಠ ಕ್ಷೀರಾಂಬುನಿಧಿ ಸದನ ।
ಕಾರುಣ್ಯಾಕೈವಲ್ಯ ಕಾಮಿನೀ ಸದನ ॥
ವೀಕ್ಷಾಘವಿಸ್ತಾರ ದರ ಹಸಿತವದನ ।
ದೂರದೃಶ ದುರಿತ ಹರ ದಶದಿಶಾವದನ ॥ (೧)

ಮನಸಿಜಮಹಾರಣ್ಯ ಪಾವಕಮದೀಶ ॥
ಜಿನನಾಥಮೋಹಮಲ್ಲಾಸುರವಿನಾಶ ॥
ಘನಮಹಿಮಸುಜ್ಞಾನನಿಧಿ ಕೃಪಾಕೋಶ ।
ಅನವರತ ಮೋಕ್ಷಪುರ ವಿಜಯನಾಥೇಶ ॥ (೩)

(ಪತ್ರ ೨).

॥ ರಾಗ ॥

ತಿಬ್ಬಾದೇವಿ.

ಪಲ್ಲವಿ.—

ತ್ರಿಮುಕೂಟ ದಕ್ಷಿಣದಿಶಾಭಾಗದಲ್ಲಿ ।
ಪ್ರಮಥ ತಿಬ್ಬಾದೇವಿ ಮೆರೆತಿದೆ ತೇಜದಲಿ ॥

ಚರಣಗಳು.—

ಶಕಟೋತ್ಸ (ವ) [ವಾದ] ರಥೋತ್ಸವಗಳನು ।
ಪ್ರಕಟದಿಂ ಕೂಡಿ ನೇಮಿಲವೃಕ್ಷಗಳನು ॥
ಸಕಲ ಕೊಂಬುಗಳೆಯು ಯಿಲ್ಲದಂತದನು ।

ಮೊಕಗೆಡಿಸಿ ಕೊಚ್ಚಲ್ಕೆ ತೋರ್ಪಫಲಗಳನು ॥ (೧)

ವರುಷ ಮೂಱಾದ ಜೋಳದ ದಂಟ ತಂದು ।
ಚರಣ ಸನ್ನಿಧಿಯಲ್ಲಿ ನೀರೆಱೆತಿಯಲೆಂದು ॥
ವರನಿಜದಿ ಹಸುರೆಲೆಯು ತೋಱುತಿಹುದೆಂದು ।
ಕರುಣ ನಿಮ್ಮಯ ಕೃಪಾಮಹಿಮೆಯೊಳಗೆಂದು ॥ (೨)

ಧರೆಯೊಳಗೆ ಮಿಗಿಲೆನಿಪ ಮೋಕ್ಷಪುರದಲ್ಲಿ ।
ಗರುವೆ ನೀನಹುದು ದೆಸೆದೆಸೆ ಕೀರ್ತಿಯಲಿ ।
ಅರಸುಲಿಂಗೇಂದ್ರಗೊರವಿತ್ತು ಬೇಗದಲಿ ।
ಕರುಣದಿಂ ತಿಬ್ಬಮ್ಮ ಸಲಹು ಹರುಷದಲಿ ॥ (೩)

(ಓಲೆ ೪).

* * * * *

ಬನ್ನಿಮಹಂಕಾಳ.

ಪಲ್ಲವಿ.—

ಈಶನರ್ಧಾಂಗಿಯಸುರರ ವ್ರಜಕೆ ಧಾಳ ।
ಲೇಸಿತ್ತು ರಕ್ಷಿಪುದು ಬನ್ನಿಮಹಂಕಾಳ ॥

ಚರಣಗಳು.—

ಚಂಡಮುಂಡ ಮಹಿಷಾಸುರರ ತಱಿದೆ ।
ಗಂಡುಗಲಿ ಶುಂಭ ನಿಶುಂಭರನು ಮುಱಿದೆ ।
ಚಂಡದಾನವ ರಕ್ತಬೀಜನನು ಕೊರೆದೆ ।
ಹಿಂಡೊಡೆಯ ದನುಜ ಕುಲವೆಲ್ಲವನು ಗೆಲಿದೆ ॥ (೧)

ಶೂಲಡಮರುಗ ಖಡ್ಗ ಖೇಟವನು ಪಿಡಿದು ।
ಸಾಲುಮರಳ್ಗಳ ತಂಡದೊಳುವೆರಸಿ ನಡೆದು ॥
ಲೀಲೆಯಿಂ ದುಷ್ಟಮಾನವರ ಸದೆಬಡಿದು ।
ಬಾಲೇಂದು ಧರನ ಚಿತ್ತವನು ನೆಱೆ ಪಡೆದು ॥ (೨)

ವಸುಧೆಗುನ್ನತವಾದ ಮೋಕ್ಷಪುರವೆಂದು
ಪೆಸರ್ವಡೆದ ಗ್ರಾಮದುತ್ತರದಲ್ಲಿ ನಿಂದು ॥
ರಸಿಕಲಿಂಗೇಂದ್ರನಿಗೆ ವರವೀವೆನೆಂದು ।
ಬಸೆದು ಮಹಂಕಾಳ ನಿಂದಳು ಕೃಪಾಸಿಂಧು ॥ (೩)

(ಓಲೆ ೫).

॥ ರಾಗ ॥

ಒಡೆಯರುಗಳು.

ಪಲ್ಲವಿ.—

ಪರಮೇಶ್ವರನ ರೂಪಧರಿಸಿ ಮೆಱೆದಿಹರು ।
ಧರೆಯೊಳಗೆ ಬಸವಲಿಂಗದೇವ ರೊಪ್ಪಿಹರು ॥

ಚರಣಗಳು.—

ಪಂಚವುಖವನು ಯೇಕವುಖದೊಳಳವಡಿಸಿ ।
ಪಂಚತ್ರಿಣೇತ್ರವನು ನಯು (ನ) ದೊಳುಧರಿಸಿ ॥
ಪಂಚಲಾಂಛನವ ಶ್ರೀಮಕುಟದೊಳ್ಧರಿಸಿ ।
ಪಂಚವಿಷಯವ ತೊಱೆದ ಪರಮಾತ್ಮನೆನಿಸಿ ॥ (೧)

ಭುವನದೊಳ್ ಸ್ತ್ರೀಭೂಮಿ ಕಾಂಚನಗಳೆಂಬ।
ತ್ರಿವಿಧವನಿರಾಕರಿಸಿ ಕುಲಶೀಲವೆಂಬ ॥
ವ್ಯವಹರಣವುಳದು ಯಿಹಪರವ ಕೈಕೊಂಬ ।
ಭವದೂರ ನಿರ್ವಯಲ ಶಿವ ಪ್ರತಿಬಿಂಬ ॥ (೨)

ವೀಳೆಯ ವಿಭೂತಿ ಪುಷ್ಪದ ಪಟ್ಟಿಯಿಂದ ।
ಪೊಳ್ಳೆಸಿಮೆರೆವ ಪಂಚಾರತಿಗಳಿಂದ ॥
ಭೋಳು ಸೀಳೆಂಬ ಘಂಟೆಯು ಶಂಖನಿಂದ ।
ಫಾಳೇಕ್ಷಣನ ಪೂಜೆಯನು ಮಾಳ್ಪಚಂದ ॥ (೩

ಕರೆಕರೆದು ದಾನ ಧರ್ಮವ ಮಾಡುತಿಹರು ।
ಪರಮ ಪುರುಷಾರ್ಥಗಳ ಮಾಡಿ ಹರಸುವರು ॥
ಸರಸಿ ಕಪ್ಪಿಗಿನಂಜೆದೇವರ ಶಿಷ್ಯರಿವರು ।
ಧರೆಯೊಳಗೆ ಬಸ [ವ] ಲಿಂಗದೇವರುತ್ತಮರು ॥ (೪)

(ಓಲಿ ೧೦).

* * * *

ಚರಣ.—

ತನ್ನ ಸಾಕ್ರಿಸಿರ್ದ ಸಕಲ ಜನಗಳನು'
ಮನ್ನಿಸಿ ಮಹಾ ಸೌಖ್ಯದೊಳಗೆ ಸಲಹುವನು ॥
ಸನ್ನುತನು ಕಾಮರಸಯ್ಯ ನಾತ್ಮಜನು ।
ನನ್ನಿಯುತ ಮಲ್ಲಯ್ಯ ಕೀರ್ತಿ ಸಂಪದನು ॥ (೩)

(ಓಲಿ ೧೩).

* * * * *

ಚರಣ.—

ತ್ಯಾಗಗುಣ ಶೀಲವೆಂದೆನಿಸಿ ಮೆಱೆದಿಹನು ।
ಭೋಗ ಭೋಗೇಂದ್ರ ಸರಿ ಸದ್ಧರ್ಮಪರನು ॥
ರಾಗಯುತ ಶಾಂತಯ್ಯ ನಾತ್ಮಸಂಭವನು ।
ತ್ಯಾಗಯುತ ಚೆನ್ನೊಡೆಯ ರಧಿಕ ಸಂಪದನು ॥ (೪)

ಸೆಟ್ಟಿಗಳ ಮೇಲೆ.

ಪಲ್ಲವಿ.—

ಸೆಟ್ಟೀಶ ಪಟ್ಟವರ್ಧನರೆನಿಸಿಹನು ।
ಸೃಷ್ಟಿಯೊಳು ಸುಗುಣಿ ಸಿದ್ಧೇದೇವರಿವನು ॥

ಚರಣಗಳು.—

ಮಾಣಿಕ್ಯ ವಜ್ರ ಮರಕತ ಮುತ್ತುಗಳನು ।
ನಾಣ್ಯೆಯು ಹಿರಣ್ಯರಜತಾದಿ ನೆಲೆಗಳನು ॥
ಕಾಣುತಲೆ ಝಲ್ಲಿ ಸಕಲಾತಿ ಪಟ್ಟೆಯನು ।
ಜಾಣತನದಲಿ ಮೇಡ್ಡಿ ನುಚಿತ ಕ್ರಯಗಳನು ॥ (೧)

ಅರಸುಗಳ ಚಿತ್ತವೃತ್ತಿಯನರಿದಾಗ ।
ಸರಸಸಲ್ಲಾಪ ನುಡಿವನತಿ ಬೇಗ ॥
ಉರಗರಾಜನಿಗಿಲ್ಲದತ್ತಿಶಯದ ಭೋಗ ।
ಹರುಷದಿಂ ಕರೆದುಸಲೆ ಪಿರಿದೀವ ತ್ಯಾಗ ॥ (೨)

ಗುರುಲಿಂಗ ಜಂಗಮದೊಳತಿಭಕ್ತಿಯುತನು ।
ಹರುಷದಿಂ ಶಿವಕಥೆಯು ಕೇಳ್ವತತ್ಪರನು ॥
ಗರುವ ಸಿದ್ಧೇದೇವರೊಡೆಯರಾತ್ಮಜನು ।
ವರಸುಗುಣಿ ಗರುವ ಸಿದ್ಧೇದೇವರಿವನು ॥ (೩)

(ಓಲೆ ೧೬, ೧೭.)

ಹೆಣ್ಣುಮಕ್ಕಳ ಮೇಲೆ.

ಪಲ್ಲವಿ.—

ವಸುಧೆಯೊಳಗೆಸೆವ ಸೌಭಾಗ್ಯ ಕುಲರನ್ನೆ ।
ಎಸೆವ . . . . . ಶಿಶುಕುಲಕೆ ಚೆನ್ನೆ ॥

ಚರಣಗಳು.—

ಪೊಂಗರುವ ರಂಗುಮಾಣಿಕದ ಪುತ್ಥಳಿಗೆ ।
ಮುಂಗೈಯ್ಯವಾಕು ಬೆಂಡೋಲೆ ಕರಮೆಸೆಯೆ ।
ಸಿಂಗದು ಗರುಡಿಮಣಿಯು ಗೆಜ್ಜೆ ಸೊಗಯಿಸಿಯೆ ।
ತಂಗಾಳಿಗೊಲಿವ ಲತೆಯಂತೆ ರಾಜಿಸುವೆ ॥ (೧)

* * * * *

ಕ್ಷೀರಸಾಗರದೊಳುದಯಿಸಿದ ಸಿರಿಯಂತೆ ।
ಭೂರಿಭಾಗ್ಯವನಾಂತು ಮೆಱೆವಳೀರಂತೆ ॥
ಚಾರುಗಿರಿ ಚಂದ್ರಶೇಖರ ತನುಜೆಯಂತೆ ।
ನಾರಿ ನಂಜಮ್ಮ ನೀ ಸುಖದೊಳಿರುವಂತೆ ॥ (೩)

(ಓಲೆ ೧೯.)

End :

ಪಲ್ಲವಿ.—

ಕಮ್ಮಗಣ್ಣಿಯುನರೂಪ ಕಾಮಿನೀ ಜನಕೆ ।
ಸುಮ್ಮಾನಿ ದೊಡ್ಡರಸರಾಜೇಂದ್ರ ಭೂಪ ॥

ಚರಣಗಳು.—

ಇಟ್ಟಚೌಕುಳ ಕಂಠಮಾಲೆ ಸರದಿಂದ ।
ತೊಟ್ಟವಜ್ರಾಂಗಿ ವೈರಣೆ ವಸ್ತ್ರದಿಂದ ॥
ಮೆಟ್ಟುಮೆಟ್ಟಲಿ ಪೊಳೆವ ಕಡಗರವದಿಂದ
ಕಟ್ಟಾಳು ಮನ್ಮಥನು ಯಿವನಲ್ಲದಿಲ್ಲ ॥ (೧)

ಥಳಥಳಪ ಪದಕ ಕೇಯೂರ ಹಾರದಿಂದ ।
ಖಳಖಳಸುತಿಹ ತಾಲಿಕಟಿಸೂತ್ರದಿಂದ ॥
ಹೊಳೆಹೊಳೆವುತಿಹ ತಿಲಕ ತನುಕಾಂತಿಯಿಂದ ।
ಝುಳಝುಳಪ ಪಾವುಗೆಯ ಧ್ವನಿಗೆಯ್ಯುದಂದ ॥ (೨)

ಕಸ್ತೂರಿ ಜವ್ವಾಜಿ ಕರ್ಪೂರ ಸಾದುಗಳನು ।
ಉತ್ತಮ ಕದಂಬ ಪರಿಮಳ ಸುಗಂಧವನು ॥
ವಿಸ್ತರಿಸಿ ಧರಿಸಿ ವಿಮಲಾಂಗ ಕೋವಿದನು ।
ಹಸ್ತಿಗಮನದಿ ಪೋಲ್ವ ಹಸುಳರೂಪಿವನು ॥ (೩)

ಕಂಜದಳ ನೇತ್ರೆಯರು ಕಾಣೆ ಮುದದಿಂದ ।
ಮುಂಜೆರಗ ಜಾರಿಸುತ ಸವಿವಾತಗೊಡುತ ॥
ಅಂಜದವನಲ್ಲಲ್ಲಿ ಯುರಸಿ ಕಾಣುತ್ತ ।
ಮಂಜುಳವಿದಂತೆಯಂಗನೆಯರರಸುತ್ತ ॥ (೪)

ಕಂಭಕೋಣ ತನ್ನುಲವುಡಿ ಪ್ರಟಸಾದಕವನು ।
ಯಿಂಬಿನೊಳುಮಾಡಿ ಬಹುಶಸ್ತ್ರದಲ್ಲಿವನು ॥
ಸಂಭ್ರಮದಿ ಸಾಧನೆಯು ವಿವರಪೆಲ್ಲವನು ।
ಡೊಂಬಿಯಿಲ್ಲದೆ ಮಾಡಿ ಜರೆದು ರಾಜಿಪನು ॥ (೫)

ಮಲ್ಲಗಾಳಿಗಕೆ ಮಲೆವರ ಗಂಡ ನೀನು ।
ಸಲ್ಲೀಲೆಯಿಂದಶ್ವದುವ್ವಾಲಿಗಳನು ॥
ನಿಲ್ಲದೆ ವಾರಣದ ವೈಹಾಳಿಗಳನು ।
ಸಲ್ಲೀಲೆಯಿಂ ಮಾಡಿ ಪಡೆದೆ ಕೀರ್ತಿಯನು ॥ (೬)

ಭಾರತಾಲಂಕಾರ ಕಾವ್ಯ ಕುಶಲವನು ।
ಲೀಲೆಯಿಂದೊಪ್ಪುತಿಹ ಲೀಲಾ (ವತಿಯ) ನು ॥
ಮೇಲಾದ ಜೈಮಿನಿಯ ರಸಕಾವ್ಯಗಳನು ।
ಲೀಲೆಯಿಂದೋದಿ ಸಾಹಿತ್ಯ ವಿವರವನು ॥ (೭)

ಅಷ್ಟಾದಶವರ್ಣನೆಯ ವಿವರವೆಲ್ಲವನು ।
ಸೃಷ್ಟಿಯೊಳು ಚೌಷಷ್ಟಿ ಕಲೆಯ ವಿವರವನು ॥
ಪುಷ್ಟಿಹಾ ನವರಸದ ಭರಿತ ಕಾವ್ಯವನು ।
ವಿಸ್ತರದಿಯೋದಿ ಸಹಕಾವ್ಯವೆಲ್ಲವನು ॥ (೮)

ಕ್ಷೀರಸಾಗರದಿ ಶಶಿ ಜನಿಸಿದಂದದಲಿ ।
ಚಾರುಗುಣಿ ಲಿಂಗರಾಜೇಂದ್ರ ನಾತ್ಮದಲಿ ॥
ಶೂರದೊಡ್ಡರಸೇಂದ್ರ ಸುಖದೊಳಿರುತಿರಲಿ ।
ಕಾರುಣ್ಯನಂಜುಂಡ ಲಿಂಗ ರಕ್ಷಿಸಲಿ ॥ (೯)

ವಿ.ವಿ.—

ಇದು ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಚೌಪದದ ಒಗಟು—ಗಣಿತ, ಛಂದೋವಿಷಯ ಇವೂ ಇವೆ.

ಇದು ಹಾಡಿನಲ್ಲಿ ಬರೆದ ಗ್ರಂಥವು. ಇದರಲ್ಲಿ ಗಣಪತಿ, ಸರಸ್ವತಿ, ಈಶ್ವರ, ವಿಷ್ಣು, ತಿಬ್ಬಾದೇವಿ, ಬನ್ನಿಮಹಂಕಾಳಿ, ಒಡೆಯರುಗಳು, ಸೆಟ್ಟಿಗಳು, ಸುಂಕದವರು, ಹೆಣ್ಣು ಮಕ್ಕಳು, ಗಂಡು ಮಕ್ಕಳು, ಅರಸುಗಳು, ಸೂಳೆಯರು, ಹರಕೆ (ಚೌಪದ ಮುಂತಾಗಿ), ಅಣ್ಣರು (ಮೂಗೂರಾಣ್ಣರು ಮುಂತಾಗಿ) ವೀರಭದ್ರ—ಇವರ ಮೇಲೆ ಹಾಡುಗಳಿವೆ.

ತಿಬ್ಬಾದೇವಿ.—ಮೂಗೂರು ; ಇದಕ್ಕೆ ಮೋಕ್ಷಪುರವೆಂಬ ಹೆಸರೂ ಉಂಟು. ಮೈಸೂರು ದೇಶದ ತಿರುಮಕೂಡ್ಲು ನರಸೀಪುರದ ತಾಲ್ಲೂಕಿಗೆ ಸೇರಿದೆ. ಲಿಂಗೇಂದ್ರ ನಾಲ್ವಕೆಗೊಳಗಾಗಿದ್ದಿತು. ಈ ಊರಿನ ದೇವತೆಯಾದ ತಿಬ್ಬಾದೇವಿಯ ಜಾತ್ರೆಯು ಪ್ರತಿವರ್ಷವೂ ಸಂಭ್ರಮದಿಂದ ನಡೆಯುತ್ತಿರುವುದು. ಜಾತ್ರೆಯು ಸುಮಾರು ಒಂದು ವಾರ ನಡೆಯುವುದು. ಈ ಒಂದು ವಾರದಲ್ಲಿ ಅನೇಕ ಉತ್ಸವಗಳು ಜರಗುವುವು. ಪರಸ್ಥಳದಿಂದ ಅನೇಕರು ಬಂದು ಸೇರುವರು. ರಥೋತ್ಸವವಾದ ಮರುದಿನ ದೇವಿಯು ಅಲ್ಲಿಗೆ ಸುಮಾರು ಎರಡು ಮೈಲಿ ದೂರದಲ್ಲಿರುವ ಹೊಸಹಳ್ಳಿ ಗ್ರಾಮದ ದೇವಾಲಯಕ್ಕೆ ಬಿಜಯಮಾಡಿಸುವಳು. ಅದಕ್ಕೆ ಹಿಂದಣ ರಾತ್ರಿ ಅರ್ಚಕನು ನಿಯಮದಿಂದ ಹೊಸಹಳ್ಳಿಯ ದೇವಾಲಯದಲ್ಲಿ ದೇವರ ಹಿಂಭಾಗದಲ್ಲಿರುವ ನೇರಿಳೆ ಮರದಲ್ಲಿ ಗೊತ್ತಾದ ಒಂದೆಡೆ ಎಲೆಗಳನೆಲ್ಲ ಸವರಿ (ಕೊಚ್ಚಿ) ಆ ಕಾಂಡಕ್ಕೆ ಅರಿಶಿನದ ದಾರವನ್ನು ಕಟ್ಟಿ ಬರುವನು. ಮಾರನೆಯ ಮಧ್ಯಾಹ್ನ ದೇವತೆಯು ಉತ್ಸವವಾಗಿ ಅಲ್ಲಿಗೆ ಬರುವ ಹೊತ್ತಿಗೆ ಬತ್ತಕ್ಕಿಂತಲೂ ಉದ್ದಕ್ಕಿರುವ ಹಳದಿ ಬಣ್ಣದ ಚಿಗುರು ಐದು, ಏಳು, ಈ ಕ್ರಮದಲ್ಲಿ ಚಿಗುರಿರುವುವು. ಮೂಗೂರಲ್ಲಿ ದೇವರು ಉತ್ಸವ ಹೊರಡುವ ಹೊತ್ತಿಗೆ ಸರಿಯಾಗಿ ಇಲ್ಲಿ ಚಿಗುರುವುದೆಂದು ಪ್ರತೀತಿಯಿದೆ. ದೇವರು ಇಲ್ಲಿಗೆ ಬಂದ ಮೇಲೆ ಆ ಅರ್ಚಕನೇ ಮರಕ್ಕೆ ಹತ್ತಿ ಆಯುಧದಿಂದ ಚಿಗುರನ್ನು ಚಿವುಟಿತಂದು ದೇವರಿಗರ್ಪಿಸಿದ ಬಳಿಕ ದೇವಸ್ಥಾನಾಧಿಕಾರಿಗಳು ಅವನ್ನು ಮೈಸೂರು ಅರಮನೆಗೆ ಪ್ರಸಾದರೂಪವಾಗಿ ಕಳುಹಿಸಿ ಕೊಡುತ್ತಾರೆ. ಆ ದೇವತೆಗೆ ರಾಜಮರ್ಯಾದೆ ಯಿರುವುದಲ್ಲದೆ ಸರ್ವರೂ ಆ ಪ್ರಾಂತದಲ್ಲಿ ಆಕೆಯನ್ನು ಪೂಜಿಸುತ್ತಾರೆ. ಆ ದಿನ ಹೊಸಹಳ್ಳಿಯ ಗ್ರಾಮದಲ್ಲಿ ಜಾತ್ರೆಯು ಸಂಭ್ರಮದಿಂದ ಜರಗುವುದು. ಈ ಉತ್ಸವಕ್ಕೆ ಮೂಗೂರು ಚಿಗುರುಕಡಿಯುವುದು ಎಂದು ಹೆಸರು. ದೇವರು ಮೂಗೂರಿಗೆ ಹಿಂದಿರುಗುವುದು ಸಾಯಂಕಾಲ. ಬಳಿಕ ಅಲ್ಲಿ ಕೋಟಾರೋತ್ಸವ ಮುಂತಾದುವು ನಡೆದು ಜಾತ್ರೆಯು ಸಂಪೂರ್ಣವಾಗುವುದು.

ಪ್ರತಿ ಹಾಡೂ ಪಲ್ಲವಿ, ಚರಣಗಳಿಂದ ಕೂಡಿದೆ. ಇದರಲ್ಲಿ ಮೂಗೂರಮ್ಮರು ಮತ್ತು ಒಡೆಯರುಗಳು ಇವರುಗಳ ವರ್ಣನಾಯುಕ್ತವಾದ ಹಾಡುಗಳೇ ಹೆಚ್ಚಾಗಿವೆ. ಕವಿ ಆ ಪ್ರಾಂತದವನಾಗಿರಬಹುದು. ಕವಿಯ ಹೆಸರು ಈ ಗ್ರಂಥದಿಂದ ಗೊತ್ತಾಗುವುದಿಲ್ಲ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಲ್ಲಿ ನೋಡಿ ತಿಳಿಯುವುದು.

No. 1332. ಹಾಡುಗಳು by ವೆಂಕಟಶರ್ಮ.

HĀḌUGAḶU BY VENKAṬAŚARMA.

Substance, palm-leaf. Size, 6 $\frac{16}{16}$ × 1¼ inches. Pages, 122. Lines, 4-8 on a page. Extent, 650 granthas. Character, Kannada. Condition, very much injured. Appearance, old. Mode of writing, good.

Songs written mostly in praise of God Śrīnivāsa of Karigiri. The author is Venkaṭa Śarma, probably a Court Pandit of Cikadēvarāja as it appears from the last song.

Beginning :

॥ ರಾಗ ॥ ಸಾರಂಗ ॥

ಪಲ್ಲವಿ.—

ಧೀರಮಹಾನುಭಾವ ಕರಿಗಿರಿ ಶ್ರೀನಿವಾಸ ದೇವ ॥

ಚರಣಗಳು.—

ಕಮಲಜಾರ್ಚಿತ ಚರಣ ಶ್ರೀಹರಿ ।
ಕಮನೀಯ ಮೃದು ಭಾಷಣ ॥
ಸೋಮಕಾಸುರ ಸಂಹರಣ ವೇದೋದ್ಧರಣ ।
ಸ್ವಾಮಿ ಪರಾಕು ಎಚ್ಚರಿಕೆ ಪಾದಾವಧಾನ ॥ (೧)

ವಾಸುದೇವನುತ ಚರಣ . . . . ।
ಕಾಮಿತ ಫಲದಾಯಕ ।
ಭೂಮಿಧಾರಣ ನಿಸ್ಸೀಮ ಶೇಷಾಧಾರ ।
ಸ್ವಾಮಿ ಪರಾಕು ಎಚ್ಚರಿಕೆ ಪಾದಾವಧಾನ ॥ (೨)

. . . . . . ರ್ಚಿತ ಚರಣ ಶ್ರೀಹರಿ ।
ಕುಮುದಿನಿ . . . . ಂದಿತ ।
ಕ್ಷವೋದ್ಧರಣ ಶ್ರೀ ವೈಕುಂಠ . . .
ಸ್ವಾಮಿ ಪರಾಕು ಎಚ್ಚರಿಕೆ ಪಾದಾವಧಾನ ॥ (೩)

ಕಮಲವಂದಿತ ಚಣ (?) ಶ್ರೀಹರಿ ।
ಸಮರವಿಕಯ ಕಾರಣ ।
ಸಮದಸ ವೈರಿ ಹಿರಣ್ಯಾಕ ಮರ್ದನ ।
ಸ್ವಾಮಿ ಪರಾಕು ಎಚ್ಚರಿಕೆ ಪಾದಾವಧಾನ ॥

ಅಮಲತೀರ್ಥ ಚರಣ ಶ್ರೀಹರಿ ।
ಸುಮನಸ ಹಿತ ಕಾರಣ ॥
ವಾಮನಾ . . . ತ್ರಿವಿಕ್ರಮ ಮೂರುತಿ
ಸ್ವಾಮಿ ಪರಾಕು ಎಚ್ಚರಿಕೆ ಪಾದಾವಧಾನ ॥ (೫)

ಅಮರೇಶ ನುತ ಚರಣ ಶ್ರೀಹರಿ ।
ಕಮಲಜ ಪ್ರಿಯ ಕಾರಣ ॥
ಜಮದಗ್ನಿ ವರಸುತ ಪರಶುರಾಮ ಪಾಹಿ ।
ಸ್ವಾಮಿ ಪರಾಕು ಎಚ್ಚರಿಕೆ ಪಾದಾವಧಾನ ॥ (೬)

ಭೂಮಿಜಾನುತ ಚರಣ ಶ್ರೀಹರಿ ।
ತಾಮಸ ಜಯಕಾರಣ ॥
ಶ್ಯಾಮಲ ಮೂರುತ್ತಿ ಸಾಕೇತಪುರವಾಸ ।
ಸ್ವಾಮಿ ಪರಾಕು ಎಚ್ಚರಿಕೆ ಪಾದಾವಧಾನ ॥ (೭)

ಕಮಲಮೃದು ಚರಣ ಶ್ರೀಹರಿ ।
ರಮಣೀಯತರಲಾವಣ್ಯ ॥
ಕಾಮಪಿತನೆ ಶ್ರೀ . . ಕಮನೀಯ ಮೂರುತಿ ।
ಸ್ವಾಮಿ ಪರಾಕು ಎಚ್ಚರಿಕೆ ಪಾದಾವಧಾನ ॥ (೮)

ಕಮಲಶೋಭಿತ ಚರಣ ಶ್ರೀಹರಿ ।
. . . . ಪತಿ . . . ಶ ॥
ಸಮರವಿಜಯ ತ್ರಿಪುರಾಂತಕ . . . ।
ಸ್ವಾಮಿ ಪರಾಕು ಎಚ್ಚರಿಕೆ ಪಾದಾವಧಾನ ॥ (೯)

. . . . . . ಮಾಜಾನುತ ಚರಣ ಶ್ರೀಹರಿ ।
. . . . ಸೂರ್ಯನಯನ ॥
ಕಮಲೋದ್ಧರಣ ಶ್ರೀಕಲ್ಕಿ ಮೂರುತಿ ರಂಗ ।
ಸ್ವಾಮಿ ಪರಾಕು ಎಚ್ಚರಿಕೆ ಪಾದಾವಧಾನ ॥ (೧೦)

ಕಮಲ ಪೂಜಿತ ಚರಣ ಶ್ರೀಹರಿ ।
ಕಮನೀಯ ಕರಿಗಿರೀಶ ॥
ಸಮರ ವಿಜಯ ಚಿಕದೇವೇಂದ್ರ ಪಾಲಿತ ।
ಸ್ವಾಮಿ ಪರಾಕು ಎಚ್ಚರಿಕೆ ಪಾದಾವಧಾನ ॥ (೧೧)

॥ ರಾಗ ॥ ಕಲ್ಯಾಣಿ ॥

ಪಲ್ಲವಿ.—

ಪನ್ನಗ ಶಯನನೆ ಪರಮ ಪಾವನ ಮೂರ್ತಿ
ಪರಮೇಶ ಪರ ಪರಂಧಾಮಾ ॥
ಸನ್ನುತ ಕರಿಗಿರಿಯ ನಿಲಯ ಬೇಟೆಯ ತಿಮ್ಮ
ಎನ್ನಬಿನ್ನಪವಲಾಲಿಪುದು ॥

ಚರಣಗಳು.—

ಶಂಖದಿಂ ವೆದನವನು ಮುಟ್ಟಿಸಿಯೆ ಬಾಲಕನ ।
ಶಂಕೆಯಿಲ್ಲದೆ ಕಾಯಿದಂತೆ ।
ಅಂಕುಶಧ್ವಜ ವಜ್ರಲಾಂಛನಗಳಿಂದ ಭೂ ।
ಕಾಂತೆಯನು ಪಾಲಿಸಿದಂತೆ ॥

ಪಂಕಜಮುಖಿ ಸಭೆಯೊಳೊರಲುತಿರಲು ಕೇಳ್ದು ।
(ಭೋಂ)ಕನಕ್ಷಯವಿತ್ತತೆರದಿ ।
ವೆಂಕಟೇಶ ನಿನ್ನಯ ಶರಣರನೀಗ ಶಂಕೆಯಿಲ್ಲದೆ ರಕ್ಷಿಪುದು ॥ (೧)

* * * *

ಪರಿವ ಕಾವೇರಿಯ ಉತ್ತರದ ಭಾಗದೊಳು ।
ಮೆರೆವ ಶ್ರೀ ಕರಿಗಿರಿಯೊಳು ।
ಕರುಣದಿಂ ಭಕ್ತರನು ಪಾಲಿಸುತ . . ರುದು ।
ವರದ ಬೇಟೆಯ ತಿಮ್ಮನೊಲಿದು ॥

ಕರುಣಾಳು ಚಿಕದೇವರಾಯನ ಮನದೊಳಗೆ
ಪದುಳದಿಂ ನೀನೆ ನೆಲಸಿರ್ದು ॥
ತ್ವರಿತದಿಂ ತವಶರಣ ವೆಂಕಟ ಶರ್ಮನಿಗೆ ।
ಪರಮ ಸಂತೋಷವನು ಕೊಡಿಸಿ ರಕ್ಷಿಪುದು ॥ (೩

(ಓಲೆ ೬.)

॥ ರಾಗ ॥

ಪಲ್ಲವಿ.—

ಕರಿಗಿರಿ ನಾಯಕಿ ತಾಯೆ ಪುದ್ದು ।
ವರದ ಬೇಟೆಯ ತಿಮ್ಮನ ಮನಃಪ್ರಿಯೆ ॥

ಚರಣಗಳು.—

ಕ್ಷೀರವಾರಿಧಿ[ಯೊಳು] ಜಾತೆ ದಯಾಭರಿತೆ ಸ ।
ದ್ಗುಣ ಗಣಯುತೆ ಲೋಕಮಾತೆ ।
ನಾರಾಯಣ ಮನಃಪ್ರೀತೆ ಕಾಯೆ ಸರಸಿಜ ।
ದಳನೇತ್ರ ಲೋಕ ಪ್ರಖ್ಯಾತೆ ॥ (೧)

ಅಚ್ಯುತ ಹೃದಯನಿವಾಸಿನಿ ಲೋಕ ।
ಲಕ್ಷಿತಕಾರಣ ಭೂತೆ ಸುವಾಸಿನಿ ।
ಪಕ್ಷಿವಾಹನ ಗೃಹ ವಾಸಿನಿ ಕಾಯೆ ।
ರಕ್ಷಣ್ಯಮೂರುತಿ ಕರುಣಾನಿವಾಸಿನಿ ॥ (?) (೨)

ವರಕರಿಗಿರಿಯೊಳು ನೆಲಸಿ ಶರಣ ವೆಂಕಟ
ಕರ್ಮಗಭಯುವ ಸಲಿಸಿ ।
ಪರದ ಬೇಟೆಯು ತಿಮ್ಮನರಸಿ ಕರುಣಿ
ವೆರಸಿ ರಕ್ಷಿಸಬೇಕು ಕಾರುಣ್ಯಾ ಸರಸಿ ॥ (೩)

(ಓಲೆ ೨೧.)

॥ ರಾಗ ॥

ಪಲ್ಲವಿ.—

ಒಂದು ಕೂಗು ದಾರಿ ವೈಕುಂಠ ಪುರವು ।
ಸಂದೇಹವಂ ಬಿಟ್ಟು ಕೇಳೊಮ್ಮನದಿ ॥

ಚರಣಗಳು.—

ಕರಿಸರಸಿಯೊಳಾದಿ ಮೂಲನೆಂದು ಕರೆಯುಲು ।
[ಕರ] (ಹರಿ) ಬೇಗದಿಂ ಮುಕುತಿಯನಿತ್ತ ॥
ಕರಿರಾಜವರದ ಶ್ರೀಕೃಷ್ಣ ಪಲಾ . . . ।
ಕರೆದು ಧ್ರುವಗೆ ಪದವಿಯನಿತ್ತ ಹರಿಯು ॥ (೧)

ಅಂಬಾರಿ . . . . ರೆಯುಲು ದುರ್ವಾಸನು ।
ಬೆಂಬಿಡದೆ ಚಕ್ರವ ನಟ್ಟಿದ ॥
ಅಂಬುಜ . . . . ಶರಣೆನೆ ।
ಕೆಂಬದಲುದಿಸಿ (ಕಾ) ಯ್ದ ಹರಿಯು ॥ (೨)

ದ್ರುಪದನ ಮಗಳು ಕೃಷ್ಣಾ ಎಂದು ಕರೆಯಲು ।
ಕೃಪೆಯಿಂದ ಅಕ್ಷಯವನಿತ್ತು ಕಾಯ್ದ ॥
ಸುಪವಿತ್ರ ಕರಿಗಿರಿವರದ ವೆಂಕಟನ ।
[ಶ್ರೀ] (ಸು) ಪದವ (ನು) ಧ್ಯಾನಿಸುವರಿಗಿದೆಕೊ ವೈಕುಂಠ ॥ (೩)

(ಓಲೆ ೫೫.)

End :

. . . ಯು ಕಸ್ತೂರಿಯ ತಿಲಕದ ಮೃಗಲಾಂಛನದ ।
ಪೂರನ್ನ . . . . ಕ್ಕ ಪುಬ್ಬಿನ
ಚಾರುಚಂಪಕವ ಪೋಲ್ವನಾಶಿಕದ ।
(ನೀರಜ) ದೆಸಳಂದದ ನಿಡುಗಂಗಳ ।
ತಾರಾಸರದಂತೆ ಪೊಳೆವ ರದನದ ।
. . . . ಸೆವ ಕದಪಿನ ಚೆಲ್ವಿನ ಕೃಂ ।
ಗಾರದಿಂದೆಸೆವ ಮಕರ ಕುಂಡಲದ ।
. . . (ರೇ) ಖೆಯು ಕೊರಳ ತ್ರಿಸರದ ವಿ ।
ಸ್ತಾರದ ಕೇಯೂರ ಹಾರ ಪಿಂ . . . ।
. . . . ಸರದ ।
. . . ರ ಕಾರಣಾವತಾರನಾದ ಚಕ್ರಗದೆ ಚತುರ್ಭುಜ ॥

ವಿ.ವಿ.—

ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮ.

ಇದು ಹಾಡಿನಲ್ಲಿ ಬರೆದಿದೆ. ಪ್ರಾಯಿಕವಾಗಿ ಕರಿಗಿರಿ ಶ್ರೀನಿವಾಸದೇವರ ಸ್ತುತಿ ಇದರಲ್ಲಿ ಉಕ್ತವಾಗಿದೆ. ಕವಿ ವೆಂಕಟಶರ್ಮನೆಂದು ಗೊತ್ತಾಗುತ್ತದೆ. ಇವನು ಚಿಕದೇವರಾಜನ (೧೬೭೨—೧೭೦೪) ಆಶ್ರಿತನಾಗಿದ್ದಿರಬಹುದೆಂದು ಕೊನೆಯಲ್ಲಿರುವ ಹಾಡಿನಿಂದ ಊಹಿಸುತ್ತೇವೆ. ಈತನ ಹಾಡುಗಳು ಚೆನ್ನಾಗಿವೆ.

No. 1333. ಹಾಡುಗಳು-

HĀḌUGAḶU.

Substance, palm-leaf. Size, 17 $\frac{3}{16}$ × 1¼ inches. Pages, 4. Lines, 4-5 on a page. Extent, 28 granthas. Character, Kannada. Condition, injured. Appearance, old. Mode of writing, good.

Contains only three songs by an unknown writer.

Fol. 3*a* contains four stanzas in the praise of God Vighnēśvara and fol. 4*a* contains Gaṇitaviśaya. Foll. 3*b* and 4*b* are left blank.

Beginning :

॥ ರಾಗ ॥

ಪಲ್ಲವಿ.—

ಪತಿವ್ರತೆಯರೊಳಗೆ ನೀನಧಿಕಗುಣಮಣಿಯೆ ।
ಅತಿಶಯದಿ ನೀಲಮ್ಮ ಸತಿಶಿರೋಮಣಿಯೆ ।

ಚರಣಗಳು.—

ಉದಯಕಾಲದೊಳು ಹರಿಭಜನೆಯನು ಮಾಡಿ ।
ಮುದದಿ ತಿರುನಾಮ ಸೇವೆಯ ಮಾಳ್ಪರೂಢಿ ॥
ಒದಗಿ ಶ್ರೀ ವೈಷ್ಣವರಿಗನ್ನದಾನಗಳ ಮಾಡಿ ।
ಹೃದಯದೊಳು ಧ್ಯಾನಸಮರೂಢಿ ॥ (೧)

ಸತತ ಬಂಧುಗಳನೆ ಸಲಹುವ ನಿದಾನ ।
ಪತಿಭಕ್ತಿಯಲಿ ನೀವು ಪಾರ್ವತಿ ಸಮಾನ ॥
ಕ್ಷಿತಿಯೊಳಗೆ ನಂಬಿದರ ಸಲಹುವನಿದಾನ ।
ಅತಿಶಯದಿ ಪೊಗಳುವಡೆಯನುದಿನವು ಧ್ಯಾನ ॥ (೨)

ಭಾವಿಸಲು ಸಕಲಧರ್ಮಗಳ ಬಲ್ಲವಳು ।
ಯಾವಯೆಡೆ ಕರ್ಣನಿಗೆ ಮಿಗಿಲೆನಿಸುತಿಹಳು ॥
ಆವಗ (ಲು) ಶ್ರೀಹರಿಯ ಭಜನೆಗೈದಿಹಳು ।
ಠೀವಿಯಿಂ ಶ್ರೀಲಕ್ಷ್ಮೀದೇವಿಯಂತಿಹಳು ॥ (೩)

* * * *

ಆರಡಿಯು ಮಾನಿನಿಯುನತುಳ ಭುಜಪಾಣಿ ।
ಭೂರಿಭಾಗ್ಯದ ಶ್ರೇಣಿ ಭುಜಗವರವೇಣಿ ॥
ನೀರಜದಳೇಕ್ಷಣೆ ನಿತ್ಯಕಲ್ಯಾಣಿ ।
ಹರುಷದಿಂ ಪೃಥು ಶಟ್ರಪಟ್ಟದ ರಾಣಿ ॥ (೬)

End :

॥ ರಾಗ ॥

ಪಲ್ಲವಿ.—

ಮಕ್ಕಳೊಳು ಮಾಣಿಕವೆ ಚೊಕ್ಕ ಪ್ರತ್ಥಳಿಯು ।
ಚಿಕ್ಕವನು ಚೆಲುವಯ್ಯ ಚಿನ್ನದರಗಿಳಿಯು ॥

ಚರಣಗಳು.—

ಅರಳೆಲೆಯು ಮಾಗಾಯಿ ಹುಲಿಯುಗುರಿನಿಂದ ।
ಕೊರಳಬಂದಿಯು ವಾಕು ಉಡಿದಾರದಿಂದ ॥
ಮೆರೆವ ಸೂರ್ಯನಪ್ರೋಲ್ವ ವಂಟಿಗಳ ಚಂದ ।
ಥಳಥಳನೆ ಪೊಳೆವ್ರತಿಹ ಮೋಹನದ ಕಂದ ॥ (೧)

ಅಂಬೆಗಾಲಿಕ್ಕುತ್ತ ತುಂಬಿ ಮೊರೆಯುತ್ತ ।
ನಂಬಿಗೋಡೆಯ ಪಿಡಿದು ನಡೆಯುತ ಕಳಿಯುತ್ತ ।
ತಂಬಿಗೆಯ ನುರುಟಿ ಕೆಸರನು ಸಾರಿಸುತ್ತ ।
ಸಂಭ್ರಮದಿ ಮಾತೆಯನು ನೋಡಿ ನಸುನಗುತ ॥ (೨)

ಮಾತೆ ಚೆನ್ನಮ್ಮನುದರಾಬ್ಧಿ ಚಂದ್ರಮನು ।
ನೀತಿಯುತ ಜವನಯ್ಯ ನಾತ್ಮಸಂಭವನು ॥
ಖ್ಯಾತಿಯುತ ಚಲುವಯ್ಯ ಜನಿಸಿ ಸುಖವಿಹನು ।
ಪ್ರೀತಿಯಿಂ ಶ್ರೀಕೃಷ್ಣನೊಲಿದು ರಕ್ಷಿಪನು ॥ (೩)

ವಿ.ವಿ.—

ಇದರಲ್ಲಿ ಮೂರು ಹಾಡುಗಳಿವೆ. ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ. ಇದರೊಡನೆ (ವಿಘ್ನೇಶ್ವರ ಸ್ತುತಿ (ನಾಲ್ಕು ಸಂಸ್ಕೃತ ಶ್ಲೋಕಗಳು) ಯೂ ಗಣಿತಕ್ಕೆ ಸಂಬಂಧಪಟ್ಟ ವಿಷಯ ಮೂರು ಪಜ್ತಿ) ವೂ ಇದೆ. ಬರೆದವನಾರೆಂಬುದು ಇದರಿಂದ ಗೊತ್ತಾಗುವುದಿಲ್ಲ.

No. 1334. ಹಾಡುಗಳು.

HĀḌUGAḶU.

Substance, palm-leaf. Size, $10\frac{1}{16} \times 1\frac{3}{4}$ inches. Pages, 164. Lines, 5—6 on a page. Extent, 1,170 granthas. Character, Kannada. Condition, much injured. Appearance, old. Mode of writing, good.

Incomplete.

Songs written in praise of Siva Parvati, etc. The author is not known.

Beginning :

. . . . . ಯ ಶೋಕ ಜರೆ ಬಡ ।
ತನ ಪರಸೇವೆ ಯಾಚನೆ ಹಾನಿ ಹಳವು ।
ಮುನಿಸು ವಿಷಯ ರತಿ ವಿರಹ ಸಂ . . . . ಗಳು ।
ನಿನಗಾಗದಿಹ ಬುದ್ಧಿಗಲಿಯದೆ ॥ (೧)

ಹವಣಿಸಬಾರದ ಹಲವು ದುಃಖಂಗಳಾ .
ನವಿರತವನು . . . . . . ಗಿನ್ನು ॥
ಸವೆಯದಾನಂದ ವಹುದು ಶಂಭುಲಿಂಗದ ।
ಸುವಿಚಾರ ಭಜನೆ ಭಕ್ತಿಯೊಳೆ . . . ದೆ ॥ (೨)

॥ ರಾಗ ॥ ಶಂಕರಾಭರಣ ॥

ಪಲ್ಲವಿ.—

ನಿದ್ರೆ ಬಾರದಿದೆ ಯೆನ್ನ ಪರಿಭವ ದುಃಖಾಸ ।
. . . . ವಸಾಯಸವ ನೆನೆನೆನೆದು ॥

ಚರಣಗಳು.—

ಪಾಪಾಸುಗುಣದಿಂದೆ ಗಿಡುಮರ ಕ್ರಿಮಿಗಳ ।
ರೂಪಾಗಿ ಕೀಟಪ . . . . . . ಗಿ ॥
ಆಪಕ್ಷಿ ಕುಲವಾಗಿ ಮೃಗಜಾತಿಯಾಗಿ ಮೋ ।
ಲಾಪಶುರೂಪಾಗಿ ಬಹಬಾಧೆಗೇಳ ॥ (೧)

ಭೂತಪಂಚ . . . . ಗಿ ವ್ರೋಷಧಿಯಾಗಿ ।
ಧಾತುಸಪ್ತಕದ ರೂಪಾಗಿ ತಮ್ಮೊಳು ॥
ಮಾತೆಯ ಸೂತಕ ರುಧಿರ ರೂಪಾಗಿ ।
. . . . . ಗುವಚ್ಚರಿಯನುಕಂಡು ॥ (೨)

ಬಾಲಕತರುಣ ಜರಾಜೀರ್ಣ ರೂಪಾಗಿ ।
ಮೇಲೆ ನರಕಿಯಾಗಿ . . . ದೊಳು ॥
ತಾಳಲಾರೆನು ತನುವನು ಶಂಭುಲಿಂಗವೆ ।
ಪಾಲಿಸೆಂದೆಱಗಿ ಬಿನ್ನವಿಪ . . . ॥ (೩)

॥ ರಾಗ ॥ ನಾದನಾಮಕ್ರಿಯ ॥

ಪಲ್ಲವಿ.

ಆರು ತರಹರಿಸಬಹುದದಿಗಡಿಗೆ ।
ಶೋ . . . ರ ಸಂಸಾರದನುತಾಪ ಸಂತತಿಯ ॥

ರಣಗಳು.—

ಮಾತೆಯುದರದೊಳು ಮೊಗವಿಡದ ಮುನ್ನಸುವಳ
. . . . . . ಯಾವನು ಸಿಡಿಲ ಮಡದ ॥
ಘಾತಿವಿಗೆ ಪೊಡೆದು ಕೆಡಪ್ಪವ ಸೂತಿವಾಯುವನು ।

* * * *

॥ ರಾಗ ॥ ಧನ್ಯಾಸಿ ॥

ಪಲ್ಲವಿ.—

ಪರಮೇಶ್ವರಿಯು ಪುಣ್ಯನಾಮವನು ಪಗಲಿರುಳು ।
ಸರಸಾನುರಾಗದಿಂದೋದಿ ಕೇಳದವರ್ಗೆ ॥
ದುರಿತ ಕಂಟಕವಳಿದು ಕೈಸಾರುತಿಹವಮಳ ।
ತರಭೋಗ ಮೋಕ್ಷಂಗಳು ॥

ಚರಣಗಳು.—

ಹ್ರೀಂ ಕಾರಿ ವಾಣಿ ಕಲ್ಯಾಣಿ ರುದ್ರಾಣಿ ರಮೆ ।
ಓಂಕಾರರೂಪಿಣಿ ಗಣಾನಿ ಗಾನ ಪ್ರೀತೆ ॥
. ಂಕಲಾವಮಾಲಿನಿ ಮಹಮಾಯೆ ಮಾತಂಗಿ ।
ಕ್ಲೀಂ ಕಲೇ ವರೇ ವರೇಣ್ಯೆ ॥
ಸೌಂಕರಿಸದನೆ ಶರ್ವಾಣಿ ಶಾರದೆ ಸತ್ಯೆ । (?)
ಕ್ರೋಂಕವಚ ಮುಖ್ಯೆ ಮಂತ್ರಾಧಿದೇವತೆ ದೇವಿ ।
ಶ್ರೀಂ ಶಿಲಾಶಾದಿ (?) ವೆದ್ಯಾಂಗಿ ಮಾತೃಕೆ ಮಾನ್ಯೆ ।
ಶಾಂಕರಿ ಶಾನಿಯೆಂದು ॥ (೧)

(೨ ನೆಯ ಓಲೆ.)

॥ ರಾಗ ॥ ಲಲಿತೆ ॥

ಪಲ್ಲವಿ.—

ಸುರನತ ಚರಣೆಗೆ ಸರಸಾಭರಣೆಗೆ ।
ವರಗುಣನಿಕರೆಗೆ ವಿತರಣ ಸುಕರೆಗೆ ।
ನಿರುಪಮ ಚರಿತೆಗೆ ನಿಜಸುಖ ಭರಿತೆಗೆ ।
ಪರತರ ಪಾರ್ವತಿಗೆ ಜಯಜಯ ಮಂಗಳ ॥

ಚರಣಗಳು.—

ಗೌರಿಗೆ ಗಂಭೀರೆಗೆ ಶೃಂಗಾರೆಗೆ ।
ಸಾರಸುಗಂಧಿಗೆ ಶಿವತ್ರನು ಬಂಧಿಗೆ ।
ವಾರಿಜವದನೆಗೆ ವಿದ್ಯಾಸದನೆಗೆ ।
ಧೀರೆಗೆ ಕಾರುಣ್ಯ ॥
ಪಾರಾವಾರೆಗೆ ಪುಷ್ಯಾಕಾರೆಗೆ ।
ಹಾರದುರೋಜೆಗೆ ತೀರದ ಪೂಜೆಗೆ ।
ಕಾರಣ ರೂಪೆಗೆ ಕೀರ್ತಿಕಲಾಪೆಗೆ ।
ಶಾರದೆ ಸೇವಿತೆಗೆ ಜಯ ಜಯ ಮಂಗಳ ॥ (೧)

ಜಗದಾಧಾರೆಗೆ ಜನ್ಮವಿದೂರೆಗೆ ।
ನಗಜಾತೆಗೆ ಗುಹ ಜನನಿಗೆ ಮನ್ಮಾತೆಗೆ ॥
ನಿಗಮಾಗಮಪಾಣಿಗೆ ಕಲ್ಯಾಣಿಗೆ ।
ಸುಗುಣಾಗುಣ ಮಯಿಗೆ ॥

ಅಗಣಿತ ನಾಮೆಗೆ ಸೊಗಸಿನ ಸೀಮೆಗೆ ।
ಮೃಗಧರ ಜೂಟೆಗ ರತ್ನಕಿರೀಟೆಗೆ ।
ಪೊಗಳುವ ಮುನಿ ಸಂತಾನೆಗೆ ಮಾನೆಗೆ ।
ಬಗೆಗಳ ಪ್ರೊಡೆದುಮೆಗೆ ಜಯ ಜಯ ಮಂಗಳ ॥ (೧)

ದುರಿತ ವಿರೋಧಿಗೆ ಸಲೆನಿರುಪಾಧಿಗೆ ।
ವಿರಹಿತಮಾಯೆಗೆ ಶರಣಸಹಾಯೆಗೆ ।
ಪರಶಕ್ತಿಗೆ ಪಾವನ ಸದ್ಭಕ್ತಿಗೆ ।
ಸಿರಿಗಧಿದೇವತೆಗೆ ॥
ಕರಿಮುಖಲೀಲಾ ಲೋಲೆಗೆ ಬಾಲೆಗೆ ।
ಕರಣವಿಶುದ್ಧಿಗೆ ಕಾಮಿತ ಸಿದ್ಧಿಗೆ । (?)
ಗುರುಶಂಭುಲಿಂಗದ ಜೀವೆಗೆ ಭಾವೆಗೆ ।
ಸುರುಚಿರ ಶಾಂಭವಿಗೆ । ಜಯ ಜಯ ಮಂಗಳ ॥ (೨)

(೫ನೆಯ ಓಲೆ.)

End :

॥ ರಾಗ ॥ ರಾಮಕ್ರಿಯೆ ॥

ಪಲ್ಲವಿ.—

ನೋಡಿ ಸಲಹಯ್ಯಾ ನಿನ್ನಡಿವಿಡಿದೆ ನಭಪ ನೆಟಿತೆ ।
ಕಾಡುತಿಹ ಪ್ರೂಗೋಲನ ಬಿಡದೆ ।
ಹೇಡಿಗೊಳಿಸುವ ಕಾಲನ ಬಲುಹಿ ।
ಗೀಡುಮಾಡದೆ ಬಾಲನ ಯೆನ್ನ ॥

ಚರಣಗಳು.—

ಎಳೆವೆರೆಯದಬಲೆ ಕಂಗೊಳಿಸಲಲ್ಲು . . ದೊದೆಕೊಲೆ ।
ಗೆಳಸಿ ಬೇಗದೊಳು ಬಂದು । ಮುಳಿದು ಬೊಬ್ಬಿಡುತಂದು ॥
ಶರಧನುವಿಡಿದು ನಿಂದು । ತಳುವದೆ ಸುತಿವನೆವು . . . ।
ವರಿದೀವನ ಕದನಾ ನೀನುಳುಹಿದನು ಪಂಚವದನ ಎನ್ನ ॥ (೧)

ತನುವ ನಂಬಿಸಲು ರೊ . . . . . . ಯ ಬಿಸಿಲು ।
ವನು ಮುನ್ನ . . . . ಕರುಗಳು ನೋಡೆ ॥
ಮುನಿದು ಪಾಶ . . . . . . ।
. . . .
. . . . ದ್ಗುರು ಶಂಭುಲಿಂಗ . . .
. . . . ಪ್ರಚಂಡ ।
ವಿನುತ ಹರಿ . . . . . . ॥ (೨)

॥ ರಾಗ ॥ ಭೈರವಿ ॥

ಪಲ್ಲವಿ.—

ಎನ್ನನೀನೊಲವಿಂ . . . . . ಪಾರ್ವತೀಶ ॥
ಸನ್ನುತಾಗಮ ನಿಗಮ ನಿರ್ಜೀವ ಪಂಚಪಾಶ ॥

ಚರಣಗಳು.—

ಸುದತಿಯರ ಸವಿನೋಟವೆಂಬಲರಂಬು ಬಂದು ।
ಯೆದೆಯ ನೀಂ ವ್ಯಗಾಣಲಂಗಜ ತಾಪವೆಂದು ॥
ಮುದನುಡುಗಿಸುತಿದೆ ವಿವೇಕವಿಹೀನನೆಂದು ।
ಹದನನಱಿಯೆನಿದಕೆ ನಿಮ್ಮಡಿವಿಡಿದೆನಿಂದು ॥ (೧)

ಭವ ಮಹಾವನದೊಳು . . ಮಾರ್ಗದ ಹೊಲಬುಗೆಟ್ಟು ।
ಹವಣಿಸಲು ಬಾರದ ಕಲುಷ ಕಂಟಕವ ನೆಟ್ಟು ।
ಜವನದೂತರದಾಳಿಯಿಂ . . . . . ।

ವಿ.ವಿ.—

ಅಸಮಗ್ರ. ಅತಿ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಪ್ರಾಯಕವಾಗಿ ಓಲೆಗಳ ಇದರಲ್ಲಿ ಜೀರ್ಣವಾಗಿವೆ. ನಡುವೆ ಅಲ್ಲಲ್ಲಿ ಕೆಲವು ಓಲೆಗಳು ಹೋಗಿವೆ.

ಇದು ಹಾಡಿನಲ್ಲಿ ಬರೆದಿದೆ. ದೇವತಾಸ್ತುತಿರೂಪವಾಗಿದೆ. ಶಿವ, ಪಾರ್ವತಿ ಮುಂತಾದ ದೇವರುಗಳ ಕೀರ್ತನೆಗಳು ಇದರಲ್ಲಿ ಉಕ್ತವಾಗಿವೆ. ಹಾಡುಗಳು ಅನೇಕ ರಾಗಗಳಲ್ಲಿ ಬರೆದವುಗಳಾಗಿವೆ. ಕೆಲವು ಷಟ್ಪದಿಗಳೂ ಬರೆದಿವೆ. ಕವಿಯಾರೆಂಬುದು ಗೊತ್ತಿಲ್ಲ.

No. 1335. ವಾಸ್ತುಶಿಲ್ಪ.

VĀSTUŚILPA.

Substance, palm-leaf. Size, 12½ × 1⅜ inches. Pages, 36. Lines, 5 on a page. Extent, 210 granthas. Character, Kannada. Condition, much injured. Appearance, old. Mode of writing, good.

Incomplete.

Deals with astrological points regarding the construction of houses. This work also contains some Sanskrit stanzas with their meaning in Kannada and a few Kannada verses in vṛttas and Kanda metre dealing with the same subject quoted from different places.

Beginning :

ವಾಸ್ತುಲಕ್ಷಣ.—

ಸೋಮವಾರ, ಶುಕ್ರವಾರ ಮನೆಯು ಕಟ್ಟಿ ಸುಖ ॥ ಬುಧವಾರ, ಗುರುವಾರ ಮನೆಯು ಕಟ್ಟಿ ಧನಲಾಭ. ಆದಿತ್ಯವಾರ ಮಂಗಳವಾರ ಮನೆಯು ಕಟ್ಟಿ ಕಷ್ಟ. ಶನಿವಾರ ಮನೆಯು ಕಟ್ಟಿ ಕಳವು.

* * * *

ಗಾರ್ಗ್ಯಮತ.—

ಶ್ಲೋ ॥ ಮಾರ್ತಾಂಡಾರೊಢರಾಶ್ಯಾಂ ವಿನಿಹಿತಚರಣಸ್ತ್ವದನ್ವಸ್ತಮೂರ್ಧಾ ॥
ವಾಮೇ ಪಾರ್ಶ್ವೇಚ ಯಾನೋ ಭ್ರಮಸದಿಶರುಪಾಪೂರುಷೋ ವಾಸ್ತುರೂಪಃ ॥
ಪಾದೇಯದ್ವರ್ಥನಾಶಃ ಶಿರಸಿಜ ಮರಣಂ ತಸ್ಯ ಪೃಷ್ಠೇ ವಿಪತ್ತಾ ।
ವಕ್ಷಃಸೌಖ್ಯಂಚನಾಶಂ ಶುಭಫಲ ಮುದರೇ ಸ್ತಂಭಮಾದ್ಯಾಮ್ನವದ್ಯಾ ॥

ಟೀಕು ॥ ಮಾರ್ತಾಂಡಾರೂಢ ರಾಶ್ಯಾಂ ವಿನಿಹಿತ ಚರಣಃ = ಸೂರ್ಯ ನಿದ್ದ ರಾಶಿಯಲ್ಲಿ ವಾಸ್ತುವಿನ ಚರಣವಿಹುದು. ಸ್ತನ್ಯೇದನ್ಯಸ್ತ್ಯಮೂರ್ಧ್ನಾ = ಆರಾಶಿಗೆ ಏಳನೆಯ ರಾಶಿಯಲ್ಲಿ ವಾಸ್ತುವಿನ ಶಿರವಿಹುದು.

(ಓಲೆ ೫.)

* * * *

ಶ್ಲೋ ೧ ॥ ವಾಸ್ತು ಗೇಹಂ ವಿಭಜ್ಯಾದೌ ಅಷ್ಟಾವಿಂಶತಿಸಂಖ್ಯಯಾ ॥
ತ್ಯಜೇದೂರ್ಧ್ವಂ ದಶಭಾಗಂ ಚ ಅಧಸಪ್ತದಶಸ್ತಥಾ ॥ (?)

(ಓಲೆ ೬.)

* * * *

ಕಂ ॥ ಧನು ಮೀನ ಮಿಥುನ ಕನ್ನೆಯೊ ।
ಳನವರತಂ ಚೈತ್ರಮಾಸದೊಳ್ ಮಾಡೆ ಮನೆಯಂ ॥ (?)
ಅನಲಭಯಂ ಚೋರಭಯಂ ।
ಜನಪತಿ ಭಯಮೆಂದು ಪೇಳ್ದ ಗಾರ್ಗ್ಯಮುನೀಂದ್ರಂ ॥

* * * *

End :

ಮೀನದಲ್ಲಿ ಮಂಗಳ, ಕರ್ಕಾಟಕದಲ್ಲಿ ಗುರು, ಸಿಂಹದಲ್ಲಿ . . .

ವಿ.ವಿ.—

ಅಸಮಗ್ರ. ೧೪ ನೆಯ ಓಲೆಯು ಮುರಿದಿದೆ. ಸಂಸ್ಕೃತ ವೃತ್ತಗಳೂ, ಶ್ಲೋಕಗಳೂ, ಕನ್ನಡ ಕಂದ ಪದ್ಯಗಳೂ ಈ ಗ್ರಂಥದ ಮೂಲವಾಗಿದೆ. ವ್ಯಾಖ್ಯಾನವು ಕನ್ನಡ ಭಾಷೆಯಲ್ಲಿದೆ. ಗಾರ್ಗ್ಯಮುನಿಯ ಮತವನ್ನು ಕೆಲವೆಡೆ ಹೇಳಿದೆ. ಕರ್ತೃವಿನ ವಿಷಯವೇನೂ ತಿಳಿದುಬರುವುದಿಲ್ಲ.

ಪಾಕಶಾಸ್ತ್ರ.

No. 1336. ಸೂಪಶಾಸ್ತ್ರ.

SŪPAŚĀSTRA (CULINARY).

Substance, palm-leaf. Size, 12¼ × 1¼ inches. Pages, 176. Lines, 4 on a page. Extent, 890 granthas. Character, Kannada. Condition, much injured. Appearance, old. Mode of writing, good.

Complete.

A treatise on cookery. This describes the method of preparing bread, dishes, sweets, condiments cakes, soups and rice dressed with various condiments, etc., each of different kinds. For other particulars see extracts given below.

Foll. 8*b*, 9, 10, 11 and 92*b* are left blank.

Beginning :

ಸೂಪಶಾಸ್ತ್ರ.—

ಸೊಜ್ಜಿಗೆ ಮಾಡುವ ಕ್ರಮ.—ಹೈನ ಗೋಧಿಯಂ ಮೂಱು ಬಿಸಿಲಲೊಣಗಿಸಿ ಕಲ್ಲು ಮಣ್ಣು ಚಿಕಂ ಕಳೆದು ನಿರ್ಮಲೋದಕದಲ್ಲಿ ಕಲಸಿ ಹೊಟ್ಟು ಬಿಡುವಂತೆ ಕುಟ್ಟಿ ಹೊಟ್ಟಂ ಕೇಱಿ ಕಳೆದು ಕೆಂಪಿನ ಪಿಟ್ಟು ಬಿಳಿಯ ಪಿಟ್ಟು ಬಿಡುವ ಪರ್ಯಂತ ಕುಟ್ಟಿ ಆ ಪಿಟ್ಟಿಯಂ ಕಳೆದು ಆಗಲಾದ ಸೊಜ್ಜಿಗೆಯಂ ಹಾಕಿ ಕುಟ್ಟುತ್ತಿರಲು ಸಾವೆ ಅಕ್ಕಿಯ ಪ್ರಮಾಣದ ಮೇರೆಯಲ್ಲಿ ತೆಗೆದರೆ ಸಣ್ಣ ಸೊಜ್ಜಿಗೆಯೆಂಬುದು. ಬರಗಿನಕ್ಕಿಯ ಪ್ರಮಾಣದಲ್ಲಿ ತೆಗೆಯೆ ಮಧ್ಯಸೊಜ್ಜಿಗೆ ಯೆನಿಸುವುದು. ಅದಕ್ಕಿಂತಲೂ ಗಾತ್ರವಾಗಿ ತೆಗೆಯೆ ಮಧ್ಯಸೊಜ್ಜಿಗೆ ಯೆನಿಸುವುದು. ಅವಕ್ಕಿಂತಲೂ ಗಾತ್ರವಾಗಿ ತೆಗೆಯೆ ದೊಡ್ಡ ಸೊಜ್ಜಿಗೆಯೆನಿಸುವುದು. ಮಿಕ್ಕುದು ಗೋಧಿಯ ಗಟ್ಟಿಗೆಯೆನಿಸುವುದು. ಈ ಪ್ರಕಾರದಿಂದ ಮಾಡಲು ಒಂದು ಖಂಡುಗ ಗೋಧಿಗೆ ಮೂರು ಪ್ರಕಾರದ ಸೊಜ್ಜಿಗೆ ಅಯ್ದು ಕೊಳಗವಾಗುವುದು. ಎರಡು ಬಳ್ಳ ಗೋಧಿ ಗಟ್ಟಿಗೆಯಾಗುವುದು.

ಅತಿರೊಟ್ಟಿಯ ಮಾಡುವ ಕ್ರಮ.—ಮೊದಲು ಹೇಳಿದ ನಡುತರದ ಸೊಜ್ಜಿಗೆಯಲ್ಲಿ ಒಂದು ಪಡಿ ಸೊಜ್ಜಿಗೆಯಂ ನೀರಿನಿಂದ ತೊಳಸಿ ಬೆಳ್ಳಹಾಲ ಕಿವುಚಿ, ಮರ್ದಿಸಿ ಮೊಂದು ಬೆರಳ ಮಂದ ಚೋಟಗಲದಿಂ ರೊಟ್ಟಿಯಂ ಮಾಡಿ ಕಾವಲಿಯ ಮೇಲೆ ಇಮ್ಮೆಯ್ಯಂ ಪಾಕವಂ ಮಾಡಿ ಮತ್ತಂ ತರಿಗೆಂಡದ ಮೇಲೆ ಇಮ್ಮೆಯ್ಯಂ ಕಮ್ಮನಪ್ಪಂತೆ ಪಾಕವಂ ಮಾಡಿ ಚಟ್ಟಿಯ ಮೇಲೆ ಉದುರಿಸಿಕೊಂಡು ಕರ್ಪೂರ ಮಿಶ್ರಿತಂ ಮಾಡಿ ತಾಳಗೆಯ ಹೂವ ಪರಿಮಳವ ಕಟ್ಟಿ ಅಲ್ಪ ತುಪ್ಪದೊಳೊಡಗಲಸೆ ಕಿವುಚು ರೊಟ್ಟಿಯೆನಿಸುವುದು.

*　　*　　*　　*　　*

ಸುಖಿಯ ಮಾಡುವ ಕ್ರಮ.—ಸೊಜ್ಜಿಗೆಯಂ ಹಂಚಿಂ ಬಿಸಿಮಾಡಿ ಮುಗುಳುವದದ ಲುಕ್ಕರಿಸಿ ಸಕ್ಕರೆಯಾಗಲಿ, ಬಿಳಿಯ ಬೆಲ್ಲವಾಗಲಿ ಹಾಕಿ ತೊಳಸಿ ಇಳುಹಿ, ತೆಂಗಿನಕಾಯ ತುರುವೆಯಂ ಕಲಸಿ ನಿಂಬೆ ಹಣ್ಣಿನ ಪ್ರಮಾಣಿಂ ಉರುಟುಮಾಡಿ ಬೆಣತಿಗೆ ಅಕ್ಕಿಯ ನಿಡಿದು ಕೊಚ್ಚಿದ ಸಣ್ಣ ಹಿಟ್ಟಂ ಹೊರಳಿಸಿ ಕಾದೆಣ್ಣೆ ತುಪ್ಪದಿಂ ಪಾಕವಂ ಮಾಡೆ ಸುಖಿಯೆನಹುದು. ತೆಂಗಿನಕಾಯ ತುರುವೆಯಂ ಸಕ್ಕರೆಯಂ ಕಲಸಿ ಆಪ್ರಮಾಣಿಂ ಅಕ್ಕಿಯ ಹಿಟ್ಟಂ ಹೊರಳಿಸಿ ಹಾಕಲು ತೆಂಗಿನಕಾಯ ಸುಖಿಯಹುದು. (ಓಲೆ ೨೧)

*　　*　　*　　*　　*

ಈ ಪರಿ ಮತ್ತೊಂದು ಬೆಸಳಗೆಗೆ ಯೆಣ್ಣೆಯ ಕಾಸಿ ಆಱಿಸಿ ಮೋಗರದೊಳಗೆಯೆರದು, ಅಲ್ಲ, ಉಳ್ಳಿ, ಯೇಲಕ್ಕಿ, ಮೆಣಸಿನ ಬೇಳೆಯ ನಿಕ್ಕಿ ಕಲಸುವುದು. ಸಕಲ ಶಾಸ್ತ್ರದಲ್ಲಿ ಜಿಹ್ವಾಮೃತವೆಂಬ ಶಾಸ್ತ್ರವನೋಡಿ ಅದು ಸಂಸ್ಕೃತವಾದ ಕಾರಣ ಸಾರೋದ್ಧಾರವಾಗಿ ಅಚ್ಚಗನ್ನಡದಲ್ಲಿ ಕಲಸೋಗರವ ಹೇಳಿದೆನು.

ಹಾಲಕಾಸುವ ಕ್ರಮ.—ಹಾಲನರ್ಧವಾಗಿ ಕಾಸುವುದು ಪಾನಕ್ಕೆ ಯೋಗ್ಯ. ಮೂಱು ಒಂದಾದುದು ಲೇಹ್ಯಕ್ಕೆ ಯೋಗ್ಯ. ಆಱು ಮೊಂದಾದುದು ಘುಟಿಕೆಯಾಗಿ ಮೊಲಾಹ. ಎಂಟು ಒಂದಾದುದು ಸಕ್ಕರೆ. ಇದು ಹಾಲಕಾಸುವ ಕ್ರಮ. (ಓಲೆ ೭೩)

*　　*　　*　　*　　*

End:

ಸುರಶಾಲ್ಯೋದನ ಮಾಜ್ಯ ಮಂಜುಳರಸಂ ಸಂಭಾರ ಶಾಕೌಘ ಬಂ-।
ಧುರ ಭಕ್ಷ್ಯಾಳಿ ರಸಾನ್ನ ಪಕ್ವ ಫಲ ಸೌರಭ್ಯಾಂಬುಚಿತ್ರಾನ್ನ ಭಾ ॥
ಸುರದುಗ್ಧಂ ಪರಮಾನ್ನಮಂಬುಲಿ ಮೊಸರ್ ತಕ್ರಾನ್ನಸೂಪಾದಿಕ-।
ಚ್ಚರಿ ಚೆನ್ನುಪ್ಪಿನಕಾಯಿ ಹಪ್ಪಳಗಳಂ ಶಾಸ್ತ್ರೋಕ್ತಿಯಿಂ ಬಣ್ಣಿಪೆಂ ॥ (೭)

ಬಿಳಿದಹ ಹಂಬಿನುದ್ದುಗಳ ಬೇಳೆಯು ತೊಕ್ಕಿನ ಕೆಂಪಿನುಳ್ಳಿಯಿ ।
ಬ್ಬಳವರೆ ವಾಸವಲ್ಲರುಚಿ ಜೀರಿಗೆ ಮೆಂತೆಯವಾ ಪ್ರಮಾಣಾಗುಂ ।
ಬಳದೊಳದುದ್ದು ಮಾಸಪೆರಡಿಂಗುರಸಂ ಬಿಳಿಯುಳ್ಳಿಯೊಮ್ಮನಂ ।
ಗಳರವೆ ಗುಂಡದಾಡಿಸಿ ಕುಂಬಳ ಸಂಡಗೆಯುಪ್ಪುದೊಪ್ಪದಿಂ ॥ (೮)

ಶ್ರೀಮಾನ್ ವೀರರಾಜಪ್ರೊಡೆಯ:ರಯ್ಯನವರಿಗೆ ಆಯುರಾರೋಗ್ಯೈಶ್ವರ್ಯ ಅಷ್ಟಪುತ್ರರಾಗಲಿಯೆಂದು ಆಲೂರ ವೆಂಕಪ್ಪನು ಬರೆದ ಸೂಪಶಾಸ್ತ್ರಕ್ಕೆ ಮಂಗಳಮಹಾ ॥

Colophon :

ನರಸಿಂಹಪುರದ ಗುಂಜಾ ।
ನರಸಿಂಹನು ವೀರರಾಜನೃಪ ಕುಲಮಣಿಗಂ ॥
ವರಪುತ್ರ ಪೌತ್ರರೇಳ್ಗೆಯು ।
ಭರದಿಂದೈಶ್ವರ್ಯ (ವಿತ್ತ) ಸಲಹಲಿ ನಿರಂತರಂ ॥

ವಿ.ಪಿ.—

ಸಮಗ್ರ. ಶಿಥಿಲವಾದ ಪ್ರತಿ. ಅಚ್ಚಗನ್ನಡದಲ್ಲಿದೆ.

ಇದು ಪಾಕಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ. ಇದರಲ್ಲಿ ರೊಟ್ಟಿ, ಮಂಡಗೆ, ಹೂರಿಗೆ, ಪೇಣಿ, ಎರೆಯಪ್ಪ, ವಡೆ, ಸುಖಿ, ಚಕ್ಕುಲಿ, ಅಡ್ಡುಗೆ, ಅಲುಗು, ಕಡುಬು, ರಸಾಯನ, ಸಂಡಗೆ, ಬಳಕ, ಹಪ್ಪಳ, ಸಂಭಾರ, ಅಮೃತ ಬಳ್ಳಿ, ಅಮೃತ ಖಂಡ, ಇಡ್ಡಲಿಗೆ, ಕಲಸು ಮೇಲೋಗರ, ಹಿರಿಯ ಕಂದುರಿಗೆ, ಚಿತ್ರಾನ್ನ, ಕಲಸನ್ನ, ಶುದ್ಧೋದನ, ನವನೀತೋದನ, ಅಂಬುವಿರಹಿತೋದನ, ಉಳ್ಳಿಯ ಪಾಯಸ, ದುಗ್ಧಪಾನಕ, ತುಪ್ಪದ ಪಾಯಸ, ಮಜ್ಜಿಗೆಗೊಳಕ, ತಕ್ರೋದನ ಇವೇ ಮೊದಲಾದ ಭಕ್ಷ್ಯಭೋಜ್ಯಗಳನ್ನು ತಯಾರಿಸುವ ವಿಧಾನವು ಅವುಗಳ ಪ್ರಭೇದಗಳೊಂದಿಗೆ ವರ್ಣಿತವಾಗಿದೆ.

ಕವಿಯು ಯಾರೆಂಬುದು ತಿಳಿದುಬರುವುದಿಲ್ಲ. ಒಂದೆಡೆಯಲ್ಲಿ "ಕಾಶ್ಮೀರದ ಮಲ್ಲಿಕಾರ್ಜುನ ಪದಾಬ್ಜಂ ಮಾಡುಗಿಷ್ಟಾರ್ಥಮಂ" ಎಂದು ಬರೆದಿದೆ. ಮೇಲೆ ಕಾಣಿಸಿದ ಗ್ರಂಥಾಂತ್ಯದಲ್ಲಿರುವ ವಾಕ್ಯವನ್ನು ಪರಿಶೀಲಿಸಿದರೆ ಆಲೂರ ವೆಂಕಪ್ಪನೆಂಬವನು ಗ್ರಂಥಕರ್ತನೋ ಅಥವಾ ಪ್ರತಿ ಮಾಡಿದವನೋ ಎಂಬುದು ಸ್ಪಷ್ಟವಾಗುವುದಿಲ್ಲ. ಅವನು ಮೈಸೂರಿನ ವೀರರಾಜ ಅರಸರ ಕಾಲದಲ್ಲಿ ಇದ್ದನೆಂದು ತಿಳಿದುಬರುತ್ತದೆ.

No. 1337. ಸೂಪಶಾಸ್ತ್ರ.

SŪPAŚĀSTRA.

Substance, paper. Size, $10\frac{7}{16} \times 9\frac{7}{16}$ inches. Pages, 74. Lines, 20 on page. Extent, 890 granthas. Character, Kannada. Condition, good. Appearance, new. Mode of writing, good.

Restored in 1926–27 from the Manuscript described above.

ವಿ. ವಿ.—

ಸಮಗ್ರ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯಾಗಿದೆ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ.

No. 1338. ಸೂಪಶಾಸ್ತ್ರ.

SŪPAŚĀSTRA.

Substance, palm-leaf. Size, $16\frac{3}{8} \times 1\frac{1}{8}$ inches. Pages, 70. Lines, 4—5 on a page. Extent, 870 granthas. Character, Kannada. Condition, slightly injured. Appearance, old. Mode of writing, [illegible].

Incomplete.

Similar to the work described under No. 1336 *ante*.

Beginning :

ಕಂದ ॥ ನೆಱೆಯೊರಸುಗೆ ಕಾವಲಿಯಂ ।
ಕಿಱು ಕಸ್ಸಲೆಯ ಬೇರೊಳಕ್ಕಿ ಕೊಳ್ವುಗುಳಯೊಲೆಯೊಳ್ ॥
ಬಱುವಾಲಂ ಕಾವಲಿಯೊಳ್ ।
. . . . . ನಿಪ್ಪಪಾಲ್ಗೆಗುಕ್ಕಂ ॥ (೧)

ಚಂ ॥ ಮಱುವೆಯ ಬೇಱನಿಕ್ಕಿ ತಱುಹೆ . . ಯು ದುಗ್ಧಮನರ್ಧಮಪ್ಪಿನಂ ।
ಮಱುಗಿಸಿ ಬಂಧಮಾಗಿ ಘೃತಮಂ ಬೆರಸಿಟ್ಟು ಮತ್ತದಂ । (?)
ಪೆಱವಱತೊಳೀಂ ತ್ರಿಜಾತಕದೊಳೊಂದಿರೆ ಪೇದಿಸಿ ಕಮ್ಮಿತಾಗಿ ಪಾಂ ।
ಗಱಿದಮೃತೋಪಮಾನ ಮಿದು ತಾನೆನೆ ಮಾಡುಗೆ ಪಾಲೊಳುಂಡೆಯುಂ ॥ (೨)

*   *   *   *   *

ಉ ॥ ಮಾ ॥ ಕಾಸಿದ ಪಾಲೊಳಕ್ಕಿ ಮೊಸರಂ ನೆಱೆ ಪೊಱತ್ತಿಸವಂತು ಮತ್ತೆಯುಂ ।
ಕಾಸಿ ಘೃತಾನ್ವಿತಂ ಕಳವ ಚೂರ್ಣಹನಿಕ್ಕಿ ಬಳಕ್ಕೆ ಸೀರೆಯೊಳ್ ।
ಮಾಸರಮಾಗೆ ಸೇವಗೆಯನೊತ್ತಿ ಸಿತೋದಕದಿಂದೆ ಮತ್ತೆ ಸಂ ।
ವಾಸಿಸಿ ಮಾಱಿಕ್ಕಿ ಲಡ್ಡುಗೆಯ ನೀ ತೆಱದಿಂ ಜಯಬಂಧುನಂದನಾ ॥

*   *   *   *   *

ಕಂದ ॥ ಅರನೇಱಿಲ ಪಣ್ಗಳ ನಿ ।
ಕ್ಷೀರಸದೊಳಂಬಾಗಿ ತೊಡೆದು ಘರ್ಮದೊಳಡುಗ ॥
ಚ್ಚರಿಯೆನೆ ತಕ್ಷಣದಿಂದವ ।
ಱರಸಂ ದ್ರವಿಯಿಸುಗು ಮಾವಗಂ ಬುಧ ಬಂಧೂ ॥ (ಓಲೆ ೨)

*   *   *   *   *

ಪದನಱಿದಾರ್ದ್ರಕಂ ಮೆಣಸು ಜೀರಿಗೆ ಶರ್ಕರೆ ಶುಂಠಿ ಮಾತುಳುಂ ।
ಗದ ಪುಳಿಯೆಂಬಿವಂ ಮೊಸರೊಳಿಕ್ಕಿಸಿ ಕೊಂಬರದಿಂದೆ ಗಾಳಿಸಿ ॥
ಟ್ಟದಱಿತೊಳಗಿಂದುಕೇಸರ ಲವಂಗದಳಂಗಳನಿಕ್ಕದಂ ಬಳಿ ।
ಕ್ಕುದದಿ ಗಡಂಗಳಂ ನೆಱೆತಿಯೆದೂವಿಸೆ ಮಜ್ಜಿಗೆಯುಕ್ಕು ಮುತ್ತ್ರಮಂ ॥
ತುಪ್ಪಮಂ ಕಾಸುವಾಗ ಹತ್ತಿಯ ಎಲೆಯಂ ಹಾಕೆ ಕಾಸೆ ಅದುರು ತುಪ್ಪಮಕ್ಕುಂ.

End :

ಉಬರಿಸಿದ ವೀರ ಪಲಸಿನಕಾಯ ಮುಳ್ಳುಱಿದು ಉಪ್ಪು, ಹುಳಿ, ... ವು ಕೊತ್ತುಂಬರಿಯ ರಸದಿಂ ಹೊರಳಿಸಿ ಕವೆಗೋಲಲಿ ಕಟ್ಟಿ ಕೆಂಡದ ಮೇಲೆ ಯಿೊ ದ್ರವ ಮಿಂಗುವ ಹಾಗೆ ಎರೆದೆರೆದು ಬೇಯಿಸಿ ಕಾಸೂದು-(ಕಾಯಿಸುವುದು). ಬದನೆಕಾಯ ಬಟ್ಟಕವಾಗಿ ಮಾಡಿ ಆ ಕಾಯ-ಮಾ . . ತ್ತುಂಬರಿ ಕರಿಬೇವು ಜೀರಗೆ ಹುಳಿಯ ಹಿಂಡಿ ತುಪ್ಪವ ನಿಱಿದು ಆ ಕಾಸಿದ ಬಟ್ಟಕವನು ಆ ಬೇಯಿಸಿದ ವೀರ ಪಲಸಿನ ಕಾಯ ಮೇಲೆತ್ತಿ ಕಾರವ ಮಾಡಿ . . ದ ಸಣ್ಣನಾಗಿ ಅಱಿದು . . . ತೊಳಸಿ ಬಳಿದುದ ತೆಗೆದು ಕವೆಗೋಲಲ್ಲಿ ಕೆಂಡದ ಮೇಲೆ ಕಾಸಿ ಮೆಣಸಿನ ಚೂರ್ಣವ ತಳಿವುದು, ಇದು ವೃಂತಾಕ ಪನಸ ಶಲಾಕವೆಂಬುದು.

ಉಕರಿಸಿದ ವೀರ ಪಲಸಿನ ಕಾಯನು ಮುಳ್ಳುಱಿದು ಉಳ್ಳಿ ಕೊತ್ತುಂಬರಿಗಳಿ . . . ದೊಂದು ಪರಿ.

ಹುರಿಸೊಜ್ಜಿಗೆಯನು ಸಕ್ಕರೆಯ ಹಾಕಿ ಬೇಯಿಸಿ ತೆಂಗಿನ . . .

ವಿ.ವಿ.—

ಅಸಮಗ್ರ. ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ.

ಇದು ಗದ್ಯದಲ್ಲಿ ಬರೆದಿದೆ. ಆದಿಯಲ್ಲಿ ೧೩ ಪದ್ಯಗಳಿವೆ. ಕೆಲವು ಪದ್ಯಗಳು "ಜಯ ಬಂಧು ನಂದನ, ಬುಧ ಬಂಧು" ಮುಂತಾದುವುಗಳಿಂದ ಮುಗಿಯುತ್ತವೆ. ಕವಿಯಾರೆಂಬುದು ಇದರಿಂದ ಗೊತ್ತಾಗುವುದಿಲ್ಲ. ಕವಿ ಚರಿತ್ರಕಾರರು ಕವಿಯನ್ನು ನೃಪತುಂಗನು ಹೇಳಿದ ಜಯ ಬಂಧು ವೆಂಬುವನ ಮಗನಾಗಿರಬಹುದೆಂದು ಹೇಳಿ ಕವಿಯ ಕಾಲವು ಸು ಮಾರು ೮೦೦ ಎಂದು ಬರೆದಿರುತ್ತಾರೆ. (ಕವಿ ಚರಿತ್ರೆ ಸಂಪುಟ ೧. ಪುಟ ೧೫.) ಈ ಗ್ರಂಥದಲ್ಲಿ ಪಾಕಮಾಡುವ ವಿಧಾನವು ಉಕ್ತವಾಗಿದೆ.

No. 1339. ಸೂಪಶಾಸ್ತ್ರ.

SŪPAŚĀSTRA.

Substance, paper. Size, 10⅓ × 9⅜ inches. Pages, 41. Lines, 20 on a page Extent, 870 granthas. Character, Kannada. Condition, good. Appearance, new.

Restored in 1920-21 from the Manuscript described above.

ವಿ.ವಿ —

ಅಸಮಗ್ರ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತ್ರಿಕೆಯಾಗಿದೆ.

No. 1340. ಸೂಪಶಾಸ್ತ್ರ.

SŪPAŚĀSTRA.

Substance, paper. Size, 10⅞ × 9⅜ inches. Pages, 15. Lines, 20 on a page. Extent, 200 granthas. Character, Kannada. Condition, injured. Appearance old. Mode of writing, not good.

Restored in 1916–17 from the Manuscript described under No. 13381 in the Descriptive catalogue of Sanskrit Manuscripts, Vol. XXIII.

Begins on page 1 of the Sanskrit Manuscript described under No. 2506 of the Triennial Catalogue of Sanskrit. Manuscripts. Vol. III—Part I The authorship of the text in Sanskrit is attributed to Bhīmasēna of the Mahābhārata fame. The work under notice contains word for word meaning in Kannada. This has been published under the Madras Government Oriental Series No. XXXI in 1950.

Beginning :

ಭೀಮಸೇನಕೃತ ಸೂಪಶಾಸ್ತ್ರ ಗ್ರಂಥ.—

ನಿವಸತ್ಸು ಪಾಂಡುಸೂನುಷು ವಿರಾಟ ನಗರೇ ಪುರಾ ಪವನಪುತ್ರಃ ।
ಚಕ್ರೇಪಿತುಃ ಪ್ರಸಾದಾತ್ತಂತ್ರಮಿದಂ ಸೂಪಕರಣಸ್ಯ ॥

ಟೀ ॥ ಪುರಾ = ಪೂರ್ವದಲ್ಲಿ, ವಿರಾಟನಗರೇ = ವಿರಾಟ ನಗರದಲ್ಲಿ, ಪಾಂಡುಸೂನುಷು = ಪಾಂಡುವಿನ ಮಕ್ಕಳಾದೈವರು, ನಿವಸತ್ಸು = ಇರುತ್ತಿರಲಾಗಿ, ಪವನಪುತ್ರಃ = ಭೀಮ ಸೇನನು, ಪಿತುಃ ಪ್ರಸಾದಾತ್ = ತಂದೆಯಾದ ವಾಯುವಿನ ವರ ಪ್ರಸಾದದಿಂದ, ಸೂಪಕರಣಸ್ಯ = ಪಾಕವಮಾಡುವ, ಇದಂ ತಂತ್ರಂ = ಈ ಶಾಸ್ತ್ರವನ್ನು, ಚಕ್ರೇ = ಮಾಡಿದನು.

* * * * *

End :

ಇತ್ಥಂ ಸಮೀರಣಸುತಃ ಸಕಲೌಷಧೀನಾಂ ।
ಸಾರಂ ವಿಚಾರ್ಯ ರಸವೀರ್ಯ ವಿಪಾಕಯೋಗಂ ॥
ರಾಜಾನಮನ್ವಹ ಮತೋಷಯದತ್ಯಪೂರ್ವೈ ।
ರರ್ಥೈರ್ಯಥಾಮತಿ ಚಕಾರ ಚ ಸೂಪತಂತ್ರಂ ॥

ಇತ್ಥಂ ಸಮೀರಣಸುತಃ = ಈ ಪ್ರಕಾರದಲ್ಲಿ ಭೀಮಸೇನನು, ಸಕಲೌಷಧೀನಾಂ = ಎಲ್ಲಾ ಔಷಧಾದಿಗಳ, ರಸವೀರ್ಯ ವಿಪಾಕಯೋಗಂ = ರಸವೀರ್ಯ ವಿಪಾಕಯೋಗಂಗಳ ಉಪಾಯವನು, ವಿಚಾರ್ಯ = ತನ್ನ ಇಚ್ಛೆಯು ಬಂದಹಾಗೆ ವಿಚಾರಿಸಿ, ಅತ್ಯಪೂರ್ವೈಃ ಅರ್ಥೈಃ = ಅತ್ಯಂತ ಅಪೂರ್ವವಾಗಿದ್ದಂಥಾ ಪದಾರ್ಥಗಳಿಂದ, ಅನ್ವಹಂ = ಪ್ರತಿ ದಿವಸದಲ್ಲಿಯೂ, ರಾಜಾನಮತೋಷಯತ್ = ವಿರಾಟ ಚಕ್ರೇಶ್ವರನನ್ನು ತುಷ್ಟನ ಮಾಡಿದನು ಯಥಾಮತಿ = ತನ್ನ ಬುದ್ಧಿಗೆ ತಕ್ಕ ಹಾಂಗೆ, ಸೂಪತಂತ್ರಂ ಚಕಾರ = ಸೂಪಶಾಸ್ತ್ರವ, ಮಾಡಿದನು.

Colophon :

ಇತಿ ಭೀಮಸೇನನಮತ ಸಮಾಪ್ತಂ ॥

ವಿ.ವಿ.—

ಸಮಗ್ರ. ತಪ್ಪುಗಳು ಹೇರಳವಾಗಿವೆ. ಭೀಮಸೇನನು ಮೂಲಗ್ರಂಥದ ಕರ್ತನೆಂದು ಗ್ರಂಥದ ಆದ್ಯಂತ್ಯ ವಾಕ್ಯಗಳಿಂದ ವಿಶದವಾಗುತ್ತದೆ. ಮೂಲವು ಸಂಸ್ಕೃತ ಶ್ಲೋಕಾತ್ಮಕವಾಗಿದೆ. ಟೀಕೆಯು ಕನ್ನಡದಲ್ಲಿದೆ. ಇದರಲ್ಲಿ ಕ್ರಮವಾಗಿ ಫಲಶ್ರುತಿ, ಘೃತ ತಕ್ರಪಯೋದಧಿ ವಿಧಾನವೂ, ನವನೀತಕರಣವೂ, ಔಷಧಿಗಳಿಂದ ಗಟ್ಟಿಯಾದ ಹಾಲಿನಿಂದ ಭಕ್ಷ್ಯವನ್ನು ತಯಾರಿಸುವ ವಿಧಾನವೂ, ಪಲಕೃತಿಯೂ, ಅಂಬಲದ ಪಾನ, ಉಪ್ಪಿನ ಶಾಕ, ಹುಳಿಯು ಶಾಕಂಗಳ ಮಾಡುವಿಕೆ, ಕ್ಲಿಷ್ಟಾನ್ನಸ್ವಾದೂಕರಣ, ಉಪ್ಪು ಮಿಗಿಲಾದುವುಗಳ ಉತ್ಪತ್ತಿಗೆ ಯೋಗ ಮುಂತಾದುವು ಉಕ್ತವಾಗಿವೆ.

ಈ ಗ್ರಂಥದಲ್ಲಿ ಅಡುಗೆಯ ಕೆಲಸದಲ್ಲಿ ಉಪಯುಕ್ತಗಳಾದ ಅನೇಕ ವಿಷಯಗಳು ಇವೆ. ಇದು ಮದ್ರಾಸ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿಯವರಿಂದ 1950 ರಲ್ಲಿ ಮುದ್ರಿತವಾಗಿದೆ.

No. 1341. ಸೂಪಶಾಸ್ತ್ರ.

SŪPAŚĀSTRA.

Substance, palm-leaf. Size, $14\frac{1}{8} \times 1\frac{3}{8}$ inches. Pages, 81. Lines, 5 on a page. Character, Kannada. Condition, much injured. Appearance, old. Mode of writing, good.

Incomplete.

Begins on fol. 12*b* of the Manuscript described under No. 13381 of the Descriptive Catalogue of Sanskcrit. Manuscripts. Vol. XXIII.

Similar to the work described under No. 1336 *ante*.

Beginning :

ಸೊಜ್ಜಿಗೆಯ ನೆನೆಯಿಸಿ ಕುಟ್ಟುವಾಗ ಬೆಣ್ಣೆ, ಹಾಲ ಕೆನೆ, ಮೊಸರ ಕೆನೆ, ಉಪ್ಪು ತುಪ್ಪವ ಹಾಕಿ ಪೇಣಿಯ ಹದದಲಿ ಕುಟ್ಟಿದ ಕಣಿಕ ಯೆರಡುಭಾಗ ನೆನೆಯಿಕ್ಕಿದ ಸೊಜ್ಜಿಗೆ ಯೆರಡು ಭಾಗ, ಕೂಡಿ ಕಲಸಿ ಕಟ್ಟಿ, ಅಂಗಾರ ಸ್ಫೋಟಕವ (ಅಂಗರೋಳಿಗೆಯ) ಮಾಡಿ ಕೆಂಡದ ಮೇಲೆ ತಿರಿಹಿ ತಿರಿಹಿ ಕೆಂಪಾಗಿ ಸುಡುವುದು. ತೆಗೆದು ಸೀದ ಠಾವೆಲ್ಲವ ಕತ್ತಿಯಲಿ ಕತ್ತಿಕೊಂಡು ಅಂಗರೋಳಿಯ ಮುರಿದು ವ್ರೊಪ್ಪಿಚೆ ತೆಂಗಿನ ಕಾಯಿ ಹಾಲು ನಾಲ್ಕು ವ್ರೊಂದಾಗಿ ಕಾದ ಹಾಲು ಆ ಕೆನೆಯಲ್ಲು ಮುಚೆಯ ಕಾಯಷ್ಟು ಅವರೆಯಷ್ಟು ಕುಂಕುಮವ ನರೆದು ಕದಡಿ ಕಲ್ಕವ ಮಾಡು—

ಆ ಕಲ್ಕ ಕೆಂಡದ ಅಂಗರೋಳಿಗೆಯು ಮುಳುಗುವ ಹಾಗೆ ಮುಚ್ಚಿಸಿ ಕೆಂಡದ ಮೇಲೆಯಿಟ್ಟು ಪಿಟ್ಟು ಸೀವ ಹಾಗೆ ಸುಡುವುದು. ಇದನು ವಾದುದು (ಸರಿಯಾದೊಡನೆ) ತಟ್ಟೆಯಲ್ಲಾಗಲಿ ಕತ್ತಿಯಲಾಗಲಿ ತೆಳತೆಳಗೆ ಕತ್ತಿ ಆರೋಗಣೆಗೆಯಿಕ್ಕುವುದು. ಇದು ಅಮೃತೋಪಮಾನವೆಂಬ ರೊಟ್ಟಿ.

* * * * *

ಪಾರ್ವತೀಮತದ ಅಳಿಯ ಪಳದ್ಯ ॥

ನಾಲ್ಕು ವೊಗೆ ಹುಳಿ ಮಜ್ಜಿಗೆಗೆ ಉಪ್ಪನಿಕ್ಕಿ, ಮೆಣಸು ಜೀರಿಗೆಯನರೆದಿಕ್ಕಿ, ಉಳ್ಳಿ ಕರಿಬೇವನಿಕ್ಕಿ ರಾಜಾನ್ನದಕ್ಕಿ, ಅಲ್ಲಾ ಸಜ್ಜಿಗೆಯ ವೊಂದು ಹಿಡಿಯ ನಿಕ್ಕಿ ವೊಂದು ಬೆಸಣಿಗೆಯಲಿ ತುಪ್ಪವನೆರೆದು ಕಾಯಲಾಗಿ ಬೆಳ್ಳುಳ್ಳಿ, ಸಾಸುವೆ, ಯಿಂಗು ಇವರಿಂದ ವಗ್ಗರಿಸಿ ವೊಡೆಯುದ ಹಾಗೆ ತೊಳಸುತ್ತ ಬಹುದು. ಕಾದುದನ್ನು ತೆಗೆದು ತನಗೆ ಬೇಕಾದಷ್ಟು ಬೇಕಾದ ಬೆಸಳಿಗೆಯಲಿ ಯೆರೆದು ಸೋದಿಸಿ ವೊಂದಕ್ಕೆ ಮಾವಿನ ಕಾಯಿ, ಅಲ್ಲ, ಉಳ್ಳಿ, ಕರಿಬೇವು, ಕೊತ್ತುಂಬರಿ ಗಂಟು ಕಟ್ಟಿ ಹಾಕಿ ಒಂದು ಬೆಸಳಿಗೆಯಲಿ ತುಪ್ಪವನೆರೆದು ಉಳ್ಳಿ,. ಜೀರಿಗೆ, ಸಾಸಿವೆ, ಯೇಲಕ್ಕಿ, ಇಂಗನಿಕ್ಕಿ ವೊಗ್ಗರಿಸುವುದು.

ಮೇಲೆ ಪರಿಮಳ ಚೂರ್ಣವ ತಳಿದು ಯೆಂನ್ರೋಪಾದಿಯ ಪಳದ್ಯಗಳ ಮಾಡಿ ವೊಂದೆರಡು ಸೈಕ್ಯದಲಿ ಕಟ್ಟುವುದು. ಒಂದೆರಡು ಸಳಿಗೆಯಲಿ ತುಂಬಿಸುವುದು. ಇವು ಪಾರ್ವತಿಯ ಮತದ ಅಳಿಯ ಪಳದ್ಯಗಳು.

(ಓಲೆ ೩೩).

* * * * *

End :

ಇದು ಇರುಪಲ ಕೋಸಂಬು—

ಇರುಪಲ ಕಾಯ ಹೋ . . . . ಆ ಹೋಳುಗಳನ್ನು ಸಣ್ಣವಾಗಿ ಕೊಯ್ದು ಅಲ್ಲಿ . . . . . ಡಿ ಕೆಂಡದಲಿ ಸುಟ್ಟು ಸಣ್ಣವಾಗಿ ಕೊಯ್ದು . . ಬೆರಸುವುದು . . . . . ಟ್ಟು ಒಗ್ಗರಿಸುವುದು.

ವಿ.ವಿ.—

ಅಸಮಗ್ರ. ಜೀರ್ಣವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದಕ್ಕೆ ಮೂಲ ಗ್ರಂಥವು ಇದೆಯೋ ಅಥವಾ ಇಲ್ಲವೋ ಇತ್ಯಾದಿ ವಿಷಯಗಳು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಒಂದೆಡೆಯಲಿ ಮಾತ್ರ "ಪಾರ್ವತಿಯ ಮತ" ವೆಂಬ ಅಂಕಿತದಿಂದ ಪಳದ್ಯದ ವಿಷಯವಾಗಿ ಬರೆದಿದೆ.

ಈ ಗ್ರಂಥದಲ್ಲಿ "ಅತಿರೊಟ್ಟಿ, ವೊಡೆ, ದೋಸೆ, ನಕ್ಷತ್ರ ಫೇನ, ಘಾರಿಗೆ, ಬಿಚ್ಚೋರಿಗೆ, ಖಂಡ ಮಂಡಗೆ, ಎಣ್ಣೆ ಹೂರಿಗೆ, ಬಿಚ್ಚು ಫೇಣಿ, ಪುರಿವಿಳಂಗಾಯಿ, ಪಾಯಸಗಳು, ಶುದ್ಧೋದನ, ಕಲಸೋಗರ, ದಧಿ, ಸಿಡಿಮಜ್ಜಿಗೆ, ತಕ್ರೌದನ, ಪಾನಗಳು, ಶಾಕಪಾಕಗಳು, ಇವೇ ಮೊದಲಾದ ಆಹಾರ ಪದಾರ್ಥಗಳ ಅಡುಗೆಯ ವಿಚಾರವಿದೆ.

No. 1342. ಸೂಪಶಾಸ್ತ್ರ.

SŪPAŚĀSTRA.

Substance, paper. Size, 10⅞ × 9⅜ inches. Pages, 45. Lines, 20 on a page. Extent, 950 granthas. Character, Kannada. Condition, injured. Appearance, old. Mode of writing, not bad.

Restored in 1916–17 from the manuscript described above.

Begins on the 15th page of the manuscript described under No. 2506 of the Triennial Catalogue of Sanskrit Manuscsipts, Vol. III, Part I.

. ಟ,—

ಅಸಮಗ್ರ. ಇದು ಹಿಂದಣ ಪುಸ್ತಕದ ಪ್ರತಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಸಾಮಾನ್ಯವಾಗಿದೆ.

ವೈದ್ಯ-

No. 1343- ಅನುಭವವೈದ್ಯ ಚಿಕಿತ್ಸ-

ANUBHAVAVAIDY CIKITSA.

Substance, palm-leaf. Size, 13½ × 1¾ inches. Pages, 315. Lines, 5—8 on a page. Extent, 3,600 granthas. Character, Kannada. Condition, much injured. Appearance, old. Mode of writing, good.

Begins on fol. 1 of the Manuscript The other work herein is :—(1) Vaidyāmrta, fol. 159*a*.

Deals with the preparation of medicine of different kinds such as powders, oils, decoctions, ashes, etc., together with the diseases cured by them. Fol. 64*b* is left blank.

Beginning :

ಸನ್ನಿಗೆ ಅಗ್ನಿಕುಮಾರಿ ॥

ಪ್ರತ್ಯೇಕಂ ಚ ಪ್ರಲೇಪಯೇತ್ । ಭೃಂಗರಾಜ ರಸ ತೈಲಂ ತ್ರೈಲ ತುಲ್ಯಮಿದಂ ಪಚೇತ್ ॥

ಟೀಕು.—

ಅವರೆ ಬೇರು, ಆಲದ ಬಿಳಿಲು, ಹಂದಿಯ ಕೊಂಬು, ಜಂತ ಇವ ಸಮಾನಂ ಗೊಂಡು ಚೂರ್ಣ . . . ಣೆ, ಗರುಗದ ರಸವನು ಹೊಯ್ದು, ಆ ಗರುಗಿನ ರಸ ಇಂಗುವನಕ ಅಟ್ಟು, ಮಂಡೆಗೆ ಪೂಸಿ ಕೊಂಡ [ಖಿವತ್ತ] (ನಿಮಿತ್ತ ?) ಖರಲ ಕೂದಲು ಬೆಳೆವುದು.
ಇತಿ ಗಂತ ಪಲಂದ . . . . ಪೇಷಯೇತ್ ॥

*　　*　　*　　*　　*

ಅಮರ ಶರ್ಕರೆ ಮಾಡುವ ಕ್ರಮ.—ಅಮರದ ವಳ್ಳಿಯ ತಂದು, ಮೇಲಣ ಬಿಳಯ ಹೊರೆಯ ಸುಳಿದು, ಚಿಕ್ಕುದಾಗಿ ಕತ್ತರಿಸಿ ಸದೆ ಬಡಿದು ಬಂಡದಲ್ಲಿ ಹಾಕಿ, ನೀರ ಹೊಯ್ದು ಕಡಿಗೋಲಿಂದ ಕಡೆದರೆ ವಡದು ನೊರೆಯಾಗಿ ಬಿಡುವುದು. ಅದತೆಗೆದು ಸಿಪ್ಪೆಯನು ಮತ್ತೊಂದು ಬಂಡದೊಳಗೆ ತೆಗೆದು ಕಡೆದ ನೀರನ್ನು ಸೋದಿಸಿ, ತಿಳಿಯುಳಿಟ್ಟು, ಬಸಿದರೆ ಅಡಿಯ ಕಟ್ಟಿ ಹಾಗೆಯೆ ನಿಂತುದನು ಪಾಷಾಣದ ಮೇಲೆ ಹೊಯ್ದರೆ, ಅಮರದ ಸಕ್ಕರೆಯಹುದು.

*　　*　　*　　*　　*

ಸ್ಫೋಟಕ ವೆಂಬುದುಂ ವ್ಯೈ ಸ್ಫೋಟಕವಾಗಿ ತೋರ್ಕುಂ. ಸಿಬ್ಬ ವೆಂಬುದು ಬಿಳದಾಗಿಯುಂ, ಚರ್ಮಗತವಾಗಿಯುಂ, ಪುಡಿಯುಪ್ಪುದುಂ, ಉರಿವುತ್ತ ಇಪ್ಪುದುಂ ಕೃಷ್ಣ ಚರ್ಮವೆಂಬುಗಳ ವ್ಯೆಯೊಲ್ಲಂ ಕರಿದಕ್ಕುಂ. ಇಂತು ಹದಿನೆಂಟು ತೆರದ ಲಕ್ಷಣ, ರಕ್ತ

ಕೆಚ್ಚನೆಯುಪ್ಪುದುಂ, ಬೆವರುವುದುಂ, ಉರಿವುದುಂ, ಕೀವರಿವುದುಂ ಇಂತು ಪಿತ್ತಕು ಲಕ್ಷಣಂ. ಶ್ಲೇಷ್ಮ ಮಿಂಚುವುದುಂ ಬಿಪ್ಪು ತಕು, ಮೂಗಿನೆಲ್ಲಾ ಸ್ವರಂ ಪೋಕುಂ. ಬಿಳದಾಗಿ ಸುರಿವುದುಂ, ಪಿರಿದು ಶ್ಲೇಷ್ಮಕುಜೆಯು ಲಕ್ಷಣಂ. ಕುತ್ತಿರಿವುದುಂ, ಉರಿವುದುಂ ತೀಟವು ಮುಕ್ಕುಂ.

* * * * *

ಜಂಗಮ ವಿಷಕ್ಕೆ.—ಉಂಗು (? ಅಂಗೂ) ರವ ನೀರೊಳಗೆ ಇಕ್ಕಿ ಕೊಡಲು ಜಂಗಮ ವಿಷಹರ. ಕಂಗುಗೆಯ ಬೇರ ನೀರಲು ಅರದು ಪೂಸಲು ಸರ್ವ ವಿಷಹರ. ನಿಲ್ಲಿ (ನೆಲ್ಲಿ ?) ಹಿರಿಯ ಮದ್ದು ತಕ್ಕೆ, ಎಕ್ಕೆ, ಸಂಪಿಗೆ, ಈ ಐದರ ಬೇರಂ ನಿಂಬೆಯ ಹಣ್ಣಿನ ರಸದಲ್ಲಾ ಅರೆದು ಗುಳಿಯಂ ಮಾಡಿ ನೆಳಲಲ್ಲಿ ಆರಿಸಿ ಆ ಗುಳಿಗೆ ಉರಿಗೆ ಹಳ ಹಳಸಿಂಗಿಗೆ, ಶೈತ್ಯ ಸಿಂಗಿಗೆ ॥ ನಾಲ್ಕು ಪರಿಯ ಬಪ್ಪಕ್ಕು, ಈ ಔಷಧವನು ಪೂಸಿದರೆ ವಿಷ ಸಂಹರ. ಬಪ್ಪ ಸರ್ಪ ಕಚ್ಚಿದ ವಿಷ ಹರ. ನಾಗಾರ್ಜುನ ನಿರ್ಮಿತ.

* * * * *

End :

ಸುಂಟಿ, ಅಮೃ, ಬೈಬೇವು, ದೇವದಾರು, ತಾವರೆಯ ಗಡ್ಡೆ, ಇವಂ ಕಷಾಯವಂ ಮಾಡಿ ಕೊಳಲು ಹಿಪ್ಪಲಿಯ ಪ್ರತಿ ಪಾಕ ಇಕ್ಕಿ ಕೊಳಲು ಶ್ಲೇಷ್ಮ ಜ್ವರ ತೀರ್ಗು ॥ ಎರಡು ಬೇವು, ಸುಂಟಿ, ಅಮರ, ದೇವದಾರು, ಹಿಪ್ಪಲೀ ಮೂಲ, ಹಿಪ್ಪಲಿ, ಇವಂ ಕಷಾಯವಂ ಕಾಸಿ ಕೊಳಲು ಶ್ಲೇಷ್ಮ ಜ್ವರ ಹರ, ಶ್ರೀ ಜಡೆ ಕಳ್ಳಿ, ಮಹ ಕಳ್ಳಿ . . . .

* * * * *

ವಿ.ವಿ.—

ಅಸಮಗ್ರ. ಶಿಥಿಲ. ಅನೇಕ ಔಷಧ ಯೋಗಗಳು ಹೇಳಲ್ಪಟ್ಟಿವೆ. ಇದರಲ್ಲಿ ವಿಶೇಷವಾಗಿ, ತ್ರಿದೋಷ ಸನ್ನಿಪಾತ, ಗಂಡಮಾಲೆ, ಪೀನಸ, ಮೂಗಿನ ರಕ್ತ, ಶ್ಲೇಷ್ಮ ಜ್ವರ, ಪುರಾಣ ಜ್ವರ, ಅಜೀರ್ಣ ಜ್ವರ, ಹೊಟ್ಟೆ ಬೇನೆ, ರಸ ಶುದ್ಧಿ ಇಂಗಳೀಕ, ಮಣಿ ಶಿಲೆ, ಜೇಪಾಳ, ಲೋಹ ಚೂರ್ಣ, ರಸ ಭಸ್ಮ, ತುತ್ಥ, ವಂಗ ಭಸ್ಮ, ತಾಮ್ರ ಭಸ್ಮ, ಅಯೋ ಭಸ್ಮ, ಬೆಳ್ಳಿಯ ಭಸ್ಮ, ಗರ್ಭಧಾರಣೆ, ಗರ್ಭ ಪೋಷಣೆ, ಆಮ್ಲ ಪಿತ್ತ, ಓಕರಿಕೆ, ಕ್ಷಯರೋಗ, ಲಾಕ್ಷಾದಿ ತೈಲ, ಅಜೀರ್ಣ, ಬಹು ಮೂತ್ರ, ಬಿಳಿಸೆರೆ, ಮೈನೋವು, ಕಾಮಾಲೆ, ದೂತ ಲಕ್ಷಣ, ಸ್ಫೋಟಕಂ, ಬಾಣಂತಿ ರೋಗ, ಕರಡಿಗೆಯ ಲಕ್ಷಣ, ಸಿರಿವಂತ್ರಿಗೆ, ಕುಷ್ಠ ವ್ಯಾಧಿ, ಚಾತುರ್ಥಿಕ, ಪ್ರಮೇಹ, ಜ್ವರ, ಗಜಕೇಸರಿ, ಮಹಾ ಜ್ವರ ಮುರಾರಿ, ಶೀತ ಜ್ವರ, ಚಂದ್ರ ಶೇಖರ, ರಾಮಬಾಣ ರಸ, ಗ್ರಹಣಿ, ನೀಲಕಂಠ ರಸ, ಅಗ್ನಿ ಕುಮಾರೀ ರಸ, ಮಹಾ ಭೂಪತಿ ರಸ, ನವಗ್ರಹ ಜಪ, ಇಚ್ಛಾ ಭೇಧಿ, ಉನ್ನತ ಭೈರವ, ಅಮರ ಶರ್ಕರ, ಸರ್ವ ಜ್ವರ, ಗುಂಜಿ ತೈಲ, ಅಣಲೆಕಾಯಿ ಗುಣ, ವಿಜಯ ಭೈರವ ತೈಲ, ಖಡ್ಗಸ್ತಂಭ, ಕೋಳದ ಭೈರವ ಮಂತ್ರ, ಸ್ವಪ್ನಸಿದ್ಧಿ ಮಂತ್ರ, ವಿಘ್ನೇಶ್ವರನ ಮಂತ್ರ, ವಿಶ್ವಪತಿ ಮಂತ್ರ, ಮೃತಕರಣ ಮಂತ್ರ, ಆವೇಶದ ಮಂತ್ರ, ಜ್ವರ ಲಕ್ಷಣ, ಸರ್ವ ವಿಷವ ನಿಳುಹುವ ಮಂತ್ರ, ಗ್ರಹೋಚ್ಚಾಟನ ಯಕ್ಷಿಣಿಯ ಮಂತ್ರ" ಇವುಗಳ ವಿಷಯವಾಗಿ ವಿಸ್ತರಿಸಿದ ಬರೆಹವಿದೆ. ಕವಿಯ ವಿಷಯವೇನೂ ತಿಳಿಯಬರುವುದಿಲ್ಲ.

No. 1344. ಅನುಭವವೈದ್ಯ ಚಿಕಿತ್ಸೆ.

ANUBHAVAVAIDYA CIKITSE.

Substance, palm-leaf. Size, 11 15/16 × 1 5/16 inches. Pages, 56. Lines, 5 on a page. Extent, 450 granthas. Character, Kannada. Condition, injured. Appearance, old. Mode of writing, good.

Begins on fol. 6*a* of the manuscript described under No. 612 *ante*.

Incomplete.

Similar to the work described above.

Beginning :

ಕಣ್ಯಹಾವಂ, ಪ್ರವಕಾಸೀಸಮಂ, ರಸಾಂಜನವುಂ, ಶ್ರೀಖಂಡವುಂ, ಸಮುದ್ರಸೇನನು, (? ಫೇನವುಂ), ಸರ್ಜರಸವುಂ ಸೈಹಿಂ (? ಸ್ಯೆಂ) ಧವವುಂ, ಸ್ವರ್ನ (? ರ್ಣ) ಗೈರಿಕವುಂ, ಮಣಿ ಶಿಲೆ, ಮೆಣಸು, ಎಂಬಿವ ಸಮಾನಂಗೊಂಡು, ಆಡಿನ ಹಾಲೊಳರೆದು, ಜೇನ ತುಪ್ಪದಿಂದ ಕಲ್ಕವಂ ಮಾಡಿ, ಇರಿಸಿ ಎರಡು ಹೊತ್ತು ಕಣ್ಣಿಗೆ ಎಚ್ಚುಗೆ. ಅಂಧಕಾಚ ಪಟಲಾರ್ಬುದ ಮೊದಲಾಗಿ ಇವೆಲ್ಲಾ ರೋಗ ಗುಣ ಕುತ್ತಂಗಳೆಲ್ಲಾ ಕೆಡುಗುಂ.

ಭದ್ರಮುಸ್ತೆ, ಲಾವಂಚ, ಕಬ್ಬಿನದ ಪುಡಿಯುಂ, ಎಲೆಯುಂ, ಮೆಣಸುಂ, ಎಂಬಿವಂ ಸಮಾನಂ ಗೊಂಡು, ತಿಳನೀರೊಳು ಸಣ್ಣವಾಗರೆದು, ಹೊರಗನಾರಲೀಸದೆ ಪೂಸುವುದು. ಕಣ್ಣಿಗೆ ಮಾಡುವುದು. ಭದ್ರ ಮುಸ್ತೆ, ಲಾವಂಚ, ಕಬ್ಬುನದ ಪುಡಿ ಯೆಂಬಿವೆಯುಂ, ಮೆಣಸು, ಸೈಂಧವವು, ಚಿಲ್ಲಗೊಟ್ಟೆಯುಂ, ಮರದರಿಸಿನಮುಂ, ತುತ್ತವು, ಶಂಖದ ಮುರುಡಂ, ಸಮು . . ಷಿನವುಂ, ಜಟಾಮಾಂಸಿ, ಹಿರಿಯ ಸುಗಂಧಿ, ನಿಲಾಂಜನಂ, ಎಂಬಿವಂ ಸಮಾನಂ ಗೊಂಡು ಪುಡಿಮಾಡಿ ಕಬ್ಬುನದ ಭಾಜನದೊಳು ಇರಿಸಿ ಕೈತ್ಯ ಪ್ರೊಗಳಲ್ಪಡುವುದು. ತಿಮಿರೆ, ಅಸನ, ದೂರ ತಿಮಿರಂ, ಕೆಳಗಣ್ಣು ದೋಷಂಗಳು, ಹಕು ಗಟ್ಟುವ ಕಣ್ಣು ದೋಷಂಗಳು ಇವು ಮೊದಲಾದ ಕಣ್ಣು ದೋಷಂಗಳ ಕೆಡಿಸುಗುಂ.

ಯಷ್ಟಿ ಮಧುಕವು, ನೈದಿಲ ಕೇಸರ, ಸಮುದ್ರ ಫೇನವುಂ, ಲವಂಗದ ಝುಲ್ಲಿಯುಂ ಕಬ್ಬಾಳವುಂ, ಗೋರೋಜನವುಂ, ಜಟಾಮಾಂಸಿ, ಶ್ರೀಗಂಧ, ಶ್ರೀಗಂಧ, ಶಂಖನಾಭಿಯಂ, ಕಮಲ ಪತ್ರಮುಂ, ಜಾಜಿಕಲು, (?) ತಾಳಿಸ ಪತ್ರಮುಂ, ಪ್ರಸಾರಿಣಿನಂ, ಪುಡಿಮಾಡಿ ಇವೆ ಸಮಾನಂ ಗೊಂಡು, ಅಂಜನವುಂ, ಇದಂ ಪೊಗಲ್ಪಟ್ಟುದು. ಎಲ್ಲಕಾಲವುಂ ಕಣ್ಣುಗಳು ಕೆರಳದ ಕಣ್ಣು ಬೇನೆ, ಯಾದಂ ನೀರು ಸುರಿವುದು, ನೇತ್ರದೊಳಾದ ಬೇನೆಯುಂ ಕೆಡುಗುಂ. ಅರೆ ಬೆಳೆದ ಕಣ್ಣುಂ, ಕಣ್ಣೊಳು ಹುಟ್ಟಿದ ಹೂವು ಮೊದಲಾದುವುಂ ಕೆಡುಗುಂ.

* * * * *

Colophon :

ಇತಿಕಾಯ ಚಿಕಿತ್ಸಾ ಸಮಾಪ್ತಾ.

* * * * *

End :

ನೀರಗಟ್ಟಿಗೆ ಜವನದ ಸೊಪ್ಪಿನ ನೀರಿನಲ್ಲಿ ಕದಡಲು ನೀರು ಮುದ್ದೆಯಹುದು, ಹರಿಃ.

ಬಿ.ವಿ.—

ಅಸಮಗ್ರ. ಶಿಥಿಲವಾದ ಪ್ರತಿ. ಅನೇಕ ಓಲೆಗಳ ಎಡೆಬದಿಯ ಭಾಗವು ಮುರಿದು ಹೋಗಿ ಲುಪ್ತವಾಗಿದೆ. ಇದರಲ್ಲಿ ಕೆಲವು ಸಂಸ್ಕೃತ ಶ್ಲೋಕಗಳೂ ಅವುಗಳಿಗೆ ಕನ್ನಡ ಟೀಕೆಯೂ ಕಾಣಬರುತ್ತದೆ. ಸರಸ್ವತೀ ಮುಖತಿಲಕವೆಂಬ ಅಂಕಿತಗಳು ಕೆಲವು ಕಂದ ಪದ್ಯಗಳಂತ್ಯದಲ್ಲಿ ಕಾಣುತ್ತದೆ. ಈ ಕಂದಗಳೂ ಔಷಧ ವಿಷಯವನ್ನೇ ಹೇಳುತ್ತವೆ.

ಕಣ್ಣು ರೋಗ, ಮಂದಾಗ್ನಿ, ಕೆಮ್ಮು, ಮೂಲವ್ಯಾಧಿ, ಹೊಟ್ಟೆಬೇನೆ, ಗುಲ್ಮ, ಅರೋಚಕ, ಕಾಸ, ಶಾಸ, ಛರ್ದಿ ತದ್ದುಗಳು, ಸಿಬ್ಬು, ರಕ್ತಮಂಡಲ, ಕುಷ್ಠ ತದ್ದುತೊನ್ನು, ದುಷ್ಟವ್ರಣ, ಶೀತ ಜ್ವರ, ಮಹಾಜ್ವರ, ಕುಷ್ಟವ್ಯಾಧಿ, ಪಂಚಗುಲ್ಮ, ಕೃತಕ್ಷತಾದಿಯವರಿಗೆ (ಕುಂಬಳ ಕಾಯ ಲೇಹ್ಯಂ) ಗುದರೋಗ, ಅಪಾನದ್ವಾರ ರೋಗ, ತಲೆಬೇನೆ, ವಿರೇಚನ, ಸ್ತನವೃದ್ಧಿ, ನೇತ್ರ ಶೂಲೆ, ವಿಷ ಇವುಗಳಿಗೆ ಚಿಕಿತ್ಸೆಗಳಿವೆ.

No. 1345. ಅಶ್ವವೈದ್ಯ by ಅಭಿನವಚಂದ್ರ.

AŚVAVAIDYA BY ABHINAVACANDRA.

Substance, paper. Size, $10\frac{1}{2} \times 9\frac{7}{16}$ inches. Pages, 90. Lines, 20 on a page. Extent, 1,350 granthas. Character, Kannada. Condition, fair. Appearance, old. Mode of writing, fair.

This is a restored copy of the manuscript described under the next No. 1347.

Complete.

A treatise in 16 chapters written in Kanda metre and vṛttas dealing with the origin and characteristics of horses and treatment of their diseases. The author refers to a treatise written on the same subject by one Candra (Kavi) or Candrama. For other particulars see extracts given below.

Beginning :

ಅಶ್ವವೈದ್ಯ ನಾನಾ ಸಂಗ್ರಹ ನಿರ್ಣಯ ॥

ಶ್ರೀಪತಿ ದಾನವ ಕುಲದ ।
ರ್ಪಾಪಹನಮರೇಂದ್ರವಂದಿತಂ ಸಕಲ ಜಗ- ॥
ದ್ವ್ಯಾಪಕನೆಮಗೀಗೆ ಸುಖ- ॥
ವ್ಯಾಪಾರೋದಾರ ಮಹಿಮೆಯಂ ಚಕ್ರಧರಂ ॥

ವಿಪ್ರಕುಲ ಭೂಷಣಂ ಸುಜ- ।
ನ ಪ್ರಣುತಂ ಸೋಮಣಯ್ಯನನುಜಂ ಹಯಶಾ- ।
ಸ್ತ್ರ ಪ್ರೌಢ ಜನಮನೋನಯ ।
ನಪ್ರಿಯ ನಕಲಂಕ ಚರಿತನಭಿನವಚಂದ್ರಂ ॥

. . . . ॥

ಅನುಪಮ ಹಯಶಾಸ್ತ್ರಗಮ।
ವನನಿಧಿಯೊಳ್ ಸಿಂಹದಂತ ಕೃತಿಲಕ್ಷಣವಂ॥
ದಿನಕರ ತನಯನ ರೇವಂ-।
ತನ ಮತವುಂ ಬೇಳ್ವನರಿಯೆ ಪೊಸಗನ್ನಡದಿಂ॥

ಚತುರಾಸ್ಯನ ಶ್ರುತಧಾರಾ।
ಪ್ರತತಿಯೊಳುದಯಿಸಿದ ವಶ್ವಸಂಭವ ಮಾಜ್ಯಾ-॥
ಹುತವಹ ಮುಖದಿಂದಶ್ವ।
ಪ್ರತತಿಗಳುದಯಿಸಿದ ವಗ್ನಿ ಸಂಭೂತಂಗಳ್॥ (೪)

ಸುರರುಂ ದಾನವರುಂ ಭೋ-।
ರ್ಗರೆವಮೃತಾಂಭೋಧಿ ಮಥನವಂ . . . ॥
ಬರಿವಿನೆಗಂ ಕಿಳಿರುತಂ (?)।
ಶರಧಿಂಬು ಉದಯಿಸಿದ ವಮೃತಸಂಭವ ತುರಗಂ॥ (೫)

* * * * *

ಪಡೆದನಜಂ ಬೆಳ್ವಿಯೊಳಾ-।
ಗಳೆ ವೈದ್ಯ ಶಾಲಿಹೋತ್ರನಂ ಕುದುರೆಗಳಂ।
ಪಿಡಿದೇ (ರು) ವ ದೀಕ್ಷೆಗೊಡಂ।
ಬಡಿಸುವ ವಿಜ್ಞಾನ ನಕುಲನಂ ಮುನಿಪತ್ರಿಯುಂ॥

ದೇವ ಸಮೂಹಂ ನೆರೆದಿರೆ।
ದೇವಾಸುರ ಯುದ್ಧದೆಡೆಗೆ ವಾಹನ ಮೆವುಗಿ-॥
ಶ್ಲೀ ವಾಜಿಗಳಂ ಪಿಡಿ [ವುದು] (ದೆವ)।
ಗೀವುದು ಕಾವುದು ಸಮಸ್ತದೇವಾದಿಗಳಂ॥ (೧೦)

ಎಂದುಪಧಾವಿಸಿದೊಡೆ ಸುರ-।
ವೃಂದಮನಾದರಿಸಿ ಶಾಲಿಹೋತ್ರಂ ನಿಮಗಾ-।
ನಿಂದು ಪಿಡಿದೀವೆ ನೀ ಹಯ।
ಸಂದೋಹಮನೆಂದು ಶಕ್ತಿಮಂತ್ರಾಕ್ಷರದಿಂ॥ (೧೧)

ಆ ದಿವ್ಯ ವಾಹ ಪಕ್ಷ-।
ಚ್ಛೇದನಮಂ ಮಾಡಿ ಶಾಲಿಹೋತ್ರಂ ದೇವೇಂ।
ದ್ರಾದಿ ಸುರರ್ಗೀಯೆ ವಾಹನ।
ಮಾದವು ವಶವಾದ . . . ದಿಂ ಬಳಿಯುಂ। (ಳಯುಂ ?)

* * * * *

Colophon :

. . . . ನೋಹರಂ ಕೃತಿನಾದಾಯುದಯ ಪರಿಯಂತಂ ಪ್ರಥಮೋಧ್ಯಾ . . .

* * * * *

ವೃತ್ತ ॥ ಅರಿದಾ ಗ್ರಂಥಿಯ ಕತ್ತದುಂ ಕಳೆದು ಮಾತ್ರೆಗಳ್ಪೆಣ್ಣೆಯಂ ಪೂಸಿ ವಿ ।
ಸ್ತರದಿಂ ಮಾಡುಗೆ ಸೇಕಮಂ ಬಳಿಕ ಮತ್ತಲ್ಲಲ್ಲಿ ಗೋಮೂತ್ರದಿಂ ।
ದರೆದಾ ನಾಗರಮಂ ಹರಿದ್ರಯುಗಮಂ ವಸ್ತ್ರಾಂತರಂ ಗೆಯ್ದು ವಂ ।
ತ್ವರಿತಂ ಕಟ್ಟುಗೆ ವಾಜಿಗಳ್ಗೆ ಚರಣ ಗ್ರಂಥೀರುಜೋಚ್ಚಾಟನಂ ॥

Colophon :

ಕಂದ ॥ ತಳಲಿಂಗ ಕೊರ್ಚೆಲಿಂಗಂ ।
ಗಳಪುಂಡಿಗೆ ಗಂಡುಗಳ್ವುದಾಭ್ಯಾಸಂ ಪ್ಯಾ- ।
ಕ್ರುಲಮಕ್ಷಿ ಕರ್ಣರೋಗಂ ।
ಗಳುಮಂ ವಿರಚಿಸಿದ ಪಂಚದಶ ಮಧ್ಯಾಯಂ ॥

ತನುಶೋಭ ಮೇರೆಗಂಟುಗ- ।
ಳೆನೆ ತಾನುಂ ಸೋರೆ ಸುರಿಯೆ ಮುಖದಿಂ ಶ್ಲೇಷ್ಮಂ ॥
ಮನವಿಕ್ಕೆ ಬೇಗದಿಂ ಕಿಡಿ- ।
ದಿನಿಸಾನುಂ ಸುಯ್ಯೆ ರೋಮಮೊಡದಿರೆ ಮತ್ತಂ ॥

ಸರಿದಿರೆ ಬಾಲಂ ನಾಲಿಗೆ ।
ಕರಿದಾಗಿರೆ ತಿಮಿರ ಮಡರೆ ಚೇಷ್ಟೆಗಳೆನಿತುಂ ।
ಕರಮತಿ ಕುಪಿತನಮಂ ವಿಷ ।
ಧರನೆಳುತೆ ಕೊಂಡುದಕ್ಕು ಮೆಂದರಿವುದದಂ ॥

* * * *

End :

ಸಕಲ ವಿಷಹರನು ಮನುಪವೆ- ।
ಸಕಲ ಕ್ಷಯ ರೋಗ ಹರವಾನೆಸೆದಿರೆ ಪೇಳ್ದಂ ॥
ಸಕಲ ಬಾಧಸ್ತುತ್ಯಮನೊ ।
ಲ್ವಕೆಳಂ ತಪೊರ್ಡಗೆ ಷೋಡಶಾಧ್ಯಾಯದಿಂದಂ ॥

ಅಂತು ಶಾಲಿ ಹೋತ್ರ ಗ್ರಂಥ ೩೩೦೦ ಕ್ಕಂ ಮಂಗಲ ಮಹಾ.

ಕುದುರೆ ಮುಗ್ಗರಿಸಿ ಬಿದ್ದು ಎದೆ ನೊಂದದ್ದಕ್ಕೆ ಲೇಪ.—

(1) ಹಳೆಯ ಹುಣಸೆಯ ಹಣ್ಣು, (2) ಹಳೆಯ ಬೆಲ್ಲ, (3) ಮಜ್ಜಿಗೆಯ ದಿಂಡು, (4) ಉದ್ದಿನ ಹಿಟ್ಟು, (5) ಕೋಳಿಯ ತತ್ತಿ, (6) ಬೋಳಸರದ ದುದ್ದು (7) ಹುತ್ತದ ಮಣ್ಣು ಇವು ಎಲ್ಲವು ಪ್ರತ್ಯೇಕ ಸಮತೂಕ; ಇವನು ಉದ್ದ ನನೆಯಿಕ್ಕಿದ ನೀರ ಬಿಟ್ಟುಕೊಂಡು ಲೇಪವ ತಡೆಹುವ ಮರ್ಯಾದೆಯಲ್ಲಿ ಸಣ್ಣವಾಗಿ ಅರೆದು ಬಿಸಿಮಾಡದೆ ಲೇಪಮಾಡುವುದು.

ಕೋಟತತ್ತಿ ಒಂದು ಎರಡು ಭಾಗ, ಕುದುರೆ ದೂರ ನಡೆದು ಎದೆನೊಂದು ರಕ್ತಗಟ್ಟಿದುದಕ್ಕೆ.—

(1) ಅರಸಿನದ ಹುಡಿ, (2) ಕಲ್ಲುಪ್ಪು, (3) ನಿಂಬೆಯ ಹುಳಿ, (4) ಎಳ್ಳೆಣ್ಣೆ ಇವನು ಲೇಪವಮಾಡುವುದು.

ಪಾದರೋಗಕ್ಕೆ.—

(1) ಪಾದರಸ ಸಮತೂಕ ೧, (2) ಇಂಗುಲಿಕ . . . . ಮಸ್ತಕಿ ತೂಕ ೧, (3) ಪಚ್ಚೆಕರ್ಪೂರ ೫ ತೂಕ, (4) ಬಂಗಾಳ ಪಚ್ಚೆವು ೫ ತೂಕ, ರಸವ ತೊಂಡೆಯ ಸೊಪ್ಪಿನ ರಸದಲ್ಲಿ ಅರೆದು ಔಷಧಂಗಳ ಚೂರ್ಣಂ ಮಾಡಿ ಕಳಿಗೆಲೆಯ ಬೆಣ್ಣೆಯ ಹಾಕಿ ತಾಂಬ್ರದ ಚೆಂಬಿನಲ್ಲಿ ಮರ್ದಿಸಿ ಕಬ್ಬಿನದ ಕರಡಿಗೆಯಲ್ಲಿ ತುಂಬಿ ಇರಿಸಿಕೊಂಡಿದ್ದು ಬಿಸಿಯ ಅಂಬಿಲದಲ್ಲಿ ಪಾದವ ತೊಳೆದು ಬಿಸಿಲಲ್ಲಿ ಪಾದವ ಆರಿಸಿ ಪಾದಕ್ಕೆ ಔಷಧವ ತೊಡೆದು ಹೀವ್ರುಗನಿಯ ಎಲೆಯ ಸೌಡವಮಾಡಿ ಹಾಕಿ ಪಾವುಡೆಯಲ್ಲಿ ಕಟ್ಟುವುದು. ಅದಕ್ಕೆ ಕವಳ ಕಾಡದೊಂಡೆಯ ಗೋಸತುಳದು ಅಂಬಿಲದಲ್ಲಿ ನೆನೆಯಿಸಿ ದಿನಂ ಪ್ರತಿ ಹೆರಳೆಯಕಾಯ ಪ್ರಮಾಣ ವಿಕ್ಕುವುದು.

ಲೇಪ ಸಂಪೂರ್ಣಂ.

ವಿ.ವಿ.—

ಸಮಗ್ರ. ಲಿಪಿ ಚೆನ್ನಾಗಿದೆ. ಮುಂದೆ ೧೩೪೭ ನೆಯ ನೆಂಬರಿನಲ್ಲಿ ವರ್ಣಿತವಾಗಲಿರುವ ಪ್ರತಿಯ ಪುತ್ರಿಕೆಯಾಗಿದೆ. ಹದಿನಾರು ಅಧ್ಯಾಯಗಳವೆ. ಪ್ರಾಯಿಕವಾಗಿ ಪದ್ಯಗಳು ಕಂದದಲ್ಲಿ ಬರೆದಿವೆ. ಕವಿ ಅಭಿನವಚಂದ್ರನೆಂಬುವನು. ಶ್ರೀ ಕರ್ಣಾಟಕ ಕವಿ ಚರಿತ್ರೆಯಲ್ಲಿ ಈತನು ಕಾಲವು ಸು. 1400 ಎಂದು ಹೇಳಿದೆ. ಕಡೆಯಲ್ಲಿ ಲೇಪದ ಮದ್ದುಗಳೂ ಈ ಗ್ರಂಥದಲ್ಲಿ ಸೇರಿದೆ. ಇತರ ವಿಷಯಗಳನ್ನು ಉದ್ಧೃತಾಂಶದಿಂದ ತಿಳಿಯುವುದು.

No. 1346. ಅಶ್ವವೈದ್ಯ.
AŚVAVAIDYA.

Substance, palm-leaf. Size, $11\frac{7}{8} \times \frac{5}{16}$ inches. Pages 60. Lines, 6 or 7 on a page. Extent, 540 granthas. Character, Kannada. Condition, much injured. Appearance, old. Mode of writing fair.

Begins on fol. 1 a of the manuscript. The other works herein are (1) Vaidyamrta, fol. 31 a. (2) Vaidyakrama, fol. 49 a. (3) Misravisaya 53 a.

Complete ;

Similar to the work described above.

Beginning :

ಕುದುರೆಯ ಲಕ್ಷಣ.—

ಉತ್ತಮ ಸುಳಿಗಳು ಅವಾವುವೆಂದರೆ.—

ಹಿಂದಣ ಅಳ್ಳೆಯಲ್ಲಿ ಎರಡ . . . . . . ಲ್ಲಿ ಎರಡು ಸುಳಿ. ಎರಡು ಕಿಬ್ಬೊಟ್ಟೆಯ ಎರಡು ಸುಳಿ. ಮುಂದಣ ಊರದಲ್ಲಿ . . . .

* * * *

ತ್ರಿಕಸ್ತಂಭಕ್ಕೆ ಲಕ್ಷಣ.—

ಹಿಂದಣ ಭಾಗ ತತ್ತರಿಸುವುದು. ಅದಕ್ಕೆ ಔಷಧ.—

ನುಗ್ಗೆಯ ಬೇರು, ಲೊಕ್ಕಿಸೊಪ್ಪನ್ನು ಎಣ್ಣೆಯಲ್ಲಿ ಕಲಸಿ ಕವಳವನಿಕ್ಕುವುದು, ಬಳಿಕ ಇಂಗಿನ ನಸ್ಯವಮಾಡುವುದು.

* * * *

End :

ನೊರೆವೆರಸಿ ಲದ್ದಿಯನಿಕ್ಕಿದರೆ, ತುರಗಂ ಥಡಥಡಿಸಿ ನಡೆಯುದಿದ್ದರೆ, ಕುಂಟಿತ್ತಿದರೆ, ರಸವಿಕಾರವದರೊಳು ದೊರೆಕೊಂಡರೆ, ಅದಕ್ಕೆ ಒಂದು ಮಾನ ಇಪ್ಪೆಯ ಹೂವಂ ಅರೆದು ಒಂದು ಬಳ್ಳನೀರಿಂ ಕೊಡಲು ನೀರೋಗಂ—ಮಂಗಳ ಮಹಾ ಶ್ರೀ.—

ವಿ.ವಿ.—

ಸಮಗ್ರ. ಅತ್ಯಂತ ಶಿಥಿಲ. ಗ್ರಂಥ ಕರ್ತೃವಿನ ವಿಷಯವು ಗೊತ್ತಾಗುವುದಿಲ್ಲ. ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳು ಕಾಣಸಿಗುತ್ತವೆ. ಇದರಲ್ಲಿ ಕುದುರೆಯ ಲಕ್ಷಣಕ್ಕೆ, ತಿಮಿರಕ್ಕೆ, ಕವಳಕ್ಕೆ ಕುದುರೆಯ ಬೆನ್ನುಹುಣ್ಣಿಗೆ, ಕಜ್ಜಿಗೆ, ಗ್ರಹಸೋಂಕಿದರೆ, ಕುದುರೆಯ ಕಣ್ಣಿನ ರೋಗಕ್ಕೆ, ವಿಷ್ಟಸ್ತಂಭಕ್ಕೆ ಸಂಬಂಧಪಟ್ಟ ವಿಷಯಗಳೂ ಔಷಧಗಳೂ ಹೇಳಿವೆ.

No. 1347. ಅಶ್ವವೈದ್ಯ by ಅಭಿನವ ಚಂದ್ರ.

ASVAVAIDYA BY ABHINAVACANDRA.

Substance, Sritala. Size, 6 3/16 × 1¼ inches. Pages, 243. Lines, 7 on a page. Extent, 1350 granthas. Character, Kannada. Condition, much injured. Appearance, old. Mode of writing, good.

Complete :

Same work as that described under No. 1345 *ante*.

ವಿ.ವಿ.—

ಸಮಗ್ರ. ಆದರೆ ಅಲ್ಲಲ್ಲಿ ಕೆಲವು ಹಾಳೆಗಳಿಲ್ಲ. ಮೊದಲಿನ ಹಾಳೆಯ ಅರ್ಧವು ಮುರಿದು ಹೋಗಿದೆ. ಅಲ್ಲಲ್ಲಿ ಕೆಲವು ಓಲೆಗಳು ಮುರಿದಿವೆ. ಅತ್ಯಂತ ಶಿಥಿಲ. ಹಿಂದೆ D. No. ೧೩೪೫ ರಲ್ಲಿ ವರ್ಣಿತವಾದ ಗ್ರಂಥಕ್ಕೆ ಇದು ಮಾತೃಕೆಯಾಗಿದೆ. ಈ ಗ್ರಂಥವು ಮದ್ರಾಸ್ ಗವರ್ನ್ಮೆಂಟ್ ಓರಿಯಂಟಲ್ ಸೀರಿಸ್ ನಂ. XXVIII 1950 ರಲ್ಲಿ ಪ್ರಕಟವಾಗಿದೆ.

No. 1348. ಅಶ್ವವೈದ್ಯ.

ASVAVAIDYA.

Supstance, paper. Size 107/16 × 9 7/16 inches. Pages, 37. Lens, 20 on a page. Extent, 540 granthas. Character, kannada. Condition, good. Appearance, new. Mede of writing, good.

Restored in 1935-36 form the manuscript dascribed under No. 1346. *nte.*

Begins on page 1 of the manuscript. The other work herein are—(1) Vaidyāmṛta pages 38—61. (2) Vaidyakrama pages 61—63.

ವಿ.ವಿ.—

ಸಮಗ್ರ. ಇದುಹಿಂದಣ ೧೩೪೭ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಇದರೊಡನೆ ವೈದ್ಯಾಮೃತ, ವೈದ್ಯಕ್ರಮ ಇವೂ ಇವೆ.

No. 1349. ಔಷಧಗಳು.

AUṢADHAGAḶU.

Substance, paper. Size, 10 $\frac{7}{16}$ × 9 $\frac{7}{16}$ inches. Pages, 2. Lines, 20 on a page. Extent, 22 granthas. Character, Kannada. Condition, good. Appearance, new. Mode of writing, good.

Begins on page 70 of the manuscript. The other work herein is Ratnakaraṇḍaka, page 1.

Incomplete.

This is a restored copy of the last three folios of the manuscript bundle described under No. 5179 in the Sanskrit Descriptive Catalogue Vol. XI and under No. 403 in the Kannada Descriptive Catalogue, Vol. III. Deals with some herbs for omitting and purgative.

Beginning : .

ಮದನ ಮಧುಕ ಲಂಬಾ ನಿಂಬ ಬಿಂಬೀ ವಿಶಾಲಾ ।
ತ್ರಪುಸ ಕುಟಜ ಮೂರ್ವಾ ದೇವದಾಲೀ ಕ್ರಿಮಿಘ್ನಂ ॥
ವಿದುಲ ದಹನ ಚಿತ್ರಾ ಕೋಶವತ್ಯೋ ಕರಂಜಃ ।
ಕಣಾಲವಣವಚೈಲಾ ಸರ್ಷಪಾಃ ಛರ್ದನಾನಿ ॥

ಮದನ = ಮಗ್ಗಾರೆ, ಮಧುಕ = ಯೆಷ್ಟಿ ಮಧುಕ, ಲಂಬಾ = ಕಹಿಸೋರೆ, ನಿಂಬ = ಬೇವು. ಬಿಂಬೀ = ಕಪಿದೊಂಡೆ, ವಿಶಾಲಾ = ಹಾವು ಮೆಕ್ಕೆ, ತ್ರಪುಸ = ಕಹಿ ಮೆಕ್ಕೆ, ಕುಟಜ = ಕೊಡಸಿಗ, ಮೂರ್ವಾ = ಕುರುಟಿಗೆ, ದೇವದಾಲೀ = ದೇವದಾಳಿಯು, ಕ್ರಿಮಿಘ್ನಂ = ವಾಯುವಿಳಂಗ, ವಿದುಲ = ನೀರು ಹಚ್ಚೆ, ದಹನ=ಚಿತ್ರಮೂಲ, ಚಿತ್ರಾ = ಇಲಿಕಿವಿಯು, ಕೋಶವತ್ಯಾ = ಘಂಟಾಲಿಕೆಗಳು, ಅದರೊಂದು ಹೊಂಬಣ್ಣದ ಹೀರೆ (ಒಂದು ಕಹಿಹೀರೆ), ಕರಂಜ = ಹೊಂಗೆ, ಕಣಾ = ಹಿಪ್ಪಲಿ, ಲವಣ = ಸೈಂಧವ ಲವಣ, ವಚಾ = ಬಜೆ, ಏಲಾ = ಏಲಕ್ಕಿ, ಸರ್ಷಪಾ = ಸಾಸಿವೆಯೆಂಬವು, ಛರ್ದನಾನಿ = ವಮನ ದ್ರವ್ಯಂಗಳು ॥ (೧)

* * * *

End :

ದಾರು = ದೇವದಾರು, ರಾಸ್ನಾ = ರಾಸ್ನೆ, ಯವ = ಇಂದ್ರಯವೆ, ಮಿಸಿ = ಸಬ್ಬಸಿಗೆ, ಕೃತವೇದನಂ = ಹೊಂಬಣ್ಣದ ಕಹಿ ಜೀರೆ, ಕುಲತ್ಥಂ = ಹುರುಳಿ, ಮಧು = ಜೇನುತುಪ್ಪ, ಲವಣಂ = ಸೈಂಧವಲವಣ, ತ್ರಿವೃತಾ = ತೆಗಡೆಯೆಂಬಿವು, ನಿರೂಹಕಾನಿ = ನಿರೂಹಣ ದ್ರವ್ಯಂಗಳು ॥ (೨)

ಇತಿ ಸಮಾಪ್ತ.

Colophon :

ವಿ.ವಿ.—

ಅಸಮಗ್ರ; ಕಾಗದ ಪ್ರತಿ. ಲಿಪಿ ಚೆನ್ನಾಗಿದೆ. ಇದು ಸಂಸ್ಕೃತ ಡಿಸ್ಕ್ರಿಪ್ಟಿವ್ ಕ್ಯಾಟಲಾಗಿನ ೫೦೭೭ ನೆಯ ನಂಬರಿನಲ್ಲಿ ಮತ್ತು ಕನ್ನಡ ೪೦೩ ನೆಯ ಡಿ. ನಂಬರಿನಲ್ಲಿ ವರ್ಣಿತವಾದ ಪುಸ್ತಕದೊಡನೆ ಕೊನೆಯಲ್ಲಿ ಸೇರಿಸಿರುವ ಮೂರು ಓಲೆಗಳ ಪ್ರತಿಕೆಯಾಗಿದೆ. ಇದರೊಡನೆ ರತ್ನಕರಂಡಕವೆಂಬ ಇನ್ನೊಂದು ಪುಸ್ತಕವೂ ಇದೆ. ವಮನ ದ್ರವ್ಯಗಳನ್ನೂ ವಿರೇಚನ ದ್ರವ್ಯಗಳನ್ನೂ ದಶಮೂಲಗಳನ್ನೂ ನಿರೂಹಣ ದ್ರವ್ಯಗಳನ್ನೂ ಹೇಳಿದೆ.

No. 1350. ಔಷಧಗಳು-

AUṢADHAGAḶU.

Substance, palm-leaf. Size, $11\frac{3}{4} \times 1\frac{1}{8}$ inches. Pages 4. Lines, 5 on a page. Extent, 22 granthas. Character, Kannada. Condition, much injured. Appearance, old. Mode of wirintg, fair.

Begins on fol. 13*a* of the manuscript. The other works herein are (1) gaṇita 1*a*. (2) Gaṇita 4 *a*. (3) Bāyipāṭha, 15 *a*.

Incomplete.

Similar to the work described above with some antidotal incantation.

Date of transcription.—Saturday, the 2nd day of the bright fortnight of the lunar month Kartika of the year Saumya.

Beginning :

ತಲೆ ಕೋವೆಗೆ, ಕವಡೆಯನು ತೇದು ತುಱುಚೆಯ ಬೇರನು ತೇದು ತುಗುರಿ ಕಾಳಷ್ಟು ನೀರಲ್ಲಿ ತಡಹಲು ಮಾಣ್ಗ.

* * * *

End :

ಓಂ ನಮೋ ಭಗವತೇ ಪಾರ್ಶ್ವನಾಥಾಯ ಸ್ಥಾವರ ಜಂಗಮ ಕೃತ್ರಿಮ ವಿಷ ಸಂಹಾರಾಯ। ಹರ್ ಝುರ್ ಜ್ವಾರ್ ಶ್ರೀ ಹಂಸ ಪಾರ್ಶ್ವನಾಥ ದೇವರಾಜ್ಞಾ। ವಿಷಹರಣ ಮಲ್ಲಿ ದೇವರಾಜ್ಞಾ। ತ್ರಿಭುವನ ಗರುಡನಾಜ್ಞಾ। ಶ್ರೀಧರ ದೇವರಾಜ್ಞಾ। ಶೀಘ್ರಂ ನಿರ್ವಿಷಂ ಕುರುಹೊಂ ಫಟ್ ಸ್ವಾಹಾ ॥

Colophon :

ಪೂಜ್ಯಪಾದ ಸ್ವಾಮಿಯ ಪಾದಸನ್ನಿಧಿಯಲ್ಲಿ ಸೌಮ್ಯ ಸಂವತ್ಸರದ ಕಾರ್ತಿಕ ಶುದ್ಧ ೨ ಸ್ಥಿರವಾರ ಬರೆದ್ಯನು ಭದ್ರಂಭೂಯಾತ್ ॥

ವಿ.ವಿ.—

ಅಸಮಗ್ರ. ಓಲೆಯ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ (1) ಗಣಿತ, (2) ಗಣಿತ, (3) ಬಾಯಿ ಪಾಠ ಎಂಬ ಪುಸ್ತಕಗಳೂ ಇವೆ.

No. 1351. ಔಷಧಗಳು.

AUṢADHAGAḶU.

Substance, palm-leaf. Size, 9 $\frac{5}{16}$ × $1\frac{1}{2}$ inches. Pages, 5. Lines, 4-5 on a page. Extent, 18 granthas. Character, Kannada. Condition, much injured. Appearance, old. Mode of writing, fair.

Begins on fol. 1*a* of the manuscript described under No. 890 *ante*.

Incomplete.

On the treatment of eye-diseases.

ನೇತ್ರವ್ಯಾಧಿಗೆ ತೈಲವಮಾಡುವ ಕ್ರಮ. ರಂಗಪ್ಪ ಬರಸಿದು ॥ ಹರಳೆಣ್ಣೆ, ಹಸುವಿನ ತುಪ್ಪ, ಆ . . . ಗೆ ಇದರ ವಳಯಿಂಕೆಹುಯ್ವ ಸ್ವರಸಗಳು ॥ ಹೊನ್ನಗನ್ನೆ ಸೊಪ್ಪಿನ ರಸ, ಗರುಗದ ರಸ, ಕೊಳಗುಳಕೆ ಸೊಪ್ಪಿನ ರಸ, ಜಾಜಿ ಸೊಪ್ಪಿನ ರಸ, ಎಕ್ಕದ ಹಣ್ಣೆಲೆ ರಸ, ॥ ಅಂತು ಸೊಲ್ಲಗೆ ೫ ಕಷಾಯದ ಬೇರು, ಕರಿಯ ಲೊಕ್ಕಿ ಬೇರು, ನೆಲದುಂಬೆ, ಬದನೆ ಬೇರು, ಹಾಗಲದ ಬೇರು, ಅಪ್ಪೆ ಸೊಪ್ಪಿನ ಗಡ್ಡೆ, ನೆಲದಾಳೆ ಗೆಡ್ಡೆ, ಈ ೬ ಬಗೆ ಬೇರನು ಕುಟ್ಟಿ ಕಷಾಯವನಿಕ್ಕಿ ಅಷ್ಟಾವಶೇಷವಾಗಿಕಾದ ಕಷಾಯ ಸೊಲ್ಲಗೆನು ಸ್ವರಸಕೆ ಹುಯ್ದು, ಎಣ್ಣೆ, ತುಪ್ಪ ಹರಳೆಣ್ಣೆ ಈ ಮೂರು ಬಗೆಯ ಹುಯ್ದು ಕೌಳಾಡಿನ ಹಾಲನೂ, ಗೆನು ಹುಯ್ದು ಇದರ ವಳಯಿಂಕೆ ಹಾಕುವ ಚೂರ್ಣದ್ರವ್ಯ ॥ ವಾಯುವಿಳಂಗ ಗ ೧, ಕಸ್ತೂರಿ ಅರಿಸಿನವರ ಗ ೧, ಅತಿಬಜೆ ಗ ೧, ವಳ್ಳಿಬಜೆ ಗ ೧. ಇದನು ಕುಟ್ಟಿ ಚೂರ್ಣವಮಾಡಿ ಈ ಕಷಾಯವವಳಯಿಂಕೆ ಹಾಕಿ ವಳತಾವ ಮಡಕೆಗೆ ಇಟ್ಟನು ಹುಯ್ದು ವಲೆಮೇಲೆ ಯಿಕ್ಕಿ, ವಿಶೇಷ ಉರಿಯನಿಕ್ಕದೆ ಕಾಸಿ ತೈಲಪಾಕದ ಹದದಲ್ಲಿ ಯಿಳುಹಿದರೆ ಇದರ ತೈಲಕ್ರಮ, ನಾಲ್ಕು ದಿಸಕ್ಕೆ ೧ ಬಾರಿ ಮಂಡೆಗೆ ವತ್ತಿಕೊಂಡು ಚು ಜಲಸೆಕ್ಕೆ ರಸದಲ್ಲಿ ವರಸಿ ಮಿಂದರೆ ಕಣ್ಣು ಚೆನ್ನಾಗುವುದು.

*   *   *   *

End :

ಎಲೆ ಕಪ್ಪುರ ಕಾಸು ೧, ಮೈಲುತುತ್ತ ಕಾಸು ೧. ಇವು ಎರಡನು ಪುಡಿಮಾಡಿ ಹಸುವಿನ ಬೆಣ್ಣೆ ಹಾಳತ್ರವರ್ತ್ರ ಹಾಕಿಕೊಂಡು ನುಗ್ಗಿ ಸೊಪ್ಪಿನ ರಸವನು ಕೂಡಿ ಕಂಚಿನ ತಳಗೆ ಮೇಲೆ ತಾಮ್ರದ ಚೆಂಬಿನಲ್ಲಿ ಚೆನ್ನಾಗಿ ಮರ್ದಿಸಿದರೆ ಕಪ್ಪು ಆಗುತ್ತಾಯಿದೆ. ಇದನು ತಾಮ್ರದ ಭರಣಿಗೆ ಹುಯ್ದುಕೊಂಡು ಕಣ್ಣಿಗೆ ಯಿಚ್ಚಿಕೊಂಬೋಣ.

ವಿ.ವಿ.—

ಅಸಮಗ್ರ. ಓಲೆಯ ಪ್ರತಿ. ಅತಿ ಶಿಥಿಲ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ೪೯೦ ನೆಯ ನಂಬರನ್ನು ನೋಡುವುದು. ನೇತ್ರರೋಗಕ್ಕೆ ಔಷಧವಿದೆ.

No. 1352. ಔಷಧಗಳು.

AUṢADHAGAḶU.

Substance, palm-leaf. Size, 9⅝ × 1¼ inches. Pages, 7. Lines, 4-6 on a page. Extent, 32 granthas. Character, Kannada. Condition, much injured. Appearance, old. Mode of writing, fair.

Begins on fol. 102*b* of the manuscript. The other work herein is Jyōtiṣaviṣaya fol. 1*a*.

Incomplete.

Beginning :

ಸುಂಟಿ, ಕಟುಕರೋಹಿಣಿ, ಮರದರಿಸಿನ,

*   *   *   *

ಕ, ಅರಿದಳ, ಮಣಿಸಿಲೆ, ಅಮಳಸರಗಂಧಕ, ಪಾದರಸ, ಭೇರುಗನ . . . . ಹಿಪ್ಪಲಿ . . . . ಸು, ಕಡುಕಕಾಯಿ, ಉಸುರಿಕಾಯಿ ಇವ . . . ಮಾಡಿ ಗರುಗದ ರಸದಲ್ಲಿ ಮರ್ದಿಸಿ . . . . ಗುಂಜಿಯ ಪ್ರಮಾಣ ಗುಳಗೆಯಂ ಮಾಡಿ, ನೆಳಲೊಳಗೆ ಒಣಗಿಸಿ, ಒಂದು ಗುಳಗೆಯಂ. ಮಜ್ಜಿಗೆಯಲ್ಲಿ ಕೊಳಲು ಸಂಗ್ರಹಣಿ ಮಾಣ್ಗುಂ.

End :

ಪಾಂಡುರೋಗ ಮಾಣ್ಬುಂ. ನಿರೋಗಿಗೆ ಒಂದು . . . . ಉ ಮಾಣ್ಗು । . . . . ಯ ನೊಕಪಾರದಾಲಿ ನಿಂದಿಕೆ ಕೊಡಲು . . . .

ವಿ.ವಿ.—

ಅಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಇದರೊಡನೆ "ಜ್ಯೋತಿಷ ವಿಷಯ" ವೆಂಬ ಇನ್ನೊಂದು ಪುಸ್ತಕವೂ ಇದೆ. ಇದರಲ್ಲಿ ಸಂಗ್ರಹಣಿ ಪಾಂಡುರೋಗ, ದಂತರೋಗ ಅಜೀರ್ಣ ಉದರ, ಶ್ವೈತ್ಯ. ಜ್ವರ, ಇವುಗಳಿಗೆ ಚಿಕಿತ್ಸೆಯಿದೆ.

No. 1353. ಔಷದಗಳು

AUṢADHAGAḶU.

Substance, palm-leaf. Size, 13⅛ × 1¼ inches. Pages 4. Lines, 5 on a page. Character, Kannada. Condition, injured. Appearance, old. Mode of writing, good.

Begins on fol. 44*a* of the manuscript described under No. 208 *ante*. wherein this work is omitted to be included in the list of other works.

Incomplete.

On the treatise of eye-diseases and scabs.

Beginning :

ಚಾಳಾಯಿಸಕ್ಕೆ.—

ಕವಡೆಯನು ತಾಂಬ್ರದ ಬಟ್ಟಲಲಿಯಿರಿಸಿ, ನಿಂಬೆಯ ಹಣ್ಣು ಹಿಂಡಲು ಕಕ್ಷುವುದು ಆಕರಗಿದುದಕ್ಕೆ ಪಿಣ್ಣುಚೀಳ್ಳುಸಹ ಮರ್ದಿಗೆ, ಗುಳಿಗೆಯ ಕಟ್ಟುವುದು. ಆ ಗುಳಿಗೆಯನ್ನು ಮೊಲೆ ಹಾಲಿಂದ ತೇದು ಹಚ್ಚಲು ಗುಣ.

End :

ನೊರಿಹುಣ್ಣಿಗೆ.—

ಉತ್ತರಣೆಯ ಅಕ್ಕಿಯನ್ನು ಹಿಟ್ಟು ಕುಟ್ಟಿ, ಬತ್ತಿಗೆ ಆಲದ ಹಾಲಿಂ ತೊಡೆದು, ಈ ಹಿಟ್ಟಿನೊಳಗೆ ಹೊರಳಿಸಿ, ಕೊನೆಗೆ ಸಕ್ಕರೆಯನ್ನು ತೊಡದು, ಮೊದಲು ಬೆಲ್ಲದ ಬತ್ತಿಯ ಹಾಕಿ ಆ ಮೇಲೆ ಅದಂತೆಗೆದು ಈ ಮುದ್ದಿನ ಬತ್ತಿಯನ್ನು ಹಾಕಲು ನೊರಿ ಮಾಣ್ಗುಂ.

ವಿ.ವಿ.—

ಅಸಮಗ್ರ. ಶಿಥಿಲ. ಲಿಪಿ ಚೆನ್ನಾಗಿದೆ.

ಇದರಲ್ಲಿ ಕಣ್ಣಿನ ರೋಗಕ್ಕೆ ಮತ್ತು ನಾರು ಹುಣ್ಣಿಗೆ ಔಷಧಿಯು ಹೇಳಲ್ಪಟ್ಟಿದೆ.

No. 1354. ಔಷಧಗಳು-

AUṢADHAGAḶU.

Substance, paper. Size, 10 $\frac{7}{16}$ × 9 $\frac{7}{16}$ inches.. Pages, 2. Lines, 20 on a page. Extent, 18 granthas. Character, Kannada. Condition, good. Appearance, new. Mode of writing, not bad.

Restored in 1932–33 from the manuscript described under No. 1351, *ante*.

Begins on page 147 of the manuscript described under No. 891 *ante*.

Incomplete.

ವಿ.ವಿ.—

ಅಸಮಗ್ರ. ಲಿಪಿ ಚೆನ್ನಾಗಿದೆ.

ಇದು ಹಿಂದೆ ೧೩೫೧ ನೆಯ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪುತ್ರಿಕೆಯಾಗಿದೆ.

No. 1355. ಔಷಧಗಳು.

AUṢADHAGAḶU.

Substance, palm-leaf. Size, 17½ × 1⅜ inches. Pages, 6. Lines, 6 on a page. Extent, 50 granthas. Character, Kannada. Condition, very much injured. Appearance, old. Mode of writing, fair.

Begins on fol. 89*a* of the manuscript described under No. 207 *ante.*

Incomplete.

Similar to the work described under No. 1348, *ante.*

Beginning :

ಅರಳಿ ಮರದ ಮೊಗ್ಗುಳ.

ಅಂತರದಲ್ಲಿ ಸುಟ್ಟು ಬೂದಿಯು ಮಾಡಿ, ಆ ಬೂದಿಯು ಕಳಸಿ . . . . . .

* * * *

End :

ಆದನು ಹೆಚ್ಚಿ ಕೊಂಬುದು.

ವಿ.ವಿ.—

ಅತ್ಯಂತ ಶಿಥಿಲವಾದುದರಿಂದ ಇದರಿಂದ ಯಾವ ವಿಷಯುವನ್ನೂ ನಿಷ್ಕೃಷ್ಟವಾಗಿ ಬರೆಯು ಲಾಗುವುದಿಲ್ಲ.

No. 1356. ಔಷಧಗಳು.

AUṢADHAGAḶU.

Substance, paper. Size, 10 $\frac{7}{16}$ × 9 $\frac{7}{16}$ inches. Pages, 6. Lines, 20 on a page. Character, Kannada. Condition, good. Appearance, new. Mode of writing, good.

Restored in 1932–33 from the manuscripts described above (No. 1355).

Begins on page 9 of the manuscript described under No. 1325 *ante.*

Incomplete.

ವಿ.ವಿ.—

ಅಸಮಗ್ರ. ಲಿಪೀಕೃತವಾಗಿದೆ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಲೇಖವಾಗಿದೆ.

No. 1357. ಔಷಧಗಳು.

AUṢADHAGAḶU.

Substance, śritala. Size, 8 × 1 $\frac{11}{16}$ inches. Page, 1. Lines, 3. Extent, 2¼ granthas. Character, Kannada. Condition, fair. Appearance, old. Mode of writing, good.

Substance, palm-leaf. Size, 16⅝ × 1⅜ inches. Pages, 2. Lines, 8. Ezxtent, 16 granthas. Character, Kannada. Condition, injured. Appearance, old. Mode of writing, good.

Begins on fol. 2*b* of the manuscript described under No. 678 *ante*.

Incomplete.

Similar to the work described above.

The text.

ಹಿಪ್ಪಲಿ, ಯಾಲಕ್ಕಿ, ಎರಡು ಬಗೆಯ ಜೀರಿಗೆ, ಅಷ್ಟಮಧುಕ, ಕೊತುಂಬರಿ, ಶುಂಠಿ, ಶಿಲಾಜಿತು, ದ್ರಾಕ್ಷೆಹಣ್ಣು, ಶ್ರೀಗಂಧ ನೆಲ್ಲಿಚಟ್ಟು, ಕಿರುಗುಸಟು,—ಇವಂ ಮೊಸರಲಿ ಅಥವಾ ನೀರಲಿ ಅರದು ಸಕ್ಕರೆ ಸೇರಿಸಿ ಕೊಡೆ ಜ್ವರ, ಭ್ರಮೆ, ಮೂರ್ಛೆ, ಹರ.

ವಿ.ವಿ.—

ಅಸಮಗ್ರ.

ಜ್ವರ, ಭ್ರಮೆ ಮೂರ್ಛೆಗಳಿಗೆ ಔಷಧವಿದೆ.

No. 1358. ಔಷಧಗಳು.

AUṢADHAGAḶU.

Begins on fol. 70*a* of the manuscript described under No. 62 *ante*.

Incomplete.

Beginning :

ಶಂಖವಟಿಕ, ಹುಣಿಸೆಯ ಸಕ್ಕೆಯ ಬೂದಿ ೧ ಹಲ, ಪಂಚಲವಣ, ೧ ಹಲ ಇವೆರಡನೂ ನಿಂಬೆ ಹುಳಿಯಲ್ಲಿ ಸಗಣಿಗದಡವಮಾಡಿ ಕೆಂಡದಹಾಂಗೆ ಶಂಖವನು ೭ ಬಾರಿ ಕಾಸಿ ಆ ಸಗಣಿ ಗದಡಿನಲ್ಲಿ ಅದ್ದಿದರೆ ಕರಗುವುದು. ಆ ಶಂಖವನು ಚತುರ್ಥಾಂಶ ಪ್ರತ್ಯೇಕ, ೪ ಗದ್ಯಾಣ ತೂಕ ಇಂಗನು ಹಾಕುವುದು. ಆ ಚತುರ್ಥಾಂಶ ವತ್ಸನಾಭಿ ತೂಕ ೧, ಗಂಧಕ ೧ ತೂಕ, ಇವೆಲ್ಲವ ಕೂಡಿ ಅಲ್ಲದ ರಸದಲ್ಲು ಬಲ್ವದೊಳು ಏಳುಬಾರಿ ಮರ್ದಿಸಿ ಯೆರಡ ಹಣ್ಣಿನ ಪ್ರಮಾಣ ಗುಳಿಗೆಯಂ ಮಾಡಿ ತುಪ್ಪದಿಂ ಕಲಸಿ ಮೆಲ್ಲಲು ಶೂಲೆ ಗುಲ್ಮಮುಂತಾದ ರೋಗ ಹರ

* * * *

ಹೃದಯ ಶೂಲೆ, ಗ್ರಹಣಿ, ಕುಷ್ಠ, ಜ್ವರ, ಗುಲ್ಮ ಇನಿತಕ್ಕುಂ ಕಾರಣ ಮಕ್ಕು ॥

ವಿ.ವಿ.—

ಅಸಮಗ್ರ.

ಶಂಖವಟಿಕ, ತ್ರೈಲೋಕ್ಯ ತಾಪಹರ ರಸ, ಇವುಗಳೂ ನವಜ್ವರ, ಶೂಲ, ಗುಲ್ಮ, ರಕ್ತಪಿತ್ತ ಇವುಗಳಿಗೆ ಚಿಕಿತ್ಸೆಯೂ ಇವೆ. ರಕ್ತ ಪಿತ್ತವು ಪ್ರಕೋಪಿಸಿದಾಗ ಉಪೇಕ್ಷಿಸಿದರೆ ಹೃದಯ ಶೂಲೆ, ಗ್ರಹಣಿ ಗುಲ್ಮ, ಜ್ವರಗುಲ್ಮಗಳಿಗೆ ಅದು ಕಾರಣವಾಗುವುದೆಂದು ಇದರಲ್ಲಿ ಹೇಳಿದೆ.

No. 1359. ಔಷಧಗಳು.

AUṢADHAGAḶU.

Substance, palm-leaf. Size, $12\frac{3}{4} \times 1\frac{5}{16}$ inches. Pages 142. Lines, 4 to 7 on a page. Extent, 800 granthas. Character, Kannada. Conidtion, injured. Appearance, old. Mode of writing, good.

Incomplete.

Similar to the work described under No. 1343 *ante*.

Beginning :

ವಿಷಮುಷ್ಟಿತೈಲ.—

ಇಟ್ಟಿ ಬೀಜದ ರಸ ಕೊಳಗ ೧, ಅಂಬಿಲ ಕೊಳಗ ೧, ನಿಂಬೆ ಹಣ್ಣಿನ ರಸ ಕೊಳಗ ೧, ಔಡಲದೆಣ್ಣೆ ಬ ೧, ಎಳ್ಳೆಣ್ಣೆ ಬ ೨, ಕಲ್ಕ ನಿಂಬೀ ಬೀಜದ ಚೂರ್ಣ. ೧೨ ಹಲ, ಚಿತ್ರಮೂಲ, ತವಸಿ, ಎರಡು ಗುಳ್ಳದ ಬೇರು, ಗಣಿಜಲೆ ಬೇರು, ಯಷ್ಟಿ ಮಧುಕ, ತ್ರಿಕಟುಕ, ಚೂರ್ಣಂ ಮಾಡಿ ತುಪ್ಪದಿಂ ಲೇಹ್ಯಂ ಮಾಡಿ ಸೇವಿಸೆ ಎಲ್ಲ ಕ್ಷಯ ಹರ. ಹರಿ ಏಲಾದಿ, ಯಾಲಕ್ಕಿ ನಾಗಕೇಸರ, ಪದ್ಮಕ, ಶ್ರೀಗಂಧ, ಲವಂಗ, ಲವಂಗ ತೊಕ್ಕು, ಲವಂಗ ಪತ್ರೆ, ಜಟಾಮಾಂಸಿ, ಆಸಡಿ, ತ್ರಿಕಟುಕ, ಕೊತ್ತುಂಬರಿ, ದೇವದಾರು, ಲಾಮಂಚ, ಮುಡಿವಾಳ, ತಾಳಿಸ ಪತ್ರೆ ಜಾಯಿ ಕಾಯಿ, ಕರ್ಪೂರ, ಕುಂಕುಮ ರಸ ೧ ತೂಕ, ಅಭ್ರಕ ೧ ತೂಕ, ಗಂಧಕ ೧ ತೂಕ ಹಿಪ್ಪಲಿ ಮೂಲ ೩ ತೂಕ, ಲೋಹ ಭಸ್ಮ ೪ ತೂಕ, ಶಂಖಭಸ್ಮ ೮ ತೂಕ, ಕಾಡ ಬೆರಣಿ ಭಸ್ಮ ೧೬ ತೂಕ, ನಾಭಿ ೪ ತೂಕ, ಲೋಕ್ಕರಸದಲ್ಲಿ ಮರ್ದನೆ, ಚಣಕ ಪ್ರಮಾಣ ಗುಳಿಗೆ, ಸಕಲ ಸನ್ನಿಪಾತ ಪರಿಹಾರ ॥

*   *   *   *

ಆಮಾತೀಸಾರಕ್ಕೆ ಬಿಲ್ವಾದಿ ಲೇಹ್ಯ.—

ಬೆಲ್ಲವತ್ತದ ಬೇರು ಹಲ ೩೦, ನಾ(ಲು)ಗು ಬಳ್ಳ ನೀರ ಕಷಾಯವಂ ಮಾಡಿ, ಎರಡು ಬಳ್ಳವ ನಿಲ್ಲಿಸಿಕೊಂಡು, ಮೂವತ್ತು ಹಲ ಹಳೆಯ ಬೆಲ್ಲವಂ ಹಾಕಿ, ಶುಂಠಿ ಹಲ ೩, ಮೆಣಸು ಹಲ ೪, ಜೀರಿಗೆ ಹಲ ೨, ಜೇನು ತುಪ್ಪ ಮಾನ ೨, ಲೇಹ್ಯಪಾಕ.

*   *   *   *

End :

ಗಣಿಜಲೆಯ ಬೇರು, ಮಡುವಾಗಲದ ಗಡ್ಡೆ, ಕತ್ತರಿಯ ಬೇರು, ಅಪ್ಪೆಯ ಗಡ್ಡೆ ಇವಂ . . . . ಅಕ್ಕಿಗಚ್ಚಿನಲ್ಲರೆದು ಘಸೆ ಬಾಹುಮಾಣ್ಯ. ಹಾಲು ಮೆಕ್ಕೆ, ಕಣಗಿಲು ಕತ್ತರಿ ಉನ್ಮತ್ತ, ಕಳ್ಳಿ, ಕಾಚಿನ . . . . .

ವಿ.ವಿ.—

ಅಸಮಗ್ರ. ಶಿಥಿಲ.

ಗ್ರಂಥ ಕರ್ತೃವಿನ ವಿಷಯಗಳು ತಿಳಿದು ಬರುವುದಿಲ್ಲ. ಇದರಲ್ಲಿ ವಿಷಮುಷ್ಟಿತೈಲ ಪ್ರತಾಪ ಲಂಕೇಶ್ವರ, ಅಶ್ವಗಂಧಾದಿ ಚೂರ್ಣ, ಗೋಲಾದಿ ಚೂರ್ಣ, ಅಶ್ವಗಂಧಿಘೃತ, ಹಿರಿಯಾಲಾದಿ ಚೂರ್ಣ, ಅಶ್ವಗಂಧಿ ಲೇಹ್ಯ, ತಾಳಕೇಶ್ವರ ರಸ, ಪ್ರಮೇಹಕ್ಕೆ ಅಪಥ್ಯ, ಜ್ವರ

ಶೂಲಹರ ರಸ, ಆನಂದನಾಯಕ ರಸ, ಅಗ್ನಿಕುಮಾರ, ಪೀನಸಕ್ಕೆ ನಸ್ಯ, ತರುಣಜ್ವರ ಮುರಾರಿ, ಜ್ವರ ಮುರಾರಿ, ಚಾತುರ್ಥಿಕ ರಸ, ಚಂದ್ರಕಲೆ, ದೀಪನರಾಮಬಾಣ, ಅರ್ಧನಾರೀಶ್ವರ ರಸ, ಜಿಲ್ವಾದಿ ಅಂಜನ, ಜ್ವರಾತಿಸಾರಸೇತು, ಮೇಘನಾದೀರಸ, ಗ್ರಹಣೀಗಜಕೇಸರಿ, ಚಂದ್ರಭಾನು, ಚೂಡಸಿದ್ಧಿರಸ, ಸನ್ನಿಪಾತ ಭೈರವ ರಸ, ಶೀತಗಜಾಂಕುಶ, ಸ್ತಂಭನ, ಮೂತ್ರಕೃಚ್ಛ್ರ, ದಾಡಿಮಾದಿ ಚೂರ್ಣ, ಹಿಂಗ್ವಾದಿ ಚೂರ್ಣ, ಬಿಳಿ ಔಷಧಿ, ಅಪಸ್ಮಾರ, ಮೊದಲಾದುವುಗಳನ್ನು ಕುರಿತ ವಿವರಣೆ ಇದೆ.

No. 1360. ಔಷಧಗಳು.

AUṢADHAGAḶU.

Substance, palm-leaf. Size, $13\frac{1}{8} \times 1\frac{1}{4}$ inches. Pages, 2. Lines, 12. Extent, 16 grantas. Character, Kannada. Condition, injured. Appearance, old. Made of writing, good.

Begins on fol. 46*a* of the manuscript described under No. 208 *ante* wherein this work has been omitted to be mentioned as other work.

Incomplete.

On the treatment of itches and scabs.

Beginning :

ವ್ರಣಗಳಿಗೆ.—

ತಲೆ ಹುಣ್ಣಿಗೆ—ತೆಂಗಿನ ಕಾಯಿ ಕೊಟ್ಟೆಯು ರಸವ ತೊಡೆಯಲು ತಲೆ ಹುಣ್ಣು ವಾಣ್ಯಗಂ. ಆಲದ ಹಾಲು, ಮೊಸರು, ಸುಣ್ಣ ಇವು ಮೂರರು ಅರೆದು ತೊಡೆಯಲು ಹುಣ್ಣು ವಾಣ್ಯಗಂ.

ಒಡೆಯದೆ ಯಿದ್ದ ಬಾವಿಗೆ ಕಾಡ ಬಸಲೆ ಬೇರಂ ಅರೆದು ಪೂಸಲು ಒಡೆವ್ರದು. ಕೆಂಬಾವಿಗೆ.—ಯಿಳಿಣ, ಸುಣ್ಣ, ಅರಿದಳ, ಕವನದ ಕೊಸರು, ಇವಂ ನಿಂಬೆ ಹುಳಿಯಲ್ಲಿ ಅರೆದು ಪೂಸಲು ಕೆಂಬಾವು ವಾಣ್ಯಗಂ ॥

ವಿ.ವಿ.—

ಅಸಮಗ್ರ. ಲಿಪಿ ಚೆನ್ನಾಗಿದೆ.

ಇದರಲ್ಲಿ ಹುಣ್ಣುಗಳಿಗೂ ಬಾವುಗಳಿಗೂ ಔಷಧವು ಹೇಳಲ್ಪಟ್ಟಿದೆ.

No. 1361. ಔಷಧಗಳು.

AUṢADHAGAḶU.

Substance, palm-leaf. Size, $13 \times 1\frac{5}{16}$ inches. Pages, 66. Lines, 5 on a page. Extent, 550 granthas. Character, Kannada. Condition, very much injured. Appearance, old. Mode of writing, fair.

Incomplete—Wants some portions in the beginning and in the end.

On the treatment of diseases of different kinds.

Beginning :

. . ತಿ ಗಳು ಮಾಳ್ಪ ವತ್ಸನಾಭಿ, ಇಟ್ಸಿಯ ಬೀಜ, ಗಿರಿಕರ್ಣಿಕೆಯ ಬೇರು, ಶಾಳಿಯ ಕಟ್ಟಿಗೆಯ ಪುಡಿ, ಬೆಲ್ಲದ ಪುಡಿ ಇಷ್ಟನು ಎಳ್ಳ ಎಣ್ಣೆಯಲ್ಲಿ . . . . ತ್ರಿಯ ನಿಕ್ಕಲು ಗಂಡಮಾಲೆ ಬಗದಾಳ ದಂತಾರ್ಬುದ ಮಾವುದು. ನಿಂಬೆಯ ಬೀಜ, ಏಲಕ್ಕಿ ಎಲೆಯ ಮುಗುಳು, ಶ್ರೀಗಂಧ, ಪಚ್ಚೆ . . . . ನೀರಲ್ಲಿ ಕೊಡಲು ಇದಿರೋಕರಿಕೆ ಮಾಣ್ಬು.

* * * *

ಪ್ರಮೇಹ ಜ್ವರಕ್ಕೆ ಲವಂಗ ೧ ತೂಕ, ಏಲಕ್ಕಿ ೧ ತೂಕ, ಹಿಪ್ಪಲಿ ೧ ತೂಕ, ... ಷ್ಟನು ಚೂರ್ಣವಮಾಡಿ ಮೂರು . . . . . ಪತ್ಯ, ಹಾಲು . . . . .

ವಿ.ವಿ.—ಅಸಮಗ್ರ. ಅತ್ಯಂತ ಶಿಥಿಲ.

ಕವಿಯ ಅಥವಾ ಗ್ರಂಥ ಕರ್ತೃವಿನ ಹೆಸರನ್ನು ತಿಳಿಯಲು ಸಾಧ್ಯವಿಲ್ಲ. ಗಂಡಮಾಲೆ, ಆಮ್ರಪಿತ್ತ, ನಾರಹುಣ್ಣು, ಬಿಳಿಯ ಕುಷ್ಠ, ಗುಲ್ಮ, ಬಾಣಂತಿರೋಗ, ಗರ್ಭಶೂಲೆ, ಮೂಲವ್ಯಾಧಿ, ಯೋನಿದೋಷ, ಬಗದಾಳ, ದಂತಶೂಲೆ, ಉದರಶೂಲೆ, ಕಾಮಲೆ, ಸರ್ವರೋಗ, ಎಲ್ಲಾ ಹುಣ್ಣು, ಇದಿರೋಕರಿಕೆ, ಊದುವಾತ, ಬಾಣಂತಿವಾತ, ಪೋಪಗರ್ಭ, ಸ್ತ್ರೀವಶ್ಯ, ಮೂತ್ರ ಕಟ್ಟುವುದು, ಬಹು ಮೂತ್ರ, ಎಲ್ಲಾ ಕಣ್ಣು ರೋಗ, ಸನ್ನಿಪಾತ, ವಿರೇಕತರುಣಜ್ವರ, ನಾನಾಕುಷ್ಠ ಮೊದಲಾದುವುಗಳಿಗೆ ಔಷಧ ಯೋಗಗಳು ಹೇಳಿವೆ.

No. 1362. ಔಷಧಗಳು-

AUṢADHAGAḶU.

Substance, 0alm-leaf. Size, 11⅛ × 1 1/16 inches. Pages, 4. Lines, 5 on a page. Extent, 30 granthas. Character, Kannada. Condition, very much injured. Appearance, old. Mode of wiriting, fair.

Begins on fol. 65*a* of the manuscript described under No. 735 *ante* wherein this work is omitted to be included in the list of other works.

Beginning :

ಲೇಪಕ್ಕೆ.—

ಜೇನುತುಪ್ಪ, ಪಚ್ಚೆಕರ್ಪೂರ, ನೆಟ್ಟಿಮಧುಕ, ಬೆಳುಗಾರ, ಹೊಮ್ಮುಗುಳು, ಬಿಳಿಯುಗುರು, . . ಂಡಿ, ಕಕ್ಕೆಯಹಗಿನು, ಇಂಗಳದ ಹ . . . . ಹಗಿನ ಇಷ್ಟನು ಕೂಡು (? ಡಿ) ಯುರ್ದಿಸಿ (? ಮರ್ದಿಸಿ) ಕರಡಗೆ ಇರಿಸಿಕೊಂಡು ಬೇಕಾದಾಗ ಲಿಂಗಲೇಪಂ ಮಾಡಿಕೊಂಬುದು. ಇದು ಮದನ ಕಾಮೇಶ್ವರಿಯ . . .

End :

. . . . . . ಮೆಣಸು ಗ ೧॥, ಶುಂಠಿಗ, ೧॥ ಇವರ್‍ನು ಚೂರ್ಣವಂ ಮಾಡಿ ಗ ಢ ಚೂರ್ಣ ಬಿಸಿನೀರಲ್ಲಿ ಕೊಳ್ಳ . . . . . ಕಾಸ ಶ್ವಾಸ, ಹೃದಯಶೂಲೆ ಪೂಣ್ಣು. ಇದು ವಜೀರ . . . ಚೂರ್ಣ.

ವಿ.ವಿ.—

ಅಸಮಾಗ್ರ. ಅತ್ಯಂತ ಶಿಥಿಲವಾದ ಪ್ರತಿ. ತಪ್ಪುಗಳಿವೆ. ಇದರಲ್ಲಿ ಮದನ ಕಾಮೇಶ್ವರಿ ಲೇಪ, ಮತ್ತು ಕಾಸಶ್ವಾಸಗಳಿಗೂ, ಹೃದಯ ಶೂಲೆಗೂ ಚೂರ್ಣ ಮುಂತಾದ ಕೆಲವು ಔಷಧಗಳು ಹೇಳಲ್ಪಟ್ಟಿವೆ.

No. 1363. ಔಷಧಗಳು.

AUṢADHAGAḶU.

Substance, Kadjan. Size, 10⅝ × 4⅜ inches. Pages, 15. Lines, 17.20 on a page Extent, 35 granthas. Character, Kannada. Condition, much injured Appearance, old. Mode of writing, not bad.

Pages 3–11, 60–63, 170 and 171 contain this work and pages, 1–3, 12–59 and 64 to 169 contain Ādāya vseea.

Incomplete.

Similar to the work described above.

Beginning :

ರಸಭಸ್ಮ, ಅಂ(ಕೋಲೆಯ ?) ಗರಿ ರಸವನ್ನು ಹಿಂಡುವ ವಿವರ—ಸಣ್ಣನಾಗಿ ಚಚ್ಚಿ ಈ ರಸಗೋಣಿವಾಲಿನಲ್ಲಿ (?) ಮುರಿದು ಹಿಂಡಿಕೊಂಡು ಪಾದರಸಕ್ಕೆ ಹಾಕಿ ಅರೆದು ಮಣ್ಣು ಹೂಸಿ, ಮೂಷಿ ಈ ಉಪ್ಪ ಬೇರಣಿ ಬೆರಣಿ ನಾಲ್ಕು ಬೆರಣಿಲ್ಲಿ ಪುಟಹಾಕಿ ಈ ಪ್ರಕಾರಕ್ಕೆ ಈ ರಸಹಿಂಡಿ ಅರೆದು, ೨೧ ವೈಳೆ ಪುಟಂ ಹಾಕಿದಲ್ಲಿ ರಸಭಸ್ಮವಾಗುವುದು. ಬೆಳ್ಳಿ, ತಾಮ್ರ ಹತ್ತು ಹಣ ತೂಕ, ಈ ಭಸ್ಮ ಹಣ ತೂಕದಲ್ಲಿ ಸುವರ್ಣವಾಗುವುದು. ಇನ್ನು ರಸಭಸ್ಮಕ್ಕೆ ಇದೆ ಹಸುರು ರಸ, ನಿಂಬೆಯ ಹುಳಿ ಎಕ್ಕದ ಹಾಲು, ಗೋಳಾಯಿ, ಅನ್ನಭೇದಿ, ಇದನೆಲ್ಲಾ ಹಾಕಿ ಅರೆದು, ಮಣ್ಣು ಮೂಸೆ ಕಟ್ಟಿ ಪುಟಕ್ಕೆ ಹಾಕಲು ಭಸ್ಮವಾಗುವುದು.

* * * *

End :

ಕ್ರಿಮಿರೋಗಕ್ಕೆ.—

ಹೊಂಗೆ ಎಣ್ಣೆಮಾನ ೨, ಬೇವಿನ ಎಣ್ಣೆಮಾನ ೨, ಮರುಳು ಉಮ್ಮತ್ತದ ಬೀಜ 1, ಕರಿಜೀರಿಗೆ 1, ಕೈಸೂರೆ ಬೀಜ 1, ಅರಿಸಿನದಪುಡಿ 1, ಬಜೆಪುಡಿ 1, ಅಳಲೆಕಾಯಿಪುಡಿ 1, ಹೊಗೆಸೊಪ್ಪಿನಪುಡಿ 1, ಗೋಣಿಕರಿ 1, ಕೆಂಪುಕಣಗಿಲ ಎಲೆಬೂದಿ 1, ಸಣ್ಣಕಳ್ಳಿ ಸುಟ್ಟು ರಸತೆಗೆದು ಮಡಿಕೆಗೆ ಹಾಕಿ, ಎಣ್ಣೆಯನ್ನು ಹಾಕಿ, ಈ ಬೂದಿಯನ್ನು ಹಾಕಿ, ದಿನ ಪ್ರ . . . . . . ಪ್ಪನಿಂಬೆ ಹುಳಿಯಲ್ಲಿ ಅರೆದು ಹಾಕಿ ರಸಕರ್ಪೂರದ ಹುಡಿಮಾಡಿ ಹಾಕಿ, ಯಾಲಕ್ಕಿ ಪುಡಿಮಾಡಿ ಹಾಕಿ . . . . ನಿತ್ಯ ಹಚ್ಚುವುದು.

ವಿ.ವಿ.—

ಸಮಗ್ರ. ಶಿಥಿಲ.

ಅಲ್ಲಲ್ಲಿ ಕೆಲವು ಔಷಧಿಗಳನ್ನು ಹೇಳಿರುವನು. ಇದರಲ್ಲಿ "ರಸಭಸ್ಮ, ಮದನಕಾಮೇಶ್ವರಿ, ವಂಗಭಸ್ಮ, ಸತ್ವಭಸ್ಮ, ಗಂಧಕ ತೈಲ, ಕ್ರಿಮಿರೋಗ" ಇವು ಹೇಳಿವೆ.

ಆದಾಯು ವೆಚ್ಚದಪಟ್ಟಿ (ಮೊಗೂರು) ಇದರೊಡನಿದೆ. ಇದರಲ್ಲಿ ರಸ ಭಸ್ಮವು ಸ್ವರ್ಣವನ್ನು ತಾಮ್ರದಿಂದಾಗಲೀ ಬೆಳ್ಳಿಯಿಂದಾಗಲೀ ತಯಾರು ಮಾಡಲು ಸಹಕಾರಿಯಾಗುವುದೆಂದು ಬರೆದಿದೆ.

No. 1364. ಔಷಧಗಳು.

AUṢADHAGAḶU.

Substance, paper. Size, $10\frac{3}{8} \times 9\frac{7}{16}$ inches. Page, 1. Lines, 13. Extent, 9 granthas. Character, Kannada. Condition, good. Appearance, old. Mode of writing, good.

Begins on page 83 of the manuscript described under No. 1199 *ante.*

Incomplete.

Similar to the work described above.

ವಿ.ವಿ.—

ಅಸಮಗ್ರ ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ.

ಬಾಣಂತಿಸನ್ನಿ, ಕಿವಿನೋವು, ಮತ್ತು ಸೊಂಟ ನೋವುಗಳಿಗೆ ಔಷಧ ಬರೆದಿದೆ.

No. 1365. ಔಷಧಗಳು.

AUṢADHAGAḶU.

Substance, paper. Size, $10\frac{3}{8} \times 9\frac{7}{16}$ inches. Pages, 83. Lines, 20 on a page. Extent, 800 granthas. Character, Kannada. Condition, good. Appearance, new. Mode of writing, good.

Restored in 1930–31 from the manuscript D. No. 1359 *ante.*

Incomplete.

ವಿ.ವಿ.—

ಅಸಮಗ್ರ. ಲಿಪಿ ಚೆನ್ನಾಗಿದೆ. ಇದು ಹಿಂದೆ ೧೩೫೯ ನೆಯ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಕೆಯಾಗಿದೆ.

No. 1366. ಔಷಧಗಳು.

AUṢADHAGAḶU.

Substance, paper. Size, $10\frac{7}{16} \times 9\frac{7}{16}$ inches. Pages, 55. Lines, 20 on a page. Extent, 550 granthas. Character, Kannada. Condition, good. Appearance, new. Mode of writing, good.

Restored in 1932–33 from the manuscript D. No. 1361.

Incomplete.

ವಿ.ವಿ.—

ಅಸಮಗ್ರ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದು ಹಿಂದೆ ೧೩೬೧ ನೆಯ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಕೆಯಾಗಿದೆ.

No. 1367. ಔಷಧಗಳು.

AUṢADHAGAḶU.

Substance, palm-leaf. Size, 8 $\frac{1}{16}$ × 1⅛ inches. Pages, 2. Lines, 4 on a page Extent, 6 granthas. Character, Kannada. Condition, injured. Appearance, old. Mode of writing, good.

Begins on fol. 115 of the manuscript described under No. 1095 *ante*. Incomplete.

Beginning :

ಸಮನಾಗಿ ಕಲ್ಯದೊಳು (? ಬಲ) ಹಾಗಲದ ರಸದಲ್ಲಿ ಮರ್ದಿಸಿ ಗುಂಜಿ ಪ್ರಮಾಣ ಗುಳಿಗೆಯಂ ಮಾಡಿ ಒಂದು ಗುಳಿಗೆಯಂ ಜೀರಿಗೆ ಬೆಲ್ಲದಲ್ಲಿ ಕೊಡುವುದು. ಪಥ್ಯ—ಹಾಲು ಮೋಗರ, ಗಂಜಿಮೋಗರ, ಉಪ್ಪು, ... ದಿನ . . . ಬಹು ಚಳಿ, ಚಾತುರ್ಥಿಕ ಜ್ವರ ಬಿಡುವುದು.

End :

ಜ್ವರಕ್ಕೆ ಗುಳಿಗೆ—ಹಿರಿಬಿ ೪ ತೂಕ, ಹಿಪ್ಪಲಿ ೫ ತೂಕ, ಗಂಧಕ ೨ ತೂಕ, ವತ್ಸನಾಭಿ ೨ ತೂಕ, ರಸ ೧ ತೂಕ, ನಾಭಿಯ ಸು ಹಿರಿಬಯ್ಯನು ೨ ನು ಗೋಮೂತ್ರದಲ್ಲಿ ೧.ದಿನ ಏರಿಸುವುದು . . . . . ದಕವ ಹಸುವಿನ ಹಾಲಲ್ಲಿ ಒಂದು ಕುಡಿಬಳಿಕ ಇವ ಇಷ್ಟನು ನಿಂಬಿಯ ರಸದಲ್ಲಿ ನಾಲ್ಕು ಜಾಮ ಮರ್ದನೆಯಂ ಮಾಡಿ ಗುಂಜಿಯ ಪ್ರಮಾಣ ಗುಳಿಗೆಯಂ ಮಾಡಿ . . . ‘ . . . .

ವಿ.ವಿ.—

ಅಸಮಗ್ರ. ಶಿಥಿಲ. ಚಾತುರ್ಥಿಕ ಜ್ವರಕ್ಕೂ ಜ್ವರಕ್ಕೂ ಮದ್ದು ಬರೆದಿದೆ.

No. 1368. ಔಷಧಗಳು.

AUṢADHAGAḶU.

Substance, palm-leaf. Size, 8½ × 1¼ inches. Pages, 2. Lines, 7. Extent, 7 granthas. Character, Kannada. Condition, injured. Appearance, old. Mode of writing, good.

Begins on the 1st fol. The other work herein is: Nakṣhatra-cūdāmaṇi, fol. 2*a*.

Deals with the medicine of head-ache.

Text

ತಲೆಯ ಶೂಲೆಯ ಮದ್ದು.—ಔಷಧಿ, ಕಟುಕ ರೋಹಿಣಿ, ವಾಹಿವಿಳಂಗ, ಹಿಪ್ಪಲಿ, ಹಿಪ್ಪಲೀ ಮೂಲ, ಗಂಟು ಭಾರಂಗಿ, ಮರದರಿಸಿನ, ಅರುಸನ, ಮೆಣಸು, ಸುಂಠಿ, ಉಳ್ಳಿ, ಕರ ಅಣಬೆ, ಪ್ರತ್ಯೇಕ ಒಂದು ಒಂದು ತೂಕದಲ್ಲಿಯಿಮ್ಮ್ತನ ಎಣ್ಣೆಯಲ್ಲಿ (? ಯಿಮ್ಮಾತನ-ಇಮ್ಮರ್ಗನ) ಪಾಕವ ಮಾಡಿ ಆಪಾದಮಸ್ತಕ ಪರಿಯಂತರ ತೈಲವನೊತ್ತಿ ಮಧ್ಯಾಹ್ನ ಪರ್ಯಂತರ ಸೂರ್ಯ ಪುಟದಲ್ಲಿ ಊದು (? ಇಡುವುದು). ಅಲ್ಲಿಂದ ಮೇಲೆ ತಾಬಳಲುವ ಪರ್ಯಂತರ ಮೀವದು

ಪಥ್ಯಕ್ಕೆ ಹಾಲುಬೋನ, ದಿನಚರಿಯಲ್ಲಿ ಬಿಸಿ ಅಗ್ಗವಣಿಯುಮೊಪ್ಪುದು. ಈ ತಲೆ ಶೂಲೆಗೆ ನಸ್ಯ - ನಿಷ್ಟಿವಮಧುಕ ,ಕರ್ಪೂರ, ಸಪ್ಪೆಹಸುವಿನ ತುಪ್ಪದಲ್ಲಿ ಮಂಡೆಯು ಸನ್ನಿ ತಲೆನೋವಿಗೆ ನಸ್ಯ ಸುಂಟಿ, ಬೆಲ್ಲ ಮೊಲೆವಾಲಲ್ಲಿ ತೇದು ನಸೆಯುಮಂ ಮಾಡಲು ಮಾಣ್ಗು.

ವಿ.ವಿ.—

ಅಸಮಗ್ರ. ತಲೆನೋವಿಗೆ ಔಷಧಿಯನ್ನು ಹೇಳುತ್ತದೆ.

No. 1369. ಔಷಧಗಳು (ಸಂಸ್ಕೃತ) (ಕರ್ಣಾಟಕ ಟೀಕಾ ಸಹಿತ-)

AUṢADHAGAḶU (SKT.) WITH KANNADA MEANING.

Substance, palm-leaf. Size, $11\frac{1}{4} \times 1\frac{1}{4}$ inches. Pages, 2. Lines, 7 on a page. Extent, 16 granthas. Character, Kannada. Condition, slightly injured. Appearance, old. Mode of writing, good.

Begins on fol. 140*a* of the manuscript described under No. 2421 in the Sanskrit Descriptive Catalogue, Vol. IV Part II, wherein the name of this work has been mentioned as Vaidyaviṣaya in the list of other works.

The text herein has been described in D. No. 13235 in the Sanskrit Descriptive Catalogue, Vol. XXIII.

Beginning :

(ಟೀಕೆ)—ದಾಡಿಂಬ ತೊಕ್ಕು, ಮಾವಿನ ಬೀಜ, ಜಲದದ ಸೊಪ್ಪು, ಬಿಲ್ವಪತ್ರದ ತಿರುಳು, ಎಲವಗದ ಹಗಿನು, ಧಾತಕೀ ಕುಸುಮ, ಅಜಮೋದ, ಅತಿಬಜೆ, ಕೊಡಸಿಗನ ತೊಕ್ಕು, ಶುಂಠಿ, ಹೆಮ್ಮರ ತೊಕ್ಕು, ಕೊಡನಾರಿ ಗಡ್ಡೆ, ಮ್ರೋವು, ಕೊಡಸಿಗನ ಬೀಜ, ಹಿಪ್ಪಲಿ, ಲೋಧ್ರ, ಸಾಸಿವೆ ಯಿವು ಸಮಾಂಶ ಚೂರ್ಣ.

End :

(ಟೀಕೆ).—ಕಲ್ಲುಪ್ಪು, ಸಾವತ್ಸರ ಲವಣ, ಸೈಂಧವ ಲವಣ, ಯವಕ್ಷಾರ, ಸದ್ಯಕ್ಷಾರ, ಮೆಣಸು, ಓದಕ್ಕಿ, ಹಿಪ್ಪಲಿ, ಹಿಪ್ಪಲಿ ಮೂಲ, ಗಜ ಹಿಪ್ಪಲಿ, ಚಿತ್ರಮೂಲ, ಶುಂಠಿ, ಇಂಗು, ವಾಯು ವಿಳಂಗ, ಅಳಲೆಕಾಯಿ, ಇಷ್ಟು ಸಮಾಂಶ ಚೂರ್ಣ.

ಟಂಕಣಾಗ್ನೇಯಮುಖೇ ಶುದ್ಧಿಃ । (?) ಸಮಸ್ತ ಕರ್ಣ ಶೂಲೆಗೆ—

ವಿ.ವಿ.—

ಅಸಮಗ್ರ. ಸಂಸ್ಕೃತ ಶ್ಲೋಕಗಳೂ ಅವುಗಳಿಗೆ ಕನ್ನಡ ಟೀಕೆಯೂ ಇವೆ. ಮೂಲವು ಸಂಸ್ಕೃತ ಡಿಸ್ಕ್ರಿಪ್ಟಿವ್ ಕೆಟಲಾಗಿನ ೧೩೨೩೫ ನೆಯ ನಂಬರಿನಲ್ಲಿ ವರ್ಣಿತವಾಗಿದೆ. ಮೊದಲಿನ ಎರಡು ಶ್ಲೋಕಗಳಿಗೆ ಮಾತ್ರ ಟೀಕೆಯು ಬರೆದಿಲ್ಲ.

No. 1370. ಔಷಧಗಳು (ಸಂಸ್ಕೃತ) ಕರ್ಣಾಟಕ ಟೀಕಾ ಸಹಿತ.

AUṢADHAGAḶU (SKT.) WITH KANNADA MEANING.

Substance, palm-leaf. Size, $12\frac{1}{8} \times 1\frac{1}{4}$ inches. Pages, 13. Lines, 5 on a page. Extent, 80 granthas. Character, Kannada. Condition, slightly injured. Appearance, old. Mode of writing, fair.

Begins on fol. 14*b* of the manuscript described under 13217 in the Sanskrit Descriptive Catalogue, Vol. XXIII, wherein this work has been mentioned as Vaidyavisaya in the list of other works.

The text has been described under D. No. 13236 in the Sanskrit Catalogue, Vol. XXIII.

Beginning ;

(ಟೀಕು).—ಲವಂಗ, ಗ ೧ ತೂಕ, ಏಲಕ್ಕಿ ಗ ೨ ತೂಕ, ಹಿಪ್ಪಲಿ ಗ ೩ ತೂಕ, ತವಕ್ಷೀರ ಗ ೪ ತೂಕ, ಯಷ್ಟಿ ಮಧುಕ ಗ ೫ ತೂಕ, ಇಷ್ಟು ಚೂರ್ಣವಂ ಮಾಡಿ ಸಕ್ಕರೆ ಗ ೧೨ ತೂಕವನ್ನು ಬೆರಸಿ ಹಸುವಿನ ಹಾಲು ಬೆಣ್ಣೆಯಲ್ಲು ತೆಗೆದುಕೊಳ್ಳಲು ಕ್ಷಯ, ಕಾಮಾಲೆ, ಪಿತ್ಥ, ಶಿರೋಭ್ರಮೆ ಯಿನಿತು ವ್ಯಾಧಿಗಳೆಲ್ಲ ಹರಂ ॥

End :

(ಟೀಕು).—ಪಂಚಗವ್ಯ ಘೃತ, ಮುಸ್ತೆ, ಏಲಕ್ಕಿ, ಚಿತ್ರಮೂಲ, ವಿಳಂಗ, ಯಷ್ಟಿ ಮಧುಕ, ಅರಸಿನ, ಮಂಜಿಷ್ಠಗೆ, ಅಗುಳು, ಶುಂಠಿ, ಬಜೆ, ಹಿಪ್ಪಲಿ ಕಟುಕ ರೋಹಿಣಿ, ತ್ರಿಫಲೆ, ಆಡುಸೋಗೆ, ದ್ರಾಕ್ಷೆ ಹಣ್ಣು, ಮರದರಸಿನ ಇವು ತೂಕ ೧ ॥ ೦ ॥ ತುಪ್ಪ ಹಲ ೧೦, ಗೋಮಯ ಹಲ ೫ ತೂಕ, ಗೋಮೂತ್ರ ಹಲ ೧, ಹಾಲು ಹಲ ೮, ಮೊಸರು ಹಲ ೫.

ವಿ.ವಿ.—

ಅಸಮಗ್ರ. ಕೆಲವು ಔಷಧ ಯೋಗಗಳನ್ನು ಹೇಳುವ ಸಂಸ್ಕೃತ ಶ್ಲೋಕಗಳೂ ಅವುಗಳಿಗೆ ಕನ್ನಡದ ಟೀಕೆಯೂ ಬರೆಯಲ್ಪಟ್ಟಿವೆ. ಮೂಲವು ಸಂಸ್ಕೃತ ಡಿಸ್ಕ್ರಿಪ್ಟಿವ್ ಕ್ಯಾಟಲಾಗಿನ ೧೩೨೩೬ ನೆಯ ನಂಬರಿನಲ್ಲಿ ವರ್ಣಿತವಾಗಿದೆ. ಮೊದಲು ಏಳೆಂಟು ಶ್ಲೋಕಗಳಿಗೆ ಟೀಕೆಯನ್ನು ಬರೆದಿಲ್ಲ.

No. 1371. ಔಷಧಯೋಗ ವಿವರಣ.

AUṢADHAYŌGAVIVARAṆA.

Substance, palm-leaf. Size, $11\frac{5}{8} \times \frac{7}{8}$ inches. Pages, 138. Lines, 5 on a page **Extent**, 700 granthas. Character, Kannada. Condition, very much injured. Appearance, old. Mode of writing, fair.

The other works herein are—(1) Nakṣhatracūdāmaṇi (Telugu) 73*a*, (2) Samvatsaraphalam, 77*a*.

Incomplete.

Deals with medicines from various diseases.

Folos. 10*a*, 11*a*, 21*b*, 48*a*, 58*a* and 71*b* are left blank.

Beginning :

ಪ್ರತಾಪ ಲಂಕೇಶ್ವರಂ, ಏಕೆಂದು ಚಂದ್ರಂ, ನೆಲವಾಟಕುಂಭೀ ಕಳಕಭಾಗಂ, ಕ್ರಮಶೋವಿವಿಃಕ್ರಂ, ಸುತಾಮ್ರ ಗಂಧೋಷಣಾ ಲೋಹ ಶಂ . . . . . ನೋತ್ಪಲ ಛಸ್ಥವಿಸು ಮುಸು ಪೀತಂ ॥ (?) ಹಳೆಯ ಜ್ವರಗಳಿಗೆ, ರಸ ೧, ಗಂಧಕ ೨, ಇಂಗಲೀಕ ೩,

ಜೇಪಾಳದ ಕಷಾಯದಲ್ಲಿ ಎರಡು ಜಾವ ಮರ್ದಿಸಿ, ಗುಂಜಾ ಪ್ರಮಾಣ ಗುಳಿಗೆಯ ಮಾಡಿ ನೆಳಲಲ್ಲಿ ಒಣಗಿಸಿ, ಒಂದು ಗುಳಿಗೆಯನು, ಒಂದು ತೂಕ ಸಕ್ಕರೆಯಲ್ಲಿ ಕೊಟ್ಟರೆ ಒಂದು ಎರಡು ಬಾರಿ ವಿರೇಚನವಹುದು; ಮೇಲೆ ಒಂದು ಬಟ್ಟಲು ಬಿಸಿನೀರ ಕೊಟ್ಟು ವಿರೇಚನವಹುದು, ಹಳೆಯ ಜ್ವರ ಬಿಟ್ಟು ಹೋಹುದು. ಇದಕ್ಕೆ ಪಥ್ಯ ಬೆಣ್ಣೆ ಓಗರ, ಹೆಸರ ಕಟ್ಟು ಕೊಡುವುದು. ಇಲ್ಲವೆ ಮೊಸರು ಓಗರ, ಮಜ್ಜಿಗೆ ಓಗರ ಇಕ್ಕುವುದು.

* * * *

ವಿಷಪರಿಹಾರಕ್ಕೆ.—ವತ್ಸನಾಭಿಗೆ ಅಶ್ವಗಂಧಿ, ಕಣಗಿಲೆ ಬೇರಿಗೆ ಅಣಿಲೆಕಾಯಿ, ಎಕ್ಕೆ, ಹಾಲಿಗೆ ಬೆಣ್ಣೆ, ಉಮ್ಮತ್ತದ ಬೀಜ, ಎಣ್ಣೆಗೆ ಹತ್ತಿ ಬೀಜ, ಬಿಸಿನೀರು, ಗುರುಗುಂಜಿ ಎಣ್ಣೆಗೆ ಕಿರುಕುಸಾಲೆ ಬೇರು, ಕೋಳಿ ಕುಟುಕ ಗೆಡ್ಡೆಗೆ ಶುಂಠೀರಸ, ಉಚೆಮಲಿಹುಳು ವಿಸಕ್ಕೆ ನೆಲಾವರೆ ಸಮೂಲ, ವಾಗರ ಎಣ್ಣೆ ಅರೆದು ಕುಡಿದರೆ, ಸುಣ್ಣದ ನೀರು, ಸಕಲ ವಿಷಕ್ಕೆ ನೀಲಿ ಬೇರಕಂಬಳಿ ಸುಟುಂ ಕರುಕು ಬಿಸಿನೀರು.

* * * *

End :

ಮೃತಾರ ಸಿಂಗಿ (ಮೃದಾರ ಸಿಂಗ್, ಖನಿಜ - ಅಂಗಡಿ ಮದ್ದು) ೩ ತೂಕ, ಪಾಷಾಣ ೧೦ ತೂಕ ನವಸಾರ ೫ ತೂಕ, ಬಿಳುಗಾರ ೨ ತೂಕ, ಪಾದರಸ ೩ ತೂಕ, ಇವನ್ನು ನಿಂಬೆ ಹುಳಿಯಲ್ಲು ಅರೆದು, ಗಟ್ಟಿಮಾಡಿ ಮಡಕೆಯ ನಡುವೆ ಇರಿಸಿ ತಾಮ್ರ ೪ ತೂಕದ ಬಟ್ಟಲಮಾಡಿ ಬೆಳ್ಳಿ ಬಟ್ಟಲು ೪ ತೂಕ ಬಟ್ಟಲಮಾಡಿ . . . . ಣವೆಜ . . ಮಾಡಿ ಮುಚ್ಚಿ, ಸಿರುಮಣ್ಣಂ ಗೊಂಡು, ಆ ಮೇಲೆ ತಾಮ್ರದ ಬಟ್ಟಲ ಮುಚ್ಚಿ, ಮೇಲೆ ಮಳಲ ಹೊಯ್ದು, ಮುಚ್ಚಿ ಜಾವ ಅಟ್ಟು, ಬೆಳ್ಳಿಯ ಬಟ್ಟಲ ಕೆಳಕ್ಕೆ ತೆಗೆದು, ತಾಮ್ರದ ಬಟ್ಟಲನು ಆ ಕಲಹವನು ಕೂಡೆ ಮುಚ್ಚಿಕೊಳ್ಳಲು ಕರಗುವುದು. ಅದು ಕಳುಕು . . ಡಾಳಿಸಿದ ತಾಮ್ರವನು ಮಅಹ ತೂಕಕ್ಕೆ ಹಣ ತೂಕ ಬೆಳ್ಳಿ ಕಳಂಕುಂ ಚವುಲ ತೂಕ ಪುಳಂ ಪುಣಿಮೆ, ಆದಿತ್ಯ ಬತ, ಬಿಳಿಯ ಕೊಮ್ಮೆಯ ರಸದಲ್ಲಿ ಅರೆವದು, ಸವರ್ಣಂಗ ವಿಸತ್ತಾರೆ. ಹಸಿಗೆಯಗೆಯಲಿ ನೆಸವೆಂಟರಿಂಚಿನ, ಎರಡನೊಡಗೂಡೆ ತಾರೆ ತೆಹಸಿಯಂತಿರು ಸರ್ವಾಂಗಂ ॥ ಬಣ್ಣ ೧೦ ಕ್ಕೆ ತಾಮ್ರವನು ರಸದಲ್ಲು ಏಳು ಬಾರಿ ಕಾಸಿ ಕಾಸಿ ಅದ್ದಿವಾದ ತಾಮ್ರವನು ಎಕ್ಕದ ಹಾಲಲ್ಲು ೧೦೦ ಬಾರಿ ಡಾಳಿಸಲು ತಂಪದು.

ವಿ.ವಿ.—

ಅಸಮಗ್ರ. ಅತಿ ಶಿಥಿಲ.

ಇದರಲ್ಲಿ, ಪ್ರತಾಪಲಂಕೇಶ್ವರ, ಶೀತ ಜ್ವರ, ಗಜಭೇರುಂಡ ರಸ, ತಾಪಜ್ವರ ರಸ, ವಿಷ ಪರಿಹಾರ, ಹನ್ನೆತ್ತರು, ಶೀತ ಜ್ವರ, ಶೀತ ಜ್ವರಾಂಕುಶ, ಭೂಪತಿ ರಸ, ಅಮೃತ ಕೇಸರಿ, ಚಾತುರ್ಥಿಕ ಜ್ವರ, ಅಸ್ಥಿ ಜ್ವರ, ಶಿರೋ ರೋಗ, ನಾರಸಿಂಹ ರಸ, ಪೆರು ನಾರಸಿಂಹ ರಸ, ಗ್ರಹಣೀ, ಅತಿಸಾರ, ಪೀನಸ, ಪಾಂಡು, ಗ್ರಹಣೀಕವಾಟ, ಬೇಷಜ ರಸ, ಶೀತ ಜ್ವರ, ದಾಡಿಮಾದಿ ವಟಕ, ಆಮ್ಲಪಿತ್ತ, ವಿಷೂಚಿ, ವಿಷಮ ಜ್ವರ, ಕಾಮಾಲೆ, ರಸ ಭಸ್ಮ, ಲೋಹ ಭಸ್ಮ, ಅಭ್ರಕ ಸಿಂದೂರ, ಪಂಚವಕ್ರ ರಸ, ಬಾಣಂತಿರೋಗ, ಹಳೆ ಜ್ವರಗಳಿಗೆ, ಮೇಘನಾದಿ,

ಮೂಲವ್ಯಾಧಿ, ಉದಯಮಾರ್ತಂಡ ರಸ, ನೀಲಕಂಠ ರಸ, ಪಾಂಡು, ಕುಮಾರೀ ತೈಲ, ಖಂಡಾಮಲಕ, ನಾಗಾರ್ಜುನ ರಸ, ಅಮೃತಾವಳ್ಳಿ ಚೂರ್ಣ, ಅಶ್ವಗಂಧಾದಿಘೃತ, ಜೀರ್ಣ ಜ್ವರ, ವೀರಭದ್ರ ಮಂತ್ರ" ಇವುಗಳ ವಿವರಣೆ ಇದೆ.

ಇದರೊಡನೆ (1) ನಕ್ಷತ್ರ ಚೂಡಾಮಣಿ (ತೆಲುಗು) ಯೂ, (2) 'ಸಂವತ್ಸರ ಫಲವೂ, ಇವೆ.

ಕೆಲವೆಡೆಗಳಲ್ಲಿ ಸಂಸ್ಕೃತ ಶ್ಲೋಕಗಳೂ ಅವಕ್ಕೆ ಟೀಕೆಯೂ ಬರೆದು ಸೇರಿಸಲ್ಪಟ್ಟಿವೆ. ಹೀಗೆ ಬರದ ಟೀಕೆಯು ಕೆಲವೆಡೆ ಕನ್ನಡದಲ್ಲಿಯೂ ಹಲವೆಡೆ ತೆಲುಗಿನಲ್ಲಿಯೂ ಇದೆ. ಆದರೂ ಆರಂಭವೂ ಅಂತ್ಯವೂ ಕನ್ನಡ ಭಾಷೆಯಲ್ಲಿರುವುದರಿಂದ ಇದನ್ನು ಇಲ್ಲಿ ವಿವರಿಸಿದೆ.

ಉಪಯೋಗಕ್ಕೆ ಬೀಳ ಬಹುದಾದ ಔಷಧಯೋಗಗಳು ಇದರಲ್ಲಿ ಕೆಲವಿವೆ.

೩ ನೆಯ ಓಲೆಯಲ್ಲಿ "ಭೂಪತಿ ಕ್ರಿಯಾ ಸಮಾಪ್ತಂ" ಎಂಬ "ಕೋಲೋ ಫೋನು" ಸಿಕ್ಕುತ್ತದೆ.

No. 1372. ಔಷಧಯೋಗ ವಿವರಣ.

AUṢADHAYŌGAVIVARAṆA.

Substance, palm-leaf. Size, 6 13/16 × 1¼ inches. Pages, 214. Lines, 4—6 on a page. Extent, 1,130 granthas. Character, Kannada. Condition, much injured. Appearance, old. Mode of writing, fair.

Incomplete.

Similar to the manuscript described above.

Beginning :

ಚಾತುರ್ಥಿಕ ಜ್ವರಕ್ಕೆ.—ಪಾಷಾಣ ಹ. ೧ ತೂಕ, ಕೊತ್ತ ಹ. ೧ ತೂಕ, ಪಚ್ಚೆ ಕರ್ಪೂರ ಹ. ೨ ತೂಕ, ಇವನ್ನು ಕರಿಮಾಡಿದ ಕುಣಿಕ್ಕೆಯ ರಸದಲ್ಲಿ ಮರ್ದಿಸಿ ಹಾಗ ತೂಕ ಗುಳಿಗೆಯಂ ಮಾಡಿ ೧ ಮದ ಕುಣಿಕೆಯ ರಸದಲ್ಲಿ ಕೊಡುವುದು ; ಪಥ್ಯ ಹಾಲೋಗರ ೧, ತುಪ್ಪವೋಗರ ೧, ಕಪ್ಪರಿ ಕುದ ೧, ಕಪ್ಪರಿಯನ್ನು ಬೆಂಕಿನಲ್ಲಿಟ್ಟು ಪಾರಿವಾಣದ ಪಕ್ಷಿಯ ವಿಷ್ಟೆಯಲ್ಲಿ ಮರ್ದಿಸಿ, ೧ ಕಪ್ಪರಿ ಹತ್ತುಮಡಿ ೧ ಟಂಕಟವ ಕೂಡಿ ೧ ಕೊವೆಯೊಳಗಿಕ್ಕೆ ಮೃದು ಪುಟವಿಕ್ಕಿ ಮೊಸರ ಕಲಸಿ ೧ ಮೃದು ಪುಟ ೧ ಜನತುಪ್ಪವ ಕಲಸಿ ೧ ಮೃದು ಪುಟ.

End :

ಸನ್ನಿ ಜ್ವರಕ್ಕೆ.—ರಾಸ್ನೆ, ಭದ್ರಮುಸ್ತೆ, . . . ಕೊತ್ತುಂಬರಿ, ಶುಂಠಿ, ಹಿಪ್ಪಲಿ, ಕಟುಕ ರೋಹಿಣಿ, ಇಷ್ಟನ್ನು ಬಿಸಿನೀರಲ್ಲರೆದು . . . . ಒಂದು ಗುಳಗೆಯಂ ಹಾಕೆ . . . . ನೀರಲ್ಲಿ ಕೊಂಬುದು. ಮೈಯ ಶೂಲೆಗೆ ೧ ಬೆಲ್ಲವತ್ತದ ಬೇರಂ ತಂದು . . . . .

ವಿ.ವಿ.—

ಅಸಮಗ್ರ. ಅತ್ಯಂತ ಶಿಥಿಲ.

ಒಂದೆಡೆ ಈ ಗ್ರಂಥದಲ್ಲಿ ವೈದ್ಯದ ಪುಸ್ತಕವೆಂಬ ಹೆಸರು ಸಿಕ್ಕುತ್ತದೆ. ೩೯ ನೆಯ ಓಲೆಯ 'b' ಯಲ್ಲಿರುವ "ಕೋಲೋಫೋನು" ಹೀಗಿದೆ. "ವೈದ್ಯದ ಪುಸ್ತಕಕ್ಕೆ

ಮಂಗಳ ಮಹಾ''. ಈ ಉದ್ಧೃತ ಭಾಗವನ್ನೇ ಆಧಾರವಾಗಿಟ್ಟು ಕೊಂಡು ಈ ಗ್ರಂಥವು ಸಮಗ್ರವಾಗಿದೆ ಎಂದೆನ್ನಬಾರದು. ಏಕೆಂದರೆ ಆ ಮೇಲಿರುವ ಓಲೆಗಳಲ್ಲೂ ವೈದ್ಯದ ವಿಷಯಗಳೇ ಉಕ್ತವಾಗಿವೆ. ಲೇಖಕನು ಬೇರೆ ಬೇರೆ ಪುಸ್ತಕಗಳಿಂದ ಸಂಗ್ರಹಿಸಿ ಈ ಪುಸ್ತಕದಲ್ಲಿ ಬರೆದಿರಬೇಕು. ಇದರಲ್ಲಿ ''ಚಾತುರ್ಥಿಕ ಜ್ವರ, ಗಂಡ ಮಾಲೆ, ಸಿರೋಮಾಲೆ, ಕೊಷ್ಟ, ರಸ ರಾಜಲಕ್ಷ್ಮಿ, ಲಂಕೇಶ್ವರ ರಸ, ಸನ್ನಿಪಾತ, ಶ್ವಾಸ, ಕಾಸ, ಕ್ಷಯ, ವಿಷಮ ಜ್ವರ, ಕನಕ ಸಿಂಧೂರ ರಸ, ಕರುಣಾಕರ ರಸ, ವಾತ, ಕಾಸ, ಅತಿಸಾರ, ಸಂಗ್ರಹಣಿ, ಶುಕ್ಲ ಪ್ರಮೇಹ, ಬಡವಾನಲ ರಸ, ವಜ್ರಕ್ಷಾರ, ಆಮ್ಲಪಿತ್ತ, ವಮನ, ವಿರೇಕ, ಪಂಚಮ ರಸ, ಕುಷ್ಠ, ಗುಲ್ಮ, ಉದರ, ಪ್ರಮೇಹ, ಸೀತಾದಿ ರಸ, ಅಂಡವಾತ, ಕಣ್ಣುಹೂವು, ನೀರದೋಷ (? ಜಲದೋಷ), ತೊಡೆವಾಳ, ಮೂಷಕ ವಿಷ (? ಮೂಷಿಕ) ಸರ್ಪನ ವಿಷ, ೨೪ b. ಅಶ್ಮರಿ, ಪಾಂಡು, ಸಿದ್ಧ ರಸ, ಉರಿ ಮೂತ್ರ, ತಾಳಕೇಶ್ವರ ರಸ, ಸನ್ನಿಪಾತ, ಶೂಲೆ, ಲಾಲಾಮೇಹ, ಬಹು ಮೂತ್ರ (ಪಿತ್ತದಿಂ ಹುಟ್ಟಿದ), ಬಹು ಮೂತ್ರ ಲಕ್ಷಣ, ಗ್ರಹಣೀಕವಾಟ ರಸ, ಪಂಚಾಮೃತ ರಸ, ವಾತ ಜ್ವರ, ಪಿತ್ತ ಜ್ವರ, ಬಡವಾಗ್ನಿ ಚೂರ್ಣ, ಅಗ್ನಿ ಕುಮಾರ, ವಿಷಪ್ರಯೋಗ,'' ಇವುಗಳನ್ನು ಹೇಳಿದೆ.

ಒಂದೆಡೆ ''ಇಂತಿ ಶಲ್ಯತ್ರಯ ಸಮಾಪ್ತ ಮಂಗಳ ಮಹಾ'' ಎಂಬ 'ಕೊಲೋಫೋನ್' ಸಿಕ್ಕುತ್ತದೆ. ಆ ಮೇಲೆ ವಿಷಪ್ರಯೋಗವಿದೆ. ಕವಿಯ ವಿಷಯವಾಗಿ ಏನೂ ತಿಳಿಯ ಬರುವುದಿಲ್ಲ.

No. 1373. ಔಷಧಯೋಗ ವಿವರಣ.

AUṢADHAYŌGAVIVARAṆA.

Substance, paper Size, 10 ⅜ × 9 7/16 inches. Pages, 82. Lines, 20 on a page. Extent, 1,130 granthas. Character, Kannada. Condition, good. Appearance, new. Mode of writing, good.

Restored in 1926–27 from the manuscript described above.

Incomplete.

ವಿ.ವಿ.—

ಅಸಮಗ್ರ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದು ಹಿಂದಣ ನಂಬರಿನಲ್ಲಿ ವರ್ಣಿತ ವಾದ ಪ್ರತಿಯ ಪ್ರತಿಕೆ ಯಾಗಿದೆ.

No. 1374. ಔಷಧಯೋಗ ವಿವರಣ.

AUṢADHAYŌGAVIVARAṆA.

Substance, paper. Size, 10 7/16 × 9 7/16 inches. Pages, 58. Lines, 29 on a page. Extent, 700 granthas. Character, Kannada. Condition, good. Appearance, new. Mode of writing, good.

Restored in 1933–34 from the manuscript described under No. 1371 *ante*.

Begins on page 1 of the manuscript. The other works herein are : (1) Nakṣhatracūdāmaṇi (Telugu) page 15, (2) Samvatsaraphala, page 60.

Incomplete.

ವಿ.ವಿ.—

ಅಸಮಗ್ರ. ಲಿಪಿ ಚೆನ್ನಾಗಿದೆ.

ಇದು ಹಿಂದೆ ೧೩೭೧ ನೆಯ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಕೆಯಾಗಿದೆ. ಇದರೊಡನೆ 'ನಕ್ಷತ್ರ ಚೂಡಾಮಣಿ' (ತೆಲುಗು) ಮತ್ತು ಸಂವತ್ಸರ ಫಲ ಎಂಬ ಎರಡು ಪುಸ್ತಕಗಳೂ ಇವೆ.

No. 1375. ಔಷಧ ವಿಧಾನ-

AUṢADHAVIDHĀNA.

Substance, palm-leaf. Size, 7½ × 1⅛ inches. Pages, 158. Lines, 4 on a page. Extent, 350 granthas. Character, Kannada. Condition, much injured. Appearance, old. Mode of writing, good.

On the treatment of diseases of different kinds. For details see extract given below.

Incomplete.

Folios. 4*b*, 7*a*, 11*b*, 28*a*, 77*b* and 82*b* are left blank.

Beginning :

ಶೈತ್ಯ . . . ಔಗೆ ಔಷಧ.—

ದುಡ್ಡು ತೂಕ ಸಾಸಿವೆ, ... ತೂಕ ಮೆಣಸು, ಚೆನ್ನಾಗಿ ಅಕ್ಕಿ ಹಿಡಿ, . . . ಕಸ್ತೂರಿ ಕೊ . . . . ಬೇರು ೧ ಹಿಡಿ ಆವಿನ ಮಜ್ಜಿಗೆಯಲ್ಲಿ ಆರೆದು . . . . . . ಪಾಕವಮಾಡಿ ಕೊಟ್ಟರೆ ಶೈತ್ಯವಾತ ಶೂಲಿ ಮಾಣುದು.

* * * *

ಹಸ್ತಗತಕ್ಕೆ ಚೂರ್ಣ.—

ಲವಂಗ ಗ. ೨ ತೂಕ, ನಾಗಕೇಸರಿ ಗ. ೨ ತೂಕ, ಯಾಲಕ್ಕಿ ಗ ೪ ತೂಕ, ಮೆಣಸು ೮ ವರಹ ತೂಕ, ಪಿನ್ನೇರುಗಡೆಗ, ೬೪ ವರಹ ತೂಕ, ಇಷ್ಟು ಚೂರ್ಣವಮಾಡಿ ಇದಕ್ಕೆ ಸಮ ಭಾಗ ರಾಯಪೊಡಿ ಭಕ್ರಿ ಇದು ಸಮ ಭಾಗವಮಾಡಿ . . . ತಕಾಲದ . . ಸೇವಿಸಲು ಕೊಷ್ಠರೋಗ ಮಾಣ್ಗು.

End :

ಮೂಲ ವ್ಯಾಧಿಗೆ.—

ಭೂಮಿ ಸಕ್ಕರೆ ಗಡ್ಡೆ ಪುಡಿಮಾಡಿ, ಗುಣಿಯ ನಗೆದು, ಒಳತಾಗಿ ಕೆಂಡಪಾಡಿ, ಇದಕೆಂಡ . . . . ಅದರ ಮೇಲೆ ಈ ಪುಡಿಯ ಹಾಕೆ ಆ ಹೊಗೆಯನು ಆಸನಕ್ಕೆ ಹಿಡಿಸಿದರೆ ಮೊಳೆಕರಗಿ ಹೋಹುದು. ಕಬ ಹೀರೆ ಕಾಯಿ, ಬೆಳ್ಳುಳ್ಳಿ ಹೊಟ್ಟು, ಮೆ . . . . . ಇವು ಕೂಡಿಸಿ ಹೂಣಿಸೆ ಕೆಂಡಗಳ ಮಾಡಿ ವಾ . . ವೃಷಭವ ಹಾಕೆ ಮೇಲೆ ರಾ . . . . ಕಲನಿಕ್ಕಿ ಆಸನಕ್ಕೆ ಹಿಡಿಸುವುದು.

ವಿ.ವಿ.—

ಅಸಮಗ್ರ. ಅತ್ಯಂತ ಶಿಥಿಲ.

ಕವಿಯ ಅಥವಾ ಗ್ರಂಥ ಕರ್ತನ ಹೆಸರು ತಿಳಿಯ ಬರುವುದಿಲ್ಲ. ಇದರಲ್ಲಿ "ಗಂಡ ಮಾಲೆ ಪೈತ್ಯಕುಡಿ, ಹಸ್ತಗತ, ಕುಷ್ಠ, ಪೈತ್ಯ, ಆರೋಚಕ, ಉರಿ ಮೂತ್ರ, ಎದೆವುರಿ, ಇಚ್ಛಾಭೇದಿ, ಕಾವಮಾಲೆ, ಕಪಾಲವಾಯು, ಉನ್ಮಾದಂ, ಅಪಸ್ಮಾರಂ, ಧನುರ್ವಾತಂ, ಸನ್ನಿಪಾತಂ, ಅಶ್ಮರಿ, ಮೂತ್ರ ಕೃಚ್ಛ್ರ, ಪ್ರಮೇಹ, ಬಹು ಮೂತ್ರ, ವ್ರಣ, ಮೂಲವ್ಯಾಧಿ, ನಿವ್ಯಾಧ, ವಾತಪ್ರಮೇಹ," ಇವುಗಳಿಗೆ ಮದ್ದನ್ನು ಹೇಳಿದೆ.

No. 1376. ಔಷಧ ವಿಧಾನ-

AUṢADHAVIDHĀNA.

Substance, paper. Size, 10 7/16 × 9 7/16 inches. Pages, 30.. Lines, 20 on a page. Extent, 350 granthas. Character, Kannada. Condition, good. Appearance, new. Mode of writing, good.

Restored in 1934–35 from the manuscript described above.

Begins on page 1. The other work herein is Hāḍugaḷu, pp. 30–33.

ವಿ.ವಿ.—

ಅಸಮಗ್ರ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತ್ರಿಕೆ ಯಾಗಿದೆ. ಇದರ ಕೊನೆಯಲ್ಲಿ ಪುರಂದರದಾಸರ ನಾಲ್ಕು ಹಾಡುಗಳು ಬರೆದು ಸೇರಿಸಲ್ಪಟ್ಟಿವೆ.

No. 1377. ಖಗೇಂದ್ರಮಣಿದರ್ಪಣ by ಮಂಗರಾಜ I-

KHAGĒNDRAMAṆIDARPAṆA BY MANGARĀJA I.

Substance, Sritala. Size, $17\frac{3}{4} \times 1\frac{3}{4}$ inches. Pages, 104. Lines, 8 on a page Extent, 2,350 granthas. Character, Kannada. Condition, much injured. Appearance, old. Mode of writing, fair.

Contaiins Adhikāras 2–13 incomplete and 14th complete.

This is a monumental poetical work written by Mangarāja I (14 A.D.). It gives a number of antidotes for poisons and contains some Dravidian Mantras for rendering the poison innocuous. For other particulars. please see extract given below.

Beginning :

ಕಂ॥ ದೇವಾದಿ ದೇವನಂ ಜಿತ - ।
ಭಾವಜನನಚಿಂತ್ಯ ಮುಕ್ತಿ ಲಕ್ಷ್ಮೀ ವರನಂ ।
ಭಾವಿಸಿ ವಂದಿಸಿ ಜನದಾ - ।
ಸ್ಥಾವರ ವಿಷಹರಣಮಂ ವಿವಕ್ಷಿಸಿ ಪೇಳ್ವೆಂ ॥ (೧)

ವೃ॥ ದೇವ ಜಿನೇಂದ್ರ ಭಾಷಿತ ವಿಷಂಗಳು ಮೂದೆಱ ನಪ್ಪುವೆಂದೆನಲ್ ।
ಸ್ಥಾವರ ಜಂಗಮಂ ಕೃತಕ ಯೋಗಜ ಮೆಂದವರಾಳ್ವವೇಕಿಸಲ್ ।
ಸ್ಥಾವರ ವಿಪ್ಪತೆಯ್ದು ತೆಱನಂ ತಧಿಕಂಗಳವಲ್ಲಿ ಯೆಯ್ದುವಂ ।
ಕೇವಳ ಮಾಧ್ಯಪೂಧುಮವಿಭೇದಮನಾದರದಿಂದ ಪೇಳ್ದಪೆಂ ॥ (೧)

ಕಂ॥ ಸಲೆ ಮುಸ್ತೆ ವತ್ಸನಾಭಂ ।
ಬಲಾಹ ಪುಷ್ಕರ ಸರಂ ಹರಿದ್ರಂ ಶೃಂಗೀ - ।
ಕುಲ ಮೇಷಶೃಂಗಿ ಹಾಳಾ - ।
ಹಳ ಕಸ್ತುಕ ರಕ್ತಶೃಂಗಿ ಮಧುಪಾಕಂಗಳ್ ॥ (೨)

ಪರಿವಿಡಿಯೊಳಿಂದ್ರ ವಜ್ರಂ ।
ಸ್ಫುರದುರು ಕರ್ಕಾಟ ಶೃಂಗಿ ಮಧುರಂ ಕ್ರೌಂಚಂ ॥
ಹರಿತಾರ್ಕ ಕಾಳಕೂಟಕ ।
ಮರಿದೆನಿಸಿದ ಪುಂಡರೀಕ ಸಂಕೋಂಬೆಗಳು ॥ (೩)

ಗಾಳವಮಂ ಜನರೋಹಿಣಿ - ।
ಮಾಳೋ ಬೆಸಲೇಕವೀರ ಮಿಂತಿಪ್ಪತ್ತೈ - ॥
ದೀಲೋಕ ದೊಳಂ ಕ್ರೂರ - ।
ಜ್ವಾಲೆಗಳಂತಿವರೊಳ್ ಪುದ್ದಿ ಕ್ರೂರಂಗಳ್ ॥ (೪)

ಆವುವೆಂದೊಡೆ—

ಕಂ॥ ಸಂಕೋಚ ಕಾಳಕೂಟ ವಿ - ।
ಷಾಂಕಮುಮಾ ವತ್ಸನಾಭ ಮುಕ್ತಿಕ ಶೃಂಗಾ -
ಖ್ಯಂ ಕರಮಿಳೆಯೊಳವೆಯ್ದುಂ ।
ಪಂಕಜಭವ ನಳಿಯಲರಿದು ತತ್ಕ್ರೂರತೆಯಂ ॥ (೫)

ಕಂ॥ ಉಳಿದಿಪ್ಪತ್ತುಂ ಮಧ್ಯಮ - ।
ಮಿಳೆಯೊಳ ಮಿಮ್ಮಿಕ್ಕ ಮೆಲ್ಲ ಮತ್ತೆ ಜಘನ್ಯಂ ॥
ವಿಲಸತ್ತನುವಂ ಬೆರಸಾ - ।
ವಿಲಮಂ ಮಾಡಲ್ತದಂಗ ಚೇಷ್ಟೆಯ ನೊರೆವೆಂ ॥ (೬)

ವೃ॥ ಅತಿಸಾರಂ ಮೂರ್ಛೆದಾಹಂ ಮತಿವಿಕಳತೆಯುಂ ಭ್ರಾಂತಿ ಹೃಚ್ಛೂಲೆ ತಾಪಂ ॥
ಗತಸತ್ವಂ ನೇತ್ರ ಮಾಂದ್ಯಂ ಪ್ರಕೃತಿ ವಿಕೃತಿಯುಂ ಗದ್ಗದ ಧ್ವಾನಕಂಠಂ ।
ಗತಿಭಂಗಂ ಶ್ವಾಸಕಾಸಂ ರುಧಿರ ವಮನಮುಂ ಸ್ವೇದ ಮತ್ಯಂತ ಖೇದಂ ।
ಧೃತಕೋಶಂ ತಾಮಿವೆಲ್ಲಂ ವಿಷಮುದಜ ಮೆನಿಪ್ಪಂಗ ಚಿಹ್ನಂಗಳಕ್ಕುಂ ॥ (೭)

ಕಂ॥ ಇಂತಧಿಕ ಸ್ಥಾವರ ವಿಷ - ।
ಸಂತತಿಯುಮನವಱ ನಾಮ ವಿಷವೀರ್ಯ ಮನ - ॥
ಭ್ರಾಂತರಿಗೆ ತಿಳಿಯೆ ಪೇಳ್ದಂ ।
ಸಂತಱಿಸುವೆನಾ ವಿಷಾಪಹರಣ ಕ್ರಮಮಂ ॥ (೮)

ಪಲವೌಷಧಿ ಮಂತ್ರದೊಳಂ ।
ಪಲವುಂ ದುರ್ಲಭತರಂಗಳೆನಿಪೀಡಿದ ಋತಿ - ।
ಳೆಲೆಯುಱಿದು ಯೋಜಿಪಂಗತಿ ।
ಸುಲಭಂಗಳೆನಲ್ಕೆ ಪೇಟ್ದಿಪೆಂ ಮುನಿಮತದಿಂ ॥ (೧೦)

* * * *

ಕಂ॥ ವಿಷಮ ವಿಷಂಗಳ್ಗಂ ಪ್ರತಿ ।
ವಿಷತಂತ್ರಮನಿಂತು ಪೇಳ್ದೆನೆನ್ನರಿವನಿತಂ ॥
ಚೌಷಮಂ ತಾನೆನೆ ಕಂಟಕ ।
ವಿಷಘ್ನಮೆಂದೆನಿಪ ಮಂತ್ರತಂತ್ರ ಮನುಸುರ್ಕೆಂ ॥ (ದ್ವಿ. ಅ. ೨೦೦)

* * * *

Colophon :

ಗದ್ಯ ॥ ಇದು ಸಕಲ ವಿದಮಲ ಜಿನೇಂದ್ರೋಕ್ತ ಸಿದ್ಧಾಂತ ಪಯಃಪಯೋಧಿ ಪಾರಗ ಶ್ರೀ ಪೂಜ್ಯಪಾದ ಮುನೀಂದ್ರ ಚಾರು ಚರಣಾರವಿಂದ ಗಂಧ ಗುಣಾನಂದಿತ ಮಾನಸಂ ಶ್ರೀ ಮದಭಿನವ ಕಳಾಗಮೋತ್ತುಂಗ ಮಂಗವಿಭು ವಿರಚಿತ ಮಪ್ಪ ಖಗೇಂದ್ರಮಣಿದರ್ಪಣ ದೊಳ್ ಸಕಲ ಸ್ಥಾವರ ವಿಷ ವಿಶೇಷ ಚಿಕಿತ್ಸಾ ಪ್ರತ್ಯಾಭಿಧಾನಂ, ದ್ವಿತೀಯಾಧಿಕಾರಂ ॥

ವೃ॥ ಶ್ರೀಮನ್ನಾಗನರಾಮರೇಂದ್ರ ನಮಿತ ಶ್ರೀಪಾದ ಪದ್ಮದ್ವಯಂ।
ಕಾನ್ತೋಗ್ರಾಹಿ ವಿಷಾಪಹಾರ ವಿಲಸದ್ಧ್ಯಾನೈಕ ಗಮ್ಯಂಬುಧ - ।
ಕ್ಷೇಮಂ ಶಾಂತರಸಾಬ್ಧಿ . . . ಯನಘಂ ಸಂಸಾರದುಃಖಾಪಹಂ ।
ಸೋಮಾರ್ಕದ್ಯುತಿ ಕೋಟಿ ಪಾರ್ಶ್ವಜಿನಪಂ ರಕ್ಷಿಕ್ಕೆ ಭವ್ಯರ್ಕಳಂ ॥

ಕಂ॥ ಪಿಂತುಸುರ್ದೆಂ ಸ್ಥಾವರ ವಿಷ - ।
ಸಂತತಗುಪ ವಿಷಮ ನಿನ್ನು ಜಂಗಮ ವಿಷದೊಳ್ ॥
ಶಾಂತರಸಮಯ ಜಿನೇಂದ್ರಮ ।
ಶಾಂತರದೊಳ್ ತಿಳಿದು ಪೇಳ್ವೆ ನೆಂಟಂಗಮುಮಂ ॥

ಅಂತು ಗರುಡ ಮತದಿಂ ದೆಂಟಂಗಮವಾವುವೆಂದೊಡೆ ॥

ವೃ॥ ಈ ಭೂಲೋಕ ದೊಳೊಪ್ಪೆ ಸಂಗ್ರಹ ಸಮಂಗ ನ್ಯಾಸ ರಕ್ಷಾವಿಧಿ - ।
ಸ್ತೋಭಂ ಸ್ತಂಭವಿಷ ಪ್ರಹಾರ ಮಧಿಕಂ ಚೋದ್ಯಾಖ್ಯ ಮುಂಮತ್ತೆ ಸ - ।
ರ್ವಾಭಂ ತಾಂ ಖಟಿಕಾ ಫಣಿ ಪ್ರಥಿತ ದಂತೋದ್ದಂಶ ಮೆಂಬಿಂತಿವೆಂ ।
ತಾಭವ್ಯೋತ್ತಮನಪ್ಪ ಮಂಗವಿಭುವಿಂದುಕ್ತಂಗಳೆಂಟಂಗಮುಂ ॥ (?)

* * * *

Colophon :

ಇದು ಖಗೇಂದ್ರಮಣಿದರ್ಪಣದೊಳ್ ಸರ್ವ ಜಂಗಮ ಚಿಕಿತ್ಸಾ ವಿವರಣಂ, ತ್ರಯೋದಶಾಧಿಕಾರಂ ॥

ಕಂ॥ ಶ್ರೀದಿವಿಜವಂದಿತ ಸ್ಯಾ - ।
ದ್ವಾದ ಸುಧಾವನಧಿ ಗೆರಗಿ ಕೃತ್ರಿಮ ವಿಷದಿಂ ।
ದಾದರುಜಾ ಚಿಹ್ನಂಗಳ - ।
ಸಾದರದಿಂ ತಚ್ಚಿಕಿತ್ಸೆಯಂ ವಿರಚಿಸುವೆಂ ॥

*   *   *   *

ಕಂ॥ ಈ ಮಂತ್ರದಿಂದೆ ಸಾಸಿರ ।
ಹೋಮಂ ತತ್ಪ್ರಮಿತ ದರ್ಘ್ಯಮುಂ ಲಕ್ಷಜಪಂ ॥
ತಾಮಾಗಲ್ವರ ವಿದ್ಯಾ - ।
ನಾಮಚ್ಛೇದನ ಮದಲ್ತೆ ಶತ ಭೋಜನದಿಂ ॥

ದ್ರಾವಿಡ ಮಂತ್ರ ॥ ೦ ॥ ॥೦ ೮ ॥

ಕಱುವನೊಲ್ಲದ ಆವಿಂಗೆ ಸುಗಂಧಿ, ಕಲ್ಲುಪ್ಪು, ಜೀರಿಗೆ, ಹುಳ್ಳುಳ್ಳಿ (ಹುಳಿಯ ಮಜ್ಜಿಗೆ) ಯಲರೆದು ಕಱುವಿನ ಮೆಯ್ಯಂ ಪೂಸೆ, ಕಱುವ ನೆಕ್ಕಿಸಲು ಕಱುಗೊಳ್ಗುಂ.

ವಿ.ವಿ.—

ಅಸಮಗ್ರ. ಅತ್ಯಂತ ಶಿಥಿಲ.

ವಿಷವೈದ್ಯವನ್ನು ವಿವರಿಸುವ ಅತ್ಯುತ್ತಮವಾದ ಗ್ರಂಥವಿದು. ಕವಿಯು ಪೂಜ್ಯಪಾದರ ಭಕ್ತನಾಗಿದ್ದಂತೆ (ಕೊಲೋಫೋನ್) ಆಶ್ವಾಸಾಂತ್ಯದ ಗದ್ಯದಿಂದ ತಿಳಿಯುತ್ತದೆ. ಈ ಕವಿಯು ಮೊದಲನೆಯ ಮಂಗರಾಜನೆಂದು ಪ್ರತೀತಿಸುದೆ.

ಈ ಗ್ರಂಥದ ಮೊದಲನೆಯಧಿಕಾರವು ಈ ಪುಸ್ತಕದಲ್ಲಿಲ್ಲ. ೨ ನೆ ಯಧಿಕಾರದಿಂದ ೧೩ ನೆ ಯಧಿಕಾರದವರೆಗೆ ಸಂಪೂರ್ಣವಾಗಿಯೂ ೧೪ ನೆಯಧಿಕಾರದ ಸ್ವಲ್ಪ ಭಾಗವೂ ಇದರಲ್ಲಿದೆ. ಮೊದಲಿಂದ ೧೩ ಅಧಿಕಾರಗಳಿಗೆ ಕ್ರಮವಾಗಿ ಸಕಲ ಸ್ಥಾವರ ವಿಷ ವಿಶೇಷ ಚಿಕಿತ್ಸಾ ಪಕ್ಷಾಭಿಧಾನ, ಸಂಗ್ರಹಾಧಿಕಾರ, ಸಂಗ್ರಹಾದ್ಯಪ್ಪವಿಧ ಗರುಡಾಧಿಕಾರ, ನಿರ್ವಿಷ ಪಾನಾಧಿಕಾರ, ಅಂಜನಾಧಿಕಾರ, ವಿಷಧರನಸ್ಯ ಕರ್ಮವಿಧಾನ, ನಿರ್ವಿಷೀಕರಣಾಲೇಪಾದಿ, ಪಾನಾದಿ ದಿವ್ಯಯೋಗ ಪ್ರಕರಣಂ, ಗೋನಸ ವಿಶೇಷ ಕ್ಷುದ್ರ ಸರ್ಪ ವಿಷಾಪಹರಣ ವಿಧಾನಂ, ವೃಶ್ಚಿಕ ವಿಶೇಷ ವಿಷಹರಣ ಚಿಕಿತ್ಸಾ, ಅಷ್ಟಾದಶ ಮೂಷಿಕ ಭೇದ ತದ್ವಿಷಾಪಹರಣಂ, ಸರ್ವಜಂಗಮ ವಿಷ ಚಿಕಿತ್ಸಾ ವಿವರಣಂ, ಕೃತ್ರಿಮ ವಿಷ ಚಿಕಿತ್ಸಾ, ಎಂಬ ಹೆಸರುಗಳಿದ್ದಂತೆ ತಿಳಿಯುತ್ತದೆ. ನವಮಾಧಿಕಾರದ ಅಂತ್ಯದಲ್ಲಿ 'ನವಮಂಸರ್ಗಂ' ಎಂದು ತಪ್ಪಾದ ಬರೆಹವಿದೆ. ಹಾಗೆಯೇ ದಶಮಾಧ್ಯಾಯದ ಅಂತದಲ್ಲಿ 'ದಶಮಾಧ್ಯಾಯ' ವೆಂದು ಬರೆದಿಲ್ಲ. ಏಕಾದಶಾಧ್ಯಾಯದ ಕೊನೆಯಲ್ಲಿ ದಶಮಾಧ್ಯಾಯವೆಂದು ಬರೆದು ಆ ಮೇಲಿನ ಅಧ್ಯಾಯದಲ್ಲಿ ದ್ವಾದಶಾಧ್ಯಾಯವೆಂದು ಬರೆದಿದೆ.

ಈ ಗ್ರಂಥದಲ್ಲಿ ಅಲ್ಲಲ್ಲಿ ಪದ್ಯಗಳಲ್ಲಿ, ಹೆಚ್ಚಾಗಿ ಪದ್ಯಗಳ ಕೊನೆಯಲ್ಲಿ "ಬುಧಮಿತ್ರ (ದ್ವಿ. ಅ. ೧೩೫), ವಿವೇಕ ಚೂಡಾರತ್ನ (ದ್ವಿ. ಅ. ೧೩೬), ಅಮಳ ಚರಿತ್ರ (ದ್ವಿ. ಅ. ೧೪೩), ಮಂಗ (ದ್ವಿ. ಅ. ೧೩೬), ಸುಜನ ಶರಣ್ಯ (ದ್ವಿ. ಅ. ೧೬೧), ವಿದಗ್ಧಾಭರಣ (ದ್ವಿ. ಅ. ೧೫೧), ಕವಿಕುಳ ಸರೋಜ ಭಾಸ್ಕರ (ದ್ವಿ. ಅ. ೧೮೬), ಬುಧಾಂಬುಜ ಚಂದ್ರ (ದ್ವಿ. ಅ. ೨೦೯),

ವಿವೇಕ ಕುವಲಯ ಚಂದ್ರ ತೃ. ಅ ೫), ಜಿನಪಾದ ಶೇಖರ (ಪಂಚ ಅ. ೧), ಕವಿತಾ ಮಣಿ (ದ. ಅ. ೬೧), ಕವಿತಾ ರಮಾಪ್ರಿಯಂ (ದ. ಅ. ೪೭) ಮೊದಲಾದ ಅನೇಕ ವಿಧದ ವಿಶೇಷಣ ಶಬ್ದಗಳು ದೊರೆಯುತ್ತವೆ. ಇವು ಕವಿಗೆ ಸಂಬಂಧಿಸಿದವುಗಳೆಂದು ಊಹಿಸಬಹುದಾಗಿದೆ.

ಹತ್ತನೆಯಧಿಕರಣದ ಆದಿ ಪದ್ಯದಲ್ಲಿ ಕವಿಯು ತಾನು, ಸರ್ಪಗಳ ಕುಲನಾಮ, ವರ್ಣ ಭೇದ, ದಷ್ಟಚಿಹ್ನವಿವರ, ತತ್ಪರಿಹಾರಗಳನ್ನು ಕರ್ಣಾಟ ದೇಶೀಯದಿಂದ ವರ್ಣಿಸುವೆನೆನ್ನುವನು. ಆದುದರಿಂದೀತನು ತನ್ನ ಗ್ರಂಥದ ಬಹುಭಾಗವನ್ನು ದೇಶೀಯ ಪದಗಳಿಂದಲೇ ರೂಪಿಸಿ ಬರೆದನೆಂದು ಎಣಿಸಬಹುದು.

ಕವಿಯು ಈ ಗ್ರಂಥವನ್ನು ಕಂದ ಮತ್ತು ವೃತ್ತಗಳಿಂದ ಬರೆದಿರುವನು. ಒಟ್ಟು ಸುಮಾರು ೧೫೦೦ ಪದ್ಯಗಳುಳ್ಳ ಈ ಗ್ರಂಥದಲ್ಲಿ ಸುಮಾರು ೧೨೦೦ ಪದ್ಯಗಳೂ ಕಂದಗಳಾಗಿವೆ. ವಿಷಾಪಹಾರಕಗಳಾದ ಕೆಲವು ದ್ರಾವಿಡ ಮಂತ್ರಗಳೂ ಅಲ್ಲಲ್ಲಿ ಇವೆ. ಕವಿಯ ಶೈಲಿಯು ತರ್ಪಕವಾಗಿದ್ದು ಸಾಹಿತ್ಯ ದೃಷ್ಟಿಯಿಂದಲೂ ಇದು ಗಣನೀಯ ಗ್ರಂಥಗಳಲ್ಲೊಂದಾಗಿದೆ.

ಹದಿನಾರು ಅಧಿಕಾರಗಳನ್ನೊಳಗೊಂಡ ಈ ಗ್ರಂಥವು ಕ್ರಿ. ಶ. ೧೯೪೦ ರಲ್ಲಿ ಮದ್ರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಪ್ರಕಟಿಸಲ್ಪಟ್ಟಿದೆ.

No. 1378. ಖಗೇಂದ್ರಮಣಿದರ್ಪಣ by ಮಂಗರಾಜ I.

KHAGĒNDRAMAṆIDARPAṆA BY MANGARĀJA I.

Substance, paper,. Size, 10½ × 9⅜ inches. Pages, 220. Lines, 20 on a page. Extent, 2,350 granthas. Character, Kannada. Condition, fair. Appearance, old. Mode of writing, not bad and full of mistakes.

Restored in 1915–1916 from the manuscript described above.

Incomplete.

ವಿ. ವಿ.—

ಅಸಮಗ್ರ. ಚೆನ್ನಾಗಿರುವ ಪ್ರತಿ. ಲಿಪಿ ಸಾಮಾನ್ಯವಾಗಿದೆ. ತಪ್ಪುಗಳಿವೆ. ಹಿಂದಿನ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಕೆಯಾಗಿದೆ.

No. 1379. ಖಗೇಂದ್ರಮಣಿದರ್ಪಣ by ಮಂಗರಾಜ I.

KHAGĒNDRAMAṆIDARPAṆA BY MANGARAJA I.

Substance, Sritala. Size, 13 × 1 7/16 inches. Pages, 78. Lines, 6 on a page. Extent, 750 granthas. Character, Kannada. Condition, very much injured. Appearance, old. Mode of writing, good.

Incomplete.

Contains from the 209th stanza to the end in the second Adhikāra, third Adhikāra and the 10th Adhikāra complete.

Same work as that described above.

Beginning :

. . . ಸಲ್ಲದಿದೊರ್ಡೆಕ್ಕೆಯು ಪಾಲಂ ॥
ಪೊಕ್ಕಿರಲೆಱತಿ ನಿಬಿಡಮೆನಲ್ ।
ಸಿಕ್ಕಿದ ಮುಳ್ಳಂ ಗುಳ್ಳಂ ಪಾದದಿಂ ಪೊಱಮಡುಗುಂ ॥ (?)

*   *   *   *

End :

ದೆಂದುಸುರ್ದಂ ಕವಿತಾರವಮ ಪ್ರಿಯಾ ॥

Colophon :

ಗದ್ಯ ॥

ಇದು ಸಕಲ ವಿಮಲ ಜಿನೇಂದ್ರೋಕ್ತ ಸಿದ್ಧಾಂತ ಪಯಃ ಪಯೋಧಿ ಪಾರಗಂ ಶ್ರೀ ಪೂಜ್ಯ ಪಾದ ಚಾರು ಚರಣಾರವಿಂದ ಗಂಧ ಗುಣನಂದಿತ ಮಾನಸಂ ಶ್ರೀಮದಖಿಳ ಕಳಾಗಮೋತ್ತುಂಗ ಮಂಗವಿಭು ವಿರಚಿತಮಪ್ಪ ಖಗೇಂದ್ರ ಮಣಿದರ್ಪಣದೊಳ್ ಗೋನಸವಿಶೇ . . . . ಹರಣ ನಿದಾನಂ ದಶಮಾಧಿಕಾರಂ ಸಮಾಪ್ತಂ ॥

ವಿ. ವಿ.—

ಅಸಮಗ್ರ. ಅತಿ ಶಿಥಿಲ. ಹಲವು ಓಲೆಗಳು ಮುರಿದಿವೆ. ಅಶುದ್ಧ. ೨ ನೆಯಧಿಕಾರದ ೨೦೯ ನೆಯ ಪದ್ಯದ ಅರ್ಧ ಭಾಗದಿಂದಾರಂಭಿಸಿ ಅಂತ್ಯದ ವರೆಗೂ, ೩ ನೆ ಯಧ್ಯಾಯವೂ ೧೦ ನೆ ಯಧ್ಯಾಯವೂ ಇವೆ.

ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1380. ನಾಡೀ ಶಾಸ್ತ್ರ.

NĀḌĪŚĀSTRA.

Substance, palm-leaf. Size, 16⅛ × 1½ inches. Pages, 7. Lines, 8 on a page. Extent, 130 granthas. Character, Kannada. Condition, much injured. Appearance, old. Mode of writing, good.

Begins on fol. 22*a* of the manuscript described under Sanskrit D. No. 2799.

Incomplete.

Deals with the varieties, number and other details of pulse and the diagnosis of diseases by means of feeling the pulse. This science is said to have been revealed by God Parameswara to his spouse Pārvati, who requested him to enlighten her on this matter. The text is in Sanskrit with a Kannada commentary.

Beginning :—

ಕೈಲಾಸ ಶಿಖರೇ ರಮ್ಯೇ ನಾನಾರತ್ನ ವಿಭೂಷಿತೇ ।
ನಾನಾ ಕಲ್ಪದ್ರುಮಾಕೀರ್ಣ ರತ್ನಸಿಂಹಾಸನಸ್ಥಿತೇ ॥

ಟೀ ॥ ಕೈಲಾಸ ಶಿಖರದಲ್ಲಿ ಮನೋಹರವಾಗಿ ಪ್ರೊಪ್ಪಿಯಿದ್ದಂಥಾ ಮುಕ್ತಾ ವೈಡೂರ್ಯ ರತ್ನ ವಿದ್ರುಮಗಳಿಂದ ಕೀಲಿತವಾದಂಥಾ ಸಿಂಹಾಸನ ಮಧ್ಯದಲ್ಲಿ ಅನೇಕ ಕಲ್ಪದ್ರುಮದ ಮರಗಳ ನೆರಳನಲ್ಲಿ ರಾಜಯೋಗದಲ್ಲಿ ಕೂಡಿಯಿದ್ದಂಥಾ ಈಶ್ವರನು ಅತಿಗುಪ್ತವಾಗಿ ಹಲವು ಕಾಲದಲ್ಲಿ ಪಾರ್ವತೀ ದೇವಿ ಈಶ್ವರನ ಬೆಸಗೊಂಡ [ನು] (ಳು) (೧)

ಶ್ರೀದೇವ ಉವಾಚ ॥

ದೇವ ದೇವ ಜಗನ್ನಾಥ ದೇವ ದೇವ ಮಮಪ್ರಿಯ ।
ದೇವ ದೇವ ತ್ರಿಲೋಕೇಶ ನಮಸ್ತೇ ಪರಮಾತ್ಮನೆ ॥
ಲೋಕಾನಾದಿಶ್ಚ ಶಾಸ್ತ್ರಾಣಿ ಮಮಪ್ರೀತ್ಯರ್ಥ ಕಾರಣಂ ।
ತಸ್ಮಾತ್ಕಾರಣಸರ್ವೇಶ ಬ್ರಹ್ಮಮೇ ಪರಮೇಶ್ವರ ॥

ಟೀ ॥ ಎಲೆ ಪರಮೇಶ್ವರ ! ನಂದಾವರ್ತಂಗಳಿಗೆ ಒಡೆಯನಾದಂಥ ಶಿವನೇ ! ನಿನಗೆ ಪ್ರಿಯನಾದಂಥ ಮೂರು ಲೋಕಕ್ಕೆ ಒಡೆಯನಾದಂಥ ಆ ಪರಮಾತ್ಮ ಸ್ವರೂಪನೆಯೆಂದು ನಮಸ್ಕಾರವ ಮಾಡಿ ಪಾರ್ವತಿಯು ಲೋಕಂಗಳಿಗೆ ಹಿತಕಾರಣವಾದಂಥ ನಾಡೀ ಶಾಸ್ತ್ರವನ್ನು ಕೇಳಯ್ಯಾ ಯೆಂದು ಜಗನ್ನಾಥ ಈಶ್ವರನ ಬೆಸಗೊಂಡಳು.

ಶ್ರೀಭಗವಾನುವಾಚ ॥

ಸಾಧು ಸಾಧು ಮಹಾದೇವಿ ಸಾಧು ಸಾಧು ಮಮ ಪ್ರಿಯೇ ।
ಸಾಧು ಕಲ್ಯಾಣದೇವೇಶಿ ಸಾಧು ಮಾತಂಗಿನಿ ಪ್ರಿಯೇ ॥
ಸಾಧು ಸೃಷ್ಟಂ ತ್ವಯಾದೇವಿ ಭಕ್ತಾನಾಂ ಹಿತಕಾರಿಣಿ ।
ನಾಡೀ ಶಾಸ್ತ್ರಂ ಮಹೇಶಾನಿ ಶೃಣುಕಾಲಸ್ಯ ನಾಯಕಿ ॥

* * * * *

ಪಂಚಭೂತಾತ್ಮಕೋ ದೇಹ ಸ್ತ್ರೀದೋಷಃ ಸಪ್ತಧಾತವಃ
ಜಾಗ್ರತ್ಸ್ವಪ್ನ ಸುಷುಪ್ತ್ಯಾದಿ ದ್ವಾದಶಾಮಲಸಂಯುತಂ ॥
ತ್ರಯಂ ಶರೀರಜವ್ಯಾಪಿ ಉತ್ಪತ್ತಿಸ್ಥಿತಿ ಕಾರಣಂ ।
ಏತಾನಿ ಸರ್ವದೋಷಾಣಿ ಪ್ರಾಣೇ ಮಾರುತ ಸನ್ನಿಭಂ ॥

End:—

ಟೀ ॥ ಪೂರ್ವಕದಲ್ಲಿ ಪಿತ್ತಗತಿಯಾಗಿ ಮತ್ತೆ ವಾಯುಗತಿಯಾಗಿ ನಡವದು । ಅತ್ಯಂತ ಭ್ರಮಣೀಯಾಗಿ ನಡೆದರೆ ಚಕ್ರಾದಿಗಳಲ್ಲಿ ಎಲ್ಲಾ ತಾವುಗಳಲ್ಲಿ ನಡವಣ । ಭ್ರಷ್ಟತ್ವವಾಗಿ ನಡೆದರೆ ತಲೊರೀಸಿತದಾನೀ ಸಮಸ್ತಗತಿಯಾಗಿ ಕೂಡಿಕೊಂಡು ಕಡೆಯಲು ಅಸಾಧ್ಯವೆಂತರಿತೀ ನಿಶ್ಚಯಂ ಮಾಡಬಾರದು ॥

Colophon :

ಇತಿ ಪಾರ್ವತೀಸಂವಾದೇ ಶ್ರೀ ಶಾರದಾಂಬಾಯನ್ನಃ ॥

ವಿ.ವಿ.—

ಅಸಮಗ್ರ ಹಾಳೆಗಳು ಮುರಿದಿವೆ. ಸಂಸ್ಕೃತ ಶ್ಲೋಕಗಳೂ ಅವುಗಳಿಗೆ ಕರ್ಣಾಟಕ ಟೀಕೆಯೂ ಇದೆ.

" ಪಂಚಭೂತಾತ್ಮಕವಾದ ಶರೀರವನ್ನು ಹೊಂದಿದ ಜೀವನಿಗೆ ಬ್ರಹ್ಮಜ್ಞಾನವು ನಾಡೀಜ್ಞಾನಾಯತ್ತವಾದುದು "—ಎಂದು ನಾಡೀ ಜ್ಞಾನದ ಪ್ರಾಮುಖ್ಯತೆಯು ಮೊದಲು ಹೇಳಿದೆ. ಆ ಬಳಿಕ ಇಪ್ಪತ್ತೆರಡು ಸಾವಿರ ನಾಡಿಗಳನ್ನೊಳಗೊಂಡ ಈ ಶರೀರದಲ್ಲಿ ಹದಿನಾರು ನಾಡಿಗಳು ಪ್ರಧಾನಗಳೆಂದು ಅವುಗಳ ನಾಮನಿರ್ದೇಶಗಳೊಡನೆ ವರ್ಣಿಸಿ ವೈದ್ಯನು ಯಾವ ರೋಗಕ್ಕೆ ಯಾವ ನಾಡಿಯ ಚೇಷ್ಟೆಯನ್ನು ಹೇಗೆ ಪರೀಕ್ಷಿಸಬೇಕು ? ನಾಡೀ ವಿಜ್ಞಾನವು ರೋಗವನ್ನು ಕಂಡುಹಿಡಿಯುವುದಕ್ಕೆ ಎಷ್ಟು ಸಹಕಾರಿಯಾಗಿದೆ ಮುಂತಾದ ನಾಡಿಗಳಿಗೆ ಸಂಬಂಧಿಸಿದ ವಿಷಯವು ಇದರಲ್ಲಿ ಪ್ರತಿಪಾದಿಸಲ್ಪಟ್ಟಿದೆ.

ಈ ವಿಜ್ಞಾನವನ್ನು ಪರಮಶಿವನು ಪಾರ್ವತಿಗೆ ಹೇಳಿದುದಾಗಿ ಈ ಗ್ರಂಥದಲ್ಲಿ ಹೇಳಿದೆ.

No. 1381. ಬಾಲಗ್ರಹ ಚಿಕಿತ್ಸೆ.

BĀLAGRAHACIKITSE.

Substance, palm-leaf. Size, 6 5/16 × 1⅛ inches. Pages, 64. Lines, 6 on a page. Extent, 235 granthas. Character, Kannada. Condition, much injured. Appearance, old. Mode of writing, good.

Incomplete.

Regarding the remedy to be adopted when a child is afflicted with evil spirits.

Beginning:

. . . . ಣಿಯೆಂಬ ದೇವತೆ ಪಿಡಿಗುಂ । . . . . . . ಕಾಲ ಮಡಗಿ ಕೊಂಡಿಕ್ಕುಂ । ದೆಸೆದೆಸೆಯ ನೋಡುಗುಂ. ಅದಕ್ಕೆ ಬಲಿ :—ಉತ್ತರಣೆ, ಹಿಪ್ಪಲಿ, ಚಿತ್ರಮೂಲ ಇವಂ ಸಮಾನಂಗೊಂಡು, ಕೂಸಿನ ಮೈಗೆ ಪೂಸಿ, ಪಂಚಫಲದ ನೀರ ನೆರೆವುದು. ಕಮ್ಮನೆ ಹೂಗಂಧಾಕ್ಷತೆ ಧೂಪದೀಪವೆರಸಿ ದಿನಕ್ಕೆ ಮೂರು ಬಾರಿ ಬಲಿಯ ನಿವಾಳಿಸಿ ಬಟ್ಟೆಯೊಳಿಕ್ಕುವುದು. ಅದಕ್ಕೆ ಮಂತ್ರ:—" ಓಂ ನಮೋ ಬನ್ನಿಣಿ ವಿಹಬಲಿಗ್ರಹ ಬಾಳಕ ಸ್ವಾಹಾ " ಎಂಬ ಮಂತ್ರದಿಂದ ಮಾಡುವುದು.

End:

ಹೇಳಿದ ಮಂತ್ರ ಸಟೆಯಾದರೆ ಕೊಲ್ಲಾಪುರ ಬನ್ನಿಮ . . . . ಣಿ, ದೇವರಾಣೆ ನವ ಕೋಟಿ ಸಿದ್ಧರಾಣೆ । . . .

ವಿ.ವಿ.—

ಅಸಮಗ್ರ.

ಹುಟ್ಟಿದ ದಿನದಿಂದಾರಂಭಿಸಿ ಬಾಲಕರನ್ನು ಪೀಡಿಸುವ ದೇವತೆಗಳನ್ನೂ, ಅವನ್ನು ಶಿಶುವಿನ ದೇಹಕ್ಕೆ ಹೊರಡಿಸಿ ಸೌಖ್ಯವನ್ನುಂಟುಮಾಡಲು ಮಾಡಬೇಕಾದ ಕ್ರಿಯೆಗಳನ್ನು ವಿವರಿಸಿದೆ.

No. 1382. ಭಸ್ಮವಿಧಾನ.

BHASMAVIDHĀNA.

Substance, paper. Size, 10½ × 9⅝ inches. Pages, 76. Lines, 20 on a page. Extent, 880 granthas. Character, Kannada. Condition, fair. Apperarance, new, Mode of writing, not bad but full of mistakes.

Restored in 1924–25 from the very much injured manuscripts described under the next No. (1383).

Incomplete.

This is a work on the recepits of certain indigenous medicines mainly of oxides. It is written in both Kannada and Telugu languages.

Beginning :

ಪುಷ್ಯಾರ್ಕೇಜ ಸಮುದ್ಧೃತ್ಯ ಭೂಜಾಶಿರಸಿ ಸಂಸ್ಥಿತಾ। ಏಕ್ಕೈಕಂ. ಕಾರಯುತ್ಯೇನಾ ಶಸ್ತ್ರಸಂ . . . . ಬುಭೂಪಾಲಾ। ಚೋರವ್ಯಾಘ್ರ ಭಯಂ ಜಯೇತ್॥ ಊಡಗವೇರು, ಗೊಲ್ಲಜಿಡ್ಡುವೇರು, ವೆಂಪಲಿವೇರು, ಗಲತಿ . . . ಶಿಖರಿ, ವಿಷ್ಣು ಕ್ರಾಂತಿ, ರುದ್ರ ಜಟ, ನೀಲಿ, ಅಗಲ ಶೊಂಠಿ, ತೆಲವಿಷ್ಣು ಕ್ರಾಂತರಿ, ಕಲುಗೋಟು, ಸಹಗೇರಿ, ವೆಲ್ಲ, ಮಸಲೋ . . . . . . ಮಿಯಂದು ಪರಿಶಿ ತೆಚ್ಚಿ ಸಂದಿಟಗಾನಿ ಧರಿಸ್ತುನು.

* * * * *

ಹಂಚಿಗೆ ಎರದ ಬಳಿಕ ಆಕೊಳ . . ಡಿಯು ಹಾಕಿ ಅದರ . . . . ಡಿಯು ಹಾಕಿ ಕರಿನದುಗ ಮತ್ತು ಆ ಪುಡಿಯು ಹಂಚಿಗೆಯುರದು ಅದನು . . . . ಡನಿ ಆ ತಾನಕಡ ಪುಡಿ ಇದಷ್ಟನು ಮೊದಲ ಪುಡಿಪ್ರೊಲೋದಿ ಕಲುವಿ . . . . ಲೆಗಳ ತೂಕ, ಈ ಎರಡು ಅರೆದು ಆ ಪುಡಿಪ್ರೊಂದಾಗಿ . . . ದಲು ಸೊಪ್ಪಿನ ರಸದಲ್ಲಿ ಮೂರು ವೇಳೆಯುರೆದು, ಮತ್ತು ಆಸಿನ . . . . ತಾಳಕಪ್ಪನೆ, . . . ಶಿಮಣಿಶಿಲಂ, ಗಂಧಕ, ಇವರಸದ . . . . . . ಶಿದೆವಾದನಲಿ ಕಲಸಿ ಸೆಕೆಯಲ್ಲಿ ಆರಿಸಿ ಚೂರ್ಣಮಾಡಿ ಕಲಸಿ . . . . . ತುಂಬಿ ಮುಚ್ಚಿರಿಸಿ ಧಾನ್ಯತುಂಬಿದ ಕಣಜದಲ್ಲಿಯಿ . . . . ಲಕದ ಪ್ರಮಾಣ ಸೇವಿಸುತ್ತಾ ಅವ್ಯಕಾದು ಹಣ್ಣೆಯು, ಮ , . . . ವೂ ಮತ್ತಕಾಯಿಲು ಕೆಚ್ಚಿದೋಡಿ ಮದ್ದಿಶಿ.

* * * * *

. . . ದ ಬೇರು ಆದಿತ್ಯವಾರ ಅರ್ಕ (? ರ್ಜ) ನೆ ಮಾಡಿ ಇರಿಸಿಕೊಂಡು ಬೇಕಾದಾಗಲೇ ಕೊಳ್ಳಗ ತೆಗೆದು ತಿಲಕವಿಟ್ಟುಕೊಂಡು ಮಾತನಾಡಲು . . . .

* * * * *

Ends

. . . . , ಶವರ್ಣಾಯ ಅಭಯಾಯ ವರದ ಹಸ್ತಾಯ ಅಚಲಮಣಿಮಂತ್ರ ಮಹಾ ಭೂತ ಸರ್ವಕೊರಿ ಕೇಶಮಂತೆ ಮೂರ್ತಿ ಲಂಕಾರಾವಣ . . . ಕಾರಿ ಶೇಷ ಮಂತೇ ಮೂರ್ತಿವಿರಹನಿತ್ತು ದಾಸ್ವಾಹಾ . . . . .

ವಿ.ವಿ.—

ಅಸಮಗ್ರ. ಇದು ಮುಂದಣ ೧೩೮೩ ನೆಯ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪುತ್ರಿಕೆಯಾಗಿದೆ. ಅಲ್ಲಲ್ಲಿ ಕನ್ನಡವೂ ಮಧ್ಯ ಮಧ್ಯದಲ್ಲಿ ತೆಲುಗೂ ಕಾಣುತ್ತದೆ. ಕೆಲವು ಭಸ್ಮ, ಚೂರ್ಣ, ರಸಗಳನ್ನು ತಯಾರಿಸುವ ಕ್ರಮವನ್ನು ಹೇಳಿದೆ. ಇದರ ಮಾತೃಕೆಯು

ಅತ್ಯಂತ ಶಿಥಿಲವಾಗಿರುವುದರಿಂದ ಗ್ರಂಥವು ಅಲ್ಲಲ್ಲಿ ತುಂಡು ತುಂಡಾಗಿರುವುದರಿಂದ ವಿಷಯಗಳು ಅನುಸ್ಯೂತವಾಗಿ ದೊರೆಯುವುದಿಲ್ಲ.

No. 1383. ಭಸ್ಮವಿಧಾನ.

BHASMAVIDHĀNA.

Substance, palm-leaf. Size, 12½ × 1⅝ inches. Pages, 196. Lines, 5—6 on a page Extent, 880 granthas. Character, Kannada. Condition, very much injured. Appearance, old. Mode of writing, good.

Incomplete.

This is the original of the work describd above.

ವಿ. ವಿ.—

ಅಸಮಗ್ರ. ಅತ್ಯಂತ ಶಿಥಿಲ. ಲಿಪಿ ಚೆನ್ನಾಗಿದೆ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾದ ಗ್ರಂಥದ ಮಾತೃಕೆಯಾಗಿದೆ.

No. 1384. ರಸರತ್ನಸಮುಚ್ಚಯ.

RASARATNASAMUCCAYA.

Substance, paper. Size, 10 7/16 × 9 7/16. inches. Pages, 98. Lines, 20 on a page. Extent, 1,010 granthas. Character, Kannada. Conditino,, good. Appearance, new. Mode of writing, good.

Restored in 1934–35 from the manuscript described above.

Begins on page 1. The other works herein are (1) Kālajñāna (Skt.) pages 98..105. (2) Vaidyayōga, pp. 105—131. (3) Bālacikitsa (Skt.) with Kannada meaning pp. 131—137. (4) Vaidya viṣaya, pp. 137—149.

Deals with the properties of some medicinal substances. It also describes the various diseases to which the human body is liable. It contains some stanzas in Sanskrit with Kannada meaning and a few Kannada verses in Kanda metre dealing with the same subject.

Beginning :

ರಸರತ್ನಸಮುಚ್ಚಯ ॥

ಯಸ್ಯಾನಂದಮಯೇನ ಮಂಗಳ ಕಳಾ ಸಂಭಾವಿತೇನ ಸ್ಫುರ- ।
ದ್ಧಾಮ್ನಾಸಿದ್ಧರಸಾಯಿತೇನ ಕರುಣಾ ವಿಕ್ಷಾಸುಧಾ ಸಿಂಧುನಾ ॥
ಭಕ್ತಾನಾಂ ಪ್ರಭವ ಪ್ರಸಂಹತಿಜರಾ ರಾಗಾದಿ ದೋಷಾಃ ಕ್ಷಣಾತ್ ।
ಶಾಂತಿಯಾತಿ ಜಗತ್ಪ್ರಧಾನ ಭಿಷಜೇ ತಸ್ಮೈ ಪರಸ್ಮೈ ನಮಃ ॥

* * * * *

ಟೀಕು ॥ ವಿಷ . . . ಅನ್ನಪಾನಂಗಳಂ ಕೊಂಬುದರಿಂದ ವ್ಯಾನವಾಯುವು ಕೋಷ್ಠವನು ಆಶ್ರಯಿಸಿ ಆ ವಾಯುವು ಪ್ರಕೋಪಿಸಿ ಶ್ಲೇಷ್ಮವನ್ನೂ ಪಿತ್ತವನ್ನೂ . . . . ಸಿ ಅದು ಶೀತವನು ಹುಟ್ಟಿಸುವುದು.

ದೃಷವಮಾವೃತ್ಯ ಶೀತಾರ್ತ್ಃ ತೇನಸಂಕುಚಿತೋ ನರಃ ।
ಪ್ರತಿ ಬುದ್ಧೇನ ಪಿತ್ತೇಜ ದಹ್ಯತೇ ಚಾಹ್ಯತಃ ಕಫಃ ॥
ತತೋಷ್ಣೋ ಜಾಯತೇ ಜಂತೋಃ ಶೀತಿಕಾಚ ವಿನಶ್ಯತಿ ॥

* * * * *

ಜಲಸಮುದಾಯ ಗುಣಾ :—

ಜೀವನಂ ತರ್ಪಣಂ ಹೃದ್ಯಂ ಹ್ಲಾದಿ ಬುದ್ಧಿ ಪ್ರಬೋಧನಂ।
ತನ್ವವ್ಯಕರಸಮ್ಮೃಷ್ಟಂ ಶೀತಂ ಸ್ವಚ್ಛಾಮೃತೋಪಮಂ
ತತ್ರಾಪ್ಯಜಲಭೇದನ ಮಾಹುಃ ॥

* * * * *

ಅಶ್ವಗಂಧಿ ಘೃತ :—

ಅಶ್ವಗಂಧಿ ಬೇರ ಅವರೆ ಕಾಳಹಾಗೆ ಕತ್ತರಿಸಿ ಹಾಲೊಳು ಕುದಿಸಿ ಆರಿಸಿ ಚೂರ್ಣವಂ ಮಾಡಿ ತ್ರಿಕಟುಕ ೧॥ ತೂಕ, ಲವಂಗ, ಲವಂಗ ಪತ್ರೆ, ನಾಗಕೇಸರ, ಲವಂಗ ಚಕ್ಕೆ ವೊ . . ಯಿವು ಪ್ರತ್ಯೇಕ ೪ ತೂಕ, ಏಲಕ್ಕಿ ೧॥ ತೂಕ, ಇವಂ ಚೂರ್ಣಮಾಡಿ ೧ ಪಾಲು, ಅಂಗೂರದ ಚೂರ್ಣ ೧ ಪಾಲು, ೨ ಪಡಿ ತುಪ್ಪವ ಮಿಂಚುಗುದಿ ಬರುವ ಹಾಗೆ ಕಾಸಿ ಇಳುಹಿಕೊಂಡು ಈ ಚೂರ್ಣ ೧ ಪಾಲು, ಉಂಗುರದ ಚೂರ್ಣ ೧ ಪಾಲು ಹಾಕಿ ಅರೆ ಪಡಿ ಸಕ್ಕರೆ ಹಾಕಿ ೪ . . . ಉಧಯದಾಗ ನೆಲ್ಲಿಕಾಯಷ್ಟು ಕೊಳ್ಳೆ ಅಸ್ಥಿಗತ ಶ್ವಾಸ ಕಾಸ ಮುಂತಾಗಿ, ಅಜೀರ್ಣಕ್ಷಯಮಾಗಿ ಪುಷ್ಟಿಯಕ್ಕುಂ.

* * * * *

End :

ವಿಲಿತ ಮಾಡಲು ಪರಿದಿ।
ದೋಡೆ ಮೊದುಫಳದ ಮೂಲವ ನರೆದುಂ ॥
ತಿಳಸದೆ ದುಗ್ಧಂ ತ್ರಿದಿನಂ।
ಫಳಲನೆ ಕುಡಿದಂದು ಬಂಜೆಸುತನಂ ಪಡೆಗುಂ॥

ನಾರತರಸೆನಿಪ ಬವನಂ।
ಗಾರೆಯ ಮುತ್ತರಕೆಪರಿದ ಮೂಲಮು ಮಂತಾಸ್ ॥
ಕ್ಷೀರದೊಳು ಕುಡಿಸಲಂತುಂ।
ನಾರಿಗೆ ತ್ರಿದಿನಕ್ಕೆ ಗರ್ಭಮಕ್ಕು ಮಮೋಘಂ ॥

ಅತ್ತಿಯ ಬಡಗಣ ಬೇರಂ।
ಮತ್ತೆನಿಸದೆ ಪಾಲೊಳರೆದು ಪಾಲಿಂದದನಂ ॥
ದಿತ್ತಡೆ ಬಂಜೆಗೆ ತ್ರಿದಿನ।
ಕ್ಕುತ್ತಮ ಪಳವತಿಯೆನಿಪ್ಪದೊಂದಚ್ಚರಿಯೇ ॥

ವಿ.ವಿ.—

ಅಸಮಗ್ರ. ಇದು ಮುಂದಣ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಕೃತಿಯಾಗಿದೆ. ಸಂಸ್ಕೃತ ಶ್ಲೋಕಗಳೂ ಕನ್ನಡ ವ್ಯಾಖ್ಯಾನವೂ ಕಂದ ಪದ್ಯಗಳೂ ಇವೆ. ಗ್ರಂಥದ ಹೆಸರು ರಸರತ್ನಸಮುಚ್ಚಯವೆಂದು ಇದೆ. ಆದರೆ ಸಂಸ್ಕೃತದಲ್ಲಿರುವ ರಸರತ್ನಸಮುಚ್ಚಯದ ಶ್ಲೋಕಗಳಾವುವೂ ಇದರಲ್ಲಿಲ್ಲ.

ದ್ರವ್ಯ ಗುಣಗಳನ್ನೂ ಕೆಲವು ರೋಗಗಳನ್ನೂ ಅವುಗಳ ಮದ್ದನ್ನೂ ವೈದ್ಯಯೋಗಗಳನ್ನೂ ಹೇಳುತ್ತದೆ.

No. 1385. ರಸರತ್ನಸಮುಚ್ಚಯ.

RASARATNASAMUCCAYA.

Substance, palm-.eaf, Size, 6⅜ × 1½ inches. Pages, 186. Lines, 6 to 8 on a page Extent, 100 granthas. Character, Kannada. Condition, slightly injured. Appearance, old. Mode of writing, good.

Begins on fol. 1*a* of the manuscripts described under No. 13175 of the Descriptive Catalogue of Sanskrit Manuscripts, Vol. XXIII.

Incomplete.

This is the original of the manuscript described above.

ವಿ. ವಿ.—

ಅಸಮಗ್ರ. ಸ್ವಲ್ಪ ಶಿಥಿಲ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾದ ಗ್ರಂಥದ ಮಾತೃಕೆಯಾಗಿದೆ.

No. 1386. ವೈದ್ಯ.

VAIDAYA.

Substance, palm-leaf. Size, 6¾ × 1¼ inches. Page, 1. Lines, 5. Extent, 4 granthas. Character, Kannada. Condition, injured. Appearance, new. Mode of writing, fair.

Begins on fol. 88*b* of the manuscripts described under Sanskrit Descriptive No. S. 8634 wherein this work has been omitted to be included in the list of other works.

Incomplete.

Text—

ಸರ್ವಜನವಶ್ಯ ರಾಜವಶ್ಯ ॥

ಶ್ವೇತಾರ್ಕಮೂಲಂ ಶಿಬಿವಿಷ್ಣುಕ್ರಾಂತಂ ಗೋರೋಚನಂ ಕುಂಕುಮ ಚಂದನಂ ಚ ।
ಏತಾನಿ ಸದ್ಯಃ ತಿಲಕಂ ಲಲಾಟೇ ತ್ರಿಲೋಕನಸ್ಯಂ ಮದನಾಮೃತಂ ಚ ॥

ತಿಲಕಕ್ಕೆ, ಕಪ್ಪು, ಕರಿ, ಆಕಳ ಪಂಚಗವ್ಯ, ಬಿಳಗಣಜಲ ಬೇರು. "ಯುದದ್ಯಾ ಕಚ್ಚ ವೃತ್ರಹನ್" ನಿತ್ಯ ಹತ್ತು ಆವರ್ತಿ ಜಪ; ಈ ಪೂರ್ವದಲ್ಲಿ ಹೇಳಿದ ಮಂತ್ರದಲ್ಲಿ ಇಟ್ಟುಕೊಂಬುದು.

ವಿ.ವಿ.—

ಅಸಮಗ್ರ.

ಜನವಶ್ಯಕ್ಕೆ ಬೇಕಾದ ತಿಲಕದ ವಿಧಾನವಿದೆ.

No. 1387. ವೈದ್ಯ.

VAIDYA.

Substance, Kadittam. Size, 10⅝ × 3⅜ inches. Pages, 12. Lines, 15–22 on a page. Extent, 40 granthas. Character, Kannada. Condition, injured.

Begins on page 99th and 108th of the manuscript described under No. 1282 *ante* (pp. 99–104 and 108—113).

Incomplete.

Similar to the work described above.

Beginning :

ಪಿಂಡಾದ್ರಿಕಾರಸಾಯನ :—ಹಸಿ ಶುಂಠಿ ಸೇ. ೪ ಕಡಲೆ ಗಾತ್ರ ಕತ್ತರಿಸಿ ತುಪ್ಪದಲ್ಲಿ ಹುರಿದು ತುಪ್ಪ ಸೇ. ೨, ಮೆಣಸು ಗ. ೨, ತರಕ್ಷೀರ, ಜಾಜಿಕಾಯಿ, ಯಾಲಕ್ಕಿ, ಶುಂಠಿ, ಹಿಪ್ಪಲಿ, ಹಿಪ್ಪಲಿ ಮೂಲ ಇವು ಬ ೧ ಕ್ಕೆ ಗ. ೪, ಚಿತ್ರಮೂಲ ಗ. 10, ಲವಂಗ. . . . ಯು ಪತ್ರಿ, ನಾಗ ಕೇಸರಿ, ಕೊತ್ತುಂಬರಿ ಬೀಜ, ತಾವರೆ ಕೇಸರ, ಭದ್ರಮುಸ್ತೆ ಇವು ಬ. ೧ ಕ್ಕೆ ಗ. ೨೦, ಖಂಡ ಸಕ್ಕರೆ ಸೇ. ೪।, ಹಾಲ ಸೇ. ೮.

End :

ತ್ರಿಕಟುಕಮಜಮೋದಂ ಸೈಂಧವಂ ಜೀರಕೇ ದ್ವೇ।
ಸಮಧರಣ ಧೃತಾನಾಂ ಅಷ್ಟಮೋ ಹಿಂಗುಭಾಗಃ।
ಪ್ರಥಮ ಕಬಳ ಭೋಜ್ಯಂ ಸರ್ಪಿಷಾ ಚೂರ್ಣ ಮೇತತ್।
ಜ್ವಲಯತಿ ಜಠರಾಗ್ನಿಂ ವಾತಗುಲ್ಮಂ ನಿಹಂತಿ ॥

ಇದು ತೂಕ ೧೬ ಹಣ ತೂಕ, ಹಿಂಗು ೧೦ ಹಣ ತೂಕ, ಅಷ್ಟಮೋ ಹಿಂಗು ಭಾಗಃ ಚತುರ್ದಶಪ್ರಮಾಣ ಮಿತ್ಯರ್ಥಃ ॥

ವಿ.ವಿ.—

ಅಸಮಗ್ರ. ಕಡತದ ಪ್ರತಿ. ಶಿಥಿಲ.

ಇದರಲ್ಲಿ ಪಿಂಡಾದ್ರಿಕಾರಸಾಯನ, ತಾಳೀಸವಟಿಕ, ಮಹಾಭೃಗ್ವಾದಿ ಚೂರ್ಣ, ಶೀತ ಜ್ವರ ಕಷಾಯ, ಪಿತ್ತಜ್ವರ ಪಿತ್ತಶ್ಲೇಷ್ಮಗಳಿಗೆ ಮದ್ದು, ಇಂಗ್ವಾದಿ ಚೂರ್ಣ, ವಾತಜ್ವರ, ಅಶ್ವಗಂಧಿ ಚೂರ್ಣ, ಸುದರ್ಶನ ಚೂರ್ಣ ಮತ್ತು ಅಷ್ಟ ಚೂರ್ಣ ಇವುಗಳ ವಿಧಾನವು ಹೇಳಲ್ಪಟ್ಟಿದೆ.

No. 1388. ವೈದ್ಯ.

VAIDYA.

Substance, palm-leaf. Size, 16¾ × 1¼ inches. Pages, 2. Lines, 4 on a page. Extent, 10 granthas. Character, Kannada. Condition, much injured. Appearance, old. Mode of writing, fair.

Begins on fol. 1*a* of the manuscript described under No. 1067 *ante*, Incomplete.

Similar to the work described above.

Beginning :

ನೆಲ್ಲಿ ಚಟ್ಟು, ದ್ರಾಕ್ಷೆ ಹಣ್ಣು, ಸಕ್ಕರೆ, ಜೇನು ತುಪ್ಪದಲ್ಲಿ ಕೊಳ್ಳಲು ಓಕರಿಕೆ ಮಾಣ್ಗುಂ ॥

End :

ಕೊಂಗಿ ಬೇರಿನ ತಿಗಡು, ಈಶ್ವರಿ ಬೇರು, ಒಣ ಶುಂಠಿ, ಚಿತ್ರಮೂಲ, ಸುಂಟೆ ಇವಂ ಬೇರೆ ಬೇರೆ ಚೂರ್ಣವಂ ಮಾಡಿ ವಸ್ತ್ರಗಳಿತವಂ ಮಾಡಿ ಚಿಟಿ ಅಳದು ಕೊಂಬುದು. ಆರು ಚಿಟಿ ತುಪ್ಪದ.

ವಿ. ವಿ.—

ಅಸಮಗ್ರ.

ಇದರಲ್ಲಿ ಮಲಬಂಧಕ ಶೂಲೆ, ಗಂಡಮಾಲೆ, ಓಕರಿಗೆ, ಅರದಲೆ ಬೇನೆ ಇವುಗಳಿಗೆ ಔಷಧಗಳಿವೆ.

No. 1389. ವೈದ್ಯ ಕ್ರಮ.

VAIDYAKRAMA.

Substance, palm-leaf. Size, 11⅞ × 1 5/16 inches. Pages, 6. Lines, 5 on a page. Extent, 26 granthas. Character, Kannada. Condition, very much injured. Appearance, old. Mode of wiritiing, fair.

Begins on fol. 49*a* of the manuscript described under No. 1346, ante, Incomplete.

On the treatment of some venereal diseases.

ಯೋನಿ ನೆತ್ತರಿಗೆ :—ಮೊಸರು ಪಾವು, ಎಳ್ಳೆಣ್ಣೆ ಪಾವು ಈ ಎರಡನು ಸಮವಾಗಿ . . . . . ಹಾಕಿ ಹೀಗೆ ಮೂರು ದಿನ ಕುಡಿಸಿದರೆ ನೆತ್ತರು ನಿಲ್ಲುವುದು. ಪಥ್ಯ ಹುಳಿ ವರ್ಜಿತ.

End :

ಕರಿಯ ಕನಕದ ಬೇರು, ಗುರುಗುಂಜಿ, ... , . . ದಿ ಸುಣ್ಣದಲ್ಲಿ ಇಳ್ಳಲು ಪಥ್ಯ.

ವಿ. ವಿ.—

ಅಸಮಗ್ರ. ಅತ್ಯಂತ ಶಿಥಿಲ.

ಕವಿಯ ವಿಷಯ ತಿಳಿಯಬರುವುದಿಲ್ಲ. ಮಧ್ಯದಲ್ಲಿ ಸ್ತ್ರೀ ವಶ್ಯದ ಮಂತ್ರವನ್ನು ಹೇಳಿದೆ. ಮುಖ್ಯವಾಗಿ ಸ್ತ್ರೀಯರ ರೋಗಗಳಿಗೆ ಚಿಕಿತ್ಸೆಯೂ ಸ್ತ್ರೀ ವಶ್ಯವೂ ಈ ಗ್ರಂಥದ ವಿಷಯವು.

No. 1390. ವೈದ್ಯ ಕ್ರಮ.

VAIDYAKRAMA.

Substance, paper. Size, $10\frac{3}{8} \times 9\frac{7}{16}$ inches. Pages, 3. Lines, 20 on a page. Extent, 26 grantahas. Character, Kannada. Condition, fair. Appearance, new. Mode of writing, good.

Restored in 1935–36 from the manuscript described above.

Begins on page 61 of the manuscript described under No. 1348, *ante.*

ವಿ. ವಿ.—

ಅಸಮಗ್ರ. ಹಿಂದಣ ನಂಬರಿನಲ್ಲಿ (ನಂ. 1389) ವರ್ಣಿತ ವಾದ ಪ್ರತಿಯ ಪ್ರತಿ ಯಾಗಿದೆ.

No. 1391. ವೈದ್ಯಯೋಗ.

VAIDYAYŌGA.

Substance, paper. Size, $10\frac{7}{16} \times 9\frac{7}{16}$ inches. Pages, 25. Lines, 20 on a page. Extent, 330 granthas. Character, Kannada. Condition, good. Appearance, new. Mode of writing, good.

Restored in 1934–35 from the manuscript described under the next number (No. 1392).

Begins on page 106 of the manuscript described under No. 1384, *ante.*

Incomplete.

Beginning :

ಕಣ್ಣತೊಳೆವ ಕಷಾಯ ॥ ನೆಲ್ಲಿಯ ಚಟ್ಟು, ಪಾಷಾಣ ಭೇದಿ, ನೇರಿಲತ್ವಕ್ಕು ಇವಂ ಕಷಾಯವಂ ಮಾಡಿ ಕೊಳ್ಳುವುದು. ಅಂಬಲವಂ ಕಾಸಿ ಮೂಗಿಗೆ ಶಾಖಂ ಮಾಡುವುದು. ಉಗುರಿಲಿ ಕಣ್ಣ ಮಲವ ತೆಗೆಯಲಾಗದು.

* * * * *

End :

ಕೆಂಪಿನ ಹರುವೆಯ ಸುಟ್ಟು ಕರಿಕು ಮಾಡಿ ಸುಣ್ಣವಂ ಬೆರಸಿಕೊಂಡು ಹುಣ್ಣಿನ ಮೇಲೆ ಕೊಟ್ಟನಿಕ್ಕುವುದು.—ಅರಗು ಪುಣ್ಣು ಮಾಣ್ಗು. ಕಾರೆ ಹಗಿನಂ ನೀರಲರದು ಪೊಕ್ಕುಳಗೆ ಯೋರ

ತೊಡೆಯು ಶುಕ್ಲ ಸ್ತಂಭನ ॥ ವ್ರಣಕ್ಕೆ, ಈಸರಿಯ ಬೇರ ತುಪ್ಪದಲ್ಲು ಅಟ್ಟು ಪೂಸುಗೆ ವ್ರಣ ಮಾಣ್ಗು ॥ ಬ್ರಹ್ಮದಂಡೆಯ ಬೇರು, ದೇವದಾರ ತುಪ್ಪದಲರೆದು ಪೂಸುಗು ವಿರಕ್ತತ ಕ್ಷುದ್ರ ವ್ರಣಂ ತೀರ್ಗುಂ। ಓಂ ನಮೋ ಭಗವತೇ ಪಾರ್ಶ್ವನಾಥಾಯ ಸರ್ವ ವ್ರಣ ವಿಧ್ವಂಸಯ ಛೇದಯ, ಭೇದಯ, ಅಷ್ಟಾದಶಂ ವಿಷಂ ಹರ, ಓಂ, ಕ್ಷ್ರೌಂ, ಹಂ ಸಃ, ಹಂ, . . . ಹಾಕಿದರ ಸರ್ವಶಾಂತಿಂ ಕಾರಯ, ಮಂತ್ರದಿಂ ಪೂಜಿಸುವುದು.

ವಿ. ವಿ.—

ಅಸಮಗ್ರ. ಇದು ಮುಂದಣ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಕೃತಿಯಾಗಿದೆ. ಕೆಲವು ವೈದ್ಯ ವಿಷಯಗಳವೆ.

No. 1392. ವೈದ್ಯಯೋಗ.

VAIDYAYŌGA.

Substance, palm-leaf. Size, $6\frac{3}{8} \times 1\frac{1}{2}$ inches. Pages, 37. Lines, 8 or 9 on a page. Extent, 330 granthas. Character, Kannada. Condition, injured. Appearance, old. Mode of writing, good.

Begins on fol. 99*b* of the manuscript described under No. 13175 of the Descriptive catalogue of manuscripts, Vol. XXIII.

Incomplete.

This is the original of the manuscript described above.

ವಿ.ವಿ.—

ಅಸಮಗ್ರ.

ಇದು ಹಿಂದೆ ವರ್ಣಿತವಾದ ಗ್ರಂಥದ ಮಾತೃಕೆಯಾಗಿದೆ.

No. 1393. ವೈದ್ಯ ವಿಷಯ.

VAIDYAVIṢAYA.

Substance, paper. Size, $10\frac{7}{16} \times 9\,7\frac{7}{16}$ inches. Pages, 13. Lines, 20 on a page. Extent, 160 granthas. Character, Kannada. Condition, good, Appearance, new. Mode of writing, good.

Restored in 1934–35 from the manuscript described under the next No. 1396.

Begins on page 137 of the manuscript described under No. 1384, *ante.*

Incomplete.

Similar to the work described above.

Beginning :

ಶೀತಜ್ವರಕ್ಕೆ ರಸ ॥ ಚಂದ್ರ ಗ. ತೂಕ ೪, ಬಿಳಿಯ ಇಲಿಪಾಷಾಣ ಗ. ೪ ತೂಕ, ವತ್ಸನಾಭಿ, ಗ. ೧ ತೂಕ, ಇವಂ ಕೂಡಿ ನಿಂಬೆಯ ಹಣ್ಣಿನ ರಸ, ಹಸುವಿನ ಹಾಲು, ಎಳನೀರು ೩೯ ಗಂಧದೆ

ನೀರು, ಬಾಳೆಯ ಗೆಡ್ಡೆಯ ರಸ, ಜೀರಿಗೆಯ ರಸ, ಮುಡಿವಾಳದ ರಸ, ಕೆಂಬುಕು ಸಾಲೆಯ ರಸ, ಶೇವಂತಿಗೆ ಹೂವಿನ ರಸ, ಅತ್ತಿಪಾನ, ಆಶಾಢಿಯ ರಸ, ನೆಲದಾಳ ರಸ, ಹೊನ್ನಗನ್ನೆಯ ರಸ, ಈ ರಸಂಗಳಲ್ಲಿ ಪ್ರತ್ಯೇಕ ಒಂದೊಂದು ಜಾವಮರ್ದಿಸಿ ಆ ಕಲ್ಕವ ತಾಂಬ್ರದ ಪಾತ್ರೆಯಲ್ಲಿರಿಸಿ ಒಂದು ಮಡಕೆಯಲ್ಲಿ ಹಸುವಿನ ಹಾಲ ಹನಿಸಿ ಪಾವಡೆಗಟ್ಟಿ, ತಾಂಬ್ರ ಪಾತ್ರೆಯ ನಿರಿಸಿ, ಮೇಲೊಂದು ಸಾವೆಯುವೆಯ ಮುಚ್ಚಿ, ಎಂದು ವಿಗಳಗೆ ಪಾಕಂಮಾಡಿ ಅದರ ಕೂಟಕ್ಕೆ ಪಚ್ಚೆ ಕರ್ಪೂರ ತೂಕ ೧, ಕಸ್ತೂರಿ ೧ ತೂಕ, ಇವಂ ಕೂಡಿ ಚೂರ್ಣಂ ಮಾಡಿ, ಜಂಬದ ಭರಣಿಯಲ್ಲಿ ತುಂಬಿಸಿಕೊಂಡು ೪೧ ತೂಕವನ್ನು ಮೆಣಸಿನ ಚೂರ್ಣಕೋಷ್ಣ, ಎಳೆನೀರಿಂಕೊಳ್ಳಲು ತಾಪಜ್ವರ ಹರ.

* * * *

End :

ಗ್ರಹಣೀ ಚತುರ್ವಿಧಂ ಚೈವ ಸನ್ನಿಪಾತಾಸ್ತ್ರಯೋದಶ ।
ತ್ರಯಷಷ್ಟಿ ಮಹಾರೋಗಂ ಇತ್ಯೇತೇ . . . . ಯೋಗತಃ ॥

ವಿ.ವಿ.—

ಅಸಮಗ್ರ. ವಚನವೂ ಸಂಸ್ಕೃತ ಶ್ಲೋಕಗಳೂ ಇವೆ. ಕೆಲವು ಔಷಧ ಯೋಗಗಳನು ಹೇಳಿದೆ.

ಇದು ಮುಂದೆ ೧೩೯೬ ನೆಯ ನಂಬರಿನಲ್ಲಿ ವರ್ಣಿತವಾಗುವ ಪ್ರತಿಯ ಪ್ರತಿಕೆಯಾಗಿದೆ.

No. 1394. ವೈದ್ಯ ವಿಷಯ-

VAIDYAVIṢAYA.

Substance, palm-leaf. Size, $14\frac{1}{8} \times 1\frac{1}{8}$ inches. Pages, 16. Lines, 6 on a page. Extent, 190 granthas. Character, Kannada. Condition, very much injured. Appearance, old. Mode of writing, good.

Begins on fol. 1*a* of the manuscripts described under No. 937, *ante*.

Incomplete.

Similar work described above.

Beginning :

. . . . ಕಟುಕ ಪ್ರತ್ಯೇಕ ೧೦, ಜೀರಗೆ ಗ. ೩, ವ್ರೋಮ ಗ. ೬, ಸಯಿಂಧವ ಗ. ೭.

* * * *

ಅವರೆಯ ಮೊಗ್ಗೆ ಆ ತೊಯ ಹಾಲು ಸಕ್ಕರೆ ಸಹ ಕೊಳಲು ಉರಿ ಮೂತ್ರ ಮಾಣ್ಗು ॥

* * * *

ಹತ್ತಿ ಹಗಳ ನನೆಯಿಕ್ಕಿ ತುಳದು ಎಸರು ಬಿಲಕ್ಕಿ ಸಕ್ಕರೆ ಸಹ ಕೊಳಲು ರಕ್ತಾತಿಸಾರ ಹರ,

* * * *

End :

ಆದಿನ ಕಾಲೂಗ ತೂಕ, ಬೇವಿನ ಹಗಿಸು ಹ ೧ ತೂಕ ಇವಂ ಸೌತೆಯರಸದಲ್ಲು ಕೊಳಲು ಅಪಸ್ಮಾರಿಯ ಮೂತ್ರ . . . . .

ವಿ.ವಿ.—

ಅಸಮಗ್ರ, ಅತಿಶಿಥಿಲ. ಕೆಲವು ಹಾಳೆಗಳು ಮುರಿದಿವೆ.

ಕೆಲವು ಔಷಧಿಗಳು ಉಕ್ತವಾಗಿವೆ.

No. 1395. ವೈದ್ಯ ವಿಷಯ.

VAIDYAVIṢAYA.

Substance, Sritāla. Size, $14\frac{3}{4} \times 1\frac{3}{4}$ inches. Pages, 4. Lines, 7 on a page. Extent, 30 granthas. Character, Kannada. Condition, injured. Appearance, old. Mode of wiriting, good.

Begins on fol. 93 of the manuscript described under No. 908, *ante*.

Incomplete.

Similar to the work described above.

Fol. 94*b* is .left blank.

Beginning :

ಕಟುತಿಕ್ತ ಕಷಾಯಾಶ್ಚ ಕೋಪಯಂತಿ ಸಮೀರಣಂ ॥

ಕಟ್ವಮ್ಲಲವಣಾಃ ಪಿತ್ತಂ ಸ್ವಾದ್ವಮ್ಲಲವಣಾಃ ಕಫಂ ॥ ೧॥ ರಸ, ನಾಭಿ, ತಿಬು, ಗಂಧಕ, ಇವು ಪ್ರತ್ಯೇಕ ೧ ತೂಕ, ಮೆಣಸು ೨ ತೂಕ, ಜಾಜಿಕಾಯಿ ೧ ತೂಕ, ಈ ಕ್ರಮದಿಂ ಕೂಡಿಕೊಂಡು ಹುಣಸೆಕಾಯರಸದಲ್ಲಿ ೧ ಜಾವ ಮರ್ದಿಸಿ ಉದ್ದಿನ ಪ್ರಮಾಣ ಗುಳಿಗೆಯಂ ಮಾಡಿ ಒಣಗಿಸಿ, ಕಾರಗೆಣಸಿನ ರಸದಲ್ಲಿ ಕೊಳ್ಳಲು ಜಾಠರಾಗ್ನಿಯುಕ್ಕುಂ.

End :

ಅಶ್ವತ್ಥ ಚತುರಂ ತುಲ್ಯ ನ್ಯಗ್ರೋಧಾದಿ ಫಲತ್ರಯಂ ।
ಏಷಾಂ ಕಷಾಯಂ ಸಕ್ಷೌದ್ರಂ ಪಿಬೇದನು ಸುಖಾವಹಂ ॥

ವಿ.ವಿ.—

ಅಸಮಗ್ರ. ಸಂಸ್ಕೃತ ಶ್ಲೋಕಗಳೂ ಕನ್ನಡ ವಚನವೂ ಇವೆ.

ತ್ರಿದೋಷಗಳು, ರಾಮಬಾಣ ಚಂದ್ರ ಕಲೆಗಳನ್ನು ತಯಾರುಮಾಡುವ ವಿಧಾನವಿದೆ.

No. 1396. ವೈದ್ಯ ವಿಷಯ.

VAIDYAVIṢAYA.

Substance, palm-leaf. Size, $6\frac{5}{8} \times 1\frac{1}{2}$ inches. Pages, 24. Lines, 6 to 8 on a page Extent, 160 granthas. Character, Kannada. Condition, injured. Appearance, old. Mode of writing, good.

Begins on fol. 124*a* of the manuscript described under No. D. 13175 (Sanskrit section).

Incomplete.

This is the original of the manuscript described under No. 1393, *ante*

ವಿ.ವಿ.—

ಅಸಮಗ್ರ. ಓಲೆಯ ಪ್ರತಿ. ಇದು ಸಂಸ್ಕೃತ ಕೆಟಲಾಗಿನಲ್ಲಿ ೧೩೧೭೪ ನೆಯು ಡಿ. ನಂಬರಿನಲ್ಲಿ ವರ್ಣಿತವಾದ ಸಂಸ್ಕೃತ ಪುಸ್ತಕದೊಡನೆ ಸೇರಿಯಿದೆ. ಹಿಂದೆ ೧೩೯೬ ನೆಯ ನಂಬರಿನಲ್ಲಿ ವರ್ಣಿತವಾದ ಗ್ರಂಥದ ಮಾತೃಕೆಯಾಗಿದೆ.

No. 1397. ವೈದ್ಯ ವಿಷಯ.

VAIDYAVIṢAYA.

Substance, palm-leaf. Size, $11\frac{1}{4} \times 1\frac{1}{8}$ inches. Pages, 8. Lines, 6 to 8 on a page. Extent, 50 $\frac{7}{8}$ granthas. Character, Kannada. Condition, much injured. Appea-rance, old. Mode of writing, good.

Begins on fol. 69*a* of the manuscript described under No. 735, ***ante.***

Incomplete.

Similar to the work described above.

Beginning :

ವಂಧ್ಯ ಬಿಡಿಸುವ್ರುದಕ್ಕೆ ಔಷಧ.—ಉಮ್ಮತ್ತ್ರದ ಬೇರು, ಮರುಳ್ಗುಅಮತ್ರ್ರದ ಬೇರು, ಮರು . . . . ಗಂಗುಂಗೆಯ ಬೇರು, ಹೆಗಡಿ ಸೀಗೆಯ ಬೇರು, ಗುಳ್ಳದ ಬೇರು, ಇಷ್ಟನ್ನು ಬೇರೆ ಬೇರೆ ಚೂರ್ಣವಂ ಮಾಡಿ ನಾಲ್ಕುಸ . . . . ಕ್ಕು ಒಂದು ಮೂಲಿಕೆಯೊಳಗೆ ಅರ್ಧಗುಳದ ಚೂರ್ಣವನು ಮಾಡಿ ಹಸುವಿನ ಹ . . . . . ಆಮಳಕ ಪ್ರಮಾಣ ಚ . . . ನೋಡಿ ಕೊಡೋಣ.

End :

ಅಕ್ಕಿಗಚ್ಚಿನಲ್ಲು ಕುಡಿ ಬಚ್ಚರಂ ಪೊಕ್ಕು, ತುಪ್ಪದಿಂ ತುದಿ . . . ಹೆನ್ನೆತ್ತ್ರರು ಮಾಣ್ಬ್ಗ. ಪಾಲು ತುಪ್ಪದಲ್ಲು ಕುಡಿದರೆ . . . . ಣ್ಬ್ಗ. ಎಣ್ಣೆಯಲ್ಲು ಕುಡಿಯೆ ಗಾಳ್ಯ ಹೋಕು. ಗೋಮೂತ್ರದಲ್ಲರೆದು ನಸ್ಯಂಮಾಡಿಕುಡಿಯೆ . . . .

No. 1398. ವೈದ್ಯ ವಿಷಯ.

VAIDYAVIṢAYA.

Substance, paper. Size, $10\frac{7}{16} \times 9\frac{7}{16}$ inches. Pages, 9. Lines, 20 on a page. Extent, 60 granthas. Character, Kannada. Condition, good. Appearance, new. Mode of writing, good.

Restored in 1933–34 from the manuscript described above.

Begins on page 101 of the manuscript described under No. 736, ***ante.***

Incomplete.

ವಿ.ವಿ.—

ಅಸಮಗ್ರ. ಇದು ಹಿಂದಣ ನಂಬರಿನಲ್ಲಿ (ನಂ. ೧೩೯೭) ವರ್ಣಿತವಾದ ಪ್ರತಿಯ ಪ್ರತಿಕೃತಿಯಾಗಿದೆ. ಇದರ ಮಾತೃಕೆಯು ಜೀರ್ಣವಾದ ಪ್ರತಿಯಾದುದರಿಂದ ಈ ಪ್ರತಿಯೊಳಗಣ ತುಸಭಾಗವು ಮಾತೃಕೆಯಲ್ಲಿ ಅನಂತರ ಲುಪ್ತವಾದಂತೆ ತಿಳಿಯುತ್ತದೆ.

No. 1399. ವೈದ್ಯ ಶಾಸ್ತ್ರ.

VAIDYAŚĀSTRA.

Substance, Sritala. Size, 8 $7\frac{7}{16} \times 1\frac{7}{8}$ inches. Pages, 6. Lines, 8 on a page. Extent, 50 granthas. Character, Kannada. Condition, injured. Appearance, old. Mode of writing, good.

Begins on fol. 69*a* of the manuscript described under No. 11080 of the descriptive catalogue of Sanskrit manuscripts, Vol. XIX.

Incomplete.

Similar to the work described above.

Beginning :

ವಾತಕ್ಕೆ ಗಜಕೇಸರಿ ಚೂರ್ಣ ॥ ಇಂಗು ತೂಕ ೬, ಚವ್ಯ ತೂಕ ೨, ವಾಯುವಿಳಂಗ ತೂಕ ೩, ಸೈಂಧವ ಲವಣ ತೂಕ ೪, ಸಮುದ್ರ ಲವಣ ತೂಕ ೫, ಶುಂಠಿ ತೂಕ ೬, ವ್ರೋವು (ವ್ರೋಮ ?) ತೂಕ ೭, ಹಿಪ್ಪಲಿ ತೂಕ ೮, ಚಂಗಲಕೊಷ್ಟ ತೂಕ ೯, ಅಳಲೆಕಾಯಿ ತೂಕ ೧೦, ಚಿತ್ರಮೂಲ ತೂಕ ೧೧, ಅಜಾಮೋದ ತೂಕ ೧೨, ಹಿಪ್ಪಲೀ ಮೂಲ ತೂಕ ೪, ಕರ್ಕಾಟಕ ಶೃಂಗಿ ತೂಕ ೪, ರಾಶ್ಮಿ ತೂಕ ೪, ಬಜೆ ತೂಕ ೪, ಜೀರಿಗೆ ತೂಕ ೪, ತಾರಿಕಾಯಿ ತೂಕ ೪, ನೆಲ್ಲಿಚಟ್ಟು ತೂಕ ೪, ತಿಗಡೆ ತೂಕ ೪, ಗಜುಗದ ತಿರುಳು ತೂಕ ೩, ಕುರಸಾಣಿ ವ್ರೋವು ತೂಕ ೫. ಇಷ್ಟು ಈ ಪ್ರಮಾಣತೂಕವಾಗಿ ಹಾಕಿ, ಚೂರ್ಣವಂಮಾಡಿ ವಸ್ತ್ರಗಾಳತವಂ ಮಾಡಿ ಇಟ್ಟುಕೊಂಡು, ಹಸಿ ಅಡಿಕೆಯಷ್ಟು ಚೂರ್ಣವನು ನಿತ್ಯವು ೨ ಹೊತ್ತು ಜೇನಿನಲ್ಲಿ ಕಲಸಿ ಮೆದ್ದು ನಾಲ್ವೆರಲು ಬಿಸಿ ಉದಕವ ತೆಗೆದುಕೊಳ್ಳಲು ವಾತಶ್ಲೇಷ್ಮ, ಮೈನೋವು, ಎದೆಯನೋವು, ಗುಲ್ಮಸರ್ವವಾತವು ಹರ. ಪಿತ್ತಕೂಡಿದ ವಾತಕ್ಕೆ ಸಕ್ಕರೆ ವೆರಸಿ ತೆಗೆದುಕೊಂಬುದು.

*   *   *   *

End :

ದಾಹಜ್ವರ, ತಾಪಜ್ವರಕ್ಕೆ ಕಷಾಯ ॥ ಕೊತ್ತುಂಬರಿಬೀಜ, ಜೀರಿಗೆ, ಮುಡಿವಾಳ, ಲಾವಂಚ, ಶ್ರೀಗಂಧ, ಭದ್ರಮುಸ್ತೆ, ಯಾಲಕ್ಕಿ, ಯಷ್ಟಿಮಧುಕ, ಚಂಗಲಕೋಷ್ಠ ಇವನ್ನು ಸಮಾನಂ ಗೂಡಿ ಹಾಕಿದ ಕಷಾಯಮಂ ಸಕ್ಕರೆ ಮಿಶ್ರಮಾಡಿಕೊಳ್ಳಲು ತಾಪಜ್ವರ ಹರ. ಕ್ಷಯ ರೋಗಕ್ಕೆ ಆದಿತ್ಯ ಉದಯದಲ್ಲಿ ಚಿಲ್ಲದ ಮರದ ಬ . . .

ವಿ.ವಿ.—

ಅಸಮಗ್ರ. ಚಂದನಾದಿ ಚೂರ್ಣ, ಊರಿಜ್ವರ, ಪುರಾಣಜ್ವರ, ಮಹಾಜ್ವರ, ಪ್ರಮೇಹ, ನಷ್ಟೇಂದ್ರಿಯ, ಅಪಸ್ಮಾರ, ಬಾಣಂತಿಕೆಮ್ಮು, ವಾತ ಇವುಗಳಿಗೆ ಔಷಧಿ ಹೇಳಲ್ಪಟ್ಟಿದೆ. ಕನ್ನಡ ಭಾಷೆಯಲ್ಲಿ ಗದ್ಯರೂಪದಲ್ಲಿದೆ. ಇದಕ್ಕೆ ಆಧಾರ ಗ್ರಂಥವು ಯಾವುದೆಂದು ತಿಳಿಯುವುದಿಲ್ಲ.

No. 1400. ವೈದ್ಯ ಶಾಸ್ತ್ರ.

VAIDYŚĀSTRA.

Substance, palm-leaf. Size, $11\frac{5}{8} \times 1\frac{3}{16}$ inches. Pages, 18. Lines, 3—6 on a page. Extent, 150 granthas. Character, Kannada. Condition, much injured. Appearance, old. Mode of writing, good.

Begins on fol. 6*a* of the manuscript. The other work herein is—(1) Indrajāla 1*a*.

Incomplete.

Similar to the work described above.

ಬೋಳದಉಗು, ಲೊಕ್ಕೆ, ತಗ್ಗಿ, ಹಾವು ಮೆಕ್ಕೆ, ಚಿತ್ರ ಮೂಲ, ನೆಲಗುಳ್ಳ, ಶ್ರೀ . . . . ಇಷ್ಟು ಕಷಾಯಕ್ಕೆ ಗ್ರಂಥ.

ಕುಟಜ ಬೀಜಾನಿ ವಚಾ ಪಾಟಿಲ ಚಿತ್ರಕಮ್ ॥
ಪಿಪ್ಪಲೀ ಶೃಂಗವೇರಂಚ ನಿಜನೋದಂಚ ಸೈಂಧವಂ ॥

* * * *

ಬಾಯಿ ನಾರುವುದಕ್ಕೆ ದಾಳಿಂಬದ ಬೇರನು ನಿಂಬೆಯ ಹುಳಿಯಲ್ಲು ಅರೆದು ಮುಕ್ಕುಳಿಸಿದರೆ ಬಾಯಿನಾರುವುದು ಮಾಣ್ಗು.

* * * *

End :

ಪ್ರಮೇಹಕ್ಕೆ, ತಾವರೆಕಂದ (ತಾವರೆಯ ಗಡ್ಡೆ ?), ಅಮೃರದಬಳ್ಳಿ, ಅಣಲೆ, ಅಗಳು ಕಾಂತಿ, ಕಟುಕ ರೋಹಿಣಿ, ವಿಳಂಗ, ಮತ್ತಿಯ ಬೇರು, ಇದರ ಕಾ ಂಲೇಸು ಶ್ಲೇಷ್ಮ ಪ್ರಮೇಹಕ್ಕೆ, ಶ್ರೀಗಂಧ, ಅಗರು, ದೇವದಾರು ಅಣಿಲೆಕಾಯಿ.

ವಿ.ವಿ.—

ಅಸಮಗ್ರ. ಅತ್ಯಂತ ಶಿಥಿಲ. ಆರಂಭದಲ್ಲಿ ಗ್ರಂಥದ ಹೆಸರನ್ನು ವೈದ್ಯಶಾಸ್ತ್ರವೆಂದು ಬರೆದಿದೆ. ಇದರಲ್ಲಿ ಸಂಸ್ಕೃತ ಶ್ಲೋಕಗಳು ಗ್ರಂಥವೆಂಬ ಹೆಸರಿನಿಂದ ಅವಿಯಲ್ಲಿ ಉದ್ಧರಿಸಿ ಬರೆಯಲ್ಪಟ್ಟಿವೆ. ಆದರೆ ಈ ಶ್ಲೋಕಗಳು ಯಾವ ಗ್ರಂಥವೆಂದು ಗೊತ್ತಾಗುವುದಿಲ್ಲ. "ಶಾರ್ದೂಲ ಚೂರ್ಣ, ಗುಲ್ಮ, ಕೋವೆ, ಕೃಮಿವಶ್ಯ, ಪ್ರಮೇಹ, ಸನ್ನಿಪಾತ, ಶೀತಜ್ವರ, ಗುಲ್ಮ, ಶೂಲೆ, ಇಚ್ಛಾಭೇದಿ, ನೇತ್ರರೋಗ, ವಾತಶ್ಲೇಷ್ಮಜ್ವರ, ಪಿತ್ತವಾಯು, ಶೂಲೆ, ಪಾಂಡು, ಗುಲ್ಮ, ಜಲೋದರ, ರಜತ ಭಸ್ಮ, ವಡಬಾನಲ (ಅಸಂಪೂರ್ಣ) ಸರ್ವವಿಷ" ಇವುಗಳಿಗೆ ಸಂಬಂಧಿಸಿದ ಔಷಧ ವರ್ಣನೆಗಳಿವೆ.

ಇದರೊಡನೆ ಇಂದ್ರಜಾಲವೆಂಬ ಹೆಸರಿನ ಇನ್ನೊಂದು ಗ್ರಂಥವಿದೆ.

ಇತರ ಅಕ್ಷರಗಳೊಡನೆ 'ಱ' ಎಂಬ ಅಕ್ಷರವು ಕಾಣುವುದರಿಂದ ಆ ಅಕ್ಷರದ ಪ್ರಚಾರವು ಅಳಿಯದಮುನ್ನ ಎಂದರೆ ಸುಮಾರು 18 ನೆಯ ಶತಮಾನದಲ್ಲಾಗಲಿ ಅಂದಕ್ಕಿಂತಲೂ ಪೂರ್ವದಲ್ಲಾಗಲಿ ಇದನ್ನು ಪ್ರತಿ ಮಾಡಿರಬಹುದು.

No. 1401. ವೈದ್ಯಾಮೃತ by ಶ್ರೀಧರದೇವ.

VAIDYĀMṚTA by ŚRĪDHARADĒVA.

Substance, palm-leaf. Size, $15\frac{1}{2} \times 1\ 5\frac{1}{16}$ inches. Pages, 150 Lines, 6–7 on a page. Extent, 2,400 granthas. Character, Kannada. Condition, very much injured. Appearance, old. Mode of writing, good.

Begins on fol. 1*a* of the manuscript. The other work herein is (1) Dhanvanarinighaṇṭu, fol. 76*a* (Sanskrit).

Complete in 26 Prakaraṇas; but some leaves are wanting here and there.

A treatise on the treatment of diseases with several topics. For details see extracts given below.

ಹಗಪ್ಪ ೧೦ . . . . . ಱುಗುಂ, ಅದಕ್ಕೆ ಬಲಿಹಾಲು, ಬಾಗಿದ ಕೊಳ್ಗು, ಕಬ್ಬಿನ ರಸ, ಸೂಸಲು ಶ್ರೀಗಂಧ ಖಂ . . . .

* * * *

(೩ ನೆಯ ಓಲೆ.)

ಮೂಱು ವರುಷದ ಕೂಸಂ ಧರಣಿ ಯೆಂಬ ದೇವತೆ ಪಿಡಿಗುಂ। ಅದಕ್ಕೆ ಕಣ್ಣು ಬಿಟ್ಟಹುದುಂ ಕಣ್ಣು ತಪ್ಪುವುದುಂ, ಒಳ್ ಜ್ವರಮು ಮಪ್ಪುದು. ಆಹಾರಂ ಗೊಳ್ಳದು. ಧರ್ವಾಚಾರ್ಯರ್ . . . . । ನವಣಿಯ ಹಿಟ್ಟು, ಹಾಲು, ಕಬ್ಬಿನ ರಸ, ಹುರಿಗೆ, ಉಂಡಲಿಗೆ, ಸೂಸಲು, ಬಡಗಣದೆಸೆಯುಲು ಜಲಗಂಧಾಕ್ಷತೆಗಳಿಂದ ಓಂ ನಮೋಧರಣಿ ! ಏಹಿ ಬಲಿಂ ಗೃಹಾಣ ಬಾಲಕಂ ಮುಂಚ ಸ್ವಾಹಾ । ಆ ದೇವತೆ ಬಿಟ್ಟುಪೋಕು ॥

* * * *

Colophon:

ದ್ರವ್ಯ ನಿಶ್ಚಯಂ ಸಂಪೂರ್ಣಂ ॥ ಇದು ಜಗದೇಕ ಮಹಾಮಂತ್ರವಾದಿ ಶ್ರೀಧರ ದೇವ ವಿರಚಿತಮಪ್ಪ ಸಕಲ ವೈದ್ಯಸಾರಂ ಸರ್ವಜನ ಮನೋಹರಮಪ್ಪ ವೈದ್ಯಾಮೃತದೊಳ್ ಏಕದ್ರವ್ಯ ನಿಶ್ಚಯ ನಿದಾನಂ ದ್ವಿತೀಯ ಪ್ರಕರಣಂ.

(ಅಥ ತೃತೀಯ ಪ್ರಕರಣಂ.) "ನೀತಿಯ ನುಡಿಯಬಲ್ಲಗೆ ಬಾಧೆಯಿಲ್ಲ, ಊಣ ಬಲ್ಲಗೆ ವ್ಯಾಧಿಯಿಲ್ಲ" ವೆಂಬ ತೆಱನದು ಕಾರಣದಿಂ ಸತ್ಪುರುಷರಾದ ಗುಣಾತ್ಮಕರ್ಗಂ ಪುರುಷಾರ್ಥ ಕಾರಣಂ ಕೀರ್ತಿವಲ್ಲಭನಾಗಿ ಅನ್ನಪಾನಂಗಳೊಳು ಭೋಗೋಪಭೋಗ ನಿದಾನಮಂ ಪೇಳ್ವೆಂ ॥ ಸಿಹಿ, ಕಹಿ, ಒಗರು, ಉಪ್ಪು, ಹುಳಿ, ಖಾರಮೆಂಬ ಮಿವಿನಿತಾಱುರಸಂಗಳು ॥ ಆವಾವ ಹಿತಕಾಲ ವರಿತು ಸೇವಿಸುವೊಡಾರೋಗ್ಯಂ, ಶಾಸ್ತ್ರವನತಿಕ್ರಮಿಸಿ ಸೇವಿಸುವಡೆ ಕ್ರೂರವ್ಯಾಧಿಗಳು ಆಶ್ರಯಿಸುಗುಂ, ಕಯಿಪೆಯುಂ, ಒಗರುಂ ವಾತಮಂ ಮಾಡುಗುಂ, ಪುಳಿಯುಂ ಸಿಹಿಯುಂ ಶ್ಲೇಷ್ಮಕರಂ, ಲವಣಂ ಖಾರಂ ಪಿತ್ತಮಂ ಮಾಡುಗುಂ, ಹರಿಚಂದ್ರನೆಂಬಲವಣಂ ಕ್ಷಾರಂ, ರಿತುಗಳು ಆಱಕ್ಕಂ ಶಿಶಿರ, ವಸಂತ, ಗ್ರೀಷ್ಮವೃದ್ಧಿ (? ವೃಷ್ಟಿ) ಶರತ್, ಹೇಮಂತ್ರ ವೆಂಬವಾಱುರುತುವಕ್ಕಂ. ಭೇದಾಚಾರ್ಯರ್ತ್ವರಿ . . . . ಕಾದಸಮೆಂಬ ಹರಿಶ್ಚಂದ್ರಂ ಸತ್ಯಂ ಬಬಾಭ ಯೆಳೆಂಭ ಭರತಾದಿಗಳು ಯೇಳೆಂಬರು ॥ ಶ್ರೀ ॥

ಪೂಜ್ಯಪಾದಸ್ವಾಮಿಗಳು ನಾಲ್ಕೆಂದು ಪೇಳ್ದಿರು. ಏಕಾದಶಮೆಂಬರು । ಯೊ ಏಳೆಂದು ಪೇಳ್ದರು. ಸಪ್ತಧಾತುಗಳಲ್ಲಿಯುಂ, ವಾತಶ್ಲೇಷ್ಮ ಪ್ರಾಯಂಗಳಲ್ಲಿಯುಂ ಚರಿಯಿಸುತಿಕ್ಕು ॥ ಹರಿಚಂದ್ರ ಸಾವಿನಲ್ಲಿಯುಂ ತ್ರಿದೋಷದಲ್ಲಿಯುಂ (?) ಚರಿಯಿಸುಗುಮೆಂಬ ಬಾಯೆಂಬ

ಧಾತುವಿನಲ್ಲಿ ವರ್ತಿಸುಗುಮೆಂಬ ರಸಂಗಳಜೀರಿತು (? ಳಾಟು, ರಿತು) ವಾಟು ಅಗ್ನಿಮೂಟಿತೆಂದು ಸುಶ್ರುತಾದಿಗಳುಂ ಪೇಳ್ದರ್. ಕೆಲಂಬರ್ ಅಗ್ನಿಮೂಟು, ದೇಕಮೂಟು, ದೇಹಂ ಮೂಟಿತೆಂದ ಗಸ್ತ್ಯಾದಿಗಳ್ ಪೇಳ್ದರು. ಶ್ರೀ ಪೂಜ್ಯಪಾದಸ್ವಾಮಿಗಳು ಮಂದ, ತೀಕ್ಷ್ಣ, ವಿಷಮ, ಸಮ ವಿಂತು ಜಠರಾಳಂ ನಾಲ್ಕು ಭೇದಮೆಂದು, ಪಿತ್ತದಿಂ ವಿಷಮುಮೆಂಬುದು ।

* * * *

End :

ದರ್ದುರವಿಷಹರಂ । ಕಡವಿನ ಮರದ ತಿಗುಡು, ಕುಸುಂಬೆಯ ಹೂವುಮಂ ಪೂಸುಗೆ ಕುಡಿಗೆ ಸರ್ವವಿಷಹರಂ ॥ ಓಂ ನಮೋಭಗವತೇ ಚಂದ್ರಾಯ ಧರಣೇಂದ್ರ ಪದ್ಮಾವತೀಸಹಿತಾಯ ಅಷ್ಟಮಹಾಸಿಧಿಕಾರಾಯ ಜ್ವಾಲಾಗಾರ್ದಭ ಕರ್ಣಶೂಲೇ ಮೂಲವ್ಯಾಧಿ ಕುಷ್ಠವ್ಯಾಧಿ ವ್ರಣ ನಾಶಾಯ, ಅನೇಕ ವಿಷ ಸಂಹಾರಾಯ । ಕ್ರಿಥಃ (ಬಿಂದಿ). ಭಿಂದಿ, ಜ್ವಾಲಾಗ್ರಾಹ ಸಂತಾಪ ಹನ, ರಣ, ರುಣ, ಪಣ, ಶಿಲಿ, ಚಿಳ, ವಿಳ, ಕಳ, ಓಂ ಹ್ರಾಂ, ಹಂಸಃ, ಓಂ ಹ್ರೀಂ ಹಂಸಃ ಓಂ ಹ್ರೂಂ ಹನಹ್ರೂಂರ್, ಹ್ರುಂರ್ಸಹ, ಕ್ರೂಂರ್ಡವ ಸ್ವಾಹಾ ॥ ಈ ಲೋಕದೊಳಗುಳ್ಳ ವಿಷಂಗಳೆಲ್ಲ ಹರಂ ! ಇದು ದಿವ್ಯ ಮಂತ್ರನಿಂನಿಪ್ಪ . . . . ಸೂಳ ಮಂತ್ರಿಸಿದರೆ ಮಿದುವೆ ಆಮ್ರುತದಾರಾ ಮಂತ್ರ (ಅಮೃತಾಧಾರಮಂತ್ರ).

ಗದ್ಯ ॥ ಇದು ಜಗದೇಕ ಮಹಾಮಂತ್ರವಾದಿ ಶ್ರೀಧರದೇವ ವಿರಚಿತಮಪ್ಪ ಸಕಲ ವೈದ್ಯ ಶಾಸ್ತ್ರಸಾರಂ ಸರ್ವಜನ ಮನೋಹರ ಮಪ್ಪ ವೈದ್ಯಾಮೃತದೊಳ್ ಸರ್ಪವೃಶ್ಚಿಕ ದರ್ದುರ ಮೂಷಕ ಮಾರ್ಜಾಲ ಭಲ್ಲೂಕ ಮುಖ್ಯ ಸರ್ವ ವಿಷ ಚಿಕಿತ್ಸಾ ವಿವರಣಂ ಷಟ್ತ್ರಿಂಶ ಪ್ರಕರಣಂ ಸಂಪೂರ್ಣಂ.

ವಿ.ವಿ.—

ಸಮಗ್ರ. ೨೬ ಪ್ರಕರಣಗಳಿವೆ. ಆದರೆ ಅಲ್ಲಲ್ಲಿ ಕೆಲವು ಹಾಳೆಗಳಿಲ್ಲ. ಆರಂಭದ ಭಾಗವಿಲ್ಲ. ಕೇವಲ ವಚನರೂಪವಾಗಿದೆ. ಇದರಲ್ಲಿ ಪ್ರಕರಣಗಳು ಕ್ರಮವಾಗಿ—೧. ಬಾಲಗ್ರಹ ಚಿಕಿತ್ಸಾ, ೨. ಏಕದ್ರವ್ಯ ನಿಶ್ಚಯ, ೩. ಅನ್ನಪಾನ ಭೋಗವಿವರಣಂ, ೪. ಅರಿಷ್ಟಾಧ್ಯಾಯ, ೫, ಜ್ವರ ಚಿಕಿತ್ಸಾವಿವರಣ, ೬. ಅತೀಸಾರಾಧ್ಯಾಯ, ೭. ರಕ್ತಪಿತ್ತಾಧ್ಯಾಯ, ೮. ಯಕ್ಷ್ಮಚಿಕಿತ್ಸಾ, ೯. ಗುಲ್ಮಚಿಕಿತ್ಸಾ, ೧೦. ಮಹೋದರ ಚಿಕಿತ್ಸಾ (ವೀರ್ಯವರ್ಧನ, ಪುಷ್ಟಿ, ಕರಯೋಗಗಳೂ ಇವೆ.) ೧೧. ಪ್ರಮೇಹ ಚಿಕಿತ್ಸೆ, ೧೨. ಕುಷ್ಠ ಚಿಕಿತ್ಸಾವಿವರಣಂ, ೧೩. ಮೂಲವ್ಯಾಧಿ. ೧೪. ಭಗಂಧರಚಿಕಿತ್ಸಾ, ೧೫. ಪಾಂಡುರೋಗ ಚಿಕಿತ್ಸಾ, ೧೬. ಬಿಕ್ಕಳು ಚಿಕಿತ್ಸಾ, ೧೭. ಕಾಸ ಚಿಕಿತ್ಸಾ, ೧೮. ಛರ್ದಿಯ ಚಿಕಿತ್ಸೆ, ೧೯. ಮೂತ್ರ ಕೃಚ್ಛ್ರ ಚಿಕಿತ್ಸೆ, ೨೦. ಶೂಲ ಚಿಕಿತ್ಸಾ, ೨೧. ಅಪಸ್ಮಾರ ಚಿಕಿತ್ಸೆ, ೨೨. ವಾತಚಿಕಿತ್ಸೆ, ೨೩. ಕಂಚುಕಿ ಚಿಕಿತ್ಸಾ (ಅಗ್ನಿದಗ್ಧ ವ್ರಣಚಿಕಿತ್ಸೆಯೂ ಶೀತಳ ಭಟ್ಟಾರಕ ಮಂತ್ರವೆಂಬ ಮಂತ್ರವೂ ಇದರಲ್ಲಿದೆ. ಈ ಶೀತಳ ಭಟ್ಟಾರಕರು ಯಾರೆಂಬುದು ಗೊತ್ತಾಗುವುದಿಲ್ಲ . ೨೪. ಶೋಫಚಿಕಿತ್ಸೆ, ೨೫. ವ್ರಣ ಪ್ರಕರಣಂ, ೨೬. "ಸರ್ವವಿಷ ಚಿಕಿತ್ಸಾ" ಎಂಬ ಹೆಸರನ್ನೊಳಗೊಂಡಿವೆ. ಬರೆವಣಿಗೆಯು ಶಕಟರೇಫ ಱ) ವನ್ನೊಳಗೊಂಡಿದೆ.

ಶ್ರೀಧರದೇವನೆಂಬವನು ಗ್ರಂಥಕರ್ತನು. ಈತನು ಬಹಳ ತಿಳಿದವನೆಂತೆ ಈತನ ಗ್ರಂಥದಿಂದ ತಿಳಿಯುತ್ತದೆ. ಪ್ರಾಚೀನಾಚಾರ್ಯರ ಮತಗಳನ್ನು ಕೆಲವೆಡೆ ಉದ್ಧರಿಸಿರುವನು. ಉದಾಹರಣೆಗಾಗಿ ಮೂರನೆಯಧ್ಯಾಯದಿಂದ ಉದ್ಧರಿಸಿದ ಭಾಗವನ್ನು ನೋಡುವುದು. ಔಷಧಗಳೊಡನೆ ಮಂತ್ರಗಳೂ ಅಲ್ಲಲ್ಲಿ ಕಾಣುತ್ತವೆ. ಈ ಗ್ರಂಥಕರ್ತನಿಗೆ "ಜಗದೇಕ ಮಹಾಮಂತ್ರವಾದಿ" ಎಂಬ ಬಿರುದಿದ್ದಂತೆ ತಿಳಿಯುತ್ತದೆ.

No. 1402. ವೈದ್ಯಾಮೃತ by ಶ್ರೀಧರದೇವ.

VAIDYĀMṚTA by ŚRĪDHARADĒVA.

Substance, palm-leaf. Size, 13½ × 1 3/5 iinches. Pages, 32. Lines, 5 to 7 on a page. Extent, 340 granthas. Character, Kannada. Condition, much injured. Appearance, old. Mode of writing, fair.

Begins on fol. 159*a* of the manuscript described under No. 1343, *ante*.

Incomplete.

Contains the course of the 3rd Chapter and breaks off in the beginning of 8th Chapter.

Same work as that described above.

ಗಳಿಗೆ ಸುಗಂಧಂ, ಮಲ್ಲಿಗೆಯ ಹೂವು, ಒಪ್ಪಿಟಿ, ಉಗ್ರಗಂಧಂ, ಒಂದು ಘೂಪಸುಗಂಧಂ ಕಣಿಗಿಲೆಯ ಹೂ, ಕೇಶವರ್ಧನಂ, ಸಂಪಗೆಯ ಹೂ, ಅತ್ಯುಗ್ರಗಂಧಂ, ಪಿತ್ತಸಮಂ, ಮೂರು ದಿನ ಸುಗಂಧಂ, ಕೇತಕಿಯ ಹೂವು, ರತ್ಯುತ್ಸಾಹಂ, ಕಸ್ತೂರಿಯುಸಮಂ, ಎಲ್ಲಾ ಪುಷ್ಪಂಗಳಿಗೆ ಉತ್ತಮಂ, ಎಂಟುದಿನ ಸುಗಂಧಂ; ಸ್ತ್ರೀಯರ ಭೇದ ಮಂ ಪೇಳ್ವೆಂ.—ಬಾಲೆಯರೆಂದುಂ ಉನ್ಮತ್ತ ಯೌವನೆಯರೆಂದುಂ, ಪ್ರೌಢೆಯರೆಂದುಂ, ಯೌವನಾತಿಕ್ರಾಂತೆಯರೆಂದುಂ, ಯೌವನೆಯರಿಗೆ ತಾಂಗಾರವಂತೆಯರುಂ, ನಿರೋಗಿಯರುಂ ಇಂತು ಎಲ್ಲಾ ದೇಶಸ್ತ್ರೀಯರುಂ ನಾಲ್ಕು ಭೇದಮಕ್ಕುಂ ಬಾಲೆಯರಿಗೆ ಹೂ, ಬೊಂಬೆ, ಭೋಜನಂ, ತಾಂಬೂಲಂ, ಮೃದು ನುಡಿಯುಂ ಕಬುಲೆಯ ಗೌರಿಯ ನೋಟಿಪುಂ, ಮೃದು ಸಂಭೋಗಮುಂ ಸಮಾನಪ್ರಾಯದವರುಂ, ಕೂಡಿ ಕ್ರೀಡಾವಿನೋದಂ ಯೌವನೆಯರಿಗೆ ಕ್ರೀಡಾವಂತೆಯರುಂ ನಿರೋಗಿಯರುಂ, ಕ್ರೀಡಾ ಸುಖಿಯರುಂ, ಪ್ರೌಢೆಯರ್ಗೆ ವಸ್ತ್ರತಾಂಬೂಲಂ, ಸ್ನಾನ, ವಚನಂಗಳಂ, ಇಷ್ಟೇಚ್ಛೆಯುಳಿತು ಕ್ರೀಡಿಸುವುದುಂ, ಯೌವನವಂತೆಯರ್ಗೆ (?) ಭೋಜನಾದಿಸುಗಂಧಂಗಳುಂ, ಯೋಗದಲ್ಲಿ ಪ್ರಮಾಣ ನಖಕ್ಷತ, ಪ್ರಮಾಣಂ ಯೋಗಿಸಿ ನಿತಂಬಿನಿಯರಂ ಕ್ರೀಡಿಸುವುದು. ಮಾಳವದೇಶದ ಸ್ತ್ರೀಯರು ಅತ್ಯಂತ [ಆಸಿಕೆಯರು] (ರಸಿಕೆಯರು); ಚುಂಬನಾಲಿಂಗನಪ್ರೀತೆಯರು, ವಿಪುಳ ಕಟಿಗಳು, ಮತ್ತಗಮನೆಯರು, ಪರಿಯಾಸ (?) ದೇಶದಸ್ತ್ರೀಯರು ವೊಂದು ಉಪಭೋಗಮನಱಿಯರು, ಸುರತದಲ್ಲಿ ಅನೇಕ ಕುಹಕಂಗಳಂ ಬಲ್ಲರು. ಕೋಪಿಗಳು. ಮತ್ಸ್ಯದೇಶದ ಸ್ತ್ರೀಯರು ಅತಿಕಾಮುಕಿಯರು ಸಕಲ ಇಚ್ಛಾರತಿಯರು, ಸ್ಥೂಲ ಸ್ತನ ನಿತಂಬಿನಿಯರು, ಅತಿಭೋಜನ ಪ್ರೀತಿಯರು. ಗಳರವದಲ್ಲಿ ಅಧಿಯರು ಕರ್ಣಾಟಕ ದೇಶದ ಸ್ತ್ರೀಯರು ಸಕಲ ಸುರತ ಪ್ರೌಢೆಯರು, ಅತಿಸಿಂಗಾರಿಯರು, ಹರುಷ ಚಿತ್ತೆಯರು,

ರತಿ ಕ್ರೀಡೆಯಲ್ಲಿ ಕುಶಲೆಯರು. ಚೋಳದೇಶದ ಸ್ತ್ರೀಯರು ಅತಿಭೂಯ ಚರಿತ್ರೆಯರು, ಅತಿ ನಿದ್ರೆಯರು, ಅತಿ ಮರ್ದನ ಪ್ರೀತೆಯರು. ಇಂತು ಅನ್ನಪಾನಾಧ್ಯಾಯಮುಂ ಸ್ತ್ರೀಭೋಗ ತಾಂಬೂಲಗಳ್ಗಂ, ಶಾಸ್ತ್ರಕ್ರಮದಲ್ಲಿ ಭೋಗಿಸಿದರೆ ಆಯುಷ್ಯವರ್ಧನಂ, ಸರ್ವಂ, ಇದು ಜಗದೇಕಮಹಾಮಂತ್ರವಾದಿ ಶ್ರೀಧರದೇವ ವಿರಚಿತಮಪ್ಪ ವೈದ್ಯಾಮೃತದೊಳ್ ಅನ್ನಪಾನ ವಿಹರಣ ಭೋಗಾಧಿಕಾರಂ ತೃತೀಯಾಧ್ಯಾಯಂ.

* * * *

End :

ಅಣಿಲೆ, ಅತ್ತಿಯುವಳನಾರು, ಸಮಾನಂಗೊಂಡು, ಸಕ್ಕರೆ ವೆರಸಿ ಕುಡಿಯೆ ಗರ್ಭಿಣಿಯ ಹೆಸ್ನೆತ್ತರು ಕೆಡುಗುಂ ॥ . . . . ಗರ್ಭಿಣಿಯ ಹೆಸ್ನೆತ್ತರು ಕೆಡುಗುಂ । ಹಲಸಿನ ಬೀಜ ಎಂಟುಂ ಅಕ್ಕಿಗಚ್ಚಿನಲ್ಲು ಕುಡಿಯೆ ಗರ್ಭಿಣಿಯ ಹೆಸ್ನೆತ್ತರುವಮಾಣ್ಗುಂ । ಇದು ಜಗದೇಕಮಂತ್ರವಾದಿ ಶ್ರೀಧರದೇವ ವಿರಚಿತಮಪ್ಪ ವೈದ್ಯಾಮೃತದೊಳ್, ರಕ್ತಪಿತ್ತಾಧ್ಯಾಯಂ ಸಪ್ತಮ ಪ್ರಕರಣಂ ॥ ಶ್ರೀ ॥ ಯಕ್ಷ್ಮಾಧ್ಯಾಯಂ ಪೇಟಿಪ್ವೆಂ । ತ್ರಿದೋಷಮನಾಶ್ರಯಿಸಿಕ್ಕುಂ ಯಕ್ಷ್ಮಂ. ಉಪವಾಸಂಗಳಂ ಮಾಡಿದಲ್ಲಿಯುಂ, ಮೆಯ್ ಬಂಧವಾದಲ್ಲಿಯುಂ, ಅತಿಶೀತಳದಿಂದಂ ವಿಷಮಪ್ಪ ಆಹಾರದಿಂದಂ ಯಕ್ಷ್ಮಂ ಪುಟ್ಟುಗುಂ ಅದರ ಲಕ್ಷಣಮೆಂದಡೆ ॥ ಖಾಸಂ, ಅರುಚಿಯುಂ, ಬರಿಬೇನೆಗೆಯ್ವುಗುಂ, ಕರುಳ್ಗು ಗುಮ್ಮಳಸುವುದುಂ, ಶ್ಲೇಷ್ಮರಕ್ತಚ್ಛರ್ದಿಯುಂ, ಮೆಯ್‌ಬಡವಪ್ಪುದುಂ, ಬಲಕ್ಷಯಮಪ್ಪುದುಂ, ಅಡಿಗಡಿಗುಗುಳ್ವುದುಂ, ಶಿಱುಗೆಮ್ಮುಂ, ಕೀವಿನಂತೆ ಉಗುಳ್ವುದುಂ ಕೆಚ್ಚನಾಗುಗುಳ್ವುದುಂ, ಪಿತ್ತವರ್ಣವಾಗುಗುಳ್ವುದುಂ, ಬೆಸ್ನೆಲು ತೋರ್ಪುವಿನ್ನಡಬಲಂ ಕ್ಷೀಣಸ್ವರ ಮಪ್ಪುದುಂ । ಇಂ . . . .

ವಿ.ವಿ —

ಅಸಮಗ್ರ. ಅತಿಶಿಥಿಲ. ಇದರೊಡನೆ ಅನುಭವ ಚಿಕಿತ್ಸೆಯೆಂಬ ಗ್ರಂಥವಿದೆ. ಅದು ೧೩೪೩ ನೆಯ ನಂಬರಿನಲ್ಲಿ ವರ್ಣಿತವಾಗಿದೆ. ಅದರ ಬರೆಹವೂ ಇದರ ಬರೆಹವೂ ಒಂದೇ ರೀತಿಯದಾಗಿಲ್ಲ. ೩ ನೆಯ ಪ್ರಕರಣದ ಮಧ್ಯದಿಂದ ೮ ನೆಯ ಪ್ರಕರಣದ ಆದ್ಯಂಶದ ವರೆಗಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವಾಗಿದೆ.

No. 1403. ವೈದ್ಯಾಮೃತ by ಶ್ರೀಧರದೇವ.

VAIDYĀMṚTA by ŚRĪDHARADĒVA.

Substance, palm-leaf. Size, 11⅞ × 1 5/16 inches. Pages, 35. Lines, 6—7 on a page. Extent, 500 granthas. Character, Kannada. Condition, very much injured. Appearance, old. Mode of writing, fair.

Begins on folio 31*a* of the manuscript described under No. 1346, *ante*.

Contains some selected portions of Vaidyāmṛta dealing with the treatment of Tuberculosis, Dysentery of several kinds piles complaint, dropsy (large belly) Rhoumatism, vomitting, delirium, syncope and asthma.

Fol. 486 —Contains Śivagāytri **mantra.**

ಕ್ಷಯಾ ವ್ಯಾಧಿಗೆ ಲಕ್ಷಣ । ತ್ರಿದೋಷಮನಾಶ್ರಯಿಸಿಕ್ಕು ಉಪವಾಸವ ಮಾಡುವಲ್ಲಿಯುಂ ಮೈಬಡವಾದಲ್ಲಿಯುಂ ವರ್ಧನವೆಂದು ಅರಿಯು ತಿದ್ದುವರಿಂ ಅ . . . . ದಂ ವಿಷಾಹಾರದಿಂದಂ ಇನಿತರಿಂದಂ ಕ್ಷಯಂ ಪುಟ್ಟುಗು. ಇವರ ಸ್ವರೂಪವೆಂತೆಂದರೆ ॥ ಅರುಚಿಯುಂ ಶ್ವಾಸವುಂ ಸಿರೋರೋಗಮುಂ ಬ ಅಬೀನೆ . . . . ಕರುಳು ಗುಳ, ಗುಳಸುವುದುಂ, ಶ್ಲೇಷ್ಮ ಹೆಚ್ಚುವುದುಂ, ರಕ್ತಚ್ಛರ್ದಿಯುಂ, ಮೈಬಡವಪ್ಪುದುಂ, ಬಲಕ್ಷಯ ಮಪ್ಪುದುಂ, ಇನಿತು ಚಿಹ್ನಂ ತೋರ್ಪುದು. ಅಡಿಗಡಿಗೆ ಉಗುಳು . . . . ಕೆಅಗೆಮ್ಮು ಕೆಮ್ಮುವುದುಂ, ಕೀಪಿನಂತೆ ಉಗುಳುವುದುಂ, ಕೃಷ್ಣವರ್ಣವಾಗಿ ಉಗುಳುವುದುಂ. ಶ್ವಾಸಂಗಳ್ ಪಿರಿದಾಗಿ ಇರ್ಪುದುಂ, ಬೆನ್ನಿನ ಎಲುವೊಅಮುಟ್ಟು . . . . . ದುಂ ಮೈಶವದಂತೆ ಗಂಧನಾಱುವುದುಂ, ಕ್ಷೀಣಸ್ವರಮಪ್ಪುದುಂ, ಇಂತಪ್ಪ ಚಿಹ್ನಂ ತೋಱಿದಱೆ, ಕ್ಷಯಾಮಸಾಧ್ಯಂ.

* * * *

Colophon :

ಇದು ಜಗದೇಕ ಮಹಾಮಂತ್ರವಾದಿ ಶ್ರೀಧರದೇವರು ವಿರಚಿಸಿದಂಥಾ ವೈದ್ಯಶಾಸ್ತ್ರಸಾರಂ ಸರ್ವಜನಮನೋಹರಮಪ್ಪ ವೈದ್ಯಾಮೃತದೊಳ್ ಪಕ್ಷಾ ವಿವರಣಂ ಅಷ್ಟಮ ಪ್ರಕರಣಂ ಸಮಾಪ್ತಂ ಮಂಗಳ ಮಹಾ ಶ್ರೀ.

ಈ ಔಷಧವಂ ಆಡಿನ ಹಾಲಲ್ಲಿ ಕುದಿಸಿ ಆಱಿಸಿ, ಆ ಚೂರ್ಣವಂ ಮಾಡಿ ಹಿಪ್ಪಲಿ ಸಕ್ಕರೆಯು ಚೂರ್ಣವೆರಸಿ ಪ್ರಯೋಗಿಸುಗೆ ಕ್ಷಯಂ ಕೆಡುಗುಂ.

* * * *

ಹಾಱಗಿಲತೊಪ್ಪಯ ಅಂಬಿಲದಲ್ಲರೆದು ಅಳ್ಳಿಗೆ ಮೆತ್ತಲು ಕೋವೆಮಾಣ್ಗುಂ.

ಪಿ.ವಿ.—

ಸಮಗ್ರ. ಅತ್ಯಂತ ಶಿಥಿಲ.

ವೈದ್ಯಾಮೃತದ ಕೆಲವು ಭಾಗಗಳಿವೆ. ಇದರಲ್ಲಿ ಕ್ಷಯ, ಸಂಗ್ರಹಣೀ, ವಾತಗ್ರಹಣೀ, ಮೂಲವ್ಯಾಧಿ, ಮಹೋದರ, ವಾತ, ಛರ್ದಿ, ಅತಿಸಾರ, ಸನ್ನಿಪಾತ, ಶ್ವಾಸ, ಇವುಗಳ ಲಕ್ಷಣಗಳನ್ನೂ ಔಷಧಿಗಳನ್ನೂ ಹೇಳಿದೆ.

No. 1404. ವೈದ್ಯಾಮೃತ by ಶ್ರೀಧರದೇವ.

VAIDYĀMṚTA by ŚRĪDHARADĒVA.

Substance, paper. Size, $10\frac{3}{8} \times 9\ 7\frac{5}{15}$ inches. Pages, 24. Lines, 20 on a page. Extent, 500 granthas. Character, Kannada. Condition, fair. Appearance, new. Mode of writing, good.

Restored in 1935–36 from the manuscript described above.

Begins on page 38 of the manuscripts described under No. 1358, *ante*.

ವಿ.ವಿ.—

ಅಸಮಗ್ರ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಕೆಯಾಗಿದೆ. ಇದರೊಡನೆ ಅಶ್ವ ವೈದ್ಯ, ವೈದ್ಯ ಕ್ರಮವೆಂಬ ಗ್ರಂಥಗಳೂ ಇವೆ. ಆ ಬಗೆಗೆ ೧೩೪೮ ನೆಯ ಡಿ. ನಂಬರನ್ನು ನೋಡುವುದು.

No. 1405. ಸ್ತ್ರೀವೈದ್ಯ.

STRĪVAIDYA.

Substance, palm-leaf. Size, $6\frac{1}{2} \times 1\frac{11}{16}$ inches. Pages, 12. Lines, 4—5 on a page. Extent, 35 granthas. Character, Kannada. Condition, injured. Appearance old. Mode of writing, good.

Incomplete.

Deals with drugs and herbs mainly used to gain control our women.

Beginning :

ತಿಮ್ಮ ರಾಜೇಗೌಡನ ಔಷಧಕ್ರಮ ॥ ಸ್ತ್ರೀವಶ್ಯ.—ಪಾದರಸ, ಬೆಳುಗಾರ, ತುತ್ಥ, ಉಮ್ಮತ್ತದ ಬೀಜ, ಪಚ್ಚೆಕರ್ಪೂರ, ಗೋರೋಜನ, ಕುಂಕುಮ, ... ಕೆಂಪಿನ ಅಗಸೆಯ ಹೂವಿನ ರಸ, ಹೆಗ್ಗುಳ್ಳದ ಹಣ್ಣಿನ ಬೀಜ, ಅದರ . . ಸು . ಇಷ್ಟನು ಮೊದಲು ಮರ್ದನೆಯ ಮಾಡಿ . . . . ಸಿಕ್ಕ ಗಜಹಿಪ್ಪಲಿ, ಬಿಳಿಯ ಗುಲಗುಂಜಿ, ವೀಳ್ಯದೆಲೆಯ ಬೇರು, ನಸುಗುನ್ನಿಯ ಕಾಯೊಳಗಣ ಬೀಜ, ಯಷ್ಟಿಮಧುಕ, ಗಂಡುಪಾಲಿ, ಮಣದ ಹತ್ತಿಯ ದಿಷ್ಟಿ, ನವಸಾರ, ಹೊಮ್ಮುಗುಳು, ಮಾದಲದಕಾಯ ರಸದಲಿ ಹಸಿಯ ಕೊಂಬಿನ ಮೇಲಣ ಜೇನತುಪ್ಪದಲ್ಲಿ ಮರ್ದಿಸಿ, ಕರಡಿಗೆಯಲಿ ಎರಕೊಂಡಿದ್ದು ತನಗೆ ಬೇಕಾದಾಗ ಲಾಳಕೆ ಸಣ್ಣ ಬತ್ತಿಯಾಗಿ ಮಾಡಿ, ಇಕ್ಕೆ ಇದರ ಕರಡಿಗೆಯಲ್ಲಿ ಇಕ್ಕಿಕೊಂಡಿದ್ದು, ತನಗೆ ಬೇಕಾದ ಲಾಳಕ್ಕೆ ಸಣ್ಣ ಬತ್ತಿಯಾಗಿ ಮಾಡಿ ಇಕ್ಕಿಯ . . . . . . ಸಿ ಲಾಳದ ತುದಿಗೆ ಕೆಂಪಿನ ಕಣಗಿಲದ ಹೂವನಿಕ್ಕಿ ಔಡಲ ಎಲೆಯನಿಕ್ಕಿ ಕಾವಮೇಲಕ್ಕೆ ತೆಕ್ಕೊಂಡು ಉಡಿದಾರಕ್ಕೆ ಎಡಗಟ್ಟಿಕೊಂಡು ಹೋಗಿ ಸ್ತ್ರೀ ಸಂಭೋಗವ ಮಾಡುವುದು.

ಹೀಗೆ ಮೂರು ರಾತ್ರಿ ಮೂ . . . . ವುದು. ಇದು ತಪ್ಪದು. ಪ್ರತಿ ನೋಡಿದ್ದು; ಸ್ತ್ರೀಯರಿಗೆ ಅಂ . . .

ವಿ.ವಿ.—

ಅಸಮಗ್ರ. ಓಲೆಯ ಪ್ರತಿ. ಅತ್ಯಂತ ಶಿಥಿಲ. ಸ್ತ್ರೀವಶ್ಯಾದಿ ವಿಷಯಗಳನ್ನು ಹೇಳುತ್ತದೆ. ತಿಮ್ಮರಾಜೇ ಗೌಡ (? ತಿಮ್ಮರಾಜಯ್ಯ ಗೌಡ) ನೆಂಬವನ ಔಷಧ ಕ್ರಮವೆಂದು ಆರಂಭದಲ್ಲಿದೆ. ಈತನ ವಿಷಯದಲ್ಲಿ ಈ ಗ್ರಂಥದಿಂದ ಇನ್ನೇನೂ ತಿಳಿಯುವುದಿಲ್ಲ. ಪುಸ್ತಕದ ಕೊನೆಯಲ್ಲಿ “ಅಂಗೈಯೊಳಿಸಾಗನಾಗಿ ಅಡಕೆಕರೆ ಕುಂಟನಾಗಿ, ಸುಣ್ಣ ಉರಿಸಾರಾಗಿ ಕೆರುಳು ಮರುಳಾಗಿ ಮುಡಿಗೆ ಬೆಂಡಾಗಿ . . . . . ಕ್ಕಿಟಿಕಿ ಯಿಕ್ಕಟಿಕೆಯಾಗಿ ನಾಮಿಂತಿಸಿದಂತಾಯೆಲೆ . . . ರ್ತ ಮೇಲಾಗಿ, ನನ್ನ ಚಿತ್ರವಿಚಿತ್ರ ನನ್ನಾಜ್ಞೆ ತನ್ನವಜ್ಞೆ. ಪರಚಿತ್ರ, ಪರನಾನು, ಹಿಂದೆ.. ಂತಾದರೆ ಬೀಳಲೀಕೆ ಹನುಮ . . . ಸ್ತ್ರೀಗಾದ ಪದ್ಮಂಗಳಗೆ ತಪ್ಪಿದನಪ್ಪಾವಿ, ಇಷ್ಟಕ್ಕೆ ತಪ್ಪಿದೆಯಾದರೆ ಗಂಗೆ ತಡಿಯಲಾತುವ, ಏಳು ಕಪಿಲೆ ಕೊಂದದಕೆ ತಪ್ಪಿದ ಪಾಪಿ, ಹರಿಹರಬ್ರಹ್ಮರಿಗೆ ತಪ್ಪಿದ ಪಾಪಿ, ಓಡಂ ಬಾಳ ಗುರುಬಾಳ ॥” ಎಂದು ಬರೆದಿರುವ ಎರಡು ಓಲೆಗಳವೆ.